ಶನಿವಾರ, ಆಗಸ್ಟ್ 19, 2023 | ₹ 7.00

ಪ್ರಜಾವಾಣಿ



## ಬಿಬಿಎಂಪಿ ನೌಕರರ ಸಂಘ: ಸೆ.3ರಂದು ಚುನಾವಣೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಕಾರ್ಯಕಾರಿ ಸಮಿತಿಗೆ ಸೆ.3ರಂದು ಚುನಾವಣೆ ನಡೆಯಲಿದೆ.

2023–24ರಿಂದ 2028–29ನೇ ಸಾಲಿನ ಐದು ವರ್ಷಗಳ ಅವಧಿಯ 17 ಸದಸ್ಯರ ಕಾರ್ಯಕಾರಿ ಸಮಿತಿಗೆ ಚುನಾವಣೆ ನಡೆಯಲಿದ್ದು, ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿರುವ ಡಾ. ರಾಜ್‌ಕುಮಾರ್ ಗಾಜಿನ ಮನೆಯಲ್ಲಿ ಮತದಾನ ನಡೆಯಲಿದೆ ಎಂದು ಚುನಾವಣಾಧಿಕಾರಿ ಎನ್. ಚಂದ್ರಶೇಖರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆ.21ರಿಂದ ನಾಮಪತ್ರ ಸಲ್ಲಿಸಲು ಅವಕಾಶವಿದ್ದು, ಆ.26ರಂದು ಅರ್ಹ ಅಭ್ಯರ್ಥಿಗಳನ್ನು ಪ್ರಕಟಿಸಲಾಗುವುದು. 2,600 ಮತದಾರರಿದ್ದಾರೆ. ₹300 ಶುಲ್ಕವನ್ನು ಪಾವತಿಸಿ ನಾಮಪತ್ರ ಅರ್ಜಿ, ಮತದಾರರ ಪಟ್ಟಿ ಪಡೆಯಬಹುದು. ₹800 ಠೇವಣಿಯೊಂದಿಗೆ ಚುನಾವಣೆಗೆ ನಾಮಪತ್ರ ಸಲ್ಲಿಸಬಹುದು. ಒಬ್ಬ ಸದಸ್ಯರು ಒಬ್ಬರಿಗಿಂತ ಹೆಚ್ಚು ಅಭ್ಯರ್ಥಿಗಳಿಗೆ ಸೂಚನೆ ಅಥವಾ ಅನುಮೋದನೆ ಮಾಡಿದ್ದರೆ ಅಂತಹ ನಾಮಪತ್ರ ತಿರಸ್ಕರಿಸಲಾಗುತ್ತದೆ ಎಂದು ಮಾಹಿತಿ ನೀಡಿದ್ದಾರೆ. ಎ. ಅಮೃತ್‌ರಾಜ್ ನೇತೃತ್ವದ ಕಾರ್ಯಕಾರಿ ಸಮಿತಿ ಇದೀಗ ಅಸ್ತಿತ್ವದಲ್ಲಿದೆ.

## ನಾಗಪಂಚಮಿ ಇಂದು

ಬೆಂಗಳೂರು: 'ನಮ್ಮೂರ ನಾಗರ ಪಂಚಮಿ' ವೇದಿಕೆಯು ಆಗಸ್ಟ್ 19 ರಂದು ಬೆಳಿಗ್ಗೆ ಬೆಳಿಗ್ಗೆ 10ರಿಂದ ಸಂಜೆ 4ರ ವರೆಗೆ ಅರಮನೆ ಮೈದಾನದ ವೃಕ್ಷ ಸಾಂಪ್ರದಾಯಿಕ ಕಲಾಮಂಟಪದಲ್ಲಿ ನಾಗರಪಂಚಮಿ ಹಬ್ಬವನ್ನು ಹಮ್ಮಿಕೊಂಡಿದೆ.

ಉತ್ತರ ಕರ್ನಾಟಕದಲ್ಲಿ ಹೆಣ್ಣು ಮಕ್ಕಳು ಸಂಭ್ರಮದಿಂದ ಆಚರಿಸುವ ಈ ಹಬ್ಬವನ್ನು ಗ್ರಾಮೀಣ ಸೊಗಡಿನೊಂದಿಗೆ ಹಮ್ಮಿಕೊಳ್ಳಲಾಗಿದೆ.

ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ಶಾಸಕಿ ಶಶಿಕಲಾ ಜೊಲ್ಲೆ ಸಹಿತ ಅನೇಕರು ಭಾಗವಹಿಸಲಿದ್ದಾರೆ. ಮಾಹಿತಿಗೆ ಮೊಬೈಲ್: 9845320326, 94493 49747, ಇಮೇಲ್– mukundpb@gmail.com ಸಂಪರ್ಕಿಸಬಹುದು ಎಂದು ವೇದಿಕೆಯ ಅಧ್ಯಕ್ಷೆ ಊರ್ಮಿಳಾ ಕಳಸದ ತಿಳಿಸಿದ್ದಾರೆ.

## ಬಿಬಿಎಂಪಿ: ಆಕ್ಷೇಪಣೆ ಸಲ್ಲಿಸಲು 15 ದಿನ ಅವಕಾಶ

# 225 ವಾರ್ಡ್ ಕರಡು ಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ



**ಬೆಂಗಳೂರು:** ಬಿಬಿಎಂಪಿಗೆ 225 ವಾರ್ಡ್‌ಗಳನ್ನು ರಚಿಸಲಾಗಿದ್ದು, ಕರಡು ಪಟ್ಟಿಯನ್ನು ಶುಕ್ರವಾರ ಪ್ರಕಟಿಸಲಾಗಿದೆ.

ಬಿಬಿಎಂಪಿ ವಾರ್ಡ್‌ಗಳನ್ನು ಪುನರ್ ವಿಂಗಡಿಸಲು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ನೇತೃತ್ವದ ಆಯೋಗವನ್ನು ಜೂನ್ 23ರಂದು ಸರ್ಕಾರ ಪುನರ್ ರಚಿಸಿತ್ತು. ಹೈಕೋರ್ಟ್ ಆದೇಶದಂತೆ 12 ವಾರಗಳಲ್ಲಿ ವರದಿ ಸಲ್ಲಿಸುವಂತೆ ಸೂಚಿಸಲಾಗಿತ್ತು. ವಾರ್ಡ್‌ಗಳ ಸಂಖ್ಯೆಯನ್ನು 243ರಿಂದ 225ಕ್ಕೆ ಇಳಿಸಿ ಸರ್ಕಾರ ಆ.4ರಂದು ಅಧಿಸೂಚನೆ ಹೊರಡಿಸಿತ್ತು. ಇದಾದ ಮೇಲೆ ಆಯೋಗ ವಾರ್ಡ್‌ಗಳ ಪುನರ್ ರಚಿಸಿ, ಗಡಿ ಗುರುತಿಸಿ ಕರಡು ವರದಿಯನ್ನು ನಗರಾಭಿವೃದ್ಧಿ ಇಲಾಖೆಗೆ ಸಲ್ಲಿಸಿತ್ತು.

ವಾರ್ಡ್ ವಿಂಗಡಣೆಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಆಕ್ಷೇಪಣೆಗಳಿದ್ದರೆ 15 ದಿನದೊಳಗೆ ಲಿಖಿತ ರೂಪದಲ್ಲಿ ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರಿಗೆ ಸಲ್ಲಿಸಬಹುದು.

**18 ವಾರ್ಡ್ ಕಡಿತ:** 243 ವಾರ್ಡ್‌ಗಳಿಂದ 225 ವಾರ್ಡ್‌ಗಳಿಗೆ ವ್ಯಾಪ್ತಿ ಕಡಿತಗೊಳಿಸಿದ್ದು, ವಿಧಾನಸಭೆ ಕ್ಷೇತ್ರ ಲೆಕ್ಕಾಚಾರದಲ್ಲಿ ಬಿಜೆಪಿ ಶಾಸಕರಿರುವ ಕ್ಷೇತ್ರದಲ್ಲಿ ವಾರ್ಡ್‌ಗಳು ಕಡಿಮೆಯಾಗಿವೆ. ದಾಸರಹಳ್ಳಿ, ಯಲಹಂಕ, ಜಯನಗರ ವಿಧಾನಸಭೆ ಕ್ಷೇತ್ರ ಹೊರತುಪಡಿಸಿದರೆ ಬಿಜೆಪಿ ಶಾಸಕರಿರುವ 13 ಕ್ಷೇತ್ರಗಳಲ್ಲಿ ವಾರ್ಡ್‌ಗಳ ಸಂಖ್ಯೆ ಕಡಿತಗೊಳಿಸಲಾಗಿದೆ.

ರಾಜರಾಜೇಶ್ವರಿನಗರ ವಿಧಾನಸಭೆ ಕ್ಷೇತ್ರದಲ್ಲಿ 14 ವಾರ್ಡ್‌ಗಳನ್ನು ರಚಿಸಲಾಗಿತ್ತು, ಅದನ್ನು 12ಕ್ಕೆ ಇಳಿಸಲಾಗಿದೆ. ಮಹದೇವಪುರ, ಪದ್ಮನಾಭನಗರ, ಬೊಮ್ಮನಹಳ್ಳಿ ವಿಧಾನಸಭೆ ಕ್ಷೇತ್ರಗಳಲ್ಲೂ ಎರಡು ವಾರ್ಡ್ ಕಡಿಮೆಯಾಗಿವೆ. ಮಹಾಲಕ್ಷ್ಮಿ ಲೇಔಟ್, ಮಲ್ಲೇಶ್ವರ, ಸಿ.ವಿ. ರಾಮನ್ ನಗರ, ರಾಜಾಜಿನಗರ, ಚಿಕ್ಕಪೇಟೆ, ಬಸವನಗುಡಿ, ಕೆ.ಆರ್. ಪುರ, ಯಶವಂತಪುರ, ಬೆಂಗಳೂರು ದಕ್ಷಿಣ ವಿಧಾನಸಭೆ ಕ್ಷೇತ್ರಗಳಲ್ಲಿ ತಲಾ ಒಂದೊಂದು ವಾರ್ಡ್ ಕಡಿಮೆಯಾಗಿವೆ.

**ವಾರ್ಡ್ ಹೆಸರೂ ಬದಲು:** ಬಿಜೆಪಿ ಸರ್ಕಾರ 243 ವಾರ್ಡ್‌ಗಳನ್ನು ರಚಿಸಿದ್ದಾಗ ನೀಡಲಾಗಿದ್ದ ಹಲವು ವಾರ್ಡ್‌ಗಳ ಹೆಸರೂ ಬದಲಾವಣೆಯಾಗಿವೆ. ಕರಡು ಪಟ್ಟಿಯಲ್ಲಿ 225 ವಾರ್ಡ್‌ಗಳಲ್ಲಿ ಹಳೆಯ ಹೆಸರನ್ನೇ ಬಹುತೇಕ ಉಳಿಸಿಕೊಳ್ಳಲಾಗಿದ್ದರೂ, 'ಬಿಜೆಪಿ ಬಣ್ಣದ' ಹೆಸರನ್ನು ಕೈಬಿಡಲಾಗಿದೆ.

243 ವಾರ್ಡ್‌ಗಳಿದ್ದಾಗ ಜನಸಂಖ್ಯೆ ಆಧಾರದಲ್ಲಿ ಹಲವು ವಾರ್ಡ್‌ಗಳಲ್ಲಿ ಸಂಖ್ಯೆ ಕಡಿಮೆ ಇತ್ತು. 20 ಸಾವಿರ ಜನಸಂಖ್ಯೆಗೂ ವಾರ್ಡ್ ರಚಿಸಲಾಗಿತ್ತು. ಆದರೆ, ಇದೀಗ 2011ರ ಜನಗಣತಿಗೆ ಅನುಗುಣವಾಗಿ ಸರಾಸರಿ 37,527 ಜನಸಂಖ್ಯೆಗೆ ಒಂದು ವಾರ್ಡ್ ರಚಿಸಲಾಗಿದೆ.

**225 ವಾರ್ಡ್‌ಗಳು ಒಳಗೊಳ್ಳುವ ಪ್ರದೇಶ, ಗಡಿ ಹಾಗೂ ಇತರೆ ವಿವರಗಳಿಗೆ : erajyapatra.karnataka.gov.in**

### ವಿಧಾನಸಭಾ ಕ್ಷೇತ್ರವಾರು ವಾರ್ಡ್‌ಗಳು

| ವಿಧಾನಸಭೆ ಕ್ಷೇತ್ರ | 198 ವಾರ್ಡ್‌ಗಳಿದ್ದಾಗ | 243 ವಾರ್ಡ್‌ಗಳಿದ್ದಾಗ | ಹೊಸ ಕರಡು ಪಟ್ಟಿಯಲ್ಲಿ |
|---|---|---|---|
| ಯಲಹಂಕ | 4 | 5 | 5 |
| ಕೆ.ಆರ್.ಪುರ | 9 | 13 | 12 |
| ಬ್ಯಾಟರಾಯನಪುರ | 7 | 10 | 10 |
| ಯಶವಂತಪುರ | 5 | 8 | 7 |
| ರಾಜರಾಜೇಶ್ವರಿ ನಗರ | 9 | 14 | 12 |
| ದಾಸರಹಳ್ಳಿ | 8 | 12 | 12 |
| ಮಹಾಲಕ್ಷ್ಮಿ ಬಡಾವಣೆ | 7 | 9 | 8 |
| ಮಲ್ಲೇಶ್ವರ | 7 | 7 | 6 |
| ಹೆಬ್ಬಾಳ | 8 | 8 | 8 |
| ಪುಲಕೇಶಿನಗರ | 7 | 7 | 7 |
| ಸರ್ವಜ್ಞನಗರ | 8 | 10 | 10 |
| ಸಿ.ವಿ.ರಾಮನ್ ನಗರ | 7 | 9 | 8 |
| ಶಿವಾಜಿನಗರ | 7 | 6 | 6 |
| ಶಾಂತಿನಗರ | 7 | 7 | 7 |
| ಗಾಂಧಿನಗರ | 7 | 7 | 7 |
| ರಾಜಾಜಿನಗರ | 7 | 7 | 6 |
| ಗೋವಿಂದರಾಜ ನಗರ | 9 | 10 | 9 |
| ವಿಜಯ ನಗರ | 8 | 9 | 9 |
| ಚಾಮರಾಜಪೇಟೆ | 7 | 6 | 6 |
| ಚಿಕ್ಕಪೇಟೆ | 7 | 7 | 6 |
| ಬಸವನಗುಡಿ | 6 | 7 | 6 |
| ಪದ್ಮನಾಭನಗರ | 8 | 10 | 8 |
| ಬಿಟಿಎಂ ಲೇಔಟ್ | 8 | 9 | 9 |
| ಜಯನಗರ | 7 | 6 | 6 |
| ಮಹದೇವಪುರ | 8 | 13 | 11 |
| ಬೊಮ್ಮನಹಳ್ಳಿ | 8 | 14 | 12 |
| ಬೆಂಗಳೂರು ದಕ್ಷಿಣ | 7 | 12 | 11 |
| ಆನೇಕಲ್ | 1 | 1 | 1 |

## ಡಿಸೆಂಬರ್‌ನಲ್ಲಿ ಚುನಾವಣೆ: ಸಚಿವ ರಾಮಲಿಂಗಾರೆಡ್ಡಿ

ಬಿಬಿಎಂಪಿ ಚುನಾವಣೆ ನಡೆಸಲು ಸರ್ಕಾರ ಬದ್ಧವಾಗಿದೆ. ಹೈಕೋರ್ಟ್ ಆದೇಶವೂ ಇದೆ. ವಿಳಂಬ ಮಾಡಲಾಗುವುದಿಲ್ಲ. ವಾರ್ಡ್ ಮರುವಿಂಗಡಣೆ ಕಾರ್ಯ ಮುಗಿದಿದೆ. ಅದನ್ನು ಶೀಘ್ರ ಅಂತಿಮಗೊಳಿಸಲಾಗುವುದು. ಮೀಸಲಾತಿಯನ್ನೂ ನಿಗದಿಮಾಡಿ ಅಧಿಸೂಚಿಸಲಾಗುವುದು. ಇನ್ನೆರಡು ತಿಂಗಳಲ್ಲಿ ಎಲ್ಲ ಪ್ರಕ್ರಿಯೆಗಳನ್ನು ಮುಗಿಸಿ ನವೆಂಬರ್–ಡಿಸೆಂಬರ್‌ನಲ್ಲಿ ಚುನಾವಣೆ ನಡೆಸಲಾಗುತ್ತದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

## ಗಡಿ ರಚನೆ ಅವೈಜ್ಞಾನಿಕ: ರಮೇಶ್

'ಬಿಬಿಎಂಪಿ ವಾರ್ಡ್ ಮರು ವಿಂಗಡಣೆಯಲ್ಲಿ ಬಿಜೆಪಿ ಶಾಸಕರಿರುವ ಕ್ಷೇತ್ರಗಳ ವಾರ್ಡ್‌ಗಳಲ್ಲಿ ಕಾಂಗ್ರೆಸ್ ತನ್ನ ಸಾಂಪ್ರದಾಯಿಕ ಮತಗಳು ನಾಲ್ಕಾರು ಸಾವಿರ ಸಂಖ್ಯೆಯಲ್ಲಿ ಇರುವಂತೆ ನೋಡಿಕೊಂಡಿದೆ. ಹೆಚ್ಚು ವಾರ್ಡ್ ಗೆಲ್ಲಬೇಕೆಂಬ ರಾಜಕೀಯ ಉದ್ದೇಶದಿಂದ ವಾರ್ಡ್ ಗಡಿ ಸಾಕಷ್ಟು ಬದಲಾಗಿದ್ದು, ವಕ್ರಾಕಾರ, ಲಂಬಾಕಾರದಲ್ಲಿದೆ. ಇದು ಅವೈಜ್ಞಾನಿಕವಾಗಿದ್ದು, 198 ವಾರ್ಡ್‌ಗಳಲ್ಲೂ ಹೋರಾಟ ಮಾಡಲಾಗುತ್ತದೆ' ಎಂದು ಬಿಜೆಪಿ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಅಧ್ಯಕ್ಷ ಎನ್.ಆರ್. ರಮೇಶ್ ಆರೋಪಿಸಿದರು.

## ವಾರ್ಡ್‌ಗಳು

1. ಕೆಂಪೇಗೌಡ ವಾರ್ಡ್
2. ಚೌಡೇಶ್ವರ ವಾರ್ಡ್
3. ಅಟ್ಟೂರು
4. ಯಲಹಂಕ ಸ್ಯಾಟಲೈಟ್ ಟೌನ್
5. ಕೋಗಿಲು
6. ಜಕ್ಕೂರು
7. ಥಣಿಸಂದ್ರ
8. ಅಮೃತಹಳ್ಳಿ
9. ಹೆಬ್ಬಾಳ ಕೆಂಪಾಪುರ
10. ಬ್ಯಾಟರಾಯನಪುರ
11. ಕೊಡಿಗೇಹಳ್ಳಿ
12. ದೊಡ್ಡ ಬೊಮ್ಮಸಂದ್ರ
13. ವಿದ್ಯಾರಣ್ಯಪುರ
14. ಕುವೆಂಪುನಗರ
15. ಕಮ್ಮಗೊಂಡನಹಳ್ಳಿ
16. ಮಲ್ಲಸಂದ್ರ
17. ಚಿಕ್ಕಸಂದ್ರ
18. ಬಾಗಲಕುಂಟೆ
19. ಟಿ. ದಾಸರಹಳ್ಳಿ
20. ನೆಲಗೆದರನಹಳ್ಳಿ
21. ಚೊಕ್ಕಸಂದ್ರ
22. ಪೀಣ್ಯ ಕೈಗಾರಿಕೆ ಪ್ರದೇಶ
23. ರಾಜಗೋಪಾಲ್ ನಗರ
24. ಹೆಗ್ಗನಹಳ್ಳಿ
25. ಸುಂಕದಕಟ್ಟೆ
26. ದೊಡ್ಡಬಿದರಕಲ್ಲು
27. ಬ್ಯಾಡರಹಳ್ಳಿ
28. ಹೇರೋಹಳ್ಳಿ
29. ಉಲ್ಲಾಳು
30. ನಾಗದೇವನಹಳ್ಳಿ
31. ಬಂಡೆ ಮಠ
32. ಕೆಂಗೇರಿ
33. ಹೆಮ್ಮಿಗೆಪುರ
34. ಜೆ.ಪಿ. ಪಾರ್ಕ್
35. ಯಶವಂತಪುರ
36. ಜಾಲಹಳ್ಳಿ
37. ಪೀಣ್ಯ
38. ಲಕ್ಷ್ಮೀದೇವಿ ನಗರ
39. ಲಗ್ಗೆರೆ
40. ಚೌಡೇಶ್ವರಿನಗರ
41. ಕೊಟ್ಟಿಗೆಪಾಳ್ಯ
42. ಶ್ರೀಗಂಧದ ಕಾವಲ್
43. ಮಲ್ಲತಹಳ್ಳಿ
44. ಜ್ಞಾನಭಾರತಿ
45. ರಾಜರಾಜೇಶ್ವರಿನಗರ
46. ಮಾರಪ್ಪನಪಾಳ್ಯ
47. ನಂದಿನಿ ಲೇಔಟ್
48. ಮಹಾಲಕ್ಷ್ಮೀಪುರಂ
49. ನಾಗಾಪುರ
50. ಡಾ.ಪುನೀತ್ ರಾಜ್ ಕುಮಾರ್
51. ಶಂಕರಮಠ
52. ಶಕ್ತಿ ಗಣಪತಿ ನಗರ
53. ವೃಷಭಾವತಿ ನಗರ
54. ಮತ್ತಿಕೆರೆ
55. ಮಲ್ಲೇಶ್ವರ
56. ಅರಮನೆ ನಗರ
57. ರಾಜಮಹಲ್ ಗುಟ್ಟಹಳ್ಳಿ
58. ಕಾಡು ಮಲ್ಲೇಶ್ವರ
59. ಸುಬ್ರಹ್ಮಣ್ಯ ನಗರ
60. ಗಾಯಿತ್ರಿ ನಗರ
61. ರಾಧಾಕೃಷ್ಣ ದೇವಸ್ಥಾನ
62. ಸಂಜಯನಗರ
63. ಹೆಬ್ಬಾಳ
64. ವಿಶ್ವನಾಥ ನಾಗೇನಹಳ್ಳಿ
65. ಮನೋರಾಯನಪಾಳ್ಯ
66. ಚಾಮುಂಡಿ ನಗರ
67. ಗಂಗಾನಗರ
68. ಜಯಚಾಮರಾಜೇಂದ್ರ ನಗರ
69. ಕಾವಲ್ ಬೈರಸಂದ್ರ
70. ಕುಶಾಲ್ ನಗರ
71. ಮುನೇಶ್ವರ ನಗರ
72. ದೇವರ ಜೀವನಹಳ್ಳಿ
73. ಎಸ್.ಕೆ. ಗಾರ್ಡನ್
74. ಸಗಾಯರಪುರಂ
75. ಪುಲಕೇಶಿನಗರ
76. ಹೆಣ್ಣೂರು
77. ನಾಗವಾರ
78. ಎಚ್‌ಬಿಆರ್ ಲೇಔಟ್
79. ಕಾಡುಗೊಂಡನಹಳ್ಳಿ
80. ಕಾಚರಕನಹಳ್ಳಿ
81. ಕಮ್ಮನಹಳ್ಳಿ
82. ಬಾಣಸವಾಡಿ
83. ಕೆಎಸ್‌ಎಫ್‌ಸಿ ಲೇಔಟ್
84. ಲಿಂಗರಾಜಪುರ
85. ಮಾರುತಿ ಸೇವಾನಗರ
86. ಚಳ್ಳಕೆರೆ
87. ಹೊರಮಾವು
88. ಕಲ್ಕೆರೆ
89. ವಿಜಿನಾಪುರ
90. ರಾಮಮೂರ್ತಿ ನಗರ
91. ಕೆ.ಆರ್. ಪುರ
92. ಬಸವನಪುರ
93. ದೇವಸಂದ್ರ
94. ಎ. ನಾರಾಯಣಪುರ
95. ವಿಜ್ಞಾನನಗರ
96. ಎಚ್‌ಎಎಲ್ ವಿಮಾನ ನಿಲ್ದಾಣ
97. ಕಾಡುಗೋಡಿ
98. ಬೆಳತ್ತೂರು
99. ಹೂಡಿ
100. ಗರುಡಾಚಾರ್ ಪಾಳ್ಯ
101. ದೊಡ್ಡನೆಕ್ಕುಂದಿ
102. ಎಇಸಿಎಸ್ ಲೇಔಟ್
103. ವೈಟ್‌ಫೀಲ್ಡ್
104. ವರ್ತೂರು
105. ಮುನ್ನೆಕೊಳಲು
106. ಮಾರತ್ತಹಳ್ಳಿ
107. ಬೆಳ್ಳಂದೂರು
108. ಕಾಕ್ಸ್ ಟೌನ್
109. ಬೆನ್ನಿಗಾನಹಳ್ಳಿ
110. ಸಿ.ವಿ. ರಾಮನ್ ನಗರ
111. ಕಗ್ಗದಾಸಪುರ
112. ಹೊಸ ತಿಪ್ಪಸಂದ್ರ
113. ಹೊಯ್ಸಳ ನಗರ
114. ಜೀವನಬಿಮಾನಗರ
115. ಕೋನೇನ ಅಗ್ರಹಾರ
116. ರಾಮಸ್ವಾಮಿ ಪಾಳ್ಯ
117. ವಸಂತನಗರ
118. ಎಸ್.ಆರ್. ನಗರ
119. ಶಿವಾಜಿನಗರ
120. ಭಾರತಿನಗರ
121. ಹಲಸೂರು
122. ದತ್ತಾತ್ರೇಯ ದೇವಸ್ಥಾನ
123. ಗಾಂಧಿನಗರ
124. ಸುಭಾಷ್ ನಗರ
125. ಓಕಳಿಪುರ
126. ಬಿನ್ನಿಪೇಟೆ
127. ಕಾಟನ್‌ಪೇಟೆ
128. ಚಿಕ್ಕಪೇಟೆ
129. ದಯಾನಂದ ನಗರ
130. ಪ್ರಕಾಶ್ ನಗರ
131. ಶ್ರೀರಾಮಮಂದಿರ
132. ಶಿವನಗರ
133. ಬಸವೇಶ್ವರನಗರ
134. ಕಾಮಾಕ್ಷಿಪಾಳ್ಯ
135. ಡಾ. ರಾಜ್‌ಕುಮಾರ್ ಅಗ್ರಹಾರ ದಾಸರಹಳ್ಳಿ
136. ಗೋವಿಂದರಾಜನಗರ
137. ಮಾರೇನಹಳ್ಳಿ
138. ಕಾವೇರಿಪುರ
139. ಮೂಡಲಪಾಳ್ಯ
140. ಮಾರುತಿ ಮಂದಿರ
141. ನಾಗರಭಾವಿ
142. ಚಂದ್ರಾ ಲೇಔಟ್
143. ನಾಯಂಡಹಳ್ಳಿ
144. ಕೆಂಪಾಪುರ ಅಗ್ರಹಾರ
145. ವಿಜಯನಗರ
146. ಹೊಸಹಳ್ಳಿ
147. ಹಂಪಿನಗರ
148. ಹೊಸ ಗುಡ್ಡದಹಳ್ಳಿ
149. ಗಾಳಿ ಆಂಜನೇಯ ದೇವಸ್ಥಾನ
150. ಅತ್ತಿಗುಪ್ಪೆ
151. ದೀಪಾಂಜಲಿನಗರ
152. ಆವಲಹಳ್ಳಿ
153. ಪಾದರಾಯನಪುರ
154. ರಾಯಪುರಂ
155. ದೇವರಾಜ ಅರಸ್ ನಗರ
156. ಚಲವಾದಿಪಾಳ್ಯ
157. ಕೆ.ಆರ್. ಮಾರುಕಟ್ಟೆ
158. ಚಾಮರಾಜಪೇಟೆ
159. ಆಜಾದ್ ನಗರ
160. ಧರ್ಮರಾಯಸ್ವಾಮಿ ದೇವಸ್ಥಾನ
161. ಸಿಲ್ವರ್ ಜೂಬ್ಲಿ ಪಾರ್ಕ್
162. ಸುಂಕೇನಹಳ್ಳಿ
163. ವಿಶ್ವೇಶ್ವರಪುರ
164. ಹೊಂಬೇಗೌಡ ನಗರ
165. ಸೋಮೇಶ್ವರ ನಗರ
166. ಶಾಂತಿನಗರ
167. ಶಾಂತಲಾ ನಗರ
168. ನೀಲಸಂದ್ರ
169. ವನ್ನಾರ್ ಪೇಟೆ
170. ಜೋಗುಪಾಳ್ಯ
171. ದೊಮ್ಮಲೂರು
172. ಅಗರಂ
173. ಈಜಿಪುರ
174. ಕೋರಮಂಗಲ
175. ಜಕ್ಕಸಂದ್ರ
176. ಆಡುಗೋಡಿ
177. ಲಕ್ಕಸಂದ್ರ
178. ಸುದ್ದಗುಂಟೆ ಪಾಳ್ಯ
179. ಮಡಿವಾಳ
180. ಸೋಮೇಶ್ವರ ದೇವಸ್ಥಾನ
181. ಬಿಟಿಎಂ ಲೇಔಟ್
182. ಬೈರಸಂದ್ರ
183. ಗುರಪ್ಪನಪಾಳ್ಯ
184. ಜಯನಗರ ಪೂರ್ವ
185. ಜೆ.ಪಿ. ನಗರ
186. ಶಾಕಾಂಬರಿ ನಗರ
187. ಸಾರಕ್ಕಿ
188. ಯಡಿಯೂರು
189. ಗಣೇಶ ಮಂದಿರ
190. ದೇವಗಿರಿ ದೇವಸ್ಥಾನ
191. ಬನಶಂಕರಿ ದೇವಸ್ಥಾನ
192. ಕುಮಾರಸ್ವಾಮಿ ಲೇಔಟ್
193. ಪದ್ಮನಾಭನಗರ
194. ಚಿಕ್ಕಲಸಂದ್ರ
195. ಹೊಸಕೆರೆಹಳ್ಳಿ
196. ಹನುಮಂತನಗರ
197. ಶ್ರೀನಗರ
198. ಬಸವನಗುಡಿ
199. ವಿದ್ಯಾಪೀಠ
200. ಗಿರಿನಗರ
201. ಕತ್ರಿಗುಪ್ಪೆ
202. ಉತ್ತರಹಳ್ಳಿ
203. ಸುಬ್ರಹ್ಮಣ್ಯಪುರ
204. ವಸಂತಪುರ
205. ಯಲಚೇನಹಳ್ಳಿ
206. ಕೋಣನಕುಂಟೆ
207. ಆರ್‌ಬಿಐ ಲೇಔಟ್
208. ಅಂಜನಾಪುರ
209. ಗೊಟ್ಟಿಗೆರೆ
210. ಕಾಳೇನ ಅಗ್ರಹಾರ
211. ಬೇಗೂರು
212. ನಾಗನಾಥಪುರ
213. ಜರಗನಹಳ್ಳಿ
214. ಪುಟ್ಟೇನಹಳ್ಳಿ
215. ಬಿಳೇಕಹಳ್ಳಿ
216. ಹುಳಿಮಾವು
217. ಕೋಡಿಚಿಕ್ಕನಹಳ್ಳಿ
218. ಬೊಮ್ಮನಹಳ್ಳಿ
219. ಹೊಂಗಸಂದ್ರ
220. ಗಾರೆಭಾವಿಪಾಳ್ಯ
221. ಎಚ್‌ಎಸ್‌ಆರ್ ಲೇಔಟ್
222. ಇಬ್ಲೂರು
223. ಮಂಗಮ್ಮನಪಾಳ್ಯ
224. ಹೊಸ ರಸ್ತೆ
225. ಕೂಡ್ಲು

## ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್: ₹ 9.19 ಕೋಟಿ ಲಾಭ

**ಬೆಂಗಳೂರು:** ಶ್ರೀನಿಧಿ ಸೌಹಾರ್ದ ಸಹಕಾರ ಬ್ಯಾಂಕ್ 2022–23ನೇ ಸಾಲಿನ ಆರ್ಥಿಕ ವರ್ಷದಲ್ಲಿ ₹ 9.19 ಕೋಟಿ ನಿವ್ವಳ ಲಾಭ ಗಳಿಸಿದೆ. ಶೇ 120ರಷ್ಟು ಪ್ರಗತಿ ಕಂಡಿದೆ ಎಂದು ಬ್ಯಾಂಕಿನ ಅಧ್ಯಕ್ಷ ಸದಾಶಿವರೆಡ್ಡಿ ತಿಳಿಸಿದರು.

ಬ್ಯಾಂಕಿನ ಸರ್ವಸದಸ್ಯರ ವಾರ್ಷಿಕ ಸಭೆಯಲ್ಲಿ ಮಾತನಾಡಿ, ಬ್ಯಾಂಕಿನ ರಜತ ಮಹೋತ್ಸವ ಪ್ರಯುಕ್ತ ಶೇ 14ರಷ್ಟು ಲಾಭಾಂಶ ಘೋಷಿಸಲಾಗಿದೆ ಎಂದರು.

ಬ್ಯಾಂಕಿನ ಠೇವಣಿಗಳ ಪ್ರಮಾಣ ₹ 383.27 ಕೋಟಿ ಹಾಗೂ ಸಾಲಗಳ ಪ್ರಮಾಣ ₹ 256.43 ಕೋಟಿಗಳಷ್ಟಿದೆ. ವಹಿವಾಟು ಒಟ್ಟು ₹ 639.70 ಕೋಟಿಯಾಗಿದೆ. ಗ್ರಾಹಕರಿಗೆ ಯುಪಿಐ ಸೌಲಭ್ಯವಿದ್ದು ಈ ವರ್ಷ ನಾಲ್ಕು ಶಾಖೆಗಳನ್ನು ತೆರೆಯಲು ಆರ್‌ಬಿಐ ಅನುಮತಿ ನೀಡಿದೆ. ಚಂದಾಪುರ, ಆನೇಕಲ್ ರಸ್ತೆಯ ಮರಸೂರು ಗೇಟ್ ಶಾಖೆಗಳನ್ನು ಶೀಘ್ರದಲ್ಲೇ ತೆರೆಯಲಾಗುವುದು ಎಂದು ತಿಳಿಸಿದರು.

## ಮ್ಯಾನ್ಮಾರ್‌ನಿಂದ ಮಣಿಪುರಕ್ಕೆ ವಾಪಸಾದ 212 ಮೈತೇಯಿಗಳು

**ಇಂಫಾಲ್ (ಪಿಟಿಐ):** ಮಣಿಪುರದಲ್ಲಿ ಜನಾಂಗೀಯ ಸಂಘರ್ಷದಿಂದ ಪಾರಾಗಲು ನೆರೆಯ ಮ್ಯಾನ್ಮಾರ್ ಗಡಿ ಪ್ರವೇಶಿಸಿದ್ದ ಮೈತೇಯಿ ಸಮುದಾಯದ 212 ಜನರು, ಮೂರು ತಿಂಗಳ ಬಳಿಕ ಸುರಕ್ಷಿತವಾಗಿ ರಾಜ್ಯಕ್ಕೆ ಮರಳಿದ್ದಾರೆ ಎಂದು ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಶುಕ್ರವಾರ ಹೇಳಿದ್ದಾರೆ.

ಇವರನ್ನು ಕರೆತರುವಲ್ಲಿ ಭಾರತೀಯ ಸೇನೆ ಮಹತ್ವದ ಪಾತ್ರ ನಿರ್ವಹಿಸಿದೆ ಎಂದು ಅವರು 'ಎಕ್ಸ್'ನಲ್ಲಿ ಬರೆದಿದ್ದಾರೆ.

ಮಣಿಪುರದ ಮೊರೆಹ್ ಪಟ್ಟಣದಲ್ಲಿ ಮೇ 3ರಂದು ಅಶಾಂತಿಯ ವಾತಾವರಣ ಸೃಷ್ಟಿಯಾದಾಗ ಮೈತೇಯಿಯ 212 ಜನರು ಸುರಕ್ಷತೆ ಬಯಸಿ ಮ್ಯಾನ್ಮಾರ್ ಗಡಿ ಪ್ರವೇಶಿಸಿದ್ದರು. ಇದೀಗ ಅವರು ಭಾರತದ ನೆಲಕ್ಕೆ ಮರಳಿದ್ದಾರೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

ಶನಿವಾರ, ಆಗಸ್ಟ್ 19, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 230 | ಪುಟ 24
www.prajavani.net
prajavani.net prajavani prajavani prajavani

# ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಸಹಮತದ
ಸಮ್ಮಿಲನ
ಅಂಕೆ ಬೇಕೆ?





| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 64,948 | 19,310 | ₹60,180 (ಬೆಂಗಳೂರು) | ₹72,600 (ಬೆಂಗಳೂರು) | 83.10 |

ಶಾಸಕರ ಹಿಡಿದಿಡಲು ಅಖಾಡಕ್ಕೆ ಇಳಿದ ಬಿಎಸ್‌ವೈ, ಬೊಮ್ಮಾಯಿ

# ಬಿರುಗಾಳಿ ತಡೆಗೆ ಬಿಜೆಪಿ ಯತ್ನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೆಲವು ಶಾಸಕರು ಕಾಂಗ್ರೆಸ್ ಸೇರಲಿದ್ದಾರೆ ಎಂಬ ಸುದ್ದಿ ಬಿಜೆಪಿಯನ್ನು ತಲ್ಲಣಕ್ಕೆ ದೂಡಿದೆ. ತಮ್ಮ ಶಾಸಕರನ್ನು ಹಿಡಿದಿಟ್ಟುಕೊಳ್ಳಲು ಅಖಾಡಕ್ಕೆ ಇಳಿದ ಆ ಪಕ್ಷದ ನಾಯಕರು, ಅವರ ಅಹವಾಲು ಆಲಿಸುವ ಯತ್ನ ಮಾಡಿದರು.

ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಅವರ ಮನೆಯಲ್ಲಿ ಶುಕ್ರವಾರ ರಾತ್ರಿ ನಡೆದ ಸಭೆಯಲ್ಲಿ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಆರ್. ಅಶೋಕ ಸೇರಿದಂತೆ ಬೆಂಗಳೂರಿನ ಹಲವು ಶಾಸಕರು ಭಾಗವಹಿಸಿದ್ದರು. ಆದರೆ, ಪಕ್ಷದಿಂದ ಕಾಲು ಹೊರಗಿಟ್ಟಂತೆ ತೋರುತ್ತಿರುವ ಯಶವಂತಪುರ ಶಾಸಕ ಎಸ್.ಟಿ. ಸೋಮಶೇಖರ್ ಹಾಗೂ ಕೆ.ಆರ್. ಪುರ ಶಾಸಕ ಬೈರತಿ ಬಸವರಾಜ ಸಭೆಯಲ್ಲಿ ಭಾಗಿಯಾಗಿರಲಿಲ್ಲ.

ಶಾಸಕರ ಜತೆ ಸಮಾಲೋಚನೆ ನಡೆಸಿದ ಯಡಿಯೂರಪ್ಪ, ಯಾರೊಬ್ಬರೂ 'ಆಪರೇಷನ್ ಹಸ್ತ'ಕ್ಕೆ ಸಿಲುಕಬೇಡಿ ಎಂದು ಸೂಚನೆ ನೀಡಿದರು. ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಕಾಂಗ್ರೆಸ್‌ನಲ್ಲಿದ್ದ ಎಸ್.ಟಿ.ಸೋಮಶೇಖರ್, ಬೈರತಿ ಬಸವರಾಜು, ಮುನಿರತ್ನ, ಶಿವರಾಂ ಹೆಬ್ಬಾರ್ ಹಾಗೂ ಜೆಡಿಎಸ್‌ನಲ್ಲಿದ್ದ ಕೆ. ಗೋಪಾಲಯ್ಯ ಅವರು, ಬಿಜೆಪಿ ಸೇರಿ ಸಚಿವರಾಗಿದ್ದರು. ಇವರ ಪೈಕಿ ಬಹುತೇಕರು ಕಾಂಗ್ರೆಸ್ ನಾಯಕರ ಸಂಪರ್ಕದಲ್ಲಿದ್ದು, ಬಿಜೆಪಿ ತೊರೆಯಲಿದ್ದಾರೆ ಎಂಬ ಸುದ್ದಿ ಹರಿದಾಡಿತ್ತು. ಅದನ್ನು ವದಂತಿ ಎಂದು ಬಿಜೆಪಿ ನಾಯಕರು ಹೇಳಿದ್ದರು. ಆದರೆ, ಎಸ್.ಟಿ.ಸೋಮಶೇಖರ್ ಮತ್ತು ಶಿವರಾಂ ಹೆಬ್ಬಾರ್ ಅವರು ಇದಕ್ಕೆ ಪುಷ್ಟಿ ನೀಡುವ ಮತ್ತು ಬಿಜೆಪಿಯಿಂದ ಅಂತರ ಕಾಯ್ದುಕೊಳ್ಳುವ ರೀತಿಯ ಹೇಳಿಕೆಗಳನ್ನು ನೀಡಲಾರಂಭಿಸಿದ್ದಾರೆ.

6ನೇ ಪುಟ ನೋಡಿ

## 'ಏನು ಬೇಕಾದರೂ ಆಗಬಹುದು'

**ಬೆಂಗಳೂರು:** 'ಬಿಜೆಪಿ, ಜೆಡಿಎಸ್ ಶಾಸಕರು ನಮ್ಮ ಸಂಪರ್ಕದಲ್ಲಿದ್ದಾರೆ ಎಂಬ ಮಾಹಿತಿಯನ್ನು ನಿಮ್ಮಿಂದಲೇ ಕೇಳುತ್ತಿದ್ದೇನೆ. ಆ ಬಗ್ಗೆ ನನಗೇನೂ ಗೊತ್ತಿಲ್ಲ. ಆದರೆ, ರಾಜಕೀಯದಲ್ಲಿ ಏನು ಬೇಕಾದರೂ ಆಗಬಹುದು' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.




'ಪಕ್ಷದ ಮತ ಗಳಿಕೆ ಪ್ರಮಾಣ ಹೆಚ್ಚಿಸಬೇಕಿದೆ. ಅದಕ್ಕಾಗಿ ಸ್ಥಳೀಯ ಮಟ್ಟದಲ್ಲಿ ಬೇರೆ ಪಕ್ಷಗಳ ಕಾರ್ಯಕರ್ತರನ್ನು ಸೇರಿಸಿಕೊಳ್ಳುವಂತೆ ಸೂಚಿಸಿದ್ದೇನೆ. ಉಳಿದಂತೆ ಬೇರೆ ಯಾರದ್ದೇ ಪಕ್ಷ ಸೇರ್ಪಡೆ ವಿಚಾರ ನನಗೆ ತಿಳಿದಿಲ್ಲ' ಎಂದರು.

'ನಮಗೆ 135 ಶಾಸಕರ ಬಲ ಇದೆ. ಹೀಗಾಗಿ ಬೇರೆಯವರ ಜತೆ ಮಾತನಾಡುವ ಅಗತ್ಯ ಉದ್ಭವಿಸಿಲ್ಲ. ಎಲ್ಲ ಶಾಸಕರೂ ನನಗೆ ಪರಿಚಿತರು. ಬಿಜೆಪಿಯವರು ಯಾರ ಜತೆ ಮಾತನಾಡಿದ್ದಾರೆ ಎಂಬುದರ ಬಗ್ಗೆ ನೀವು ಏಕೆ ಚರ್ಚೆ ಮಾಡುತ್ತಿಲ್ಲ. ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿದರೆ ಯಾರಿಗೂ ಗೊತ್ತಾಗುವುದಿಲ್ಲ ಎಂದು ಅವರು ಭಾವಿಸಿದ್ದಾರೆ' ಎಂದು ಹೇಳಿದರು.

## 'ಯಾರೂ ಬಿಜೆಪಿ ಬಿಡುವುದಿಲ್ಲ'

**ಬೆಂಗಳೂರು:** ರಾಜ್ಯ ಸರ್ಕಾರದ ಭ್ರಷ್ಟಾಚಾರ ಮತ್ತು ಕಮಿಷನ್ ದಂಧೆಯ ವಿರುದ್ಧ ಕೇಳಿ ಬರುತ್ತಿರುವ ಆರೋಪದ ಗಮನ ಬೇರೆಡೆ ಸೆಳೆಯಲು ಬಿಜೆಪಿ ಶಾಸಕರ ಪಕ್ಷಾಂತರದ ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.



'ಎಸ್.ಟಿ.ಸೋಮಶೇಖರ್, ಶಿವರಾಂ ಹೆಬ್ಬಾರ್ ಜತೆ ಮಾತನಾಡಿದ್ದೇನೆ. ಬಿಜೆಪಿಯ ಯಾವುದೇ ಶಾಸಕರು ಪಕ್ಷ ತೊರೆಯುವುದಿಲ್ಲ. ಶಾಸಕರು ಸ್ಥಳೀಯವಾಗಿರುವ ಸಮಸ್ಯೆಗಳನ್ನು ಹೇಳಿದ್ದಾರೆ. ಅದನ್ನು ರಾಜ್ಯಾಧ್ಯಕ್ಷರ ಗಮನಕ್ಕೆ ತಂದಿದ್ದೇನೆ. ನಾವೆಲ್ಲರೂ ಒಗ್ಗಟ್ಟಾಗಿದ್ದೇವೆ. ಕಾಂಗ್ರೆಸ್ ವಿರುದ್ಧ ಭ್ರಷ್ಟಾಚಾರ, ಸ್ವಜನ ಪಕ್ಷಪಾತದ ವಿರುದ್ಧ ಅವರ ಶಾಸಕರೇ ದಂಗೆ ಎದ್ದಿರುವುದನ್ನು ಮರೆ ಮಾಚಲು ಪಕ್ಷಾಂತರದ ಸುಳ್ಳು ಕತೆ ಕಟ್ಟುತ್ತಿದ್ದಾರೆ' ಎಂದರು.

400 ಪಶು ವೈದ್ಯಾಧಿಕಾರಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆ

# 'ಸಂದರ್ಶನ'ಕ್ಕೆ ಕೆಪಿಎಸ್‌ಸಿ ಪಟ್ಟು

• ರಾಜೇಶ್ ರೈ ಚಟ್ಲ

**ಬೆಂಗಳೂರು:** ಅಭ್ಯರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಶೇಕಡಾವಾರು ಪ್ರಮಾಣದ ಆಧಾರದಲ್ಲಿ 400 ಪಶು ವೈದ್ಯಾಧಿಕಾರಿ ಹುದ್ದೆಗಳನ್ನು ಭರ್ತಿ ಮಾಡುವಂತೆ ಪಶುಸಂಗೋಪನೆ ಇಲಾಖೆ ಪ್ರಸ್ತಾವನೆ ಸಲ್ಲಿಸಿದರೆ, ಸಂದರ್ಶನ (ವ್ಯಕ್ತಿತ್ವ ಪರೀಕ್ಷೆ) ಸಹಿತ ನೇಮಕಾತಿ ಪ್ರಕ್ರಿಯೆ ನಡೆಸಬೇಕು ಎಂದು ಕೆಪಿಎಸ್‌ಸಿ ಪಟ್ಟು ಹಿಡಿದಿದೆ.

ಕರ್ನಾಟಕ ನಾಗರಿಕ ಸೇವೆಗಳು (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು-2021ರ ನಿಯಮ 5 (ಡಿ) ಪ್ರಕಾರ ಉದ್ಯೋಗಾಕಾಂಕ್ಷಿಗಳು ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಪರಿಗಣಿಸಿ 400 ಹುದ್ದೆಗಳನ್ನು ಭರ್ತಿ ಮಾಡುವಂತೆ ಇಲಾಖೆಯು ಕೆಪಿಎಸ್‌ಸಿಗೆ ಪ್ರಸ್ತಾವನೆ ಸಲ್ಲಿಸಿತ್ತು.

ಇದನ್ನು ಪರಿಶೀಲಿಸಿದ ಆಯೋಗ, ಇಲಾಖೆಯ ಕಾರ್ಯದರ್ಶಿಗೆ ಆಗಸ್ಟ್ 8ರಂದು ಪತ್ರ ಬರೆದು, 'ಈ ಹುದ್ದೆಗಳು ಗ್ರೂಪ್ 'ಎ' ವರ್ಗದ ಹುದ್ದೆಗಳಾಗಿವೆ. ಹೀಗಾಗಿ, ಈ ಹುದ್ದೆಗಳ ಭರ್ತಿಗೆ ಸಂದರ್ಶನ (ವ್ಯಕ್ತಿತ್ವ ಪರೀಕ್ಷೆ) ಸಹಿತ ನೇಮಕಾತಿ ಪ್ರಕ್ರಿಯೆ ಕೈಗೊಳ್ಳುವುದು ಸೂಕ್ತ. ಹಿಂದೆ ಕಳುಹಿಸಿದ್ದ ಪ್ರಸ್ತಾವನೆಯನ್ನು ಮರು ಪರಿಶೀಲಿಸಬೇಕು' ಎಂದು ಕೋರಿದೆ.

**ಸ್ಪರ್ಧಾತ್ಮಕ ಪರೀಕ್ಷೆಯ ಅಂಕಗಳ ಆಧಾರದಲ್ಲಿ ನೇಮಕಾತಿಗೆ ಪ್ರಸ್ತಾವನೆ ಕಳುಹಿಸಲಾಗಿತ್ತು. ಗ್ರೂಪ್ 'ಎ' ಹುದ್ದೆಗೆ ಸಂದರ್ಶನ ಪ್ರಕ್ರಿಯೆ ನಡೆಸಬೇಕೆಂದು ಕೆಪಿಎಸ್‌ಸಿಯಿಂದ ಪತ್ರ ಬಂದಿದೆ**

**ಸಲ್ಮಾ ಕೆ. ಫಾಹಿಮ್**
ಕಾರ್ಯದರ್ಶಿ, ಪಶು ಸಂಗೋಪನೆ ಇಲಾಖೆ

**ಪಶು ವೈದ್ಯಾಧಿಕಾರಿ ಹುದ್ದೆಯು ಗ್ರೂಪ್ 'ಎ' ಆಗಿರುವುದರಿಂದ ಸಂದರ್ಶನ ನಡೆಸುವಂತೆ ಆಯೋಗ ನಿರ್ಣಯಿಸಿದೆ. ಹೀಗಾಗಿ, ನೇಮಕಾತಿ ಪ್ರಸ್ತಾವನೆ ಮರು ಪರಿಶೀಲಿಸಲು ಇಲಾಖೆಗೆ ಮರಳಿಸಲಾಗಿದೆ**

**ವಿಕಾಸ್ ಕಿಶೋರ್ ಸುರಳ್ಕರ್**
ಕಾರ್ಯದರ್ಶಿ, ಕೆಪಿಎಸ್‌ಸಿ

ಪ್ರಜಾವಾಣಿ ವಿಶೇಷ

ಪಶು ವೈದ್ಯಾಧಿಕಾರಿ ಹುದ್ದೆಗಳ ನೇಮಕಾತಿಗೆ ಮಾರ್ಚ್ 21ರಂದೇ ಇಲಾಖೆ ಪ್ರಸ್ತಾವನೆ ಸಲ್ಲಿಸಿತ್ತು. ಆಗ ವಿಧಾನಸಭೆ ಚುನಾವಣೆ ಘೋಷಣೆ ಆಗಿದ್ದರಿಂದ ಅಧಿಸೂಚನೆ ಹೊರಡಿಸಿರಲಿಲ್ಲ. ಈ ಮಧ್ಯೆ, ಮುಸ್ಲಿಮರಿಗೆ ನೀಡಿದ್ದ ಶೇ 4 ಮೀಸಲಾತಿ ರದ್ದುಪಡಿಸುವ ಜೊತೆಗೆ, ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ (ಇಡಬ್ಲ್ಯುಎಸ್) ಶೇ 10 ಮೀಸಲಾತಿ ಜೊತೆಗೆ ಒಟ್ಟು ಮೀಸಲಾತಿ ಪ್ರಮಾಣವನ್ನು ಮರು ಹಂಚಿಕೆ ಮಾಡಿ ಮಾರ್ಚ್ 27ರಂದು ಸರ್ಕಾರ ಆದೇಶ ಹೊರಡಿಸಿತ್ತು. ಹೀಗಾಗಿ, ನೇಮಕಾತಿಗೆ ಯಾವ ಮೀಸಲಾತಿ ನೀತಿ ಅನ್ವಯಿಸಬೇಕು ಎಂಬ ಬಗ್ಗೆ ಸ್ಪಷ್ಟನೆ ಕೋರಿ ಏಪ್ರಿಲ್ 28ರಂದು ಇಲಾಖೆಗೆ ಕೆಪಿಎಸ್‌ಸಿ ಪ್ರಸ್ತಾವನೆಯನ್ನು ಮರಳಿಸಿತ್ತು.

6ನೇ ಪುಟ ನೋಡಿ

## ಆಯ್ಕೆ ನಿಯಮದಲ್ಲಿ ಏನಿದೆ?

'ನೇರ ನೇಮಕಾತಿ ನಿಯಮಗಳು-2021'ರಲ್ಲಿ ಅಭ್ಯರ್ಥಿಗಳ ಆಯ್ಕೆ ವಿಧಾನವನ್ನು ವಿವರಿಸಲಾಗಿದೆ. ಅದರಲ್ಲಿರುವ ನಿಯಮ 5 (ಡಿ) ಪ್ರಕಾರ, ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಶೇಕಡಾವಾರು ಪ್ರಮಾಣದ ಆಧಾರದ ಮೇಲೆ ಆಯ್ಕೆ ಮಾಡಬೇಕು ಎಂದು ತಿಳಿಸಲಾಗಿದೆ. ಅಲ್ಲದೆ, 'ವೈದ್ಯಕೀಯ ಅಧಿಕಾರಿಗಳ, ಪಶು ವೈದ್ಯಾಧಿಕಾರಿಗಳ, ಎಂಜಿನಿಯರ್ ಹುದ್ದೆಗಳ ಮತ್ತು ಸರ್ಕಾರವು ಅಧಿಸೂಚಿಸಬಹುದಾದ ಇತರ ಹುದ್ದೆಗಳ ಮತ್ತು ಆಯ್ಕೆ ವಿಧಾನದ ಗ್ರೂಪ್ 'ಸಿ' ಮತ್ತು 'ಡಿ'ಯ ಎಲ್ಲ ಹುದ್ದೆಗಳ ಪ್ರವೇಶ ಹಂತದ ಸಂದರ್ಭದಲ್ಲಿ ಸಂದರ್ಶನವನ್ನು ಒಳಗೊಂಡಿರತಕ್ಕದ್ದಲ್ಲ' ಎಂದೂ ಸ್ಪಷ್ಟಪಡಿಸಲಾಗಿದೆ.

# ಮಣಿಪುರದಲ್ಲಿ ಮತ್ತೆ ಹಿಂಸಾಚಾರ: ಮೂವರ ಹತ್ಯೆ

**ಇಂಫಾಲ್ (ಪಿಟಿಐ):** ಜನಾಂಗೀಯ ಸಂಘರ್ಷದಿಂದ ನಲುಗುತ್ತಿರುವ ಮಣಿಪುರದಲ್ಲಿ ಹಿಂಸಾಚಾರದ ಹೊಸ ಪ್ರಕರಣಗಳು ವರದಿಯಾಗಿವೆ. ಉಖ್ರುಲ್ ಜಿಲ್ಲೆಯ ಕುಕಿ ಥೋವಯಿ ಗ್ರಾಮದಲ್ಲಿ ಶುಕ್ರವಾರ ಭಾರಿ ಗುಂಡಿನ ದಾಳಿಯ ನಂತರ ಮೂವರು ಯುವಕರ ಶವಗಳು ವಿರೂಪಗೊಳಿಸಿರುವ ಸ್ಥಿತಿಯಲ್ಲಿ ಪತ್ತೆಯಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಲಿಟನ್ ಪೊಲೀಸ್ ಠಾಣಾ ವ್ಯಾಪ್ತಿಯ ಈ ಹಳ್ಳಿಯಲ್ಲಿ ನಸುಕಿನಲ್ಲಿ ಗುಂಡಿನ ದಾಳಿಯ ಭಾರಿ ಶಬ್ದ ಕೇಳಿಬಂತು. ಸುತ್ತಮುತ್ತಲಿನ ಗ್ರಾಮಗಳು ಮತ್ತು ಅರಣ್ಯ ಪ್ರದೇಶಗಳಲ್ಲಿ ಪೊಲೀಸರು ಶೋಧ ನಡೆಸಿದಾಗ, 24ರಿಂದ 35 ವರ್ಷ ವಯಸ್ಸಿನ ಮೂವರು ಯುವಕರ ಶವಗಳು ಪತ್ತೆಯಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹರಿತವಾದ ಚಾಕುಗಳನ್ನು ಬಳಸಿ ಮಾಡಿರುವ ಗಾಯಗಳ ಗುರುತುಗಳು ಮೂರು ಶವಗಳ ಮೇಲಿವೆ. ಅಲ್ಲದೆ, ಕೈ-ಕಾಲುಗಳನ್ನು ಕತ್ತರಿಸಿ ಹಾಕಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇತ್ತೀಚಿನ ಹಿಂಸಾಚಾರದಲ್ಲಿ ತಾಂಗ್‌ಖುಲ್ ನಾಗಾಗಳ ಪ್ರಾಬಲ್ಯವಿರುವ ಉಖ್ರುಲ್ ಜಿಲ್ಲೆಯಲ್ಲಿ ಇಂತಹ ಅಮಾನವೀಯ ದಾಳಿ ನಡೆದಿರುವುದು ಇದೇ ಮೊದಲು.

ಮೀಸಲಾತಿ ಸಂಬಂಧ ಮೇ 3ರಂದು ಶುರುವಾಗಿದ್ದ ಹಿಂಸಾಚಾರ ಇನ್ನೂ ಸಂಪೂರ್ಣ ನಿಂತಿಲ್ಲ.



ಚಿನಕುರಳಿ

ಪ್ರಕಾಶ್ ಶೆಟ್ಟಿ




# ನಾಯಿಗೆ ಥಳಿತ: ಸಿಟ್ಟಾದ ವ್ಯಕ್ತಿ ಹಾರಿಸಿದ ಗುಂಡಿಗೆ ಇಬ್ಬರ ಬಲಿ

**ಇಂದೋರ್ (ಪಿಟಿಐ):** ಸಾಕುನಾಯಿಗಳ ಕಚ್ಚಾಟ ಅವುಗಳ ಮಾಲೀಕರ ನಡುವೆ ಜಗಳಕ್ಕೆ ಕಾರಣವಾಗಿದ್ದು, ಮಾಲೀಕರೊಬ್ಬರು ಹಾರಿಸಿದ ಗುಂಡಿನಿಂದ ಇಬ್ಬರು ಮೃತಪಟ್ಟ ಘಟನೆ ಮಧ್ಯಪ್ರದೇಶದ ಇಂದೋರ್‌ನಲ್ಲಿ ಗುರುವಾರ ರಾತ್ರಿ ನಡೆದಿದೆ.

ಗುಂಡೇಟಿನಿಂದ ರಾಹುಲ್ ವರ್ಮಾ (28), ಆತನ ಸಂಬಂಧಿ ವಿಮಲ್ ಆಮ್ಚಾ (35) ಮೃತಪಟ್ಟಿದ್ದಾರೆ. ರಾಹುಲ್ ವರ್ಮಾ ಅವರ ಗರ್ಭಿಣಿ ಪತ್ನಿ ಜ್ಯೋತಿ ಹಾಗೂ ಇತರ ಐವರು ಗಾಯಗೊಂಡರು. ಇವರು ಅಪಾಯದಿಂದ ಪಾರಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಬ್ಯಾಂಕ್‌ವೊಂದರ ಭದ್ರತಾ ಸಿಬ್ಬಂದಿ, ನಾಯಿ ಮಾಲೀಕ ರಾಜ್‌ಪಾಲ್ ಸಿಂಗ್ ರಾಜಾವತ್ ಜಗಳದಿಂದ ಕುಪಿತಗೊಂಡು, ತನ್ನ ಡಬಲ್ ಬ್ಯಾರಲ್ ಗನ್‌ನಿಂದ ಜನರ ಗುಂಪಿನತ್ತ ಗುಂಡು ಹಾರಿಸಿದ್ದಾನೆ. ಗನ್‌ನಿಂದ ಗುಂಡು ಹಾರಿಸುತ್ತಿರುವುದು ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಆರೋಪಿಯನ್ನು ಬಂಧಿಸಿದ್ದು, ಡಬಲ್ ಬ್ಯಾರಲ್‌ನ 12 ಬೋರ್ ಗನ್, ಅದರ ಲೈಸೆನ್ಸ್, ಕಾಟ್ರಿಡ್ಜ್ ಕೇಸ್, ಕೆಲ ಗುಂಡು ವಶಕ್ಕೆ ಪಡೆಯಲಾಗಿದೆ ಎಂದು ಖಜ್ರಾನಾ ಠಾಣಾಧಿಕಾರಿ ಉಮ್ರಾವ್ ಸಿಂಗ್ ತಿಳಿಸಿದ್ದಾರೆ.

**ವಿವರ:** ಠಾಣೆ ವ್ಯಾಪ್ತಿಯ ಕೃಷ್ಣಭಾಗ್ ಕಾಲೊನಿ ನಿವಾಸಿ ರಾಜಾವತ್ ಸಾಕುನಾಯಿ ಜೊತೆ ವಾಯುವಿಹಾರಕ್ಕೆ ತೆರಳಿದ್ದರು. ಆಮ್ಚಾ ಮನೆ ಬಳಿ ಬಂದಾಗ ಅವರು ಸಾಕಿಕೊಂಡಿದ್ದ ನಾಯಿಯನ್ನು ಕಂಡು ರಾಜಾವತ್ ಅವರ ನಾಯಿ ಬೊಗಳಿದ್ದು, ಎರಡೂ ನಾಯಿಗಳ ಕಚ್ಚಾಟ ಆರಂಭವಾಗಿದೆ.

ಕಚ್ಚಾಡುತ್ತಿದ್ದ ನಾಯಿಗಳು ಆಮ್ಚಾ ಮನೆ ಆವರಣಕ್ಕೇ ನುಗ್ಗಿದಾಗ ಕುಪಿತಗೊಂಡ ಆಮ್ಚಾ ಸಹೋದರ ಪ್ರಮೋದ್ ದೊಣ್ಣೆಯಿಂದ ರಾಜಾವತ್ ಅವರ ನಾಯಿಗೆ ಹೊಡೆದು ಓಡಿಸಲು ಮುಂದಾಗಿದ್ದಾರೆ. ಇದು, ರಾಜಾವತ್ ಅವರನ್ನು ಕೋಪೋದ್ರಿಕ್ತರಾಗಿಸಿದೆ.

ಇಬ್ಬರ ನಡುವೆ ವಾಕ್ಸಮರ ಶುರುವಾಗಿದೆ. ರೊಚ್ಚಿನಿಂದ ಮನೆಗೆ ತೆರಳಿದ ರಾಜಾವತ್ ಗನ್ ಹಿಡಿದು ಬಾಲ್ಕನಿಯಿಂದಲೇ ಎರಡು ಸುತ್ತು ಗಾಳಿಯಲ್ಲಿ ಗುಂಡು ಹಾರಿಸಿ ಬೆದರಿಸಿದ್ದಾರೆ. ಬಳಿಕ ಕೆಳಗೆ ನಿಂತಿದ್ದ ಜನರ ಗುಂಪಿನತ್ತ ಏಕಾಏಕಿ ಗುಂಡಿನ ದಾಳಿ ನಡೆಸಿದ್ದಾರೆ.

## ನಾಯಿ ಮೇಲೆ ಆ್ಯಸಿಡ್ ಎರಚಿದ ಮಹಿಳೆ

**ಮುಂಬೈ:** ಸಾಕುಬೆಕ್ಕಿನ ಜೊತೆಗೆ ನೆರೆಮನೆಯ ನಾಯಿ ಆಟವಾಡುತ್ತಿದೆ ಎಂದು ಕುಪಿತಗೊಂಡಿದ್ದ 35 ವರ್ಷದ ಮಹಿಳೆ, ನಾಯಿಯ ಮೇಲೆ ಆ್ಯಸಿಡ್ ಎರಚಿ ಆಕ್ರೋಶವನ್ನು ಹೊರಹಾಕಿದ್ದಾರೆ. ಇಲ್ಲಿನ ಮಲ್ವಾನಿ ಪ್ರದೇಶದಲ್ಲಿ ಬುಧವಾರ ಈ ಕೃತ್ಯ ನಡೆದಿದೆ. ಮಹಿಳೆ ಶಬಿಸ್ತಾ ಸುಹೈಲ್ ಅನ್ಸಾರಿ ವಿರುದ್ಧ ಪ್ರಾಣಿ ಹಿಂಸೆ ಪ್ರಕರಣ ಸೇರಿದಂತೆ ಐಪಿಸಿಯ ವಿವಿಧ ಸೆಕ್ಷನ್‌ಗಳಡಿ ಪೊಲೀಸರು ಪ್ರಕರಣ ದಾಖಲಿಸಿದ್ದು, ಆಕೆಯನ್ನು ಬಂಧಿಸಿದ್ದಾರೆ ಎಂದು ಎನ್‌ಡಿಟಿವಿ ವರದಿ ಮಾಡಿದೆ.

ಸಾಕು ಬೆಕ್ಕಿನ ಜೊತೆ ನಾಯಿ ಆಟವಾಡುತ್ತಿದೆ ಎಂದು ಬೇಸರಗೊಂಡಿದ್ದರು. ನಾಯಿ ಮಾಲೀಕರಿಗೆ ಎಚ್ಚರಿಕೆ ನೀಡಿದ್ದರು. ಆದರೆ, ಮಾಲೀಕರು ಅದನ್ನು ಕಡೆಗಣಿಸಿದ್ದರು. ಹೀಗಾಗಿ, ಮಲಗಿದ್ದ ನಾಯಿ ಮೇಲೆ ಆ್ಯಸಿಡ್ ಎರಚಿದ್ದಾರೆ.

ಕಚೇರಿ 45 ದಿನಗಳಲ್ಲಿ ನಿರ್ಮಾಣ: 1021 ಚದರ ಅಡಿ ವಿಸ್ತೀರ್ಣ ● ಇಂಥದ್ದು ದೇಶದಲ್ಲೇ ಮೊದಲು

# 3ಡಿ ಮುದ್ರಿತ ಅಂಚೆ ಕಚೇರಿ ಉದ್ಘಾಟನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಭಾರತದ ಮೊದಲ 3ಡಿ ಮುದ್ರಿತ ಅಂಚೆ ಕಚೇರಿ ಕಟ್ಟಡವನ್ನು ನಗರದ ಕೇಂಬ್ರಿಡ್ಜ್ ಲೇಔಟ್‌ನಲ್ಲಿ ನಿರ್ಮಿಸಲಾಗಿದ್ದು, ಶುಕ್ರವಾರ ರೈಲ್ವೆ, ಸಂವಹನ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಉದ್ಘಾಟಿಸಿದರು.

ಸಾಮಾನ್ಯ ತಂತ್ರಜ್ಞಾನದಲ್ಲಿ ಈ ಕಟ್ಟಡ ನಿರ್ಮಾಣಕ್ಕೆ ಕನಿಷ್ಠ 6 ತಿಂಗಳು ಬೇಕಾಗುತ್ತದೆ. ಅದನ್ನು 3ಡಿ ತಂತ್ರಜ್ಞಾನದಲ್ಲಿ ಕೇವಲ 45 ದಿನಗಳಲ್ಲಿ ನಿರ್ಮಿಸಲಾಗಿದೆ. ಚೆನ್ನೈ ಐಐಟಿ ಮಾರ್ಗದರ್ಶನದಲ್ಲಿ ಲಾರ್ಸೆನ್ ಮತ್ತು ಟುಬ್ರೋ ಲಿಮಿಟೆಡ್ (ಎಲ್ ಆ್ಯಂಡ್ ಟಿ) ಸಂಸ್ಥೆ ನಿರ್ಮಿಸಿದೆ. ಈ ಕಟ್ಟಡ 1021 ಚದರ ಅಡಿ ಒಟ್ಟು ವಿಸ್ತೀರ್ಣವನ್ನು ಹೊಂದಿದೆ ಎಂದು ಸಚಿವರು ಮಾಹಿತಿ ನೀಡಿದರು.

ಈ ಪ್ರಕ್ರಿಯೆಯು ಪೂರ್ಣ ಸ್ವಯಂ ಚಾಲಿತ ಕಟ್ಟಡ ನಿರ್ಮಾಣ ತಂತ್ರಜ್ಞಾನವಾಗಿದ್ದು, ಇದರಲ್ಲಿ ರೋಬೋಟಿಕ್ ಪ್ರಿಂಟರ್ ಮೂಲಕ ಕಾಂಕ್ರೀಟ್ ಪದರವನ್ನು ಹಂತ ಹಂತವಾಗಿ



ನಗರದ ಕೇಂಬ್ರಿಡ್ಜ್ ಲೇಔಟ್‌ನಲ್ಲಿ ಭಾರತದ ಮೊದಲ 3ಡಿ ಮುದ್ರಿತ ಅಂಚೆ ಕಚೇರಿ ಕಟ್ಟಡವನ್ನು ಶುಕ್ರವಾರ ರೈಲ್ವೆ, ಸಂವಹನ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಉದ್ಘಾಟಿಸಿದರು. ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಎಸ್. ರಾಜೇಂದ್ರ, ಸಂಸದ ಪಿ.ಸಿ. ಮೋಹನ್, ಐಐಟಿ ಪ್ರೊಫೆಸರ್ ಆರ್. ಗೆಟ್ಟು ಇದ್ದರು

ನಿರ್ಮಿಸಲಾಗುತ್ತದೆ. ತ್ವರಿತವಾಗಿ ಗಟ್ಟಿಯಾಗುವ ವಿಶೇಷ ದರ್ಜೆಯ ಕಾಂಕ್ರೀಟ್‌ಅನ್ನು ಪದರಗಳ ನಡುವೆ ಬಂಧವನ್ನು ಖಚಿತಪಡಿಸಿಕೊಳ್ಳಲು ಬಳಸಲಾಗುತ್ತದೆ. ಕಟ್ಟಡ ನಿರ್ಮಾಣದ ವೆಚ್ಚ ಮತ್ತು ಸಮಯ ಉಳಿತಾಯವಾಗುತ್ತದೆ ಎಂದು ಐಐಟಿ ಪ್ರೊಫೆಸರ್ ಆರ್. ಗೆಟ್ಟು ಮಾಹಿತಿ ನೀಡಿದರು.

ಸಂಸದ ಪಿ.ಸಿ. ಮೋಹನ್ ಮಾತನಾಡಿ, 'ಸಮಯ ಮತ್ತು ವೆಚ್ಚವನ್ನು ಕಡಿಮೆ ಮಾಡುವ ಈ ತಂತ್ರಜ್ಞಾನವನ್ನು ಅಂಚೆ ಇಲಾಖೆ ಒಂದೇ ಅಲ್ಲ, ಎಲ್ಲ ಇಲಾಖೆಯವರೂ ಬಳಸಿಕೊಳ್ಳಬೇಕು' ಎಂದರು.

ಸಂಸದ ಡಿ.ವಿ. ಸದಾನಂದ ಗೌಡ, ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಎಸ್. ರಾಜೇಂದ್ರ ಇದ್ದರು. 3ಡಿ ಮುದ್ರಣದ ವಿಶೇಷ ಅಂಚೆ ಲಕೋಟೆಯನ್ನು ಇದೇ ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು.

## ಪ್ರಧಾನಿ ಮೋದಿ ಶ್ಲಾಘನೆ

3ಡಿ ಅಂಚೆ ಕಚೇರಿಯ ಬಗ್ಗೆ ಶ್ಲಾಘನೆ ವ್ಯಕ್ತಪಡಿಸಿ ಪ್ರಧಾನಿ ನರೇಂದ್ರ ಮೋದಿ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಬೆಂಗಳೂರಿನ ಕೇಂಬ್ರಿಡ್ಜ್ ಲೇಔಟ್‌ನಲ್ಲಿ ಭಾರತದ ಮೊದಲ 3ಡಿ ಮುದ್ರಿತ ಅಂಚೆ ಕಚೇರಿಯನ್ನು ನೋಡಲು ಪ್ರತಿಯೊಬ್ಬ ಭಾರತೀಯನು ಹೆಮ್ಮೆಪಡುತ್ತಾನೆ. ನಮ್ಮ ರಾಷ್ಟ್ರದ ನಾವೀನ್ಯತೆ ಮತ್ತು ಪ್ರಗತಿಗೆ ಸಾಕ್ಷಿಯಾಗಿದೆ. ಇದು ಸ್ವಾವಲಂಬಿ ಭಾರತದ ಆತ್ಮವನ್ನು ಒಳಗೊಂಡಿದೆ. ಅಂಚೆ ಇಲಾಖೆಯನ್ನು ಪೂರ್ಣಗೊಳಿಸುವಲ್ಲಿ ಶ್ರಮಿಸಿದವರಿಗೆ ಅಭಿನಂದನೆಗಳು' ಎಂದು ಆ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

### ಹ್ಯಾರಿಸ್ ಅನುಯಾಯಿಗಳ ಪ್ರತಿಭಟನೆ

ಕೇಂಬ್ರಿಡ್ಜ್ ಲೇಔಟ್‌ನಲ್ಲಿ ನಿರ್ಮಾಣಗೊಂಡಿರುವ 3ಡಿ ಮುದ್ರಿತ ಅಂಚೆ ಕಚೇರಿ ಕಟ್ಟಡ ಉದ್ಘಾಟನೆಗಾಗಲಿ, ವೇಗದೂತ್ ಸಭಾಂಗಣದಲ್ಲಿ ನಡೆಯುವ ಸಭಾ ಕಾರ್ಯಕ್ರಮಕ್ಕಾಗಲಿ ಸ್ಥಳೀಯ ಶಾಸಕ ಹ್ಯಾರಿಸ್ ಅವರನ್ನು ಕರೆಯದೇ ಶಿಷ್ಟಾಚಾರ ಉಲ್ಲಂಘಿಸಲಾಗಿದೆ ಎಂದು ಆರೋಪಿಸಿ ಹ್ಯಾರಿಸ್ ಅನುಯಾಯಿಗಳು ಪ್ರತಿಭಟನೆ ನಡೆಸಿದರು.

ಕಟ್ಟಡ ನಿರ್ಮಾಣಕ್ಕೆ ಜಾಗ ನೀಡಿರುವವರನ್ನೂ ಕರೆಯದೇ ಅಧಿಕಾರಿಗಳು ನಿರ್ಲಕ್ಷ್ಯ ತೋರಿದ್ದಾರೆ ಎಂದು ಪ್ರತಿಭಟನಕಾರರು ಆರೋಪಿಸಿದರು.

## ನಗರದಲ್ಲಿ ಇಂದು

**ನಾಗರ ಪಂಚಮಿ, ಗಂಗಮ್ಮ ದೇವಿ ಜಾತ್ರೆ, ಕರಗದ 41ನೇ ವಾರ್ಷಿಕೋತ್ಸವ:** ಗಂಗಮ್ಮ ದೇವಿಗೆ ಅಭಿಷೇಕ, ಸುಮಂಗಲಿ ಪೂಜೆ, ಸಹಸ್ರ ಕುಂಕುಮಾರ್ಚನೆ, ಗಂಗಮ್ಮ ದೇವಿಗೆ ಅಲಂಕಾರ, ಆಯೋಜನೆ ಮತ್ತು ಸ್ಥಳ: ಪಾತಾಳ ಪಂಚನಾಗೇಂದ್ರಸ್ವಾಮಿ ಮತ್ತು ದೇವಸ್ಥಾನ, ಮಹಾಲಕ್ಷ್ಮಿಪುರ, ಬೆಳಿಗ್ಗೆ 7ರಿಂದ

**'ನಮ್ಮ ಕೆರೆ' ಚರ್ಚೆ:** ಬೆಂಗಳೂರಿನ ಕೆರೆ ನಿರ್ವಹಣೆ, ಸಂರಕ್ಷಣೆಯಲ್ಲಿನ ಸಮಸ್ಯೆಗಳು ಹಾಗೂ ಪರಿಹಾರದ ಬಗ್ಗೆ ಚರ್ಚೆ, ಅತಿಥಿಗಳು: ಟಿ.ವಿ. ರಾಮಚಂದ್ರ, ಯು.ವಿ. ಸಿಂಘ್, ರಾಜೀವ್ ಗೌಡ, ಸ್ಮರಣ್ ಶೆಟ್ಟಿ, ಮುಕುಂದ ನಮಗುಂಡ್ಲು, ವಾಸಂತಿ ಹರಿಪ್ರಕಾಶ್, ಆಯೋಜನೆ: ಸ್ಯಾಂಕಿ ಕೆರೆ ತಂಡ, ಬೆಂಗಳೂರು ಪ್ರಜಾವೇದಿಕೆ, ಸ್ಥಳ: ಸೇವಾಸದನ, ಮಲ್ಲೇಶ್ವರ, ಬೆಳಿಗ್ಗೆ 10

**ವಿಶ್ವ ಛಾಯಾಗ್ರಾಹಕರ ದಿನಾಚರಣೆ ಅಂಗವಾಗಿ ಸಾಧಕರಿಗೆ ಸನ್ಮಾನ:** ಮುಖ್ಯ ಅತಿಥಿಗಳು: ರಾಮಲಿಂಗಾರೆಡ್ಡಿ, ಪ್ರಿಯಕೃಷ್ಣ, ಶ್ರೀನಿವಾಸ ರೆಡ್ಡಿ, ಶ್ರೀಧರ ಆರ್., ಬಿ.ಪಿ. ಮಲ್ಲಪ್ಪ, ಆಯೋಜನೆ: ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ ಆಫ್ ಬೆಂಗಳೂರು, ಸ್ಥಳ: ಪ್ರೆಸ್ ಕ್ಲಬ್, ಕಬ್ಬನ್ ಉದ್ಯಾನ, ಬೆಳಿಗ್ಗೆ 10

**ಕಾನೂನು ಮತ್ತು ಜೀವನದ ಬಗ್ಗೆ ವಿಶೇಷ ಉಪನ್ಯಾಸ:** ನ್ಯಾ. ಕೃಷ್ಣ ಎಸ್. ದೀಕ್ಷಿತ್, ಆಯೋಜನೆ ಮತ್ತು ಸ್ಥಳ: ಕೆ.ಎಲ್.ಇ. ಕಾನೂನು ಕಾಲೇಜು, ಬೆಳಿಗ್ಗೆ 10.30

**'ಭಾರತದಲ್ಲಿ ಪಂಚಾಯತ್ ರಾಜ್: ಸಕ್ರಿಯಗೊಳಿಸುವುದು ಹೇಗೆ?' ವಿಚಾರಸಂಕಿರಣ:** ಮುಖ್ಯ ಅತಿಥಿ: ಎಚ್.ಕೆ. ಪಾಟೀಲ, ಅಧ್ಯಕ್ಷತೆ: ಬಿ.ಕೆ. ಚಂದ್ರಶೇಖರ್, ವಿಚಾರಸಂಕಿರಣದಲ್ಲಿ ಭಾಗವಹಿಸುವರು: ಡಿ. ರಾಜಶೇಖರ್, ಆರ್. ಮಂಜುಳಾ, ಡಿ.ಆರ್. ಪಾಟೀಲ, ಎಂ. ಗೋಪಿನಾಥ್ ರೆಡ್ಡಿ, ಎನ್. ಶಿವಣ್ಣ, ಎಂ. ದೇವೇಂದ್ರ ಬಾಬು, ವೆಂಕಟರಾವ್ ವೈ. ಘೋರ್ಪಡೆ, ಆಯೋಜನೆ: ಅಕಾಡೆಮಿ ಆಫ್ ಗ್ರಾಸ್‌ರೂಟ್ಸ್ ಸ್ಟಡೀಸ್ ಆ್ಯಂಡ್ ರಿಸರ್ಚ್ ಆಫ್ ಇಂಡಿಯಾ, ಸ್ಥಳ: ಗಾಂಧಿ ಭವನ, ಕುಮಾರ ಪಾರ್ಕ್, ಬೆಳಿಗ್ಗೆ 10.30

**ಕಾ.ತ. ಚಿಕ್ಕಣ್ಣ ಅವರ 'ಕನ್ನಡ ಎನೆ' ಪುಸ್ತಕ ಬಿಡುಗಡೆ:** ನ್ಯಾ.ಎಚ್.ಎನ್. ನಾಗಮೋಹನದಾಸ್, ಅಧ್ಯಕ್ಷತೆ: ಬಿ.ಟಿ. ಲಲಿತಾ ನಾಯಕ್, ಮುಖ್ಯ ಅತಿಥಿ: ರವೀಂದ್ರ ಭಟ್ಟ, ಉಪಸ್ಥಿತಿ: ಎನ್.ಎಸ್. ಸತೀಶ್, ದ್ವಾರನಕುಂಟೆ ಪಾತಣ್ಣ, ರವೀಂದ್ರನಾಥ್ ಸಿರಿವರ, ಆಯೋಜನೆ: ಸಿರಿವರ ಪ್ರಕಾಶನ, ಶೇಷಾದ್ರಿಪುರಂ ಶಿಕ್ಷಣ ದತ್ತಿ ಸಂಸ್ಥೆ, ಸ್ವಾಭಿಮಾನಿ ಕರ್ನಾಟಕ ವೇದಿಕೆ, ಸ್ಥಳ: ಶೇಷಾದ್ರಿಪುರಂ ಶಿಕ್ಷಣ ದತ್ತಿ ಸಭಾಂಗಣ, ಶೇಷಾದ್ರಿಪುರ, ಸಂಜೆ 4



ಕಾ.ತ. ಚಿಕ್ಕಣ್ಣ

**ಕೋಟಾ ಶಿವರಾಮ ಕಾರಂತರ ಸಂಸ್ಮರಣೆ:** ಉದ್ಘಾಟನೆ: ಲಕ್ಷ್ಮೀಪತಯ್ಯ, ಶಿವರಾಮ ಕಾರಂತರ ಬದುಕು–ಬರಹದ ಬಗ್ಗೆ ಉಪನ್ಯಾಸ: ಶಾಂತಿ ಅತ್ನಿ, ಅಧ್ಯಕ್ಷತೆ: ಎಂ. ಪ್ರಕಾಶ್ ಮೂರ್ತಿ, ಆಯೋಜನೆ: ಮಂದಗೆರೆ ಕಲೆ ಸಾಹಿತ್ಯ–ಸಾಂಸ್ಕೃತಿಕ ವೇದಿಕೆ, ಸ್ಥಳ: ಬಾಪು ವಿದ್ಯಾ ಸಂಸ್ಥೆ, ತ್ರಿವೇಣಿ ರಸ್ತೆ, ಯಶವಂತಪುರ, ಬೆಳಿಗ್ಗೆ 10.30

**'ನಾನು ಮತ್ತು ನನ್ನ ಕಾದಂಬರಿ ರಚನೆ' ಚರ್ಚೆ:** ಆಶಯ ನುಡಿ: ಎಚ್.ಎಲ್. ಪುಷ್ಪ, ಉಪಸ್ಥಿತಿ: ಕಮಲಾ ವೈ.ಸಿ., ಪಿ.ಎಲ್. ರಮೇಶ್, ಕಾದಂಬರಿಗಾರ್ತಿಯರು: ಲತಾಗುತ್ತಿ, ಎಚ್.ಆರ್. ಸುಜಾತಾ, ಆರ್. ಸುನಂದಮ್ಮ, ಆಶಾ ರಘು, ಎನ್. ಸಂಧ್ಯಾರಾಣಿ, ಆಯೋಜನೆ: ಕೇಂದ್ರ ಸಾಹಿತ್ಯ ಅಕಾಡೆಮಿ, ಕರ್ನಾಟಕ ಲೇಖಕಿಯರ ಸಂಘ, ಸ್ಥಳ: ನ್ಯಾಷನಲ್ ಪ್ರಥಮ ದರ್ಜೆ ಕಾಲೇಜು, ಬಸವನಗುಡಿ, ಮಧ್ಯಾಹ್ನ 3.30

**ಪದವಿ ಪ್ರದಾನ ಸಮಾರಂಭ:** ಉದ್ಘಾಟನಾ ಭಾಷಣ: ರಾಜೀವ್ ಚಿತ್ರಭಾನು, ಘಟಿಕೋತ್ಸವ ಭಾಷಣ: ಬಿ. ವೆಂಕಟರಾಮನ್, ಅಧ್ಯಕ್ಷತೆ: ಎಂ.ಪಿ. ಶ್ಯಾಮ್, ಆಯೋಜನೆ: ಆರ್.ವಿ. ತಾಂತ್ರಿಕ ಮಹಾವಿದ್ಯಾಲಯ, ಸ್ಥಳ: ಪೂರ್ಣಿಮಾ ಪ್ಯಾಲೇಸ್, ಆರ್.ವಿ. ತಾಂತ್ರಿಕ ಮಹಾವಿದ್ಯಾಲಯದ ಸಮೀಪ, ಸಂಜೆ 4

**'ಭಕ್ತಿ ಸಾಹಿತ್ಯ: ವಿವಿಧ ಪರಿಕಲ್ಪನೆಗಳು' ಉಪನ್ಯಾಸ:** ಕೇಶವ ಮಳಗಿ, ಆಯೋಜನೆ: ಶಿವರಾಮ ಕಾರಂತ ವೇದಿಕೆ, ಸ್ಥಳ: ಪಾಂಚಜನ್ಯ ಸಭಾಂಗಣ, ವಿನಾಯಕ ದೇವಸ್ಥಾನ, ಆರ್.ಟಿ. ನಗರ, ಸಂಜೆ 4

**ಕುಮಾರ ಗಂಧರ್ವ ಅವರ ಜನ್ಮಶತಮಾನೋತ್ಸವ ಕಾರ್ಯಕ್ರಮ:** ಗಾಯನ: ಭುವನೇಶ್ ಕೊಮ್ಕಲಿ, ಕೈವಲ್ಯ ಕುಮಾರ್, ಸಿತಾರ್: ಮಂಜು ಮೆಹ್ತಾ, ಆಯೋಜನೆ: ಕುಮಾರ ಗಂಧರ್ವ ಪ್ರತಿಷ್ಠಾನ, ಇಂದಿರಾ ಗಾಂಧಿ ನ್ಯಾಷನಲ್ ಸೆಂಟರ್ ಫಾರ್ ಆರ್ಟ್ಸ್, ಸಪ್ತಕ, ರೋಹಿಣಿ ನಿಲೇಕಣಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

**ವರ್ಷ ಮಲ್ಹಾರ್ ಉತ್ಸವ:** ಮುಖ್ಯ ಅತಿಥಿಗಳು: ಹಯವದನ, ರೋಹಿಣಿ ರಘುನಂದನ್, ಶಾಸ್ತ್ರೀಯ ಸಂಗೀತ: ಕೆ.ವಿ. ನಂದಕುಮಾರ್, ರಾಘವೇಂದ್ರ ಗುಡಿ, ತಬಲಾ: ಎಂ. ನಾಗೇಶ್, ಶಶಿಭೂಷಣ ಗುರ್ಜರ್, ಮಧುಸೂದನ್ ಮುತಾಲಿಕ್, ಆಯೋಜನೆ: ಕಿರಾಣ ಗಂಧರ್ವ ಸಭಾ, ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡ ನಗರ, ಸಂಜೆ 4.30

**'ರುಕ್ಮಿಣಿ ಕಲ್ಯಾಣ' ಹರಿಕಥೆ:** ಅನಂತರಾವ್ ಮತ್ತು ವೃಂದ, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 6

**ಪೌರಾಣಿಕ ಯಕ್ಷೋತ್ಸವ:** 'ಸುಭದ್ರಾ ಕಲ್ಯಾಣ', 'ಜ್ವಾಲಾ ಪ್ರತಾಪ', 'ಚಕ್ರ ಚಂಡಿಕೆ', ಕುಡೇರಿ ಕೃಷ್ಣ ಕನ್ನಂತರ ನೆನಪಲ್ಲಿ 'ತಿತ್ತಿತ್ತೈ', ಮೇಳ: ಸಾಲಿಗ್ರಾಮ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ರಾತ್ರಿ 10

**'ಈ ಪ್ರೇಮಲೋಕದಾ ಗೀತೆಯೂ' ನಾಟಕ ಪ್ರದರ್ಶನ:** ನಿರ್ದೇಶನ: ಭರತ್ ಸ. ಜಗನ್ನಾಥ, ಆಯೋಜನೆ: ಸೈಡ್ ವಿಂಗ್, ಸ್ಥಳ: ಕೆ.ಎಚ್. ಕಲಾಸೌಧ, ಹನುಮಂತನಗರ, ಸಂಜೆ 7.30

## ಸುದ್ದಿ 2 ನಿಮಿಷ

### ಕಸಾಪ: 'ಕನ್ನಡದ ಧ್ರುವತಾರೆ' ಇಂದು

**ಬೆಂಗಳೂರು:** ಸಾಧಕರೊಂದಿಗೆ ಸಂವಾದ ನಡೆಸಲು 'ಕನ್ನಡದ ಧ್ರುವತಾರೆ' ಎಂಬ ವಿನೂತನ ಕಾರ್ಯಕ್ರಮವನ್ನು ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ರೂಪಿಸಿದ್ದು, ಮೊದಲ ಅತಿಥಿಯಾಗಿ ಚಲನಚಿತ್ರ ನಟ ರಮೇಶ್ ಅರವಿಂದ್ ಅವರು ಭಾಗವಹಿಸಲಿದ್ದಾರೆ.

ಮೊದಲ ಕಾರ್ಯಕ್ರಮ ಇದೇ 19ರಂದು ಸಂಜೆ 5 ಗಂಟೆಗೆ ಚಾಮರಾಜಪೇಟೆಯಲ್ಲಿರುವ ತನ್ನ ಶ್ರೀ ಕೃಷ್ಣರಾಜ ಪರಿಷತ್ತಿನ ಮಂದಿರದಲ್ಲಿ ನಡೆಯಲಿದೆ. ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ.ಸಿ. ಎನ್. ಮಂಜುನಾಥ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

'ಕನ್ನಡಿಗರು ಇಂದು ಎಲ್ಲಾ ಕ್ಷೇತ್ರಗಳಲ್ಲಿಯೂ ಬೆರಗು ಹುಟ್ಟಿಸುವಂತಹ ಸಾಧನೆ ಮಾಡಿದ್ದಾರೆ. 'ಕನ್ನಡದ ಧ್ರುವತಾರೆ' ಕಾರ್ಯಕ್ರಮದ ಮೂಲಕ ವಿವಿಧ ಕ್ಷೇತ್ರದಲ್ಲಿ ಅಗಣಿತ ಸೇವೆ ಸಲ್ಲಿಸುತ್ತಿರುವವರನ್ನು ಗುರುತಿಸಲಾಗುತ್ತದೆ. ಸಂವಾದದ ಮೂಲಕ ಸಾಧಕರ ಅನುಭವಗಳನ್ನು ನಾಡಿನ ಜನರಿಗೆ ತಿಳಿಸುವ ಕೆಲಸ ಇದಾಗಿದೆ. ಈ ಕಾರ್ಯಕ್ರಮವನ್ನು ಪ್ರತಿ ತಿಂಗಳು ನಡೆಸಲಾಗುತ್ತದೆ' ಎಂದು ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

### 21ರಂದು ಈಶ ಕೇಂದ್ರದಲ್ಲಿ ನಾಗಾರಾಧನೆ



**ಚಿಕ್ಕಬಳ್ಳಾಪುರ:** ತಾಲ್ಲೂಕಿನ ಆವಲಗುರ್ಕಿ ಬಳಿಯ ಈಶ ಯೋಗ ಕೇಂದ್ರ ನಾಗಮಂಟಪದಲ್ಲಿ ಆ.21ರಂದು ಸಂಜೆ 5ಕ್ಕೆ ಸದ್ಗುರು ಜಗ್ಗಿ ವಾಸುದೇವ್ ಅವರ ಸಮ್ಮುಖದಲ್ಲಿ ನಾಗಾರಾಧನೆ ಕಾರ್ಯಕ್ರಮ ನಡೆಯಲಿದೆ.

ನಾಗರ ಪಂಚಮಿ ಪ್ರಯುಕ್ತ ಯೋಗ ಕೇಂದ್ರದಲ್ಲಿ ಆ.19ರಿಂದ 21ರವರೆಗೆ ಹಳ್ಳಿ ಜಾತ್ರೆ ನಡೆಯಲಿದೆ. ಜಾತ್ರೆ ಅಂಗವಾಗಿ ಆಹಾರ ಮಳಿಗೆಗಳು, ಕರಕುಶಲ ಮಳಿಗೆಗಳು ಆರಂಭವಾಗಲಿದೆ. ಭಕ್ತರು ಮತ್ತು ಸ್ವಯಂಸೇವಕರಿಗೆ ಆಟಗಳು ಕೂಡ ನಡೆಯಲಿವೆ. ಭಕ್ತರು ಯೋಗೇಶ್ವರ ಲಿಂಗಕ್ಕೆ ಹಾಲಿನ ಅಭಿಷೇಕ ಸಹ ನೆರವೇರಿಸಬಹುದು.

21ರಂದು ಉಡುಪಿಯ ನಾಗಪಾತ್ರಿಗಳು ನಾಗಾರಾಧನೆ ನಡೆಸಿಕೊಡುವರು. ಅಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 12ರವರೆಗೆ ಸರ್ಪ ದೋಷ ನಿವಾರಣೆಗಾಗಿ ಆಶ್ಲೇಷಬಲಿ ಪೂಜೆ ಮತ್ತು 'ನಾಗಮಂಡಲ' ಎಂಬ ಸಾಂಪ್ರದಾಯಿಕ ನೃತ್ಯ ನಡೆಯಲಿದೆ. ಆಶ್ಲೇಷಬಲಿ ಪೂಜೆಯಲ್ಲಿ ಪಾಲ್ಗೊಳ್ಳಲು ಯಾವುದೇ ನೋಂದಣಿ ಅಗತ್ಯವಿಲ್ಲ.

ನಾಗಮಂಡಲಕ್ಕೆ ನೋಂದಾಯಿಸಲು ಜಾಲತಾಣ https://sadhguru.co/nagamandala-kan-igಗೆ ಭೇಟಿ ನೀಡಬಹುದು. ನಾಗಾರಾಧನೆ ನೇರ ಪ್ರಸಾರವನ್ನು https://www.youtube.com/watch?v=xY5NIi9Tf2w ಇಲ್ಲಿ ವೀಕ್ಷಿಸಬಹುದು.

# ‘ಸಾಹಿತ್ಯದಿಂದ ಪರಿವರ್ತನೆ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸಾಹಿತ್ಯದಿಂದ ಸಾಮಾಜಿಕ ಬದಲಾವಣೆ ತರಲು ಸಾಧ್ಯ ಎಂದು ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನಿರ್ದೇಶಕ ಸತೀಶಕುಮಾರ ಎಸ್.ಹೊಸಮನಿ ಹೇಳಿದರು.

ಅತ್ಯುತ್ತಮ ಪ್ರಕಾಶನ ಸಂಸ್ಥೆಗೆ ನೀಡುವ ‘ಅಂಕಿತ ಪುಸ್ತಕ ಪುರಸ್ಕಾರ’ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಲೇಖಕರು, ಪ್ರಕಾಶಕರು ಅಕ್ಷರ ಸಂಸ್ಕೃತಿಯನ್ನು ಉಳಿಸಿ ಬೆಳೆಸಿದ್ದಾರೆ. ಶ್ರೀಸಾಮಾನ್ಯರ ವಿಶ್ವವಿದ್ಯಾಲಯ ಎಂದೇ ಗುರುತಿಸಲಾಗಿರುವ ಗ್ರಂಥಾಲಯಗಳನ್ನು ಉಳಿಸಿದ್ದು ಕೂಡ ಸಾಹಿತ್ಯವೇ ಆಗಿದೆ. ಸಾಹಿತ್ಯ ಪರಂಪರೆ ಉಳಿಸಿದವರು ಪ್ರಕಾಶಕರು ಎಂದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ, ‘ಮುಂದಿನ ದಿನಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ನಾಡಿನ ಪ್ರಕಾಶಕರೊಂದಿಗೆ ಸೇರಿ ‘ಪುಸ್ತಕ ಉತ್ಸವ’ ಮಾಡಬೇಕೆಂಬ ಯೋಜನೆ ಇದೆ’ ಎಂದು ಹೇಳಿದರು.

ಲೇಖಕ ಗಿರೀಶ್ ರಾವ್ ಹತ್ವಾರ್ ಮಾತನಾಡಿ, ‘ಹಿಂದೆ ಲೇಖಕರು ಪ್ರಕಾಶಕರನ್ನು ಹುಡುಕುತ್ತಿದ್ದರು. ಈಗ ಪ್ರಕಾಶಕರೇ ಲೇಖಕರನ್ನು ಹುಡುಕುವ ಕಾಲ ಬಂದಿದೆ. ಇಬ್ಬರೂ ಸೇರಿ ಓದುಗರನ್ನು ಹುಡುಕಬೇಕಿದೆ’ ಎಂದರು. ಅಂಕಿತ ಪುಸ್ತಕ ಪ್ರಕಾಶನ ಸಂಸ್ಥೆಯ ಪ್ರಕಾಶ ಕಂಬತ್ತಳ್ಳಿ ಮಾತನಾಡಿ, ‘ಹಿಂದೆ ಪುಸ್ತಕಕ್ಕೆ ಪುಸ್ತಕಗಳೇ ಪೈಪೋಟಿ ಕೊಡುತ್ತಿದ್ದವು. ಈಗ ಕಾಲ ಬದಲಾಗಿದೆ. ಪುಸ್ತಕಗಳಿಗೆ ಸಾಮಾಜಿಕ ಜಾಲ ತಾಣಗಳು, ಒಟಿಟಿ, ಆನ್‌ಲೈನ್, ಇ-ಬುಕ್‌ಗಳು ಸ್ಪರ್ಧೆ ನೀಡುತ್ತಿವೆ. ಮತ್ತೆ ಪುಸ್ತಕ ಓದುವ ವೈಭವ ಮರುಕಳಿಸಬೇಕು’ ಎಂದು ಹೇಳಿದರು.

ಸಾಗರದ ‘ರವೀಂದ್ರ ಪುಸ್ತಕಾಲಯ’ಕ್ಕೆ 2022ನೇ ಸಾಲಿನ ಹಾಗೂ ಬೆಂಗಳೂರಿನ ಛಂದ ಪುಸ್ತಕ ಸಂಸ್ಥೆಗೆ 2023ನೇ ಸಾಲಿನ ಅಂಕಿತ ಪುಸ್ತಕ ಪುರಸ್ಕಾರ ಪ್ರದಾನ ಮಾಡಲಾಯಿತು. ರವೀಂದ್ರ ಪುಸ್ತಕಾಲಯದ ಯಲ್ಲಪ್ಪ ಅಪ್ಪಾಜಿರಾವ್ ದಂತಿ, ಛಂದ ಪುಸ್ತಕ ಸಂಸ್ಥೆಯ ವಸುಧೇಂದ್ರ ಅಭಿಪ್ರಾಯ ಹಂಚಿಕೊಂಡರು.



‘ಅಂಕಿತ ಪುಸ್ತಕ ಪುರಸ್ಕಾರ’ ಪ್ರಶಸ್ತಿಯನ್ನು ರವೀಂದ್ರ ಪುಸ್ತಕಾಲಯದ ಯಲ್ಲಣ್ಣ ಅಪ್ಪಾಜಿರಾವ್ ದಂತಿ ಮತ್ತು ಛಂದ ಪುಸ್ತಕದ ವಸುಧೇಂದ್ರ ಅವರಿಗೆ ಪ್ರದಾನ ಮಾಡಲಾಯಿತು. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ ನೇ.ಭ. ರಾಮಲಿಂಗ ಶೆಟ್ಟಿ, ಸಾರ್ವಜನಿಕ ಗ್ರಂಥಾಲಯ ಇಲಾಖೆ ನಿರ್ದೇಶಕ ಸತೀಶ್ ಕುಮಾರ್ ಎಸ್. ಹೊಸಮನಿ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ್ ಜೋಶಿ, ಕೋಶ್ಯಾಧ್ಯಕ್ಷ ಬಿ.ಎಂ. ಪಟೇಲ್ ಪಾಂಡು, ಲೇಖಕ ಗಿರೀಶ್ ರಾವ್ ಹತ್ವಾರ್, ಅಂಕಿತ ಪುಸ್ತಕ ಪ್ರಕಾಶನದ ಪ್ರಕಾಶ್ ಕಂಬತ್ತಳ್ಳಿ ಇದ್ದಾರೆ —ಪ್ರಜಾವಾಣಿ ಚಿತ್ರ

# ಸುಧಾ, ಮಯೂರ ಓದಿರಿ



## ಸಂಕ್ಷಿಪ್ತ ಸುದ್ದಿ

### ‘ಬ್ರ್ಯಾಂಡ್ ಬೆಂಗಳೂರು’: ವರದಿಗೆ ಸೂಚನೆ

**ಬೆಂಗಳೂರು:** ‘ಬ್ರ್ಯಾಂಡ್ ಬೆಂಗಳೂರು’ ಪರಿಕಲ್ಪನೆಗೆ ನಾಗರಿಕರಿಂದ 70 ಸಾವಿರಕ್ಕೂ ಹೆಚ್ಚು ಸಲಹೆ, ಸೂಚನೆಗಳು ಬಂದಿದ್ದು, ಅವುಗಳನ್ನು ಕ್ರೋಡಿಕರಿಸಿ ವರದಿ ನೀಡಲು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೂಚಿಸಿದ್ದಾರೆ.

‘ಪ್ರಗತಿಯತ್ತ ಬೆಂಗಳೂರು, ನೆಮ್ಮದಿಯತ್ತ ನಾಗರಿಕರು’ ಎಂಬ ಘೋಷವಾಕ್ಯದ ‘ಬ್ರ್ಯಾಂಡ್ ಬೆಂಗಳೂರು’ ಪರಿಕಲ್ಪನೆಗೆ ನೋಡಲ್ ಸಂಸ್ಥೆಗಳು ಮತ್ತು ಶೈಕ್ಷಣಿಕ ಪಾಲುದಾರರನ್ನು ನೇಮಿಸಲಾಗಿದೆ. ಅವರು ನಾಗರಿಕರ ಎಲ್ಲ ಅಭಿಪ್ರಾಯಗಳನ್ನು ಕ್ರೋಡೀಕರಿಸಿ ಒಂದು ವಾರದಲ್ಲಿ ವರದಿ ನೀಡಬೇಕು ಎಂದರು. ‘ಬ್ರ್ಯಾಂಡ್ ಬೆಂಗಳೂರು’ 7 ವಿಷಯಗಳ ಕುರಿತು ಪ್ರತಿಕ್ರಿಯೆ ಗಳನ್ನು ಆಹ್ವಾನಿಸಲಾಗಿತ್ತು. ಅದನ್ನು ಪರಾಮರ್ಶಿಸಿದ ಡಿಸಿಎಂ, ಅಧಿಕಾರಿ ಗಳಿಗೆ ಶುಕ್ರವಾರ ವರದಿ ನೀಡಲು ಸೂಚಿಸಿದರು.

### ವಿಶೇಷ ಠೇವಣಿ ಯೋಜನೆ ಜಾರಿ

**ಬೆಂಗಳೂರು:** ವಿಶೇಷ ಠೇವಣಿ ಯೋಜನೆ ‘ರೆಪ್ಕೋ ತಂಗ ಮಗಳ್’ ಯೋಜನೆಯನ್ನು ರೆಪ್ಕೋ ಬ್ಯಾಂಕ್ ಜಾರಿಗೆ ತಂದಿದೆ.

ಚೆನ್ನೈನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೇಂದ್ರ ಗೃಹ ವ್ಯವಹಾರಗಳ ಸಚಿವ ಅಜಯ್ ಕುಮಾರ್ ಮಿಶ್ರಾ ಅವರು ಈ ಯೋಜನೆಗೆ ಚಾಲನೆ ನೀಡಿದರು. 18 ವರ್ಷದ ಒಳಗಿನ ಹೆಣ್ಣುಮಕ್ಕಳ ವಿದ್ಯಾಭ್ಯಾಸ, ಆರೋಗ್ಯಕ್ಕೆ ಈ ಯೋಜನೆ ಅನುಕೂಲವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಈ ಯೋಜನೆಯ ಅವಧಿ ಕನಿಷ್ಠ 3 ವರ್ಷಗಳಿಂದ ಗರಿಷ್ಠ 5 ವರ್ಷಗಳ ಮಿತಿ ಇರಲಿದೆ. ಯೋಜನೆಯ ಮುಕ್ತಾಯದ ನಂತರವೇ ಬಡ್ಡಿಯ ಲಾಭ ದೊರೆಯಲಿದೆ. ಈ ಯೋಜನೆ ಅಡಿ ಪೋಷಕರು ತಮ್ಮ ಹೆಣ್ಣುಮಕ್ಕಳ ಮೇಲೆ ಗರಿಷ್ಠ ₹ 1 ಕೋಟಿ ತೊಡಗಿಸಬಹುದು. ಆಗಸ್ಟ್ 17ರಿಂದಲೇ ಯೋಜನೆ ಜಾರಿಗೆ ಬಂದಿದೆ. ಈ ಠೇವಣಿ ಯೋಜನೆ ಹೆಚ್ಚಿನ ಮಾಹಿತಿಗೆ ಬನಶಂಕರಿ 2ನೇ ಹಂತದಲ್ಲಿರುವ ಬ್ಯಾಂಕ್‌ನಲ್ಲಿ ವಿಚಾರಿಸಬಹುದು (080-26710412, 9481703165).

### ಚಿನ್ನ ಸಾಗಣೆ: ಪ್ರಯಾಣಿಕ ಬಂಧನ

**ದೇವನಹಳ್ಳಿ:** ಬ್ಯಾಗ್‌ನ ಸ್ಕ್ರೂ ರೂಪದಲ್ಲಿ ಚಿನ್ನ ಸಾಗಣೆ ಮಾಡಲು ಯತ್ನಿಸಿದ ಪ್ರಯಾಣಿಕನನ್ನು ಬೆಂಗಳೂರು ಕಸ್ಟಮ್ಸ್ ಅಧಿಕಾರಿಗಳು ಬಂಧಿಸಿದ್ದಾರೆ.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಶುಕ್ರವಾರ ದುಬೈನಿಂದ ಬಂದಿದ್ದ ಪ್ರಯಾಣಿಕನ ಬ್ಯಾಗ್‌ನಲ್ಲಿ ಒಟ್ಟು 267 ಗ್ರಾಂ ಚಿನ್ನದ ಸ್ಕ್ರೂಗಳು ಸಿಕ್ಕಿದ್ದು, ಪ್ರಕರಣ ದಾಖಲಾಗಿದೆ.



ನಗರದ ಕಲಾ ದರ್ಪಣ–ಆರ್ಟ್‌ರಿಫ್ಲೆಕ್ಟ್ಸ್ ಆಯೋಜಿಸಿದ್ದ ಸ್ವಾತಂತ್ರ್ಯ ಸಂಭ್ರಮದಲ್ಲಿ (ಎಡದಿಂದ) ನಿರೂಪಕಿ ಭವಾನಿ ಲೋಕೇಶ್, ಚಿತ್ರ ಕಲಾವಿದ ರವೀಂದ್ರ ಎಸ್.ಹಾಲಿಜೊಳ, ನಿರ್ದೇಶಕ ಮಧುಸೂದನ್ ಹವಾಲ್ದಾರ್, ಸಂಗೀತ ನಿರ್ದೇಶಕ ಡಿ.ವಿಜಯಕೃಷ್ಣ, ನಿರ್ಮಾಪಕ ವಿಷ್ಣುತೀರ್ಥ ಜೋಷಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಚಿವ ಶಿವರಾಜ್ ತಂಗಡಗಿ, ಗಾಯಕ ಅಪ್ಪಗೆರೆ ತಿಮ್ಮರಾಜು ಇದ್ದರು.

### ನಾಗರಾಜ್ ಮನೆಯಲ್ಲಿ ₹ 7.6 ಲಕ್ಷ ನಗದು ವಶ

**ಬೆಂಗಳೂರು:** ತುಮಕೂರು ಜಿಲ್ಲಾ ಪಂಚಾಯಿತಿಯ ಕುಂದುಕೊರತೆ ನಿವಾರಣಾ ಘಟಕದ ಮುಖ್ಯಸ್ಥರಾಗಿರುವ ಭುವನಹಳ್ಳಿ ನಾಗರಾಜ್ ಶುಕ್ರವಾರ ಲೋಕಾಯುಕ್ತ ಪೊಲೀಸರ ಎದುರು ಹಾಜರಾಗಿದ್ದು, ತುಮಕೂರಿನ ಅವರ ಮನೆಯಲ್ಲಿ ₹ 7.6 ಲಕ್ಷ ನಗದು ವಶಪಡಿಸಿಕೊಳ್ಳಲಾಗಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ನಿರ್ದೇಶಕರಾಗಿ ನಿವೃತ್ತರಾಗಿದ್ದ ನಾಗರಾಜ್ ಅವರನ್ನು ನಂತರ ತುಮಕೂರು ಜಿಲ್ಲಾ ಪಂಚಾಯಿತಿಯಲ್ಲಿ ಮರು ನೇಮಕ ಮಾಡಿಕೊಳ್ಳಲಾಗಿತ್ತು.

### ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮಾರ್ಗದ ವಾಹನ ಸಂಚಾರ ಗೋಳು

# ಹೈರಾಣ ಕೊನೆಗಾಣಿಸಲು ಪರಿಣಾಮಕಾರಿ ಕ್ರಮ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ವಾಹನಗಳ ಸಂಚಾರ ದಟ್ಟಣೆ ತಪ್ಪಿಸುವ ನಿಟ್ಟಿನಲ್ಲಿ, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಬಳ್ಳಾರಿ ರಸ್ತೆಯಲ್ಲಿ (ಬಸವೇಶ್ವರ ಜಂಕ್ಷನ್‌ನಿಂದ ಹೆಬ್ಬಾಳ ಮೇಲ್ಸೇತುವೆವರೆಗೆ) ಸಂಚಾರ ಪೊಲೀಸ್ ವಿಭಾಗ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮತ್ತು ಬಿಎಂಆರ್‌ಸಿಎಲ್ (ಬೆಂಗಳೂರು ಮೆಟ್ರೊ ರೈಲು ಅಭಿವೃದ್ಧಿ ನಿಗಮ) ವಿಭಾಗಗಳ ವತಿಯಿಂದ ಪರಿಣಾಮಕಾರಿ ಕ್ರಮ ಕೈಗೊಳ್ಳಲಾಗಿದೆ' ಎಂದು ರಾಜ್ಯ ನಗರಾಭಿವೃದ್ಧಿ ಇಲಾಖೆ ಹೈಕೋರ್ಟ್‌ಗೆ ತಿಳಿಸಿದೆ.

'ಬಳ್ಳಾರಿ ರಸ್ತೆ ವಿಸ್ತರಣೆ ಮಾಡಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ, 'ಸಮರ್ಪಣಾ ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂಘಟನೆ' ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸುತ್ತಿರುವ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯ ಪೀಠಕ್ಕೆ ಈ ಸಂಬಂಧ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಪ್ರಮಾಣ ಪತ್ರ ಸಲ್ಲಿಸಿದ್ದಾರೆ.

ಇದನ್ನು ದಾಖಲಿಸಿಕೊಂಡಿರುವ ನ್ಯಾಯಪೀಠ, 'ಪ್ರಮಾಣ ಪತ್ರದಲ್ಲಿ ಉಲ್ಲೇಖವಾಗಿರುವ ಅಂಶಗಳನ್ನು ಪರಿಶೀಲಿಸಿ ಎರಡು ವಾರಗಳಲ್ಲಿ ಉತ್ತರಿಸಿ' ಎಂದು ಅರ್ಜಿದಾರ ಸಂಸ್ಥೆಯ ಪರ ವಕೀಲ ಜಿ.ಆರ್. ಮೋಹನ್ ಅವರಿಗೆ ಸೂಚಿಸಿ ವಿಚಾರಣೆಯನ್ನು ಸೆಪ್ಟೆಂಬರ್ 12ಕ್ಕೆ ಮುಂದೂಡಿದೆ.





### ಎಲ್ಲಾ ಕ್ರಮ ಪರಿಗಣಿಸಲು ಕೋರಿಕೆ

'ಬಳ್ಳಾರಿ ರಸ್ತೆಯಲ್ಲಿ ವಾಹನ ಸಂಚಾರ ದಟ್ಟಣೆ ತಪ್ಪಿಸಲು ನಗರ ಸಂಚಾರ ಪೊಲೀಸ್ ವಿಭಾಗ, ಬಿಬಿಎಂಪಿ, ಬಿಎಂಆರ್‌ಸಿಎಲ್, ಬಿಡಿಎ (ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ) ಮತ್ತು ನಗರಾಭಿವೃದ್ಧಿ ಇಲಾಖೆಯ ಅಧಿಕಾರಿಗಳ ಜೊತೆ ಸಭೆ ನಡೆಸಿ ವಿಶದವಾಗಿ ಚರ್ಚಿಸಲಾಗಿದೆ. ಸಭೆಯ ಫಲಶ್ರುತಿ ಎಂಬಂತೆ ನಗರ ಸಂಚಾರ ಪೊಲೀಸ್ ವಿಭಾಗ, ಬಿಎಂಟಿಸಿ, ಬಿಎಂಆರ್‌ಸಿಎಲ್ ಮತ್ತು ಬಿಬಿಎಂಪಿ, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವತಿಯಿಂದ ಈಗಾಗಲೇ ಹಲವಾರು ಕ್ರಮ ಕೈಗೊಳ್ಳಲಾಗಿದೆ. ಹೀಗಾಗಿ ಈ ಎಲ್ಲಾ ಕ್ರಮಗಳನ್ನು ಪರಿಗಣಿಸಿ ಅರ್ಜಿ ಇತ್ಯರ್ಥಪಡಿಸಬೇಕು' ಎಂದು ಪ್ರಮಾಣ ಪತ್ರದಲ್ಲಿ ಕೋರಲಾಗಿದೆ.

### ಪ್ರಮಾಣ ಪತ್ರದಲ್ಲೇನಿದೆ?

- ಅಧಿಕ ಸಂಚಾರ ದಟ್ಟಣೆಯಿರುವ ಬಸವೇಶ್ವರ ವೃತ್ತದಿಂದ ಎಸ್ಟೀಮ್ ಮಾಲ್‌ವರೆಗಿನ ಒಟ್ಟು 9.5 ಕಿ.ಮೀ ಉದ್ದದ ಬಳ್ಳಾರಿ ರಸ್ತೆಯನ್ನು ಸಂಚಾರ ಪೊಲೀಸರು ಮೂರು ವಿಭಾಗಗಳಾಗಿ (ಎಸ್ಟೀಮ್ ಮಾಲ್-ಮೇಖ್ರಿ ವೃತ್ತ, ಮೇಖ್ರಿ ವೃತ್ತ-ಪ್ಯಾಲೇಸ್ ಗುಟ್ಟಳ್ಳಿ ಮತ್ತು ಪ್ಯಾಲೇಸ್ ಗುಟ್ಟಳ್ಳಿ-ಬಸವೇಶ್ವರ ಜಂಕ್ಷನ್‌ವರೆಗೆ) ವಿಂಗಡಿಸಿದ್ದಾರೆ.
- ಪೀಕ್ ಅವರ್‌ನಲ್ಲಿ ಸಾದರಹಳ್ಳಿ ಜಂಕ್ಷನ್‌ನಿಂದ ಹೆಬ್ಬಾಳ ಜಂಕ್ಷನ್‌ವರೆಗೆ ಮತ್ತು ದೇವನಹಳ್ಳಿ ಟೋಲ್ ಸರ್ವೀಸ್ ರಸ್ತೆಯಲ್ಲಿ ಭಾರಿ ವಾಹನಗಳ ಸಂಚಾರ ಸ್ಥಗಿತಗೊಳಿಸಲಾಗಿದೆ.
- ಹೆಬ್ಬಾಳ ಜಂಕ್ಷನ್‌ನಲ್ಲಿ ಡೌನ್ ರ್‍ಯಾಂಪ್ ಹಾಗೂ ಸರ್ವೀಸ್ ರಸ್ತೆ ರೂಪಿಸಲಾಗಿದೆ. ಮೇಖ್ರಿ ವೃತ್ತದಿಂದ ಹೆಬ್ಬಾಳ ಸರ್ವೀಸ್ ರಸ್ತೆ ಮತ್ತು ಮೇಖ್ರಿ ವೃತ್ತದಿಂದ ಕಂಟೋನ್ಮೆಂಟ್ ರೈಲ್ವೆ ಸೇತುವೆವರೆಗೆ ವಿವಿಧ ಸಂಚಾರ ತಿರುವು ನೀಡಲಾಗಿದೆ. ಯೂ-ಟರ್ನ್ ಮತ್ತು ವಾಹನ ನಿಲುಗಡೆ ನಿಷೇಧಿಸಲಾಗಿದೆ.
- ಎಸ್ಟೀಮ್ ಮಾಲ್‌ನಿಂದ ಬಸವೇಶ್ವರ ಜಂಕ್ಷನ್‌ವರೆಗೆ ಸಂಚಾರ ದಟ್ಟಣೆ ನಿವಾರಿಸಲು 7 ಪೊಲೀಸ್ ಇನ್‌ಸ್ಪೆಕ್ಟರ್, 10 ಪೊಲೀಸ್ ಸಬ್ ಇನ್‌ಸ್ಪೆಕ್ಟರ್, 32 ಸಹಾಯಕ ಸಬ್ ಇನ್‌ಸ್ಪೆಕ್ಟರ್, 109 ಮುಖ್ಯ ಕಾನ್‌ಸ್ಟೆಬಲ್ ಅಥವಾ ಕಾನ್‌ಸ್ಟೆಬಲ್ ಹಾಗೂ 55 ಹೋಂ ಗಾರ್ಡ್‌ಗಳನ್ನು ನಿಯೋಜಿಸಲಾಗಿದೆ.
- ಈ ಎಲ್ಲಾ ಕ್ರಮಗಳಿಂದ ಬೆಳಗ್ಗೆ ಎಸ್ಟೀಮ್ ಮಾಲ್‌ನಿಂದ ಬಸವೇಶ್ವರ ಜಂಕ್ಷನ್‌ವರೆಗಿನ 9.5 ಕಿ.ಮೀ ಉದ್ದದ ರಸ್ತೆಯನ್ನು 8ರಿಂದ 11 ಗಂಟೆ ವೇಳೆಯಲ್ಲಿ ಕೇವಲ 22 ನಿಮಿಷ ಹಾಗೂ ಸಂಜೆ 5ರಿಂದ ರಾತ್ರಿ 8ಗಂಟೆ ವೇಳೆಯಲ್ಲಿ ಕೇವಲ 15.34 ನಿಮಿಷಗಳಲ್ಲಿ ಕ್ರಮಿಸಲು ಸಾಧ್ಯವಾಗುತ್ತಿದೆ.
- ಈ ಹಿಂದೆ ಕ್ರಮವಾಗಿ 47.55 ನಿಮಿಷ ಮತ್ತು 25.13 ನಿಮಿಷ ಸಮಯ ತಗುಲುತ್ತಿತ್ತು.
- ವಾಹನ ಸಂಚಾರ ದಟ್ಟಣೆ ತಗ್ಗಿಸಲು ಬಳ್ಳಾರಿ ರಸ್ತೆ ಮತ್ತು ಜಯಮಹಲ್ ಮಾರ್ಗದ ರಸ್ತೆಯಲ್ಲಿ ಬಿಬಿಎಂಪಿ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದೆ. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯನ್ನು ಸಂಪರ್ಕಿಸಲು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮವು ನೆಲಮಂಗಲ, ಬ್ಯಾತ, ದೊಡ್ಡಬಳ್ಳಾಪುರ ಮಾರ್ಗವಾಗಿ ಕೆಲ ಪರ್ಯಾಯ ರಸ್ತೆಗಳನ್ನೂ ಅಭಿವೃದ್ಧಿಪಡಿಸುತ್ತಿದೆ.
- ₹ 15 ಸಾವಿರ ಕೋಟಿ ವೆಚ್ಚದಲ್ಲಿ ಸರ್ಜಾಪುರದಿಂದ ಹೆಬ್ಬಾಳದವರೆಗೆ ಅಗರ, ಕೋರಮಂಗಲ ಮತ್ತು ಡೈರಿ ವೃತ್ತದ ಮಾರ್ಗವಾಗಿ ಮೂರನೇ ಹಂತದ ಮೆಟ್ರೊ ರೈಲು ಮಾರ್ಗ ನಿರ್ಮಿಸಲು ಬಿಎಂಆರ್‌ಸಿಎಲ್ ಮುಂದಾಗಿದೆ.



## 550 ಕೆ.ಜಿ ಟೊಮೆಟೊ ಕಳ್ಳತನ

**ಬೆಂಗಳೂರು:** ಹಲಸೂರು ಬಳಿಯ ಮರ್ಫಿ ಟೌನ್‌ನಲ್ಲಿರುವ ತರಕಾರಿ ಅಂಗಡಿಯೊಂದರಲ್ಲಿ 550 ಕೆ.ಜಿ ಟೊಮೆಟೊ ಕಳ್ಳತನವಾಗಿದ್ದು, ಈ ಸಂಬಂಧ ಹಲಸೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ತರಕಾರಿ ವ್ಯಾಪಾರಿ ಪ್ರಶಾಂತ್ ಅವರು ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಆಗಸ್ಟ್ 11ರಂದು ಶಿವಾಜಿನಗರ ಮಾರುಕಟ್ಟೆಯಿಂದ ಟೊಮೆಟೊ ಖರೀದಿಸಿ ತಂದಿದ್ದ ಪ್ರಶಾಂತ್, ತಮ್ಮ ಅಂಗಡಿಯಲ್ಲಿ ಇರಿಸಿದ್ದರು. ರಾತ್ರಿಯ ವರೆಗೂ ವ್ಯಾಪಾರ ಮಾಡಿದ್ದರು. ಬಳಿಕ, ಟೊಮೆಟೊ ಟ್ರೇಗಳ ಮೇಲೆ ಟಾರ್ಪಲ್ ಮುಚ್ಚಿ ಮನೆಗೆ ಹೋಗಿದ್ದರು. ಇದೇ ಸಂದರ್ಭದಲ್ಲಿ ಕಳ್ಳರು, ಟೊಮೆಟೊ ಟ್ರೇ ಕದ್ದೊಯ್ದಿದ್ದಾರೆ. ಈ ಟೊಮೆಟೊ ಮೌಲ್ಯ ₹ 37,500 ಎಂಬುದಾಗಿ ಪ್ರಶಾಂತ್ ದೂರಿನಲ್ಲಿ ತಿಳಿಸಿದ್ದಾರೆ' ಎಂದು ಪೊಲೀಸರು ತಿಳಿಸಿದರು.









# ಲಿಂಗತ್ವ ಅಲ್ಪಸಂಖ್ಯಾತ: ಆತ್ಮಹತ್ಯೆ ಕುಮ್ಮಕ್ಕು–ಆರೋಪಿಗಳ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಲಿಂಗತ್ವ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರೊಬ್ಬರ ಆತ್ಮಹತ್ಯೆಗೆ ಪ್ರಚೋದನೆ ನೀಡಿದ್ದಾರೆಂಬ ಆರೋಪದ ಮೇರೆಗೆ ಮೂವರ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣ ರದ್ದುಗೊಳಿಸಲು ಹೈಕೋರ್ಟ್ ನಿರಾಕರಿಸಿದೆ.

ಈ ಸಂಬಂಧ ನಗರದ, 'ಲೈಫ್ ಸ್ಟೈಲ್ ಇಂಟರ್‌ನ್ಯಾಷನಲ್ ಸಂಸ್ಥೆ' ಮಾರ್ಕೆಟಿಂಗ್ ವಿಭಾಗದ ಡೆಪ್ಯುಟಿ ಜನರಲ್ ಮ್ಯಾನೇಜರ್ ಎಸ್.ಬಿ. ಮಾಲತಿ, ಮಾನವ ಸಂಪನ್ಮೂಲ ವಿಭಾಗದ ಉಪಾಧ್ಯಕ್ಷ ಕುಮಾರ್ ಸೂರಜ್ ಮತ್ತು ಮಾರ್ಕೆಟಿಂಗ್ ವಿಭಾಗದ ಸಹಾಯಕ ವ್ಯವಸ್ಥಾಪಕ ನಿತೀಶ್ ಕುಮಾರ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿದೆ.

'ಪ್ರತಿಯೊಬ್ಬ ನಾಗರಿಕನೂ ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದ ಬಗ್ಗೆ ಪ್ರೀತಿ ಮತ್ತು ಕಾಳಜಿ ತೋರಬೇಕು. ಸಮಾಜ ನಮ್ಮನ್ನು ಬಹಿಷ್ಕರಿಸುತ್ತದೆ ಎಂಬ ಸೂಕ್ಷ್ಮತೆ ಅವರಲ್ಲಿ ಮೂಡದಂತೆ ಪ್ರೀತಿಯಿಂದ ನಡೆಸಿಕೊಳ್ಳಬೇಕು. ಅವರ ಜೀವಗಳೂ ಅಮೂಲ್ಯ ಎಂಬುದನ್ನು ಮರೆಯಬಾರದು. ದುರದೃಷ್ಟವಶಾತ್, ಈ ಪ್ರಕರಣದಲ್ಲಿ ಯುವಕನ ಜೀವ ಕಳೆದುಹೋಗಿದೆ' ಎಂದು ನ್ಯಾಯಪೀಠ ವ್ಯಥೆ ವ್ಯಕ್ತಪಡಿಸಿದೆ.

'ಅತಿಸೂಕ್ಷ್ಮ ವ್ಯಕ್ತಿಯ ಸ್ವಾಭಿಮಾನ ಅಥವಾ ಆತ್ಮಗೌರವವನ್ನು ಹಾಳು ಮಾಡುವಲ್ಲಿ ಅಥವಾ ನಾಶಪಡಿಸುವಲ್ಲಿ ಆರೋಪಿಗಳು ಸಕ್ರಿಯ ಪಾತ್ರ ವಹಿಸಿದ್ದರೆ, ಅಂಥವರು ಖಂಡಿತವಾಗಿಯೂ ಆತ್ಮಹತ್ಯೆಗೆ ಕುಮ್ಮಕ್ಕು ನೀಡಿದ ಆರೋಪದಲ್ಲಿ ತಪ್ಪಿತಸ್ಥರಾಗುತ್ತಾರೆ. ಈ ಪ್ರಕರಣದಲ್ಲಿ ಮೇಲ್ನೋಟಕ್ಕೆ ಆರೋಪದಲ್ಲಿ ಹುರುಳು ಕಂಡು ಬಂದಿದೆ. ಹಾಗಾಗಿ, ಅರ್ಜಿದಾರರ ವಿರುದ್ಧ ವೈಟ್‌ಫೀಲ್ಡ್ ಪೊಲೀಸರು ಐಪಿಸಿಯ ಕಲಂ 306 ಮತ್ತು 34ರ ಅನುಸಾರ ಆತ್ಮಹತ್ಯೆಗೆ ಕಿರುಕುಳ ಮತ್ತು ಪ್ರಚೋದನೆ ನೀಡಿದ ಆರೋಪದಡಿ ದಾಖಲಿಸಿರುವ ಪ್ರಕರಣದ ತನಿಖೆ ಮುಂದುವರಿಯಲಿ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

### ಪ್ರಕರಣವೇನು?

ಬೆಂಗಳೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿಯಿಂದ (ಎನ್‌ಐಎಫ್‌ಟಿ) ವಿನ್ಯಾಸದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದ 35 ವರ್ಷದ ವಿವೇಕ್ ರಾಜ್ 2022ರ ಸೆಪ್ಟೆಂಬರ್‌ನಿಂದ ವಿಶ್ಯುವಲ್ ಮರ್ಕಂಡೈಸಿಂಗ್‌ನಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದರು. 'ಆರೋಪಿಗಳು ನನ್ನ ಮೇಲೆ ದೌರ್ಜನ್ಯ ಎಸಗುತ್ತಿದ್ದಾರೆ' ಎಂದು 2023ರ ಜೂನ್ 1 ಮತ್ತು 2ರಂದು ಅವರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಆದರೆ, ಪೊಲೀಸರು ಪ್ರಕರಣ ದಾಖಲಿಸಿಕೊಂಡು ಕ್ರಮ ಜರುಗಿಸಿರಲಿಲ್ಲ. ನಂತರ ಜೂನ್ 3ರಂದು ವಿವೇಕ್ ರಾಜ್ ಆತ್ಮಹತ್ಯೆಗೆ ಶರಣಾಗಿದ್ದರು. ಮರುದಿನವೇ ಅವರ ತಂದೆ ಪ್ರಕರಣ ದಾಖಲಿಸಿದ್ದರು. ಆರೋಪಿಗಳು 2023ರ ಜೂನ್ 7ರಂದು ಹೈಕೋರ್ಟ್ ಮೆಟ್ಟಿಲೇರಿದ್ದರು.

# ಸಂತ್ರಸ್ತೆಯಿಂದ ಹಣ ಪಡೆದಿದ್ದ ಪಿಎಸ್‌ಐ ಅಮಾನತು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

**ಬೆಂಗಳೂರು:** ಅತ್ಯಾಚಾರ ಪ್ರಕರಣದ ಆರೋಪಿಯೊಂದಿಗೆ ಒಳ ಒಪ್ಪಂದ ಮಾಡಿಕೊಂಡು ಹಿರಿಯ ಅಧಿಕಾರಿಗಳ ಜೊತೆ ಅಶಿಸ್ತಿನಿಂದ ವರ್ತಿಸಿದ್ದ ಆರೋಪದಡಿ ಬಸವೇಶ್ವರನಗರ ಠಾಣೆ ಪಿಎಸ್‌ಐ ಸತೀಶ್ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

ಪಿಎಸ್‌ಐ ಸತೀಶ್ ವಿರುದ್ಧ ಕೇಳಿ ಬಂದಿದ್ದ ಆರೋಪದ ಬಗ್ಗೆ ತನಿಖೆ ನಡೆಸಿದ್ದ ಪಶ್ಚಿಮ ವಿಭಾಗದ ಡಿಸಿಪಿಯವರು ವರದಿ ಸಲ್ಲಿಸಿದ್ದರು. ಅದನ್ನು ಪರಿಶೀಲಿಸಿದ್ದ ಕಮಿಷನರ್ ಬಿ.ದಯಾನಂದ್, ಸತೀಶ್ ಅವರನ್ನು ಅಮಾನತು ಮಾಡಿ ಆದೇಶ ಹೊರಡಿಸಿದ್ದಾರೆ.

**ಏನಿದು ಪ್ರಕರಣ:** 'ದೇವಸ್ಥಾನವೊಂದರ ಅರ್ಚಕರ ಮಗಳನ್ನು ಪರಿಚಯ ಮಾಡಿಕೊಂಡಿದ್ದ ಯುವಕನೊಬ್ಬ ಮದುವೆಯಾಗುವುದಾಗಿ ನಂಬಿಸಿ ಅತ್ಯಾಚಾರ ಎಸಗಿದ್ದ. ಕೆಲ ದಿನಗಳ ನಂತರ, ಮದುವೆಯಾಗುವುದಿಲ್ಲವೆಂದು ಯುವತಿಯಿಂದ ದೂರವಾಗಲು ಯತ್ನಿಸಿದ್ದ. ನೊಂದ ಯುವತಿ, ಬಸವೇಶ್ವರನಗರ ಠಾಣೆಗೆ 2022ರಲ್ಲಿ ದೂರು ನೀಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಠಾಣೆಯಲ್ಲಿದ್ದ ಪಿಎಸ್‌ಐ, ಹೆಡ್ ಕಾನ್‌ಸ್ಟೆಬಲ್ ಹಾಗೂ ಕಾನ್‌ಸ್ಟೆಬಲ್, ದೂರುದಾರ ಯುವತಿಯಿಂದ ಹಣಪಡೆದಿದ್ದರು. ಪ್ರಕರಣದ ಆರೋಪಿಯನ್ನು ಠಾಣೆಗೆ ಕರೆಸಿದ್ದ ಪಿಎಸ್‌ಐ ಹಾಗೂ ಇತರರು, ಆತನ ಜೊತೆ ಒಳ ಒಪ್ಪಂದ ಮಾಡಿಕೊಂಡಿದ್ದರು. ಯುವತಿ ಜೊತೆ ರಾಜಿ ಸಂಧಾನ ಮಾಡಿಸಲು ಯತ್ನಿಸಿದ್ದರು.'

'ಯುವತಿ ಸಂಧಾನಕ್ಕೆ ಒಪ್ಪಿರಲಿಲ್ಲ. ಇದರಿಂದ ಸಿಟ್ಟಾಗಿದ್ದ ಪಿಎಸ್‌ಐ ಹಾಗೂ ಇತರರು, ಪ್ರಕರಣವನ್ನೇ ತಿರುಚುವುದಾಗಿ ಬೆದರಿಸಿದ್ದರು. ಯುವತಿ–ಯುವಕನ ಜೊತೆಗಿನ ಫೋಟೊಗಳು ಮೊಬೈಲ್‌ನಲ್ಲಿದ್ದವು. ಅದನ್ನು ಯುವತಿಯಿಂದ ಕಸಿದುಕೊಂಡಿದ್ದ ಪಿಎಸ್‌ಐ, ಆರೋಪಿಗೆ ನೀಡಿದ್ದರು. ಅದೇ ಫೋಟೊಗಳನ್ನು ಆರೋಪಿ ಅಳಿಸಿ ಹಾಕಿದ್ದನೆಂದು ಯುವತಿ ದೂರಿದ್ದರು' ಎಂದೂ ಮೂಲಗಳು ತಿಳಿಸಿವೆ.

**ವೇತನ ಕಡಿತ:** 'ಪಿಎಸ್‌ಐ, ಹೆಡ್ ಕಾನ್‌ಸ್ಟೆಬಲ್ ಹಾಗೂ ಕಾನ್‌ಸ್ಟೆಬಲ್ ವಿರುದ್ಧ ಯುವತಿ ದೂರು ನೀಡಿದ್ದರು. ಅದರ ಬಗ್ಗೆ ತನಿಖೆ ನಡೆಸಿದ್ದ ಡಿಸಿಪಿ, ಎಲ್ಲರ ವೇತನ ಕಡಿತಗೊಳಿಸುವಂತೆ ವರದಿ ಸಿದ್ಧಪಡಿಸಿದ್ದರು. ವರದಿಯನ್ವಯ ಪಿಎಸ್‌ಐ ಹಾಗೂ ಇತರರ ವೇತನ ಕಡಿತಗೊಂಡಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಹೆಡ್ ಕಾನ್‌ಸ್ಟೆಬಲ್ ಹಾಗೂ ಕಾನ್‌ಸ್ಟೆಬಲ್, ವೇತನ ಕಡಿತ ಆದೇಶ ಪಾಲಿಸುತ್ತಿದ್ದಾರೆ. ಆದರೆ, ಪಿಎಸ್‌ಐ ಸತೀಶ್ ಆದೇಶವನ್ನು ಪ್ರಶ್ನಿಸಿ ಹಿರಿಯ ಅಧಿಕಾರಿಗಳ ಎದುರು ಅಶಿಸ್ತಿನಿಂದ ವರ್ತಿಸಿದ್ದರು. ಇದೇ ಕಾರಣಕ್ಕೆ ಇದೀಗ, ಸತೀಶ್ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ' ಎಂದು ತಿಳಿಸಿವೆ.

# ಗೋವಾದಲ್ಲಿ ಮೋಜು: ಶಿರಡಿಯಲ್ಲಿ ಸೆರೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಗೋವಾದ ಕ್ಯಾಸಿನೊದಲ್ಲಿ ಹಣ ಗೆದ್ದಿದ್ದ ಚಹಾ ವ್ಯಾಪಾರಿ ತಿಲಕ್ ಮಣಿಕಂಠ (32) ಅವರಿಂದ ₹ 15 ಲಕ್ಷ ಸುಲಿಗೆ ಮಾಡಿದ್ದ ಎಂಟು ಆರೋಪಿಗಳನ್ನು ಹನುಮಂತನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ತ್ಯಾಗರಾಜನಗರ ನಿವಾಸಿ ತಿಲಕ್ ಮಣಿಕಂಠ್ ಅವರನ್ನು ಅಪಹರಿಸಿ ಚಿತ್ರಹಿಂಸೆ ನೀಡಿದ್ದ ಆರೋಪಿಗಳು, ಸುಲಿಗೆ ಮಾಡಿ ರಾಜ್ಯ ತೊರೆದಿದ್ದರು. ಇವರ ಪತ್ತೆಗಾಗಿ ವಿಶೇಷ ತಂಡ ರಚಿಸಲಾಗಿತ್ತು. ಆರೋಪಿಗಳು ಇತ್ತೀಚೆಗೆ ಶಿರಡಿಯಲ್ಲಿ ಸಿಕ್ಕಿಬಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ರೌಡಿ ಕಾರ್ತಿಕ್, ರಾಹುಲ್, ತರುಣ್, ಮನೋಜ್, ಈಶ್ವರ್, ರಾಮಕುಮಾರ್ ಅಲಿಯಾಸ್ ದೀಪು, ಮೋಹನ್ ಹಾಗೂ ನಿಶ್ಚಲ್ ಬಂಧಿತರು. ಇವರಿಂದ ₹ 12 ಲಕ್ಷ ಜಪ್ತಿ ಮಾಡಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ಗೋವಾದ ಪಣಜಿಯಲ್ಲಿರುವ ಕ್ಯಾಸಿನೊವೊಂದಕ್ಕೆ ಹೋಗಿದ್ದ ತಿಲಕ್ ಮಣಿಕಂಠ್, ₹ 4 ಲಕ್ಷ ಹಣವನ್ನು ಬಳಸಿಕೊಂಡು ಆಟವಾಡಿದ್ದರು. ಇದರಿಂದ ₹ 25 ಲಕ್ಷ ಗೆದ್ದಿದ್ದರು. ಈ ಹಣ ದೋಚಲು ಸ್ನೇಹಿತರು ಸಂಚು ರೂಪಿಸಿದ್ದರು.'

'ಬನಶಂಕರಿ ಠಾಣೆಯ ರೌಡಿ ಪಟ್ಟಿಯಲ್ಲಿ ಕಾರ್ತಿಕ್ ಹೆಸರಿದೆ. ತಿಲಕ್ ಮಣಿಕಂಠ್ ಅವರ ಬಾಲ್ಯ ಸ್ನೇಹಿತರಾಗಿದ್ದ ಕಾರ್ತಿಕ್, ರಾಮಕುಮಾರ್, ರಾಹುಲ್, ತಮ್ಮ ಇತರೆ ಗೆಳೆಯರ ಜೊತೆ ಸೇರಿ ಕೃತ್ಯ ಎಸಗಿದ್ದರು' ಎಂದು ಹೇಳಿವೆ.

### ಸುಳಿವು ಸಿಗಬಾರದೆಂದು ಸ್ಥಳ ಬದಲು

'ಕೃತ್ಯದ ಬಳಿಕ ನಗರ ತೊರೆದಿದ್ದ ಆರೋಪಿಗಳು, ಗೋವಾಗೆ ಹೋಗಿದ್ದರು. ಅಲ್ಲಿಂದ ಮುಂಬೈಗೆ ತೆರಳಿ ಕೆಲ ದಿನ ನೆಲೆಸಿದ್ದರು. ಸ್ಥಳ ಬದಲಿಸಿದರೆ ಸುಳಿವು ಸಿಗುವುದಿಲ್ಲವೆಂಬುದು ಆರೋಪಿಗಳ ಲೆಕ್ಕಾಚಾರವಾಗಿತ್ತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಮುಂಬೈನಿಂದ ಶಿರಡಿಗೆ ಬಂದಿದ್ದ ಆರೋಪಿಗಳು, ಕೆಲದಿನ ಉಳಿದುಕೊಂಡಿದ್ದರು. ಈ ಮಾಹಿತಿ ತಿಳಿದ ವಿಶೇಷ ತಂಡ, ಶಿರಡಿಯಲ್ಲಿ ಆರೋಪಿಗಳಿಗಾಗಿ ಹುಡುಕಾಟ ನಡೆಸಿತ್ತು. ಶಿರಡಿ ತೊರೆದು ಬೇರೆಡೆ ಹೊರಡಲು ಸಜ್ಜಾಗಿದ್ದ ಆರೋಪಿಗಳನ್ನು ರೈಲು ನಿಲ್ದಾಣದಲ್ಲಿ ಸೆರೆ ಹಿಡಿಯಲಾಯಿತು' ಎಂದು ಹೇಳಿವೆ.

### ಬ್ಯಾಂಕ್ ವಹಿವಾಟು ಬಂದ್

'ಸುಲಿಗೆ ಮಾಡಿದ್ದ ₹ 15 ಲಕ್ಷದ ಪೈಕಿ ₹ 3 ಲಕ್ಷವನ್ನು ಆರೋಪಿಗಳು ಖರ್ಚು ಮಾಡಿದ್ದಾರೆ. ಖಾತೆಗಳ ವಿವರ ಸಿಗುತ್ತಿದ್ದಂತೆ, ವಹಿವಾಟು ಬಂದ್ ಮಾಡಿಸಲಾಗಿತ್ತು. ಹೀಗಾಗಿ, ಉಳಿದ ಹಣವನ್ನು ಖಾತೆಯಿಂದ ತೆಗೆಸಿಕೊಳ್ಳಲು ಸಾಧ್ಯವಾಗಿರಲಿಲ್ಲ' ಎಂದು ತಿಳಿಸಿವೆ.

## ಮಹೇಶ್ ಹತ್ಯೆ: ವಿಲ್ಸನ್ ಗಾರ್ಡನ್ ನಾಗ ಶರಣು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪರಪ್ಪನ ಅಗ್ರಹಾರ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ರೌಡಿ ಮಹೇಶ್ ಹತ್ಯೆ ಪ್ರಕರಣದ ಪ್ರಮುಖ ಆರೋಪಿಗಳು ನ್ಯಾಯಾಲಯಕ್ಕೆ ಶರಣಾಗಿದ್ದಾರೆ.

'ಸಿದ್ದಾಪುರ ಠಾಣೆಯ ರೌಡಿಪಟ್ಟಿಯಲ್ಲಿ ಹೆಸರಿದ್ದ ಮಹೇಶ್‌ನನ್ನು ಆಗಸ್ಟ್ 4ರಂದು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಲಾಗಿತ್ತು. ಪ್ರಮುಖ ಆರೋಪಿಯಾಗಿದ್ದ ರೌಡಿ ವಿಲ್ಸನ್ ಗಾರ್ಡನ್ ನಾಗ್ ಹಾಗೂ ಮೋಹನ್ ಅಲಿಯಾಸ್ ಡಬಲ್ ಮೀಟರ್ ತಲೆಮರೆಸಿಕೊಂಡಿದ್ದರು. ಇದೀಗ ಇಬ್ಬರೂ ನ್ಯಾಯಾಲಯಕ್ಕೆ ಶರಣಾಗಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪ್ರಕರಣದ ವಿಚಾರಣೆ ನಡೆಸಿದ್ದ ನ್ಯಾಯಾಲಯ, ಇಬ್ಬರನ್ನೂ ಆಗಸ್ಟ್ 28ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ. ಪ್ರಕರಣದ ಸಂಬಂಧ ಇಬ್ಬರನ್ನೂ ವಿಚಾರಣೆ ನಡೆಸಬೇಕಿದ್ದು, ಕಸ್ಟಡಿಗೆ ನೀಡುವಂತೆ ಮನವಿ ಸಲ್ಲಿಸಲಾಗುವುದು' ಎಂದು ಮೂಲಗಳು ತಿಳಿಸಿವೆ.

**ಗಡಿಯಲ್ಲಿ ಸಿಕ್ಕಿಬಿದ್ದಿದ್ದ ಆರೋಪಿಗಳು:** 'ಹತ್ಯೆ ಬಳಿಕ ಪರಾರಿಯಾಗಿದ್ದ ಸಿದ್ದಾಪುರ ಸುನೀಲ್, ಕಣ್ಣನ್, ಪ್ರದೀಪ್, ಮನು, ಶ್ರೀನಿವಾಸ್ ಅಲಿಯಾಸ್ ಪಾಪ ಸೇರಿ 14 ಆರೋಪಿಗಳು ತಮಿಳುನಾಡಿನ ಗಡಿಯಲ್ಲಿದ್ದರು. ಪ್ರಕರಣ ದಾಖಲಾದ ಕೆಲ ಗಂಟೆಗಳಲ್ಲಿ ಕಾರ್ಯಾಚರಣೆ ನಡೆಸಿ ಎಲ್ಲರನ್ನೂ ಬಂಧಿಸಲಾಗಿತ್ತು' ಎಂದು ಮೂಲಗಳು ಹೇಳಿವೆ.

'ನಾಗ ಹಾಗೂ ಮೋಹನ್ ತಲೆಮರೆಸಿಕೊಂಡು ಸುತ್ತಾಡುತ್ತಿದ್ದರು. ಇವರು ಎಲ್ಲಿದ್ದರು? ಎಂಬ ಮಾಹಿತಿ ಸಿಕ್ಕಿರಲಿಲ್ಲ. ಇದೀಗ ಇಬ್ಬರೂ ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಶರಣಾಗಿದ್ದಾರೆ' ಎಂದು ತಿಳಿಸಿವೆ.





ನಗರದಲ್ಲಿ ನಡೆದ ಸಂದೇಶ ಯುವ ವೇದಿಕೆಯ 31ನೇ ವಾರ್ಷಿಕೋತ್ಸವದಲ್ಲಿ ನಟ ಡಿಂಗ್ರಿ ನಾಗರಾಜ್, ಕಲಾ ವಿಮರ್ಶಕ ಎಂ. ಸೂರ್ಯಪ್ರಸಾದ್, ಗಾಯಕ ಶಶಿಧರ್ ಕೋಟೆ, ಶಿವಪ್ರಿಯ ಸ್ಕೂಲ್ ಆಫ್ ಡಾನ್ಸ್‌ನ ಸಂಜಯ್ ಶಾಂತರಾಮ್ ಅವರಿಗೆ 'ಸಂದೇಶ ಕಲಾ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು. ವೇದಿಕೆ ಅಧ್ಯಕ್ಷ ಕೆ.ಸೋಮಶೇಖರ್, ಲೀಲಾದೇವಿ ಆರ್.ಪ್ರಸಾದ್, ಸಿ.ಸೋಮಶೇಖರ್, ಸೌಮ್ಯನಾಥ್ ಸ್ವಾಮೀಜಿ, ಶಿವರುದ್ರ ಸ್ವಾಮೀಜಿ, ಆರೂಢ ಭಾರತಿ ಸ್ವಾಮೀಜಿ, ನೀಲಕಂಠ ಇದ್ದರು

### ಸುದ್ದಿ 2 ನಿಮಿಷ

## ಮದ್ಯದ ಅಮಲಿನಲ್ಲಿ 'ನೈಲ್ ಕಟ್ಟರ್' ನುಂಗಿದ್ದ ವ್ಯಕ್ತಿ

**ಬೆಂಗಳೂರು:** ಮದ್ಯದ ಅಮಲಿನಲ್ಲಿ ವ್ಯಕ್ತಿಯೊಬ್ಬರು ನುಂಗಿದ್ದ ನೈಲ್ ಕಟ್ಟರ್ ಅನ್ನು ಇಲ್ಲಿನ ಮಣಿಪಾಲ್ ಆಸ್ಪತ್ರೆಯ ವೈದ್ಯರು ಶಸ್ತ್ರಚಿಕಿತ್ಸೆ ಮೂಲಕ ಹೊರತೆಗೆದಿದ್ದಾರೆ.

40 ವರ್ಷದ ವ್ಯಕ್ತಿಯು ಸರ್ಜಾಪುರದ ನಿವಾಸಿಯಾಗಿದ್ದು, 8 ವರ್ಷದ ಹಿಂದೆ ನೆಲ್ ಕಟ್ಟರ್ ನುಂಗಿದ್ದರು. ಇತ್ತೀಚೆಗೆ ಹೊಟ್ಟೆಯಲ್ಲಿ ನೋವು ಕಾಣಿಸಿಕೊಂಡಿದ್ದರಿಂದ ಸ್ಥಳೀಯ ಕ್ಲಿನಿಕ್‌ನಲ್ಲಿ ತಪಾಸಣೆ ಮಾಡಿಸಿಕೊಂಡ ಅವರು, ಸಿ.ಟಿ. ಸ್ಕ್ಯಾನ್‌ಗೆ ಒಳಗಾಗಿದ್ದರು. ಆಗ ಹೊಟ್ಟೆಯಲ್ಲಿ ಸಾಧನವೊಂದು ಇರುವುದು ದೃಢಪಟ್ಟಿತ್ತು. ಹೆಚ್ಚಿನ ಚಿಕಿತ್ಸೆಗೆ ಅವರು ಮಣಿಪಾಲ್ ಆಸ್ಪತ್ರೆಗೆ ದಾಖಲಾದರು. ಡಾ. ಲೋಹಿತ್ ಯು. ನೇತೃತ್ವದ ವೈದ್ಯರ ತಂಡವು ಲ್ಯಾಪರೊಸ್ಕೋಪಿಕ್ ಶಸ್ತ್ರಚಿಕಿತ್ಸೆ ನಡೆಸಿ, ನೈಲ್ ಕಟ್ಟರ್ ಹೊರತೆಗೆದಿದೆ ಎಂದು ಆಸ್ಪತ್ರೆ ತಿಳಿಸಿದೆ.



'ವ್ಯಕ್ತಿಗೆ ಹೊಟ್ಟೆಯ ಭಾಗದಲ್ಲಿ ನಿರಂತರ ನೋವು ಕಾಣಿಸಿಕೊಳ್ಳುತ್ತಿತ್ತು. ಇದರಿಂದಾಗಿ ಅವರು ಆಸ್ಪತ್ರೆಗೆ ಭೇಟಿ ನೀಡಿದ್ದರು. ಈ ಹಿಂದೆ ಅವರಿಗೆ ಹೊಟ್ಟೆಯ ಭಾಗದಲ್ಲಿ ಎರಡು ಬಾರಿ ತೆರೆದ ಶಸ್ತ್ರಚಿಕಿತ್ಸೆ ನಡೆದಿತ್ತು. ಆದ್ದರಿಂದ ಲ್ಯಾಪರೊಸ್ಕೋಪಿಕ್ ವಿಧಾನದಿಂದ ಶಸ್ತ್ರಚಿಕಿತ್ಸೆ ನಡೆಸಿ, ಎರಡು ದಿನಗಳ ಬಳಿಕ ಅವರನ್ನು ಮನೆಗೆ ಕಳುಹಿಸಲಾಯಿತು' ಎಂದು ಡಾ. ಲೋಹಿತ್ ಯು. ಹೇಳಿದ್ದಾರೆ.

## ಮಗಳ ಮದುವೆ ವಿಚಾರ: ಮಹಿಳೆ ಆತ್ಮಹತ್ಯೆ

**ಬೆಂಗಳೂರು:** ಹೆಣ್ಣೂರು ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಹಫೀಜಾ ಸುಲ್ತಾನ್ (42) ಅವರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ಸ್ಥಳೀಯ ನಿವಾಸಿ ಹಫೀಜಾ, ಪತಿ ಸೈಯದ್ ಹಾಗೂ ಮಕ್ಕಳ ಜೊತೆ ವಾಸವಿದ್ದರು. ಮಗಳ ಮದುವೆ ವಿಚಾರದಲ್ಲಿ ಮನನೊಂದು ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ಇದೆ. ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮೊದಲ ಪತಿಗೆ ವಿಚ್ಛೇದನ ನೀಡಿದ್ದ ಹಫೀಜಾ, ಪ್ಲಂಬರ್ ಕೆಲಸ ಮಾಡುತ್ತಿದ್ದ ಸೈಯದ್ ಅವರನ್ನು ಎರಡನೇ ಮದುವೆಯಾಗಿದ್ದರು. ಸೈಯದ್ ಅವರಿಗೂ ಇದು ಎರಡನೇ ಮದುವೆಯಾಗಿತ್ತು. ಹಫೀಜಾ ಅವರಿಗೆ ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಮೊದಲ ಮಗಳ ಮದುವೆಯಾಗಿದೆ. ಎರಡನೇ ಮಗಳ ಮದುವೆ ಮಾಡುವಂತೆ ಹಫೀಜಾ ಒತ್ತಾಯಿಸಲಾರಂಭಿಸಿದ್ದರು.'

'ಮಗಳ ವಯಸ್ಸು ಕಡಿಮೆ ಇದೆ. ಈಗ ಮದುವೆ ಬೇಡ' ಎಂದು ಸೈಯದ್ ಹೇಳಿದ್ದರು. ಇದೇ ವಿಚಾರವಾಗಿ ಮನಸ್ತಾಪ ಉಂಟಾಗಿತ್ತು. ಇದರಿಂದ ಬೇಸತ್ತ ಹಫೀಜಾ ತಮ್ಮ ಮನೆಯಲ್ಲಿ ಗುರುವಾರ ಆತ್ಮಹತ್ಯೆ ಮಾಡಿಕೊಂಡಿರಬಹುದೆಂಬ ಮಾಹಿತಿ ಇದೆ' ಎಂದು ಮೂಲಗಳು ತಿಳಿಸಿವೆ.

## ಪೋಕ್ಸೊ: ಟೆಂಪೊ ಚಾಲಕನಿಗೆ 3 ವರ್ಷ ಜೈಲು

**ಬೆಂಗಳೂರು:** ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಟೆಂಪೊ ಚಾಲಕ ಎಚ್.ಕೆ. ಗಣೇಶ್‌ಗೆ (23) ಮೂರು ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಿ ನಗರದ 1ನೇ ತ್ವರಿತ ವಿಶೇಷ ನ್ಯಾಯಾಲಯ (ಎಫ್‌ಟಿಎಸ್‌ಸಿ) ಆದೇಶ ಹೊರಡಿಸಿದೆ.

ಜ್ಞಾನಭಾರತಿ ಠಾಣೆಯಲ್ಲಿ 2019ರಲ್ಲಿ ದಾಖಲಾಗಿದ್ದ ಪ್ರಕರಣದ ವಿಚಾರಣೆಯನ್ನು ನ್ಯಾಯಾಧೀಶರಾದ ರೂಪಾ ಕೆ.ಎನ್. ನಡೆಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ಪಿ. ಕೃಷ್ಣವೇಣಿ ವಾದಿಸಿದ್ದರು.

ಶಾಲೆಗೆ ಹೋಗುತ್ತಿದ್ದ ಬಾಲಕಿಯನ್ನು ಹಿಂಬಾಲಿಸುತ್ತಿದ್ದ ಆರೋಪಿ, 'ನಾನು ನಿನ್ನನ್ನು ಪ್ರೀತಿಸುತ್ತೇನೆ' ಎಂದು ದುಂಬಾಲು ಬಿದ್ದಿದ್ದ. ಮದುವೆ ಮಾಡಿಕೊಳ್ಳುವುದಾಗಿ ಹೇಳಿ ಬಾಲಕಿಯನ್ನು ಅಪಹರಿಸಿಕೊಂಡು ಹೋಗಿ ಲೈಂಗಿಕ ದೌರ್ಜನ್ಯ ಎಸಗಿದ್ದ. ನೊಂದ ಬಾಲಕಿ, ಪೋಷಕರಿಗೆ ವಿಷಯ ತಿಳಿಸಿದ್ದರು.

ಕೃತ್ಯದ ಬಗ್ಗೆ ಪೋಷಕರು ದೂರು ನೀಡಿದ್ದರು. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ಆರೋಪಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

## ಬಿಬಿಎಂಪಿ ಬೆಂಕಿ ಅವಘಡ: ಒಬ್ಬರ ಸ್ಥಿತಿ ಗಂಭೀರ

**ಬೆಂಗಳೂರು:** ಬಿಬಿಎಂಪಿ ಗುಣಮಟ್ಟ ನಿಯಂತ್ರಣ (ಗುಣಮಟ್ಟ ಖಾತರಿ) ಪ್ರಯೋಗಾಲಯದಲ್ಲಿ ಸಂಭವಿಸಿದ ಬೆಂಕಿ ಅವಘಡದಲ್ಲಿ ಗಾಯಗೊಂಡವರಲ್ಲಿ ಮುಖ್ಯ ಎಂಜಿನಿಯರ್ ಶಿವಕುಮಾರ್ ಅವರ ಸ್ಥಿತಿ ಇನ್ನೂ ಗಂಭೀರವಾಗಿದೆ. ಉಳಿದ ಎಂಟು ಮಂದಿ ಆರೋಗ್ಯ ಸ್ಥಿರವಾಗಿದೆ.

ಶಿವಕುಮಾರ್ ಸೇರಿದಂತೆ ಕಾರ್ಯಪಾಲಕ ಎಂಜಿನಿಯರ್ ವಿಜಯಮಾಲ, ಆಪರೇಟರ್ ಜ್ಯೋತಿ ಅವರಿಗೆ ಕೈಗಳಿಗೆ ಫ್ಯಾಸಿಯೊಟಮಿ (ಚರ್ಮ ಕಸಿ) ಪ್ರಕ್ರಿಯೆ ನಡೆಸಲಾಗಿತ್ತು. ಅವರು ಕಾರ್ಯಪಾಲಕ ಎಂಜಿನಿಯರ್ ಕಿರಣ್ ಅವರಿಗೆ 5ನೇ ಬಾರಿ ಡಯಾಲಿಸಿಸ್ ನಡೆಸಲಾಗಿದೆ. ಶಿವಕುಮಾರ್ ಸ್ಥಿತಿ ಇನ್ನೂ ಗಂಭೀರವಾಗಿದ್ದು ಕೃತಕ ಉಸಿರಾಟದ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ವಿಕ್ಟೋರಿಯಾ ಆಸ್ಪತ್ರೆಯ ವೈದ್ಯಕೀಯ ಪ್ರಕಟಣೆ ತಿಳಿಸಿದೆ.

## 'ಲೇಡಿಸ್ ಬಾರ್' ಬಂದ್: ಪುನರಾರಂಭಿಸಲು ಮನವಿ

**ಬೆಂಗಳೂರು:** 'ಮಹಿಳಾ ಸಿಬ್ಬಂದಿ ಕೆಲಸ ಮಾಡುತ್ತಿದ್ದ ಬಾರ್ ಆ್ಯಂಡ್ ರೆಸ್ಟೊರೆಂಟ್‌ಗಳನ್ನು ಯಾವುದೇ ನೋಟಿಸ್ ನೀಡದೇ ಪೊಲೀಸರು ಬಂದ್ ಮಾಡಿಸಿದ್ದಾರೆ. ಇದರಿಂದ ಸಿಬ್ಬಂದಿ ನಿರುದ್ಯೋಗಿಗಳಾಗಿದ್ದು, ಅವರ ಕುಟುಂಬಗಳು ಬೀದಿಗೆ ಬಂದಿವೆ. ಲೇಡಿಸ್ ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳನ್ನು ಮತ್ತೆ ತೆರೆಯಲು ಅವಕಾಶ ನೀಡಬೇಕು' ಎಂದು ಮಾಲೀಕರು ಹಾಗೂ ಸಿಬ್ಬಂದಿ ಆಗ್ರಹಿಸಿದ್ದಾರೆ.

ಕರ್ನಾಟಕ ಬಾರ್ ಆ್ಯಂಡ್ ರೆಸ್ಟೋರೆಂಟ್ ಮಾಲೀಕರ ಸಂಘದ ಪದಾಧಿಕಾರಿಗಳು ಹಾಗೂ ಸಿಬ್ಬಂದಿಗಳ ಪ್ರತಿನಿಧಿಗಳು, ಗೃಹ ಸಚಿವ ಜಿ.ಪರಮೇಶ್ವರ ಅವರಿಗೆ ಮನವಿ ಸಲ್ಲಿಸಿದ್ದಾರೆ.

'ಎಂ.ಜಿ. ರಸ್ತೆ, ಇಂದಿರಾನಗರ, ಕೋರಮಂಗಲ ಸೇರಿದಂತೆ ನಗರದ ಹಲವೆಡೆ 42 ಲೇಡಿಸ್ ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳಿವೆ. ಇಲ್ಲಿ ಕೆಲಸ ಮಾಡುವವರಲ್ಲಿ ಬಹುತೇಕರು ಮಹಿಳೆಯರು. ಇದೇ ಕೆಲಸ ನಂಬಿ 5,000 ಸಿಬ್ಬಂದಿ ಜೀವನ ಸಾಗಿಸುತ್ತಿದ್ದರು. ಮೇ 25ರಂದು ಬಾರ್ ಆ್ಯಂಡ್ ರೆಸ್ಟೋರೆಂಟ್‌ಗೆ ಬಂದಿದ್ದ ಪೊಲೀಸರು, ಒತ್ತಾಯದಿಂದ ಬಾಗಿಲು ಮುಚ್ಚಿಸಿದ್ದಾರೆ. ಅಂದಿನಿಂದಲೂ ಸಿಬ್ಬಂದಿ ಕೆಲಸವಿಲ್ಲದೇ ಕಷ್ಟಪಡುತ್ತಿದ್ದಾರೆ' ಎಂದು ಮನವಿಯಲ್ಲಿ ಉಲ್ಲೇಖಿಸಿದ್ದಾರೆ.

'ಅಬಕಾರಿ ಕಾಯ್ದೆ ಹಾಗೂ ಸ್ಥಳೀಯ ಆಡಳಿತ ಸಂಸ್ಥೆಗಳಿಂದ ಕಾನೂನು ಬದ್ಧವಾಗಿ ಅನುಮತಿ ಪಡೆದು ಬಾರ್ ಆ್ಯಂಡ್ ರೆಸ್ಟೋರೆಂಟ್ ನಡೆಸಲಾಗುತ್ತಿತ್ತು. ಯಾವುದೇ ನೋಟಿಸ್ ನೀಡದೇ ಪೊಲೀಸರು ಏಕಾಏಕಿ ಬಾಗಿಲು ಬಂದ್ ಮಾಡಿಸಿದ್ದಾರೆ. ಈ ಬಗ್ಗೆ ಪ್ರಶ್ನಿಸಿದಾಗ, ಪೊಲೀಸ್ ಕಮಿಷನರ್ ಆದೇಶವಿರುವುದಾಗಿ ಹೇಳುತ್ತಿದ್ದಾರೆ' ಎಂದು ಮನವಿಯಲ್ಲಿ ದೂರಿದ್ದಾರೆ.

### ಭದ್ರತೆ ಒದಗಿಸಲು ಸಿದ್ಧ

'ಈ ಹಿಂದಿನ ಸರ್ಕಾರಗಳ ಅವಧಿಯಲ್ಲಿ ಕಾನೂನು ಪ್ರಕಾರವೇ ಬಾರ್ ತೆರೆಯಲು ಅವಕಾಶ ನೀಡಲಾಗಿತ್ತು. ಆದರೆ, ಈಗ ಅಧಿಕಾರ ವಹಿಸಿಕೊಂಡಿರುವ ಪೊಲೀಸ್ ಕಮಿಷನರ್ ಬಿ. ದಯಾನಂದ್ ಅವರು ಬಾರ್ ತೆರೆಯಲು ಯಾವುದೇ ಅವಕಾಶ ನೀಡುತ್ತಿಲ್ಲ' ಎಂದು ಸಂಘದ ಅಧ್ಯಕ್ಷ ಪ್ರೇಮನಾಥ್ ಶೆಟ್ಟಿ ದೂರಿದರು.

'ಮಹಿಳಾ ಸಿಬ್ಬಂದಿಗೆ ಭದ್ರತೆ ಒದಗಿಸಲು ನಾವು ಸಿದ್ಧರಿದ್ದೇವೆ. ಬಾರ್‌ಗೆ ಬರುವ ಹಾಗೂ ವಾಪಸು ಮನೆಗೆ ಹೋಗುವ ಸಂದರ್ಭದಲ್ಲಿ ಸುರಕ್ಷಿತವಾಗಿ ತಲುಪಿಸುವ ಹೊಣೆ ನಮ್ಮದು. ಬಾರ್ ಆ್ಯಂಡ್ ರೆಸ್ಟೋರೆಂಟ್‌ನಲ್ಲೂ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಲಾಗಿದೆ. ಪೊಲೀಸರು ಹೇಳುವ ಸುರಕ್ಷತೆ ಹಾಗೂ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ನಾವು ಸಿದ್ಧರಾಗಿದ್ದೇವೆ. ಹೀಗಾಗಿ, ಲೇಡಿಸ್ ಬಾರ್ ತೆರೆಯಲು ಅವಕಾಶ ನೀಡಿ' ಎಂದೂ ಆಗ್ರಹಿಸಿದ್ದಾರೆ.

ಬಿಬಿಎಂಪಿ ಘನತ್ಯಾಜ್ಯ ನಿರ್ವಹಣೆ ವಿಭಾಗದಿಂದ ಶ್ರೀಗಂಧ ಕಾವಲು ಕೆರೆ ಅಭಿವೃದ್ಧಿ

# ನೀರು ಹರಿಯದ ಕೆರೆಗೆ ₹22.4 ಕೋಟಿ ವೆಚ್ಚ

• ಆರ್. ಮಂಜುನಾಥ್





ಅಭಿವೃದ್ಧಿಗೊಂಡಿರುವ ಶ್ರೀಗಂಧ ಕಾವಲು ಕೆರೆಯಲ್ಲಿ ನೀರಿಲ್ಲ

ಶ್ರೀಗಂಧ ಕಾವಲು ಕೆರೆಗೆ ಒಳಹರಿವು ಎಂದು ತೋರಿರುವ ಖಾಸಗಿ ಜಮೀನಿನಲ್ಲಿರುವ ಹಳ್ಳ

ಪ್ರಜಾವಾಣಿ ವಿಶೇಷ

**ಬೆಂಗಳೂರು:** ಒಂದು ಕಾಲದಲ್ಲಿ ಈ ಕೆರೆ ಉಳಿಯುವುದಿಲ್ಲ ಎಂದೇ ಭಾವಿಸಲಾಗಿತ್ತು. ಸ್ಥಳೀಯರ ಹೋರಾಟದಿಂದ ಅಲ್ಪಸ್ವಲ್ಪ ಉಳಿದಿರುವ ಶ್ರೀಗಂಧ ಕಾವಲು ಕೆರೆಗೆ ₹22.4 ಕೋಟಿ ವೆಚ್ಚ ಮಾಡಲಾಗುತ್ತಿದೆ. ಆದರೆ, ನೀರು ಹರಿದು ಬರುವ ಹಾದಿಯೇ ಇದಕ್ಕಿಲ್ಲ.

ಬಿಬಿಎಂಪಿ ಘನತ್ಯಾಜ್ಯ ನಿರ್ವಹಣೆ ವಿಭಾಗದಿಂದ ಶ್ರೀಗಂಧ ಕಾವಲು ಕೆರೆಯನ್ನು ಅಭಿವೃದ್ಧಿ ಮಾಡಲಾಗುತ್ತಿದೆ. ಘನತ್ಯಾಜ್ಯ ನಿರ್ವಹಣೆ ವಿಭಾಗಕ್ಕೂ (ಎಸ್‌ಡಬ್ಲ್ಯುಎಂ) ಕೆರೆ ಅಭಿವೃದ್ಧಿಗೂ ಯಾವ ಸಂಬಂಧ ಎನ್ನುವ ಅನುಮಾನ ಕಾಡುತ್ತಿದೆ. ಆದರೆ, ಶ್ರೀಗಂಧ ಕಾವಲು ಕೆರೆ ಸೇರಿದಂತೆ ಹೊಸಕೆರೆಹಳ್ಳಿ ಕೆರೆ, ಮಲ್ಲತ್ತಹಳ್ಳಿ ಕೆರೆಗಳನ್ನೂ 'ಶುಭ್ರ ಬೆಂಗಳೂರು' ಯೋಜನೆಯಡಿ ಎಸ್‌ಡಬ್ಲ್ಯುಎಂ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದೆ.

ನಾಗರಿಕರ ಹೋರಾಟದಿಂದ ಹೊಸಕೆರೆಹಳ್ಳಿ ಕೆರೆಯಲ್ಲಿ ರಸ್ತೆ ಮಾಡುವ ಕೆಲಸ ಸೇರಿದಂತೆ ಹಲವು ಕಾಮಗಾರಿಗಳು ಸ್ಥಗಿತಗೊಂಡಿವೆ. ಮಲ್ಲತ್ತಹಳ್ಳಿ ಕೆರೆಯ ಕಾಮಗಾರಿ ಹೈಕೋರ್ಟ್ ನಿಗಾದಲ್ಲಿದೆ. ಆದರೆ, ಶ್ರೀಗಂಧ ಕಾವಲು ಕೆರೆಯ ಅಭಿವೃದ್ಧಿ ಕಾಮಗಾರಿಗೆ ತಡೆಯಿಲ್ಲದೆ ನಡೆಯುತ್ತದೆ. ಕೆರೆಗೆ ನೀರಿನ ಹರಿವು ಇಲ್ಲದೆ, ಅಲಂಕಾರಿಕ ಪ್ರದೇಶವಾಗಿದೆ.

ಬೆಂಗಳೂರು ದಕ್ಷಿಣ ತಾಲ್ಲೂಕು ಯಶವಂತಪುರ ಹೋಬಳಿ ಶ್ರೀಗಂಧ ಕಾವಲು ಗ್ರಾಮದ ಸರ್ವೆ ನಂ. 15ರಲ್ಲಿ 6 ಎಕರೆ 33 ಗುಂಟೆ ಪ್ರದೇಶದಲ್ಲಿ ಶ್ರೀಗಂಧ ಕಾವಲು ಕೆರೆ ಇದೆ ಎಂದು ಕಂದಾಯ ದಾಖಲೆಗಳಿವೆ. ಅಮ್ಮ ಭಗವಾನ್ ಸೇವಾ ಸಮಿತಿ ಟ್ರಸ್ಟ್ 7 ಗುಂಟೆ ಒತ್ತುವರಿ ಮಾಡಿಕೊಂಡಿದ್ದು, ರಸ್ತೆಗಾಗಿ ಸುಮಾರು 3 ಗುಂಟೆ ಒತ್ತುವರಿ ಯಾಗಿದೆ. ಕೆರೆ ಅಭಿವೃದ್ಧಿಪಡಿಸುವ ಸಂದರ್ಭದಲ್ಲಿ ಒತ್ತುವರಿ ತೆರವು ಮಾಡಿಲ್ಲ. ಬದಲಿಗೆ, ಶಾಲೆ ನಿರ್ಮಾಣ, ಶುದ್ಧ ಕುಡಿಯುವ ನೀರಿನ ಘಟಕಗಳ ಸ್ಥಾಪನೆ ಕೆರೆ ಅಂಗಳದಲ್ಲೇ ಆಗಿದೆ. ಕೆರೆಗೆ ಒಳಹರಿವಾದ ವೃಷಭಾವತಿ ಕಣಿವೆಯ ಕಾಲುವೆ ಸಮಿತಿ ಟ್ರಸ್ಟ್ ಕಟ್ಟಡ ಹಾಗೂ ನಿರ್ಮಾಣವಾಗುತ್ತಿರುವ ಶಾಲೆಯ ಹೊರಭಾಗದಲ್ಲಿ ಹಾದುಹೋಗುವಂತೆ ಮಾಡಲಾಗಿದೆ.

ಅಭಿವೃದ್ಧಿಗೊಂಡಿರುವ ಶ್ರೀಗಂಧ ಕಾವಲು ಕೆರೆಗೆ ಪಕ್ಕದಲ್ಲಿರುವ ಜಮನ್ ಲಾಲ್ ಬಜಾಜ್ ಸೇವಾ ಟ್ರಸ್ಟ್‌ಗೆ ಸೇರಿದ ಜಮೀನಿನಿಂದ ನೀರು ಹರಿದು ಬರಬೇಕು. ಆದರೆ, ಅಲ್ಲಿ ಕಾಲುವೆ ಇಲ್ಲ. ಅವರು ಪೂರ್ಣಪ್ರಮಾಣದಲ್ಲಿ ಕಟ್ಟಡ ನಿರ್ಮಿಸಿದರೆ ಅಲ್ಪ ನೀರೂ ಬರುವುದಿಲ್ಲ. ಅದನ್ನೇ ಒಳಹರಿವು ಎಂದು 'ಶುಭ್ರ ಬೆಂಗಳೂರು' ಯೋಜನೆಯಡಿ ಎಸ್‌ಡಬ್ಲುಎಂ ಕೆರೆಯನ್ನು ಅಭಿವೃದ್ಧಿಪಡಿಸಿದೆ. ಕಾಮಗಾರಿ ನಡೆಸುತ್ತಿರುವ ಗುತ್ತಿಗೆದಾರರನ್ನು ಕೇಳಿದರೆ, 'ನಾಲ್ಕು ಬೋರ್‌ವೆಲ್‌ಗಳಿವೆ, ಅವುಗಳಿಂದಲೇ ಕೆರೆ ತುಂಬಿಸುತ್ತೇವೆ' ಎನ್ನುತ್ತಾರೆ.

ಹೊಸಕೆರೆಹಳ್ಳಿ ಕೆರೆಯಲ್ಲಿ ರಸ್ತೆ ನಿರ್ಮಿಸಿದ ಎಂಜಿನಿಯರ್‌ಗಳೇ ಎಸ್‌ಡಬ್ಲ್ಯುಎಂ ಹಾಗೂ ಕೆರೆಗಳ ವಿಭಾಗದ ಎಂಜಿನಿಯರ್ ಹುದ್ದೆಗಳನ್ನು ಹೊಂದಿದ್ದರು. ಅವರೇ ಈ ಕೆರೆಯ ಅಭಿವೃದ್ಧಿ ಯೋಜನೆ ತಯಾರಿಸಿದ್ದಾರೆ. ಆದರೆ ಅವರೆಲ್ಲ ಇದೀಗ ಅಮಾನತಿನಲ್ಲಿದ್ದಾರೆ. ಆದರೆ, ಆ ಯೋಜನೆಗಳಿಗೆ ಅನುಮೋದನೆ ನೀಡಿರುವ ಹಿರಿಯ ಅಧಿಕಾರಿಗಳು ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದ್ದಾರೆ. ಶ್ರೀಗಂಧ ಕಾವಲು ಕೆರೆ ಪರಿಸ್ಥಿತಿ ಹೀಗಿದೆಯಲ್ಲ ಎಂಬ ಪ್ರಶ್ನೆಗೆ, 'ನಾವು ಇರಲಿಲ್ಲ, ಅವರು ಇದ್ದರು. ಯೋಜನೆ ಬಗ್ಗೆ ನನಗೆ ಮಾಹಿತಿ ಇಲ್ಲ' ಎಂಬ ಸಬೂಬು ಹೇಳುತ್ತಿದ್ದಾರೆ. ವಿಶೇಷ ಆಯುಕ್ತರ ಮಟ್ಟದಲ್ಲಿ ತನಿಖೆ ನಡೆಸಬೇಕು ಎಂಬುದು ಸ್ಥಳೀಯರ ಆಗ್ರಹ.

### 'ಹೈಟೆಕ್ ಪಾರ್ಕ್' ಆದ ಕೆರೆ

ಶ್ರೀಗಂಧದ ಕಾವಲು ಕೆರೆಯನ್ನು ಇಲ್ಲವಾಗಿಸಿದ್ದರೂ. ಕೆರೆಯೇ ಅಲ್ಲ, ಮೈದಾನ ಎಂದು ದಾಖಲಿಸಲು ಪ್ರಯತ್ನಿಸಿದ್ದರು. ಸ್ಥಳೀಯರೆಲ್ಲ ಸೇರಿಕೊಂಡು ಹೋರಾಟ ಮಾಡಿ ಕೆರೆಯನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡಿದ್ದೇವೆ. ಆದರೆ, ಕೆರೆಯ ಸಂಪೂರ್ಣ ವಿಸ್ತೀರ್ಣ ಅಲ್ಲಿಲ್ಲ. ಒತ್ತುವರಿ ತೆರವು ಮಾಡಿಲ್ಲ. ನೀರನ್ನು ಹಿಡಿದಿಡುವ ಸಾಮರ್ಥ್ಯ ಕಡಿಮೆಯಾಗಿದೆ. ಸೌಂದರ್ಯೀಕರಣಕ್ಕೆ ಆದ್ಯತೆ ನೀಡಲಾಗಿದೆ. 'ಹೈಟೆಕ್ ಪಾರ್ಕ್'ನಂತೆ ಮಾಡಲಾಗಿದ್ದು, ಕೆರೆಯ ಮೂಲ ಅಸ್ತಿತ್ವ ಕಳೆದುಕೊಂಡಿದೆ. ಒಳಹರಿವನ್ನೇ ಹೊಂದಿರದ ಕೆರೆ ಉಳಿಯಲು ಹೇಗೆ ಸಾಧ್ಯ ಎಂದು ಸ್ಥಳೀಯ ನಿವಾಸಿ ಶೋಭಾ ಭಟ್ ಪ್ರಶ್ನಿಸಿದರು.

### ಹೊಣೆಗಾರಿಕೆ ಯಾರದ್ದು?

ಬಿಬಿಎಂಪಿಯ ವ್ಯಾಪ್ತಿಯಲ್ಲಿರುವ ಶ್ರೀಗಂಧದ ಕಾವಲು ಕೆರೆ ಅಭಿವೃದ್ಧಿ ಯೋಜನೆ ಘನತ್ಯಾಜ್ಯ ನಿರ್ವಹಣೆ ವಿಭಾಗಕ್ಕೆ (ಎಸ್‌ಡಬ್ಲ್ಯುಎಂ) ಯಾಕೆ ಹೋಯಿತು ಎಂಬುದರ ಬಗ್ಗೆ ಎಂಜಿನಿಯರ್‌ಗಳಲ್ಲೇ ಗೊಂದಲವಿದೆ. 'ಶುಭ್ರ ಬೆಂಗಳೂರು' ಯೋಜನೆಯಲ್ಲಿ ಎಸ್‌ಡಬ್ಲ್ಯುಎಂ ಕೆರೆ ಅಭಿವೃದ್ಧಿ ಕೈಗೊಂಡಿದೆ. ನಂತರ ಸಮಸ್ಯೆಯಾಗಿ, ಕೆರೆಗಳ ವಿಭಾಗಕ್ಕೆ ಹೋಗಿ ಮತ್ತೆ ಎಸ್‌ಡಬ್ಲ್ಯುಎಂಗೇ ಬಂದಿದೆ. 'ಹಿಂದೆ ಇದ್ದ ಅಧಿಕಾರಿಗಳು ಮಾಡಿದ್ದಾರೆ. ನಾವು ಈಗ ಬಂದಿದ್ದೇವೆ, ಪರಿಶೀಲಿಸಬೇಕು' ಎಂಬುದು ಈಗಿರುವ ಅಧಿಕಾರಿಗಳ ಮಾತು. ಹೊಣೆಗಾರಿಕೆಯನ್ನು ಒಬ್ಬರು ಮತ್ತೊಬ್ಬರ ಮೇಲೆ ಹಾಕುತ್ತಿದ್ದಾರೆ. ಆದರೆ, ಕೋಟ್ಯಂತರ ರೂಪಾಯಿ ಮಾತ್ರ ಇಲ್ಲಿ ಅನಗತ್ಯವಾಗಿ ವೆಚ್ಚವಾಗಿರುವುದಕ್ಕೆ ಸ್ಥಳದ ಪರಿಸ್ಥಿತಿಯೇ ಸಾಕ್ಷಿಯಾಗಿದೆ.

## 'ಪರಿಹಾರ ನೀಡದಿದ್ದರೆ ಭೂಮಿ ಸ್ವಾಧೀನ'

**ಚನ್ನಪಟ್ಟಣ:** 'ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೈವೇ ನಿರ್ಮಾಣಕ್ಕೆ ಸ್ವಾಧೀನಪಡಿಸಿಕೊಂಡಿರುವ ಜಮೀನಿಗೆ ವಾರದೊಳಗೆ ಪರಿಹಾರ ನೀಡದಿದ್ದರೆ ಭೂಮಿಯನ್ನು ಸ್ವಾಧೀನಕ್ಕೆ ಪಡೆದುಕೊಳ್ಳಬೇಕಾಗುತ್ತದೆ' ಎಂದು ಭೂಮಿ ನೀಡಿರುವ ತಾಲ್ಲೂಕಿನ ತಿಟ್ಟಮಾರನಹಳ್ಳಿ ರೈತರು ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ಪತ್ರ ಬರೆದು ಎಚ್ಚರಿಕೆ ನೀಡಿದ್ದಾರೆ.

ಗ್ರಾಮದ ರೈತರಾದ ಪುಟ್ಟಸಿದ್ದೇಗೌಡ, ಮುರುಳಿ, ಬಾಬು, ಸಿದ್ದೇಗೌಡ, ಕಾಂತರಾಜು ಸೇರಿದಂತೆ 8 ರೈತರು ಪತ್ರ ಬರೆದಿದ್ದಾರೆ.

'ತಿಟ್ಟಮಾರನಹಳ್ಳಿ ಬಳಿ ಹಾದು ಹೋಗಿರುವ ಎಕ್ಸ್‌ಪ್ರೆಸ್ ಹೈವೇಗೆ ಭೂಮಿ ನೀಡಿರುವ ಹಲವು ರೈತರಿಗೆ ಎರಡನೇ ಹಂತದ ಭೂಸ್ವಾಧೀನದ ಪರಿಹಾರ ಸಿಗದಿದ್ದರಿಂದ ಬೇಸತ್ತು ಈ ತೀರ್ಮಾನ ಮಾಡಿರುವುದಾಗಿ' ರೈತರು ತಿಳಿಸಿದ್ದಾರೆ.

'ಗ್ರಾಮದ ಬಳಿ ಅಂಡರ್ ಪಾಸ್ ಹಾಗೂ ಸರ್ವೀಸ್ ರಸ್ತೆ ವಿಸ್ತರಣೆಗಾಗಿ ಪ್ರಾಧಿಕಾರದಿಂದ ಹೆಚ್ಚುವರಿ ಭೂಮಿಯನ್ನು ವಶಕ್ಕೆ ಪಡೆಯಲಾಗಿದೆ. ಆದರೆ, ಭೂಮಿ ವಶಕ್ಕೆ ಪಡೆದು ಹಲವು ವರ್ಷ ಕಳೆದರೂ ಪರಿಹಾರ ಸಿಕ್ಕಿಲ್ಲ' ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಅಧಿಕಾರಿಗಳ ಭರವಸೆ ಮೇಲೆ ಭೂಮಿ ನೀಡಿ ಇಷ್ಟು ದಿನ ಕಾದಿದ್ದೇವೆ. ಆದರೆ, ಪರಿಹಾರ ಹಣ ಬಿಡುಗಡೆಗೆ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆ. ಒಂದು ವಾರದ ಗಡುವು ನೀಡಿದ್ದೇವೆ. ಅಷ್ಟರಲ್ಲಿ ಪರಿಹಾರದ ಹಣ ಬಿಡುಗಡೆಯಾಗದಿದ್ದರೆ ಭೂಮಿ ಮತ್ತೆ ವಶಕ್ಕೆ ಪಡೆಯುತ್ತೇವೆ' ಎಂದು ರೈತರು ಪತ್ರದಲ್ಲಿ ಎಚ್ಚರಿಸಿದ್ದಾರೆ.

ವಿಧಾನ ಪರಿಷತ್‌ಗೆ ಸುಧಾಮ್ ದಾಸ್ ನಾಮನಿರ್ದೇಶನ ಪ್ರಸ್ತಾವ

# ನಾಲ್ವರು ಹಿರಿಯ ಸಚಿವರ ಆಕ್ಷೇಪ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಜಾರಿ ನಿರ್ದೇಶನಾಲಯದ ಮಾಜಿ ಅಧಿಕಾರಿ ಸುಧಾಮ್ ದಾಸ್ ಅವರನ್ನು ವಿಧಾನ ಪರಿಷತ್‌ಗೆ ನಾಮನಿರ್ದೇಶನ ಮಾಡುವ ಪ್ರಸ್ತಾವಕ್ಕೆ ಕರ್ನಾಟಕ ಸರ್ಕಾರದ ನಾಲ್ವರು ಹಿರಿಯ ಸಚಿವರು ಆಕ್ಷೇಪ ವ್ಯಕ್ತಪಡಿಸಿ ಕಾಂಗ್ರೆಸ್ ಹೈಕಮಾಂಡ್‌ಗೆ ಪತ್ರ ಬರೆದಿದ್ದಾರೆ.

ಗೃಹ ಸಚಿವ ಡಾ.ಜಿ.ಪರಮೇಶ್ವರ, ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್.ಮುನಿಯಪ್ಪ, ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಹಾಗೂ ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ಅವರು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಪತ್ರ ಬರೆದು ಸುಧಾಮ್ ದಾಸ್ ಹೆಸರನ್ನು ಕೈಬಿಡಬೇಕು ಎಂದು ಒತ್ತಾಯಿಸಿದ್ದಾರೆ.

ಮಾಜಿ ಸಚಿವರಾದ ಉಮಾಶ್ರೀ, ಎಂ.ಆರ್. ಸೀತಾರಾಂ ಮತ್ತು ಸುಧಾಮ್ ದಾಸ್ ಅವರನ್ನು ವಿಧಾನ ಪರಿಷತ್‌ಗೆ ನಾಮನಿರ್ದೇಶನ ಮಾಡಲು ಕಾಂಗ್ರೆಸ್ ಹೈಕಮಾಂಡ್ ಈಗಾಗಲೇ ಒಪ್ಪಿಗೆ ನೀಡಿದೆ. ಉಮಾಶ್ರೀ ಅವರನ್ನು ಸಿನಿಮಾ ಕ್ಷೇತ್ರ, ಸೀತಾರಾಂ ಅವರನ್ನು ಶಿಕ್ಷಣ ಕ್ಷೇತ್ರ ಹಾಗೂ ಸುಧಾಮ್ ದಾಸ್ ಅವರನ್ನು ಸಮಾಜಸೇವೆ ಕ್ಷೇತ್ರದಿಂದ ನಾಮ ನಿರ್ದೇಶನಕ್ಕೆ ಆಯ್ಕೆ ಮಾಡಲಾಗಿದೆ.

'ಜಾರಿ ನಿರ್ದೇಶನಾಲಯದ ಅಧಿಕಾರಿಯಾಗಿದ್ದ ಸುಧಾಮ್ ದಾಸ್ ಕೆಲವು ವರ್ಷಗಳ ಹಿಂದೆ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದರು. ಬಳಿಕ ಅವರನ್ನು ಕರ್ನಾಟಕ ಮಾಹಿತಿ ಆಯುಕ್ತರನ್ನಾಗಿ ನೇಮಕ ಮಾಡಲಾಯಿತು. ಅವರು ಈ ವರ್ಷದ ಮಾರ್ಚ್‌ನಲ್ಲಿ ಮಾಹಿತಿ ಆಯುಕ್ತ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು. ಬಳಿಕ ಕಾಂಗ್ರೆಸ್‌ಗೆ ಸೇರ್ಪಡೆಯಾದರು. ಅವರು ಪಕ್ಷಕ್ಕೆ ಹೊಸಬರು. ಪಕ್ಷ ಸಂಘಟನೆಯಲ್ಲಿ ಅವರ ಪಾತ್ರ ನಗಣ್ಯ ಎನ್ನಬಹುದು. ಅವರ ಹೆಸರನ್ನು ಮೇಲ್ಮನೆಗೆ ಪರಿಗಣಿಸುವುದಕ್ಕೆ ನಮ್ಮ ಬಲವಾದ ಆಕ್ಷೇಪವಿದೆ' ಎಂದು ಸಚಿವರು ಪತ್ರದಲ್ಲಿ ತಿಳಿಸಿದ್ದಾರೆ.

'ಪಕ್ಷದ ಸಂಘಟನೆಗಾಗಿ ಹಲವಾರು ವರ್ಷಗಳಿಂದ ದುಡಿದ ನಾಯಕರು ಸಾಕಷ್ಟು ಮಂದಿ ಇದ್ದಾರೆ. ಅವರನ್ನು ಪರಿಗಣಿಸಬೇಕು. ಒಂದು ವೇಳೆ ಅವಕಾಶ ನೀಡಿದರೆ ಅಂತಹವರ ಹೆಸರನ್ನು ಶಿಫಾರಸು ಮಾಡುತ್ತೇವೆ' ಎಂದೂ ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಇದು ಪಕ್ಷದ ಆಂತರಿಕ ವಿಚಾರ. ಈ ಬಗ್ಗೆ ಪ್ರತಿಕ್ರಿಯಿಸುವುದಿಲ್ಲ' ಎಂದು ಆರ್.ಬಿ.ತಿಮ್ಮಾಪುರ 'ಪ್ರಜಾವಾಣಿ'ಗೆ ತಿಳಿಸಿದರು. ಪರಮೇಶ್ವರ ಹಾಗೂ ಮಹದೇವಪ್ಪ ಪ್ರತಿಕ್ರಿಯೆಗೆ ಲಭ್ಯರಾಗಲಿಲ್ಲ.

## ತುಮಕೂರು ಕೈಗಾರಿಕಾ ಪ್ರದೇಶಕ್ಕೆ ಎಸ್‌ಪಿವಿ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಬೆಂಗಳೂರು–ಚೆನ್ನೈ ಕೈಗಾರಿಕಾ ಕಾರಿಡಾರ್‌ನ ಭಾಗವಾಗಿ ತುಮಕೂರಿನಲ್ಲಿ ತಲೆ ಎತ್ತಲಿರುವ ಸ್ವಾಯತ್ತ ಕೈಗಾರಿಕಾ ಪ್ರದೇಶಕ್ಕೆ ವಿಶೇಷ ಉದ್ದೇಶದ ಘಟಕ (ಎಸ್‌ಪಿವಿ) ಸ್ಥಾಪಿಸಲಾಗಿದೆ.

ಈ ಕೈಗಾರಿಕಾ ಪ್ರದೇಶದಲ್ಲಿ ಮೂಲಸೌಕರ್ಯ ಕಾಮಗಾರಿಗಳಿಗಾಗಿ ಗುತ್ತಿಗೆದಾರರಿಗೆ ಗುತ್ತಿಗೆ ವಹಿಸಲಾಗಿದೆ. ಇಲ್ಲಿ ಸುಮಾರು 60 ಸಾವಿರ ಉದ್ಯೋಗ ಸೃಷ್ಟಿಯಾಗುವ ನಿರೀಕ್ಷೆ ಇದೆ.

ಬೆಂಗಳೂರು–ಚೆನ್ನೈ ಕೈಗಾರಿಕಾ ಕಾರಿಡಾರ್, ಬೆಂಗಳೂರು–ಮುಂಬೈ ಕೈಗಾರಿಕಾ ಕಾರಿಡಾರ್, ಬೆಂಗಳೂರು–ಹೈದರಾಬಾದ್ ಕೈಗಾರಿಕಾ ಕಾರಿಡಾರ್ ಸೇರಿ ದೇಶದಲ್ಲಿ 11 ಕಾರಿಡಾರ್‌ಗಳು ಸ್ಥಾಪನೆಯಾಗಲಿವೆ.

ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯ ಮೂಲಕ ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಸೀಬಿ, ಹುಂಜನಾಳು ಹಾಗೂ ಸುತ್ತಮುತ್ತಲಿನ ಗ್ರಾಮಗಳ 8484 ಎಕರೆ ಪ್ರದೇಶದಲ್ಲಿ ಈ ಕೈಗಾರಿಕಾ ಪ್ರದೇಶ ನಿರ್ಮಾಣವಾಗಲಿದೆ. 1,722 ಎಕರೆ ಜಾಗಕ್ಕೆ 2014ರಲ್ಲಿ ಅಂತಿಮ ಅಧಿಸೂಚನೆ ಹೊರಡಿಸಲಾಗಿತ್ತು. ಭೂಮಾಲೀಕರಿಗೆ ಪರಿಹಾರ ಪಾವತಿಸಿ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿದೆ. ಉಳಿದ ಜಮೀನುಗಳ ಸ್ವಾಧೀನಕ್ಕೆ ಕಲಂ 28 (3) ರ ವಿಚಾರಣೆ ಹಾಗೂ ಜಂಟಿ ಅಳತೆ ಕಾರ್ಯ ಪ್ರಗತಿಯಲ್ಲಿದೆ. ಬೆಂಗಳೂರು–ಮುಂಬೈ ಕೈಗಾರಿಕಾ ಕಾರಿಡಾರ್‌ನ ಭಾಗವಾಗಿ ಧಾರವಾಡ ಜಿಲ್ಲೆಯ ಸಿಂಗನಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ 6,042 ಎಕರೆ ಪ್ರದೇಶದಲ್ಲಿ ಕೈಗಾರಿಕಾ ಪ್ರದೇಶ ತಲೆ ಎತ್ತಲಿದೆ. ಇಲ್ಲಿನ ಜಮೀನುಗಳ ಸ್ವಾಧೀನಕ್ಕಾಗಿ 2021ರ ಮಾರ್ಚ್‌ನಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದ್ದು, ಜಂಟಿ ಅಳತೆ ಕಾರ್ಯ ನಡೆಯುತ್ತಿದೆ.

ಬೆಂಗಳೂರು–ಹೈದರಾಬಾದ್ ಕೈಗಾರಿಕಾ ಕಾರಿಡಾರ್‌ನ ಭಾಗವಾಗಿ ರಾಯಚೂರು ಜಿಲ್ಲೆಯ ಕಡೇಚೂರು ಹಾಗೂ ಸುತ್ತಮುತ್ತಲ ಗ್ರಾಮಗಳಲ್ಲಿ 3,269 ಎಕರೆಯಲ್ಲಿ ಕೈಗಾರಿಕಾ ಪ್ರದೇಶ ಅಭಿವೃದ್ಧಿಪಡಿಸಲಾಗುತ್ತದೆ. ಇದಕ್ಕಾಗಿ 2021ರ ಸೆಪ್ಟೆಂಬರ್‌ನಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ. ಜಂಟಿ ಅಳತೆ ಕಾರ್ಯ ಪ್ರಗತಿಯಲ್ಲಿದೆ.

## ಅಮೇಠಿಯಿಂದ ರಾಹುಲ್ ಕಣಕ್ಕೆ

ಪ್ರಜಾವಾಣಿ ವಾರ್ತೆ



**ಲಖನೌ:** ಕಾಂಗ್ರೆಸ್ ಮುಖಂಡ ರಾಹುಲ್‌ಗಾಂಧಿ ಅವರು ಮುಂದಿನ ಲೋಕಸಭೆ ಚುನಾವಣೆಯಲ್ಲಿ ಅಮೇಠಿ ಕ್ಷೇತ್ರದಿಂದ ಸ್ಪರ್ಧಿಸುವರು ಎಂದು ಉತ್ತರ ಪ್ರದೇಶ ಕಾಂಗ್ರೆಸ್ ಘಟಕದ ಅಧ್ಯಕ್ಷ ಅಜಯ್ ರಾಯ್ ಶುಕ್ರವಾರ ತಿಳಿಸಿದರು.

ತಮ್ಮ ಹುಟ್ಟೂರು ವಾರಾಣಸಿಯಲ್ಲಿ ಸುದ್ದಿಗಾರರ ಜೊತೆಗೆ ಅವರು ಮಾತನಾಡಿದರು. ಅಮೇಠಿ ಕ್ಷೇತ್ರದಿಂದ 2009, 2014ರಲ್ಲಿ ಆಯ್ಕೆಯಾಗಿದ್ದ ರಾಹುಲ್ ಗಾಂಧಿ, 2019ರ ಚುನಾವಣೆಯಲ್ಲಿ ಬಿಜೆಪಿಯ ಸ್ಮೃತಿ ಇರಾನಿ ವಿರುದ್ಧ ಪರಾಭವಗೊಂಡಿದ್ದರು.

## ₹7.56 ಲಕ್ಷ ವಂಚನೆ

**ಕೊಪ್ಪಳ:** ಟ್ರೇಡಿಂಗ್ ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿದರೆ ಹೆಚ್ಚು ಲಾಭ ಕೊಡಿಸುತ್ತೇನೆ ಎಂದು ಆನ್‌ಲೈನ್ ಮೂಲಕ ನಂಬಿಸಿದ ಅಪರಿಚಿತ ವ್ಯಕ್ತಿಯೊಬ್ಬ ₹7.56 ಲಕ್ಷ ವಂಚಿಸಿದ್ದಾರೆ. ಕೊಪ್ಪಳ ತಾಲ್ಲೂಕಿನ ಹೊಸಳ್ಳಿ ಗ್ರಾಮದ ಗಿರೀಶ್ ಕಾಮತ್ ವಂಚನೆಗೆ ಒಳಗಾದವರು.

ಈ ಕುರಿತು ಇಲ್ಲಿನ ಸೈಬರ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ವಾರಕ್ಕೆರಡು ಮೊಟ್ಟೆ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ

# ಸರ್ಕಾರಕ್ಕೆ ಮುಟ್ಟಿದ ಮಕ್ಕಳ ಮಾನವೀಯತೆ

ಪ್ರಜಾವಾಣಿ ವಾರ್ತೆ



ಮಂಡ್ಯದ ಹೊಸಹಳ್ಳಿ ಸರ್ಕಾರಿ ಶಾಲೆಯಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರು ವಿದ್ಯಾರ್ಥಿನಿಗೆ ಮೊಟ್ಟೆ ತಿನ್ನಿಸುವ ಮೂಲಕ ವಾರಕ್ಕೆರಡು ಮೊಟ್ಟೆ ವಿತರಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಇದ್ದಾರೆ

**ಮಂಡ್ಯ:** '8ನೇ ತರಗತಿವರೆಗಿನ ಮಕ್ಕಳಿಗಷ್ಟೇ ಮೊಟ್ಟೆ ವಿತರಿಸುತ್ತಿದ್ದುದರಿಂದ, ಅವರು ಇತರ ಮಕ್ಕಳೊಂದಿಗೆ ಹಂಚಿಕೊಂಡು ತಿನ್ನುತ್ತಿದ್ದರು. ಆ ಮಾನವೀಯ ಗುಣ ಸರ್ಕಾರದ ಗಮನ ಸೆಳೆದ ಪರಿಣಾಮವಾಗಿಯೇ 9, 10ನೇ ತರಗತಿ ಮಕ್ಕಳಿಗೂ ಮೊಟ್ಟೆ ನೀಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದೆ' ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ಹೇಳಿದರು.

ರಾಜ್ಯದಾದ್ಯಂತ 1ರಿಂದ 10ನೇ ತರಗತಿ ಸರ್ಕಾರಿ ಶಾಲೆ ಮಕ್ಕಳಿಗೆ ವಾರಕ್ಕೆರಡು ಮೊಟ್ಟೆ ವಿತರಿಸುವ ಕಾರ್ಯಕ್ರಮಕ್ಕೆ ನಗರದ ಹೊಸಹಳ್ಳಿ ಸರ್ಕಾರಿ ಶಾಲೆಯಲ್ಲಿ ಚಾಲನೆ ನೀಡಿ ಮಾತನಾಡಿದ ಅವರು, '9, 10ನೇ ತರಗತಿಯವರಿಗೂ ಮೊಟ್ಟೆ ನೀಡಬೇಕೆಂಬ ಒತ್ತಾಯ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನ ಸೆಳೆಯಲಾಗಿತ್ತು. ಇನ್ನು ಮುಂದೆ ರಾಜ್ಯದ 58 ಲಕ್ಷ ಮಕ್ಕಳಿಗೆ ವಾರಕ್ಕೆ 1.16 ಕೋಟಿ ಮೊಟ್ಟೆ ವಿತರಿಸಲಾಗುತ್ತದೆ' ಎಂದರು.

'ವಾರಕ್ಕೆರಡು ಮೊಟ್ಟೆ ವಿತರಿಸುವ ಕಾರ್ಯಕ್ರಮ ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯಲ್ಲಿರಲಿಲ್ಲ. ಆದರೂ ಶಾಲಾ ಮಕ್ಕಳ ಆರೋಗ್ಯದ ದೃಷ್ಟಿಯಿಂದ, ಗ್ಯಾರಂಟಿ ಯೋಜನೆಗಳ ನಡುವೆಯೂ ಈ ನಿರ್ಧಾರ ಕೈಗೊಳ್ಳಲಾಗಿದೆ. ಸರ್ಕಾರದ ಗೌರವವೂ ಹೆಚ್ಚಾಗಿದೆ' ಎಂದರು.

**ಮಕ್ಕಳೊಂದಿಗೆ ಊಟ:** ಮಕ್ಕಳೊಂದಿಗೆ ಕುಳಿತ ಸಚಿವರು ವಿದ್ಯಾರ್ಥಿನಿಗೆ ಮೊಟ್ಟೆ ತಿನ್ನಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಮೊಟ್ಟೆ ತಿನ್ನದ ಮಕ್ಕಳಿಗೆ ಶೇಂಗಾ ಚಿಕ್ಕಿ ಹಾಗೂ ಬಾಳೆಹಣ್ಣು ವಿತರಿಸಿದರು. ಮಕ್ಕಳೊಂದಿಗೆ ಮಧ್ಯಾಹ್ನದ ಬಿಸಿಯೂಟ ಸೇವಿಸಿದರು. ಊಟಕ್ಕೂ ಮೊದಲು ಮಕ್ಕಳೊಂದಿಗೆ 'ಓಂ ಸಹನಾ ವವತು' ಶಾಂತಿ ಮಂತ್ರ ಪಠಿಸಿದರು.

### ಗೃಹಲಕ್ಷ್ಮಿ: 30ರಂದು ಮೈಸೂರಿನಲ್ಲಿ ಚಾಲನೆ

'ಮನೆಯ ಯಜಮಾನಿಗೆ ₹ 2 ಸಾವಿರ ನೀಡುವ ಗೃಹಲಕ್ಷ್ಮಿ ಯೋಜನೆಗೆ ಆ.30ರಂದು ಮೈಸೂರಿನಲ್ಲಿ ನಮ್ಮ ನಾಯಕ ರಾಹುಲ್‌ಗಾಂಧಿ ಚಾಲನೆ ನೀಡಲಿದ್ದಾರೆ' ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ಹೇಳಿದರು.

'ವಿವಿಧ ಕಾರಣಗಳಿಂದಾಗಿ ಯೋಜನೆ ಉದ್ಘಾಟನಾ ದಿನಾಂಕವನ್ನು ಮುಂದೂಡಲಾಗಿತ್ತು. ಈಗ ದಿನಾಂಕ ಅಂತಿಮಗೊಂಡಿದ್ದು ಮೈಸೂರಿನಲ್ಲಿ ದೊಡ್ಡ ಕಾರ್ಯಕ್ರಮದಲ್ಲಿ ಚಾಲನೆ ನೀಡಲಾಗುವುದು' ಎಂದು ಹೇಳಿದರು.

ಮೊದಲು, ಬೆಳಗಾವಿಯಲ್ಲಿ ಚಾಲನೆ ನೀಡಲು ನಿರ್ಧರಿಸಲಾಗಿತ್ತು. ಈಗ ಸ್ಥಳ ಬದಲಾಯಿಸಿದ ಆದೇಶ ಶುಕ್ರವಾರ ಹೊರಬಿದ್ದಿದೆ.

ಪ್ರಜಾವಾಣಿ ಶನಿವಾರ, 19 ಆಗಸ್ಟ್ 2023
ಭೂಮಿಕಾ
ಮಹಿಳೆಯ ಆಪ್ತ ಸಂಗಾತಿ





## ಮಡಿವಂತಿಕೆ ಸಾಕು...

ಇದು ಮಡಿವಂತಿಕೆಯ ಕಾಲವಲ್ಲ. ಕಾರಣ–ಪರಿಣಾಮಗಳ ಬಗ್ಗೆ ಸಮಗ್ರ ತಿಳಿವಳಿಕೆ ಪಸರಿಸಬೇಕಾದ ಸಮಯ. ಮಕ್ಕಳೊಂದಿಗೆ ಮನೋದೈಹಿಕ ವಿಚಾರಗಳ ಬಗ್ಗೆ ಮುಕ್ತವಾಗಿ ಮಾತನಾಡಬೇಕು. ಲೈಂಗಿಕ–ಭಾವನಾತ್ಮಕ ಸಂಬಂಧ ಅಪರಾಧ ಅಥವಾ ಅನೈತಿಕ ಎಂದು ಹೇಳಿದರೆ ಅವರು ಅದನ್ನು ಗೌಪ್ಯವಾಗಿ ಮುಂದುವರೆಸುತ್ತಾರೆ. ವಯಸ್ಸು ಯಾವುದೇ ಇರಲಿ, ದೈಹಿಕ ಹಾಗೂ ಮಾನಸಿಕ ಸಂಬಂಧ ಜೀವನದ ಒಂದು ಭಾಗವಾಗಬೇಕು. ಅದುವೇ ಜೀವನವಾಗಬಾರದು. ಲೈಂಗಿಕ–ಭಾವನಾತ್ಮಕ ಜೀವನವನ್ನು ಆರೋಗ್ಯಪೂರ್ಣವಾಗಿ ತೆಗೆದುಕೊಳ್ಳುವ ಮನಸ್ಥಿತಿ ನಿರ್ಮಾಣವಾಗಬೇಕು. ತಪ್ಪಲ್ಲದ ತಪ್ಪಿಗೆ ಶಿಕ್ಷೆಗೆ ಗುರಿಯಾಗುತ್ತಿರುವ ಮಕ್ಕಳನ್ನು ಕಾಪಾಡುವ ದೃಷ್ಟಿಯಿಂದ ಲೈಂಗಿಕ ಸಮ್ಮತಿಯ ವಯೋಮಾನವನ್ನು ಇಳಿಸುವುದು ಅತ್ಯಗತ್ಯ.

**ಕವಿತಾ ರತ್ನ**
ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ ಸಂಸ್ಥೆಯ ನಿರ್ದೇಶಕಿ

# ಸಹಮತದ ಸಮ್ಮಿಲನ ಅಂಕೆ ಬೇಕೇ?



‘ಮಕ್ಕಳು ಬಹಳ ಬೇಗ ದೈಹಿಕ ಸಂಪರ್ಕಕ್ಕೆ ತೆರೆದುಕೊಳ್ಳುತ್ತಿದ್ದಾರೆ ಎನ್ನುವುದು ವಾಸ್ತವ. ಆದರೆ ಅವರಿಗೆ ಸುರಕ್ಷತೆಯ ಬಗ್ಗೆ ಅರಿವಿಲ್ಲ ಎನ್ನುವುದು ಕಳವಳ’

**ಸುಶೀಲಾ ಡೋಣೂರ**

ಉಂಡಾಡುವ ವಯಸ್ಸಿನ ಮಕ್ಕಳ ಲೈಂಗಿಕ ಸ್ವಾತಂತ್ರ್ಯದ ಬಗ್ಗೆ ಮತ್ತೆ ಪುಕಾರುಗಳೆದ್ದಿವೆ. ಹದಿಹರೆಯದವರ ಲೈಂಗಿಕ ಸಮ್ಮತಿಯ ವಯೋಮಾನವನ್ನು 16ಕ್ಕೆ ಇಳಿಸುವ ಬಗ್ಗೆ ವಿರುದ್ಧ ನಿಲುವುಗಳಿವೆ. ಲೈಂಗಿಕ ಶಿಕ್ಷಣವಿನ್ನೂ ಮೊದಲ ಮೆಟ್ಟಿಲಲ್ಲಿ ನಿಂತಿರುವ ಈ ಹೊತ್ತು, ಮಕ್ಕಳ ಕೈಗೆ ಲೈಂಗಿಕ ಸ್ವಾತಂತ್ರ್ಯ ಕೊಡುವ ವಯೋಮಾನವನ್ನು ಇಳಿಸಿದರೆ ಪ್ರಸ್ತುತ ನಮ್ಮೆದುರು ನಿಂತಿರುವ ಈ ಸವಾಲನ್ನು ನೀಗಲಾದೀತೆ?...

ಗಂಡು–ಹೆಣ್ಣಿನ ಸಮ್ಮಿಲನಕ್ಕೆ ಅದರದೇ ಆದ ವ್ಯಾಖ್ಯಾನವಿದೆ. ಎರಡು ಮನಸುಗಳು, ಎರಡು ದೇಹಗಳು ಒಂದಾಗುವ ಈ ಕ್ರಿಯೆಗೆ ಸಮಾಜ, ಕಾನೂನು, ಕೌಟುಂಬಿಕ ವ್ಯವಸ್ಥೆಗಳು ಹಿಂದಿನಿಂದಲೂ ಹಲವು ತಡೆಗೋಡೆಗಳನ್ನು ನಿರ್ಮಿಸುತ್ತ ಬಂದಿವೆ. ಕಾರಣವಿಷ್ಟೆ, ಎರಡು ದೇಹಗಳು ಒಂದಾಗುವುದು ಅಲ್ಲೇ ಆರಂಭವಾಗಿ, ಅಲ್ಲೇ ಮುಕ್ತಾಯಗೊಳ್ಳುವ ವ್ಯವಹಾರವಲ್ಲ. ಅಲ್ಲಿಂದ ಶುರುವಾಗಿ ಜೀವನದ ಎಲ್ಲಾ ಪದರುಗಳಿಗೂ ಚಾಚಿಕೊಳ್ಳುವ ಅನುಭೂತಿ.

ಭಾರತದಂತಹ ಸಾಂಪ್ರದಾಯಿಕ ನೆಲದಲ್ಲಿ ಅದು ಭಾವನಾತ್ಮಕ, ಸಾಮಾಜಿಕ, ಕೌಟುಂಬಿಕ ಸಂಗತಿಗಳನ್ನೂ ಒಳಗೊಳ್ಳುವ ಸಂವೇದನೆ. ಆದ್ದರಿಂದ ಇದನ್ನು ಪ್ರತ್ಯೇಕ ತಕ್ಕಡಿಯಲ್ಲಿಟ್ಟು ನೋಡಬೇಕಾಗುತ್ತದೆ. ಅದರಲ್ಲೂ, ಹರೆಯದ ಮಕ್ಕಳ ವಿಚಾರಕ್ಕೆ ಬಂದಾಗ ಈ ತಕ್ಕಡಿ ಇನ್ನೂ ಹೆಚ್ಚಿನ ಜವಾಬ್ದಾರಿ ಹಾಗೂ ಹೊಣೆಗಾರಿಕೆಯಿಂದ ಕೂಡಿರಬೇಕಾಗುತ್ತದೆ.

ಲೈಂಗಿಕ ಸಮ್ಮತಿಯ ಕನಿಷ್ಠ ಕಾನೂನುಬದ್ಧ ವಯೋಮಾನವನ್ನು ಇಳಿಸುವ ಬಗ್ಗೆ ಮರುಚಿಂತನೆ ನಡೆಸಬೇಕೆಂದು ಇತ್ತೀಚೆಗೆ ಬಾಂಬೆ ಹೈಕೋರ್ಟ್ ಹೇಳಿದ ಬಳಿಕ ಈ ವಿಚಾರವಾಗಿ ಸಾಕಷ್ಟು ಪರ–ವಿರೋಧ ಮಾತುಗಳೆದ್ದಿವೆ. ಇದು ಮಕ್ಕಳ ವಿಚಾರವಾದ್ದರಿಂದ ಈ ಚರ್ಚೆ ಸೂಕ್ಷ್ಮವೂ ಆಗಿದೆ. ಕಣ್ಣತುಂಬ ಕುತೂಹಲವನ್ನೇ ತುಂಬಿಸಿಟ್ಟುಕೊಂಡು ಪ್ರಪಂಚಕ್ಕೆ ತೆರೆದುಕೊಳ್ಳುತ್ತಿರುವ ಹದಿಹರೆಯದ ಮಕ್ಕಳ ಭವಿಷ್ಯದ ಬಗ್ಗೆ ಪೋಷಕರು ಆತಂಕಕ್ಕೀಡಾಗಿದ್ದಾರೆ. ಮಕ್ಕಳ ತಜ್ಞರು ಅವರ ಮನೋದೈಹಿಕ ಸ್ವಾಸ್ಥ್ಯದ ಬಗ್ಗೆ ಕಳವಳಗೊಂಡಿದ್ದಾರೆ.

ಇಲ್ಲಿ ಎರಡು ವಾದಗಳಿವೆ; ಭಾರತದಂತಹ ಸಾಂಸ್ಕೃತಿಕ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ನೋಡಿದಾಗ ಸಮ್ಮತಿಯ ವಯೋಮಾನವನ್ನು ಇಳಿಸುವುದು ಸಮಂಜಸವಲ್ಲ ಎನ್ನುವುದು ಒಂದು; ನಾವು ನಿಂತ ನೆಲವೇ ತನ್ನ ಹರವನ್ನು ವಿಸ್ತರಿಸಿಕೊಂಡಿರುವಾಗ, ನಮ್ಮ ಆಲೋಚನೆಗಳು, ವರ್ತನೆಗಳೂ, ನಿಲುವುಗಳು, ಅಭಿಪ್ರಾಯಗಳೂ ಪಲ್ಲಟಗೊಂಡಿರುವಾಗ ಈ ಬದಲಾವಣೆ ಅನಿವಾರ್ಯ ಎನ್ನುವುದು ಮತ್ತೊಂದು ವಾದ. ಪೋಷಕರು ಹಾಗೂ ಕೆಲವು ಪ್ರಾಧ್ಯಾಪಕರು ಲೈಂಗಿಕ ಸಮ್ಮತಿಯ ವಯೋಮಾನವನ್ನು ಇಳಿಸುವುದು ಬೇಡ ಎಂದರೆ, ವಿದ್ಯಾರ್ಥಿಗಳು, ಕಾನೂನಾತ್ಮಕ ವಯೋಮಾನ ಮುಖ್ಯವಾಗುವುದಿಲ್ಲ, ಅದು ವಿವೇಚನೆಗೆ ಬಿಟ್ಟಿದ್ದು ಎನ್ನುತ್ತಾರೆ. ಮಕ್ಕಳ ಸ್ವಾಭಾವಿಕ ಬಯಕೆಗಳನ್ನು ಕಾನೂನಿನ ದಾರದಿಂದ ಕಟ್ಟಿಹಾಕುವುದು ತರವಲ್ಲ ಎನ್ನುವುದು ಪ್ರಗತಿಪರ ಚಿಂತಕರ, ಮಕ್ಕಳ ಹಕ್ಕುಗಳ ಹೋರಾಟಗಾರರ ಕಳಕಳಿ. ಇದೆಲ್ಲವನ್ನು ಅಳೆದು –ತೂಗಿ ನಿರ್ಧಾರ ಕೈಗೊಳ್ಳಬೇಕಾದ ಜರೂರು ನಮ್ಮ ಮುಂದಿದೆ.

ಹದಿಹರೆಯದವರ ಸ್ವಾಭಾವಿಕ ಕಾಮನೆಗಳು ಅವರನ್ನು ಅಪರಾಧವಲ್ಲದ ಅಪರಾಧಗಳಿಗೆ ಶಿಕ್ಷ ಅನುಭವಿಸುವಂತೆ ಮಾಡುತ್ತಿವೆ. ಇಬ್ಬರ ನಡುವೆ ಸಮ್ಮತಿಯಿಂದ ನಡೆಯುವ ಕ್ರಿಯೆಯಿಂದ ಸಂಗಾತಿ ಬಾಲಕ ಮಾತ್ರ ಶಿಕ್ಷೆಗೆ ಗುರಿಯಾಗುತ್ತಿದ್ದಾನೆ. ಇದನ್ನು ಗಮನದಲ್ಲಿಟ್ಟುಕೊಂಡು ಬಾಲಕಿಯರ ಲೈಂಗಿಕ ಸಮ್ಮತಿಯ ವಯೋಮಾನವನ್ನು 18 ರಿಂದ 16ಕ್ಕೆ ಇಳಿಸುವ ಬಗ್ಗೆ ಮಧ್ಯಪ್ರದೇಶ ಹೈಕೋರ್ಟ್‌ನ ಗ್ವಾಲಿಯರ್ ವಿಭಾಗೀಯ ಪೀಠವು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿರುವುದಾಗಿ ವರದಿಯಾಗಿದೆ. ನೈಜೀರಿಯಾದಂತಹ ದೇಶಗಳಲ್ಲಿ ಈ ವಯಸ್ಸು 11ಕ್ಕಿಂತ ಕಡಿಮೆಯಿದೆ. ಬಹ್ರೇನ್‌ನಂತಹ ದೇಶಗಳಲ್ಲಿ 21 ವರ್ಷಕ್ಕಿಂತ ಹೆಚ್ಚಿದೆ. ಅರಬ್ ದೇಶಗಳಲ್ಲಂತೂ ಮದುವೆಗೆ ಮುನ್ನ ಲೈಂಗಿಕ ಸಮ್ಮಿಲನ ಅಪರಾಧ. ಆದರೆ, ಈ ಬಗ್ಗೆ ವಯೋಮಾನವನ್ನು ಮಾತ್ರ ಚರ್ಚಿಸಿದರಾಗದು, ನಾವು ನಿಂತ ನೆಲದ ಗುಣ, ನಂಬಿಕೆಗಳು, ಸಂಪ್ರದಾಯಗಳು, ಆಯಾ ದೇಶದ ಸಾಂಸ್ಕೃತಿಕ, ಧಾರ್ಮಿಕ, ಸಾಮಾಜಿಕ ನಿಲುವುಗಳನ್ನೂ ಪರಿಗಣಿಸಬೇಕಾಗುತ್ತದೆ. ಭಾರತದಲ್ಲಿ, ಲೈಂಗಿಕ ಶಿಕ್ಷಣ ಮಕ್ಕಳ ಮನಸುಗಳನ್ನು ತಲುಪುವ ಮೊದಲೇ ಲೈಂಗಿಕ ಸ್ವಾತಂತ್ರ್ಯದ ವಯೋಮಾನವನ್ನು ಇಳಿಸಬಹುದೇ ಎನ್ನುವುದು ವಿಸ್ತೃತ ಚರ್ಚೆಗೆ ಒಳಪಡಬೇಕಾದ ತುರ್ತು ಅಗತ್ಯವಿದೆ.

### ಅಕಾಲ ಪ್ರೌಢಿಮೆ

ಮಕ್ಕಳು ಬಹಳ ಬೇಗ ದೈಹಿಕ ಸಂಪರ್ಕಕ್ಕೆ ತೆರೆದುಕೊಳ್ಳುತ್ತಿದ್ದಾರೆ ಎನ್ನುವುದು ವಾಸ್ತವ. ಆದರೆ ಅವರಿಗೆ ಸುರಕ್ಷತೆಯ ಬಗ್ಗೆ ಅರಿವಿಲ್ಲ ಎನ್ನುವುದು ಕಳವಳ ತರುವ ವಿಚಾರ ಎನ್ನುತ್ತಾರೆ ಮಕ್ಕಳ ಹಕ್ಕುಗಳ ಬಗ್ಗೆ ವಿಸ್ತೃತ ಕೆಲಸ ಮಾಡಿರುವ ಕವಿತಾ ರತ್ನ. ಇದಕ್ಕೆ ಪ್ರೌಢಾವಸ್ಥೆ ತಲುಪುವ ವಯೋಮಾನ ತಗ್ಗಿರುವುದೂ ಒಂದು ಕಾರಣ. ಅಷ್ಟೇ ಬೇಗ ಮಾನಸಿಕ–ದೈಹಿಕ ಬಯಕೆಗಳೂ ಒಡಮೂಡಲಾರಂಭಿಸುತ್ತವೆ. ಈ ಸಂದಿಗ್ಧತೆಯನ್ನು ನಿವಾರಿಸಿಕೊಳ್ಳುವ ತಿಳಿವಳಿಕೆ ಅವರಿಗಿಲ್ಲ. ಭಾವನೆಗಳನ್ನು, ಕಾಮನೆಗಳನ್ನು ಹೇಗೆ ನಿಗ್ರಹಿಸಬೇಕು, ಹೇಗೆ ನಿರ್ವಹಿಸಬೇಕು ಎಂದು ಚರ್ಚಿಸುವ ಅವಕಾಶ ಶಾಲಾ–ಕಾಲೇಜುಗಳಲ್ಲೂ ಇಲ್ಲ, ಮನೆಗಳಲ್ಲೂ ಇಲ್ಲ. ಇದರಿಂದ ತಮಗೆ ತಿಳಿದಂತೆ ತಮ್ಮ ಮನಸಿನ–ದೇಹದ ಬಯಕೆಗಳಿಗೆ ಪ್ರತಿಸ್ಪಂದಿಸುತ್ತಿದ್ದಾರೆ. ಹೀಗಾಗಿ, ಅಕಾಲಿಕ ಗರ್ಭಧಾರಣೆ, ಅಸುರಕ್ಷಿತ ಗರ್ಭಪಾತಗಳು, ಬಾಲ ತಾಯಂದಿರ ಸಂಖ್ಯೆ ಅಧಿಕವಾಗುತ್ತಿದೆ.

### ಹೆಚ್ಚುತ್ತಿರುವ ಒತ್ತಡ

ಹದಿಹರೆಯದ ಮಕ್ಕಳ ಮೇಲೆ ಆಂತರಿಕ ಮತ್ತು ಬಾಹ್ಯ ಒತ್ತಡಗಳು ಹೆಚ್ಚುತ್ತಿವೆ ಮತ್ತು ಅವೆರಡೂ ವಿರುದ್ಧ ದಿಕ್ಕಿನೆಡೆಗೆ ಎಳೆಯುತ್ತಿವೆ. ಒಂದೆಡೆ ಮನೋದೈಹಿಕ ಬಯಕೆಗಳನ್ನು ಕೆರಳಿಸುವ ವಾತಾವರಣ; ಇನ್ನೊಂದೆಡೆ ಕುಟುಂಬ–ಸಮಾಜದ ನಿರ್ಬಂಧಗಳು. ಇಬ್ಬರು ಸಮಾನ ವಯಸ್ಕರರ ನಡುವೆ ಏರ್ಪಡುವ ಸಂಬಂಧವನ್ನು ಕುಟುಂಬ–ಸಮಾಜ ನೋಡುವುದಕ್ಕೂ, ಆ ಪೀಳಿಗೆ ಗ್ರಹಿಸುವುದಕ್ಕೂ ವ್ಯತ್ಯಾಸವಿದೆ. ಯಾವುದನ್ನು ಹಿರಿಯರು ಮಹಾದುರಂತ, ಅಕ್ಷಮ್ಯ, ಅನೈತಿಕ ಎನ್ನುತ್ತಾರೊ, ಅದು ಯುವಜನರ ದೃಷ್ಟಿಯಲ್ಲಿ ಹಾಗಿಲ್ಲ. ಈ ಎರಡೂ ದೃಷ್ಟಿಕೋನಗಳ ನಡುವೆ ಈಗ ಸೇತುವೆಯೊಂದು ನಿರ್ಮಾಣವಾಗಬೇಕು. ಇಂದಿನ ಪೀಳಿಗೆ ಹಿಮ್ಮುಖವಾಗಿ ಕ್ರಮಿಸಲಾರದು, ಹಿರಿಯರೇ ಒಂದು ಹೆಜ್ಜೆ ಮುಂದಿಡಬೇಕು. ಆಗ ಬಹುಶಃ ಮಕ್ಕಳ ಮುಂದಿನ ಹಾದಿ ನಿಚ್ಚಳವಾಗಬಹುದು.

### ವಿವೇಚನೆಗೆ ಸಂಬಂಧಿಸಿದ್ದು...


ಲೈಂಗಿಕ ಜೀವನದ ಸ್ವಾತಂತ್ರ್ಯವನ್ನು 18ಕ್ಕೆ ಕೊಡುತ್ತಾರೊ, 16ಕ್ಕೊ, 21ಕ್ಕೊ ಎನ್ನುವುದು ಮುಖ್ಯವಾಗುವುದೇ ಇಲ್ಲ. ಸಲುಗೆಗೆ ತಿರುಗುವಾಗ, ಸಲುಗೆ ಸಾಮೀಪ್ಯಕ್ಕೆ ಹಾತೊರೆಯುವಂತೆ ಮಾಡುವಾಗ ಯಾರಿಗೂ ಯಾವ ಕಾನೂನೂ ನೆನಪಾಗುವುದಿಲ್ಲ. ಅದು ಅವರವರ ವಿವೇಚನೆ ಹಾಗೂ ಸಿಗುವ ಅವಕಾಶಗಳ ಮೇಲೆ ಅವಲಂಬಿಸಿರುತ್ತದೆ. ನಮ್ಮ ಸ್ನೇಹ–ಸಂಬಂಧ ಯಾರೊಂದಿಗೆ, ಎಷ್ಟಿರಬೇಕು ಎನ್ನುವುದನ್ನು ನಮ್ಮ ವಿವೇಕ ಎಚ್ಚರಿಸುತ್ತದೆ, ಕಾನೂನೂ ಅಲ್ಲ, ಕೋರ್ಟೂ ಅಲ್ಲ ಎನ್ನುವುದು ಬಿಬಿಎ ವಿದ್ಯಾರ್ಥಿನಿ ಮಂದಾರ ನೇರನುಡಿ.

‘ಮೊದಲೇ ಇಂದಿನ ಸೂಪರ್ ಸ್ಪೀಡ್ ಪೀಳಿಗೆ ನಮ್ಮ ಲಗಾಮಿಗೆ ಸಿಗುತ್ತಿಲ್ಲ. ಮಕ್ಕಳ ಚಿತ್ತಚಾಂಚಲ್ಯಕ್ಕೆ ಕಾರಣವಾಗುವ ಎಲ್ಲಾ ಅವಕಾಶಗಳೂ ಅವರ ಅಂಗೈಯಲ್ಲೇ ಇವೆ. ಹೀಗಿರುವಾಗ 16ನೇ ವಯಸ್ಸಿಗೇ ಲೈಂಗಿಕ ಜೀವನಕ್ಕೆ ಲೈಸನ್ಸ್ ಕೊಡುವುದು ಭಾರತದ ಮಟ್ಟಿಗಂತೂ ಅಪಾಯಕಾರಿ’ ಎನ್ನುತ್ತಾರೆ ಎರಡು ಗಂಡುಮಕ್ಕಳ ತಾಯಿಯೂ, ಶಾಲೆಯೊಂದರ ಪ್ರಾಚಾರ್ಯರೂ ಆಗಿರುವ ನರ್ಮದಾ ಕಿಲೇದಾರ.

ಚರ್ಚೆ ಏನೇ ಇರಲಿ, ಹದಿಹರೆಯದ ಮಕ್ಕಳ ಮಾನಸಿಕ, ದೈಹಿಕ, ಲೈಂಗಿಕ ಆರೋಗ್ಯವನ್ನು ಗಮನದಲ್ಲಿಟ್ಟು ಕೊಂಡು ಬಹಳ ಎಚ್ಚರಿಕೆಯಿಂದ ಈ ವಿಷಯವನ್ನು ತೀರ್ಮಾನಿಸಬೇಕು. ಮಕ್ಕಳಿಗೆ ಮಾಹಿತಿ ಸಕಲ ದಿಕ್ಕುಗಳಿಂದಲೂ ಹರಿದು ಬರುತ್ತಿದೆ. ಲೈಂಗಿಕ ವಿಷಯದ ಬಗ್ಗೆ ತಿಳಿದುಕೊಳ್ಳಬೇಕೆಂದರೆ ಅರೆಕ್ಷಣದಲ್ಲಿ ಅದನ್ನು ಹೆಕ್ಕಿಕೊಳ್ಳುತ್ತಾರೆ. ಆದರೆ, ಮನೋದೈಹಿಕ–ಲೈಂಗಿಕ ಸ್ವಾಸ್ಥ್ಯದ ಬಗ್ಗೆ ಸರಿಯಾದ ಅರಿವು ಮೂಡಿಸಬೇಕಾದ ಹೊಣೆಗಾರಿಕೆ ಪೋಷಕರ ಮೇಲೂ ಇದೆ, ಶಿಕ್ಷಣ ಸಂಸ್ಥೆಗಳ ಮೇಲೂ ಇದೆ.

❖


## ಮಕ್ಕಳ ಹಕ್ಕುಗಳನ್ನು ಕಸಿಯಬೇಡಿ



ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಯ (1989) ಅನ್ವಯ ನಮ್ಮ ಎಲ್ಲ ತೀರ್ಮಾನಗಳು ಮಕ್ಕಳ ಹಿತಾಸಕ್ತಿಗೆ ಪೂರಕವಾಗಿರಬೇಕು. ಜೊತೆಗೆ ಈ ಬಗೆಯ ತೀರ್ಮಾನಗಳನ್ನು ಕೈಗೊಳ್ಳುವಾಗ ಮಕ್ಕಳ ಪ್ರಬುದ್ಧತೆಗೆ ಅನುಗುಣವಾಗಿ ಅವರ ಅಭಿಪ್ರಾಯವನ್ನೂ ಪಡೆಯಬೇಕು. ಹದಿಹರೆಯದ ಬೆಳವಣಿಗೆಯ ಹಂತದಲ್ಲಿ ಲೈಂಗಿಕ ಆಸಕ್ತಿ ಮತ್ತು ಬಯಕೆ ಒಂದು ಸಾಮಾನ್ಯ ಸಹಜ ಬೆಳವಣಿಗೆ. ಅದನ್ನು ಬಲವಂತವಾಗಿ ಹತ್ತಿಕ್ಕಲು ಹೋದರೆ ಬೇರೆ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ. ಬದಲಾಗಿ, ಅವರಿಗೆ ಶಾಲೆಗಳಲ್ಲಿ ಲೈಂಗಿಕ ಶಿಕ್ಷಣ ಮತ್ತು ಪೋಕ್ಸೊ ಕಾಯ್ದೆ ಏನು, ಈ ನಿಯಮಗಳನ್ನು ಉಲ್ಲಂಘಿಸಿದರೆ ಏನಾಗುತ್ತದೆ ಎಂಬ ಬಗ್ಗೆ ಅರಿವು ಮೂಡಿಸಬೇಕು. ಈ ಕುರಿತ ಮಾಹಿತಿ ನೀಡುವಂತೆ ಎಲ್ಲಾ ಶಾಲೆ, ಕಾಲೇಜುಗಳಿಗೆ ಸೂಚಿಸಬೇಕು.

**ವಿ.ಪಿ.ನಿರಂಜನಾರಾಧ್ಯ,** ಶಿಕ್ಷಣ ತಜ್ಞ

## ಶಕ್ತಿ ರೂಪಾಂತರಗೊಳ್ಳಬೇಕು



ಹದಿಹರೆಯದ ಮಕ್ಕಳು ನೈಸರ್ಗಿಕ ಅಗತ್ಯಗಳನ್ನು ಮತ್ತು ಆ ಕ್ರಿಯೆಯಿಂದ ಎದುರಾಗಬಹುದಾದ ಪರಿಣಾಮಗಳನ್ನು ಅರ್ಥಮಾಡಿಕೊಳ್ಳಲು ಅಸಮರ್ಥರಾಗಿರುತ್ತಾರೆ. ಲೈಂಗಿಕ ಸಂಬಂಧ ಇಬ್ಬರ ನಡುವೆ ಭಾವನಾತ್ಮಕ ಮತ್ತು ದೈಹಿಕ ಅವಲಂಬನೆಯನ್ನೂ ಬೆಳೆಸುತ್ತದೆ. ಹೀಗಾಗಿ ಲೈಂಗಿಕ ಕ್ರಿಯೆಯ ನಂತರ ಮನೋಕ್ಷೋಭೆಗೆ ಒಳಗಾಗುವ ಸಾಧ್ಯತೆ ಹೆಚ್ಚು. ಹೀಗಾಗಿಅವರ ಶೈಕ್ಷಣಿಕ, ಸಾಮಾಜಿಕ ಬದುಕಿಗೂ ಪೆಟ್ಟು ಬೀಳಬಹುದು. ಇದರಿಂದ ತಪ್ಪಿಸಲು ಅವರ ಮನಸನ್ನು, ಶಕ್ತಿಯನ್ನು ರೂಪಾಂತರಗೊಳಿಸಬೇಕು. ಸೃಜನಾತ್ಮಕ ಚಟುವಟಿಕೆಗಳತ್ತ ಸಕ್ರಿಯಗೊಳಿಸಬೇಕು. ಲೈಂಗಿಕ, ಭಾವನಾತ್ಮಕ, ಸೃಜನಾತ್ಮಕ ಶಕ್ತಿಗಳು ಒಂದಕ್ಕೊಂದು ಪೂರಕವಾಗಿರುತ್ತವೆ. ಭಾವನಾತ್ಮಕ ಹಾಗೂ ಸೃಜನಾತ್ಮಕ ಸಂಗತಿಗಳತ್ತ ಮಕ್ಕಳ ಶಕ್ತಿಯನ್ನು ರೂಪಾಂತರಗೊಳಿಸಬೇಕು. ಕಲೆ, ಸಾಹಿತ್ಯ, ಮನರಂಜನೆ, ಕ್ರೀಡೆಗಳಲ್ಲಿ ತೊಡಗಿಸಬೇಕು.

**ಡಾ. ಶುಭಾ ಮಧುಸೂಧನ್**
ಮನೋಚಿಕಿತ್ಸಕಿ

## ಸುರಕ್ಷತೆ ಪ್ರಧಾನವಾಗಲಿ



ತಡೆಹಿಡಿದಷ್ಟು ಮುಸುಕಿನಲ್ಲಿ ನಡೆಯುತ್ತದೆಯೇ ಹೊರತು ನಿಯಂತ್ರಣ ಕಷ್ಟಸಾಧ್ಯ. ಪ್ರೌಢಾವಸ್ಥೆ ತಲುಪುತ್ತಿದ್ದಂತೆ ಹಾರ್ಮೋನುಗಳು ಮಾತನಾಡಲಾರಂಭಿಸುತ್ತವೆ. ಇದು ನೈಸರ್ಗಿಕ ಕ್ರಿಯೆ. ಇದಕ್ಕೆ ವಯೋಮಾನದ ನಿರ್ಬಂಧವನ್ನು ಹೇರುವ ಬದಲು ಸುರಕ್ಷಿತ ಸಂಪರ್ಕದ ಬಗ್ಗೆ ಮಕ್ಕಳಲ್ಲಿ ತಿಳಿವಳಿಕೆ ಮೂಡಿಸಬೇಕು. ಅಸುರಕ್ಷಿತ ಸಂಪರ್ಕದಿಂದ ಸೋಂಕುಗಳ ಅಪಾಯ ಹಾಗೂ ಗರ್ಭಧಾರಣೆಯ ಅಪಾಯ ಹೆಚ್ಚು. ಈ ಅಪಾಯಗಳಿಂದ ಸುರಕ್ಷಿತವಾಗಿರಲು ತಿಳಿಸಬೇಕು. ಈ ಅವಧಿಯಲ್ಲಿ ಬಾಲಕಿಯರ ದೇಹ ಗರ್ಭಧಾರಣೆಯ ಭಾರವನ್ನು, ಗರ್ಭಪಾತದ ಆಘಾತವನ್ನೂ ತಡೆದುಕೊಳ್ಳಲಾರದು. ಮಕ್ಕಳನ್ನು ನಿಯಂತ್ರಿಸುವ ಮೊದಲು ಅವರಿಗೆ ಸುರಕ್ಷತೆಯ ಜ್ಞಾನವನ್ನು ನೀಡಬೇಕು.

**ಡಾ. ರತ್ನಮಾಲಾ ದೇಸಾಯಿ**
ಸ್ತ್ರೀರೋಗ ತಜ್ಞೆ ಹಾಗೂ ಪ್ರಾಚಾರ್ಯೆ ಎಸ್‌.ಡಿ.ಎಂ ಮೆಡಿಕಲ್ ಕಾಲೇಜು, ಧಾರವಾಡ



‘ಇಬ್ಬರು ಸಮಾನ ವಯಸ್ಕರರ ನಡುವೆ ಏರ್ಪಡುವ ಸಂಬಂಧವನ್ನು ಕುಟುಂಬ–ಸಮಾಜ ನೋಡುವುದಕ್ಕೂ, ಆ ಪೀಳಿಗೆ ಗ್ರಹಿಸುವುದಕ್ಕೂ ವ್ಯತ್ಯಾಸವಿದೆ.’

## ಏನಾದ್ರೂ ಕೇಳ್ಬೋದು



**ನಡಹಳ್ಳಿ ವಸಂತ್**

# ಮಕ್ಕಳ ಶಾಲಾ ಭಯಕ್ಕೆ ಪರಿಹಾರವೇನು?

- **ಮಗನಿಗೆ ನಾಲ್ಕು ವರ್ಷ. ಅಂಗನವಾಡಿಗೆ ಹೋಗುವುದಕ್ಕೆ ಹಟ ಮಾಡುತ್ತಾನೆ. ಮನೆಯಲ್ಲಿಯೇ ಇರಲು ಬಯಸುತ್ತಾನೆ. ಅಂಗನವಾಡಿಗೆ ಕಳಿಸುವುದು ಹೇಗೆ?**

**ಹೆಸರು ಊರು ತಿಳಿಸಿಲ್ಲ.**

ಮಕ್ಕಳ ಮಿದುಳು ಇನ್ನೂ ಬೆಳವಣಿಗೆಯ ಪ್ರಾರಂಭದ ಹಂತದಲ್ಲಿರುತ್ತದೆ. ತರ್ಕ ವಿವೇಚನೆಗಳಿಗೆ ಬಳಸುವ ಹಣೆಯ ಹಿಂಭಾಗದಲ್ಲಿರುವ ಮಿದುಳಿನ ಭಾಗದ ಬೆಳವಣಿಗೆ ಈಗಷ್ಟೇ ಆರಂಭವಾಗುತ್ತದೆ. ಹಾಗಾಗಿ ದೊಡ್ಡವರ ಪ್ರಪಂಚದ ತರ್ಕಗಳನ್ನು ಬಳಸಿ ಅವರ ಜೊತೆ ಮಾತನಾಡಿದರೆ ಅದು ಅವರನ್ನು ತಲುಪುವುದಿಲ್ಲ. ಮಕ್ಕಳಿಗೆ ಅಗತ್ಯವಾಗಿ ಬೇಕಾಗಿರುವುದು ಸುರಕ್ಷಿತ ವಾತಾವರಣ. ಹುಟ್ಟಿನಿಂದಲೇ ಮನೆಯಲ್ಲಿ ಕುಟುಂಬದವರ ಜೊತೆ ಒಡನಾಡುತ್ತಾ ಬೆಳೆದಿರುವುದರಿಂದ ಅಲ್ಲಿ ಮಾತ್ರ ಅವರು ಸುರಕ್ಷಿತ ಭಾವನೆಯನ್ನು ಅನುಭವಿಸುತ್ತಾರೆ. ಹೊಸ ವಾತಾವರಣಕ್ಕೆ ಹೊಂದಿಕೊಳ್ಳಲು ಅವರಿಗೆ ಸಮಯದ ಅಗತ್ಯವಿದೆ. ಪೋಷಕರು ನಿಧಾನವಾಗಿ ಅಂತಹ ಭದ್ರತೆಯ ಭಾವವನ್ನು ತುಂಬಬೇಕಾಗುತ್ತದೆ. ಮಗನನ್ನು ಬಲವಂತವಾಗಿ ಅಂಗನವಾಡಿಯಲ್ಲಿ ಬಿಟ್ಟು ಬರಬೇಡಿ. ಒಂದೆರೆಡು ದಿನ ನಿಮ್ಮ ಜೊತೆ ಕರೆದುಕೊಂಡು ಹೋಗಿ ಅಲ್ಲಿನ ವಾತಾವರಣವನ್ನು ತೋರಿಸಿ ಮತ್ತೆ ಕರೆದುಕೊಂಡು ಬನ್ನಿ. ಅಲ್ಲಿನ ಶಿಕ್ಷಕಿಯ ಮತ್ತು ಇತರ ಮಕ್ಕಳ ಪರಿಚಯ ಮಾಡಿಸಿ. ತಮ್ಮ ಭಾವನೆ ಅನಿಸಿಕೆಗಳನ್ನು ವ್ಯಕ್ತಪಡಿಸಲು ಅಗತ್ಯವಿರುವಷ್ಟು ಅವರ ಮಿದುಳು ಬೆಳೆದಿರುವುದಿಲ್ಲ. ಹಾಗಾಗಿ ಅವರ ಭಾವನೆಗಳಿಗೆ ನೀವು ಶಬ್ದರೂಪವನ್ನು ಕೊಡಬೇಕಾಗುತ್ತದೆ. ಅವನನ್ನು ಹತ್ತಿರ ಕೂರಿಸಿಕೊಂಡು ಪ್ರೀತಿಯಿಂದ ಕೆಲವು ಪ್ರಶ್ನೆಗಳನ್ನು ಕೇಳಿ. ಶಾಲೆಯಲ್ಲಿ ಅಮ್ಮ ಇರುವುದಿಲ್ಲ ಎಂದು ನಿನಗೆ ಹೆದರಿಕೆಯಾಗುತ್ತದೆಯಾ? ಶಾಲೆಗೆ ಕಳಿಸಿ ಹೋಗಿರುವ ಅಮ್ಮ ಮತ್ತೆ ಕರೆದುಕೊಂಡು ಹೋಗಲು ಬರದಿದ್ದರೆ ಎಂದು ಭಯವೇ? ಹಸಿವಾದರೆ, ಮಲ ಮೂತ್ರಗಳು ಬಂದರೆ ಶಾಲೆಯಲ್ಲಿ ಯಾರನ್ನು ಕೇಳುವುದು ಎಂದು ಹೆದರಿಕೆಯೇ? ಅಲ್ಲಿ ಸ್ನೇಹಿತರು ಜಗಳ ಮಾಡಿದರೆ ಹೊಡೆದರೆ ಎನ್ನುವ ಭಯವೇ? ಹೀಗೆ ನಿಧಾನವಾಗಿ ಪ್ರಶ್ನೆ ಕೇಳುತ್ತಾ ಹೋದರೆ ಅವನ ಹಿಂಜರಿಕೆಯ ಕಾರಣಗಳು ಅರ್ಥವಾಗುತ್ತವೆ. ನಂತರ ಅವುಗಳಿಗೆ ಸಮಾಧಾನಗಳನ್ನು ಹೇಳಬಹುದು. ಅಮ್ಮನಿಗೆ ನೀನು ಬಹಳ ಇಷ್ಟ, ಹಾಗಾಗಿ ದಿನಾ ಸಾಯಂಕಾಲ ಕರೆದುಕೊಂಡು ಹೋಗಲು ಬಂದೇ ಬರುತ್ತೇನೆ. ಹಸಿವಾದರೆ ಮಲ ಮೂತ್ರಗಳಿಗೆ ಹೋಗಬೇಕಾದರೆ ಟೀಚರ್‌ನ್ನು ಕೇಳಬಹುದು. ಸ್ನೇಹಿತರು ನಿನಗೆ ತೊಂದರೆ ಕೊಡದಂತೆ ಟೀಚರ್ ನೋಡಿಕೊಳ್ಳುತ್ತಾರೆ. ನಿನಗೂ ಅವರು ಸ್ನೇಹಿತರಾಗುತ್ತಾರೆ. ಆಗ ಒಟ್ಟಾಗಿ ಆಟವಾಡಬಹುದು. ಹೀಗೆ ಅವರಿಗೆ ಭದ್ರತೆಯ ಭರವಸೆ ಮೂಡಿಸಬೇಕು. ಎಲ್ಲವನ್ನೂ ಒಂದೇ ದಿನ ಮಾಡಲು ಸಾಧ್ಯವಾಗದಿರಬಹುದು. ಹಂತಹಂತವಾಗಿ ಪ್ರಯತ್ನಮಾಡುತ್ತಾ ಹೋದರೆ ಹೊಸ ವಾತಾವರಣಕ್ಕೆ ಹೊಂದಿಕೊಳ್ಳುವುದನ್ನು ಮಕ್ಕಳು ಕಲಿಯುತ್ತಾ ಹೋಗುತ್ತಾರೆ.




- **ನಾನು ವಾರಕ್ಕೆರೆಡು ಬಾರಿ ಹಸ್ತಮೈಥುನ ಮಾಡುತ್ತೇನೆ. ಮಾಡಿದ ನಂತರ ಸ್ನಾನ ಮಾಡಬೇಕೆ ಅಥವಾ ಲೈಂಗಿಕ ಅಂಗಾಂಗಗಳನ್ನು ಶುಚಿಗೊಳಿಸಿಕೊಂಡರೆ ಸಾಕಾಗುತ್ತದೆಯೇ? ಸ್ನಾನ ಮಾಡುವ ಮೊದಲು ದೇವಾಲಯ ಪ್ರವೇಶಿಸಬಹುದೇ?**

**ಹೆಸರು ಊರು ತಿಳಿಸಿಲ್ಲ.**

ಲೈಂಗಿಕತೆಯ ಕುರಿತು ಸಮಾಜದಲ್ಲಿ ತುಂಬಿಕೊಂಡಿರುವ ಅಜ್ಞಾನ ಮತ್ತು ತಪ್ಪುಕಲ್ಪನೆಗಳು ನಿಮ್ಮ ಪ್ರಶ್ನೆಯಲ್ಲಿ ಕಾಣಿಸುತ್ತವೆ. ಲೈಂಗಿಕತೆ ಕೂಡ ದೇವರ ಸೃಷ್ಟಿಯೇ. ಅದು ಕೀಳಲ್ಲ ಮತ್ತು ಅಶುಚಿಯಾದ ಕೆಲಸವೂ ಅಲ್ಲ. ಹಸ್ತಮೈಥುನ ಅಥವಾ ಲೈಂಗಿಕ ಕ್ರಿಯೆಯ ನಂತರ ಸೂಕ್ಷ್ಮವಾದ ಆ ಭಾಗದ ಅಂಗಾಗಗಳ ಮೇಲೆ ತೇವಾಂಶ ಶೇಖರವಾಗಲು ಅವಕಾಶ ಕೊಟ್ಟರೆ ಬ್ಯಾಕ್ಟೀರಿಯಾ ಮತ್ತು ಫಂಗಸ್‌ಗಳು ಬೆಳೆಯುವ ಸಾಧ್ಯತೆಗಳಿರುತ್ತವೆ. ಇದರಿಂದ ತುರಿಕೆ ಅಥವಾ ಹುಣ್ಣು ಆಗುವ ಅವಕಾಶಗಳಿರುತ್ತವೆ. ಲೈಂಗಿಕ ಅಂಗಾಂಗಳನ್ನು ನೀರಿನಿಂದ (ಅಗತ್ಯವಿದ್ದರೆ ಸಾಬೂನನ್ನು ಬಳಸಿ) ತೊಳೆದರೆ ಇದನ್ನು ತಪ್ಪಿಸಬಹುದು. ಹಸ್ತಮೈಥುನ ಅಥವಾ ಲೈಂಗಿಕ ಕ್ರಿಯೆಯ ನಂತರ ದೇವಾಲಯ ಪ್ರವೇಶಿಸುವುದು ನಿಮ್ಮ ನಂಬಿಕೆಗೆ ಸೇರಿದ ವಿಚಾರ. ಸೃಷ್ಟಿಯೇ ಮೂಲವೇ ಲೈಂಗಿಕಕ್ರಿಯೆ ಆಗಿರುತ್ತದೆಯಲ್ಲವೇ? ಹಾಗಾಗಿ ದೇವರು ಲೈಂಗಿಕತೆಯನ್ನು ಖಂಡಿತಾ ದ್ವೇಷಿಸುವುದಿಲ್ಲ.

### ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು.



# ಕಣ್ಣುಗಳ ಕಾಳಜಿ

ಫ್ಯಾಷನ್

**ಅತಿ ಸೂಕ್ಷ್ಮ ಅಂಗ** ಎನಿಸಿರುವ ಕಣ್ಣುಗಳ ಹೊಳಪು ದೇಹದ ಆರೋಗ್ಯವನ್ನು ನಿರ್ಧರಿಸುತ್ತದೆ. ಹಾಗಾಗಿ ಗ್ಯಾಜೆಟ್ ಯುಗದಲ್ಲಿ ಕಣ್ಣುಗಳ ಆರೈಕೆಗೆ ಆದ್ಯತೆ ನೀಡುವುದೂ ಅಗತ್ಯ.

**ಸೂಕ್ತ ಬೆಳಕಿನ ಆಯ್ಕೆ ಇರಲಿ:** ಕಚೇರಿಯಾಗಲಿ, ಅಧ್ಯಯನ ಮಾಡುವ ಕೊಠಡಿಯಿರಲಿ ಪೂರೈಕೆಯಾಗುವ ಬೆಳಕು ಸೂಕ್ತವಾಗಿರಲಿ. ಮಬ್ಬಾದ ಬೆಳಕಿನಲ್ಲಿ ಕೆಲಸ ಮಾಡುವುದರಿಂದ ಕಣ್ಣು ತ್ರಾಸಗೊಳ್ಳುತ್ತದೆ.

**ವಿಟಮಿನ್‌ಯುಕ್ತ ಆಹಾರ ಸೇವಿಸಿ:** ವಿಟಮಿನ್ ಎ, ಸಿ ಮತ್ತು ಇ ಪೋಷಕಾಂಶಗಳು ಕಣ್ಣಿಗೆ ಸಂಬಂಧಿಸಿದ ಕಾಯಿಲೆ ಬಾರದಂತೆ ರಕ್ಷಿಸುತ್ತವೆ. ಸಿಟ್ರಸ್ ಜಾತಿಯ ಹಣ್ಣುಗಳು, ಅಂದರೆ, ನಿಂಬೆ, ಕಿತ್ತಳೆ, ಮೂಸಂಬಿ, ಕಿವಿ ಮೊದಲಾದ ಹುಳಿ ರುಚಿಯ ಹಣ್ಣುಗಳು, ಒಮೆಗಾ 3 ಕೊಬ್ಬಿನ ಆಮ್ಲಯುಕ್ತ ಮೀನು , ಹಸಿರು ತರಕಾರಿಗಳು, ಕ್ಯಾರೆಟ್, ಸಿಹಿ ಆಲೂಗಡ್ಡೆ ಕಣ್ಣಿನ ಆರೋಗ್ಯಕ್ಕೆ ಬೇಕಾದ ವಿಟಮಿನ್ ಒದಗಿಸುತ್ತದೆ.

**ಆಗಾಗ್ಗೆ ನೀರು ಕುಡಿಯಿರಿ:** ಬಾಯಾರಿಕೆ ಆಗುವವರೆಗೂ ಕಾಯದೇ ಆಗಾಗ ನೀರು ಸೇವಿಸಿ. ನಿರ್ಜಲೀಕರಣದ ಸಮಸ್ಯೆಯಾದರೆ ಕಣ್ಣಿಗೂ ತೊಂದರೆಯಾಗಬಹುದು.

**ಉತ್ತಮ ಮಸಾಜ್:** ವ್ಯಾಯಾಮದಲ್ಲಿ ಕಣ್ಣಿನ ಚಲನೆ ಬಳಸಿ ಮಾಡುವ ವ್ಯಾಯಾಮಕ್ಕೆ ಪ್ರಾಮುಖ್ಯ ನೀಡಿ. ಕಣ್ಣುಗಳನ್ನು ಮುಚ್ಚಿ ಒಂದು ನಿಮಿಷ ಅಥವಾ ಎರಡು ನಿಮಿಷಗಳ ಕಾಲ ಅವುಗಳನ್ನು ಮಸಾಜ್ ಮಾಡಿ. ವೃತ್ತಾಕಾರದ ಚಲನೆಯನ್ನು ಅನ್ವಯಿಸಿ.

**ಆ್ಯಂಟಿಗ್ಲೇರ್ ಬಳಸಿ:** ಫೋನ್, ಐಪ್ಯಾಡ್, ಕಂಪ್ಯೂಟರ್ ಹೀಗೆ ಹಲವು ಗ್ಯಾಜೆಟ್ ಬಳಕೆಯಿಂದ ಕಣ್ಣಿನ ಮೇಲೆ ಅಗಾಧ ಒತ್ತಡ ಬೀಳುತ್ತದೆ. ಮೊಬೈಲ್ ಡಿಸ್‌ಪ್ಲೇ ಅನ್ನು ದೀರ್ಘಕಾಲದವರೆಗೆ ನೋಡುವುದರಿಂದ ದೃಷ್ಟಿ ಮಸುಕಾಗುತ್ತದೆ. ಹಾಗಾಗಿ ಲ್ಯಾಪ್‌ಟಾಪ್ ಮತ್ತು ಕಂಪ್ಯೂಟರ್ ಬಳಸುವಾಗ ಆ್ಯಂಟಿಗ್ಲೇರ್ ಪರದೆಯನ್ನು ಬಳಸಿ.

**ಅತಿಯಾದ ಮೇಕಪ್ ಸಲ್ಲ:** ಐಶ್ಯಾಡೋ, ಐಲ್ಯಾಶ್‌ನಂಥ ಪ್ರಸಾಧನಗಳ ಅತಿಯಾದ ಬಳಕೆ ಸಲ್ಲದು. ಆದಷ್ಟು ನೈಸರ್ಗಿಕ ಪ್ರಸಾಧನಗಳನ್ನು ಬಳಸಿ. ಇದರಿಂದ ಕಣ್ಣಿನ ಸುತ್ತ ಇರುವ ಸೂಕ್ಷ್ಮ ಚರ್ಮಕ್ಕೆ ಹಾನಿಯಾಗುವುದು ತಪ್ಪುತ್ತದೆ.

## ಸಂಕ್ಷಿಪ್ತ ಸುದ್ದಿ

### 'ಸರ್ಕಾರಿ ಶಾಲೆಗಳ ಖಾಸಗೀಕರಣವಿಲ್ಲ'

ಮಂಡ್ಯ: 'ರಾಜ್ಯದ ಸರ್ಕಾರಿ ಶಾಲೆಗಳ ಖಾಸಗೀಕರಣ ಮಾಡುವುದಿಲ್ಲ' ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಸ್ಪಷ್ಟಪಡಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಖಾಸಗಿ ಸಹಭಾಗಿತ್ವದಲ್ಲಿ ಶಾಲೆಗಳನ್ನು ಮೇಲ್ದರ್ಜೆಗೇರಿಸಬಹುದು. ಆದರೆ, ಖಾಸಗಿಯವರಿಗೆ ಗುತ್ತಿಗೆ ಕೊಡುವ ಪ್ರಸ್ತಾವ ಇಲಾಖೆಯ ಮುಂದಿಲ್ಲ' ಎಂದರು.

'ಹೊಸ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಜಾರಿಯ ಹಿಂದೆ ಹಿಂದಿ ಭಾಷೆ ಹೇರುವ ಉದ್ದೇಶವಿದ್ದು, ಕನ್ನಡ ಭಾಷೆಗೂ ಧಕ್ಕೆಯಾಗುತ್ತದೆ. ಕನ್ನಡವನ್ನೇ ಮರೆತುಬಿಡುವ ಸ್ಥಿತಿ ಬರಬಹುದು' ಎಂದು ಆತಂಕ ವ್ಯಕ್ತಪಡಿಸಿದರು.

### ಮತ್ತೆ 10 ಸಾವಿರ ಅತಿಥಿ ಶಿಕ್ಷಕರ ನೇಮಕಕ್ಕೆ ಸಮ್ಮತಿ

ಬೆಂಗಳೂರು: ಸರ್ಕಾರಿ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ 10 ಸಾವಿರ ಹೆಚ್ಚುವರಿ ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಅನುಮತಿ ನೀಡಿದೆ.

ಮೊದಲ ಬಾರಿ ನಡೆದ ವರ್ಗಾವಣೆಯ ಪ್ರಯೋಜನವನ್ನು ರಾಜ್ಯದ ಸರ್ಕಾರಿ ಶಾಲೆಗಳ 30,629 ಶಿಕ್ಷಕರು ಪಡೆದಿದ್ದರು. ಶಿಕ್ಷಕರ ವರ್ಗಾವಣೆ ನಂತರ ತೆರವಾದ ಸ್ಥಾನಗಳಿಗೆ ಮತ್ತೆ 15 ಸಾವಿರ ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳಲು ಅನುಮತಿ ಕೋರಿ ಶಾಲಾ ಶಿಕ್ಷಣ ಇಲಾಖೆ ಆರ್ಥಿಕ ಇಲಾಖೆಗೆ ಪ್ರಸ್ತಾವ ಸಲ್ಲಿಸಿತ್ತು. 10 ಸಾವಿರ ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳಲು ಆರ್ಥಿಕ ಇಲಾಖೆ ಅನುಮತಿ ನೀಡಿದೆ.

### ಶ್ರಾವಣದಲ್ಲೇ ಪ್ರತಿಪಕ್ಷ ನಾಯಕನ ಆಯ್ಕೆ: ಯತ್ನಾಳ

ಹುಮನಾಬಾದ್ (ಬೀದರ್ ಜಿಲ್ಲೆ): 'ಶ್ರಾವಣ ಮಾಸ ಮುಗಿಯುವುದರೊಳಗೆ ವಿಧಾನಸಭೆ ವಿರೋಧ ಪಕ್ಷದ ನಾಯಕನ ಆಯ್ಕೆ ನಡೆಯಲಿದೆ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

'ನಾನು ವಿರೋಧ ಪಕ್ಷದ ನಾಯಕನಾಗಲು ಬಿ.ಎಸ್. ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಸೇರಿ ಯಾರೂ ವಿರೋಧ ಮಾಡಿಲ್ಲ. ಪಕ್ಷ ಜವಾಬ್ದಾರಿ ವಹಿಸಿದರೆ ನಿಭಾಯಿಸುತ್ತೇನೆ' ಎಂದು ಸುದ್ದಿಗಾರರಿಗೆ ಹೇಳಿದರು.

'ಬಿಜೆಪಿಯಲ್ಲಿ ವಲಸಿಗ ಹಾಗೂ ಮೂಲ ಎಂಬುದಿಲ್ಲ. ನಾವೆಲ್ಲರೂ ಬಿಜೆಪಿಗೆ ಸೇರಿದವರು' ಎಂದರು.

**ಡಿಕೆಶಿ ಸೂಪರ್ ಸಿ.ಎಂ (ವಿಜಯಪುರ ವರದಿ):** 'ಈ ಸರ್ಕಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರದ್ದು ಏನೂ ನಡೆಯುತ್ತಿಲ್ಲ. ಈ ಬಗ್ಗೆ ಅವರಿಗೆ ಬಹಳ ನೋವಿದೆ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೂಪರ್ ಸಿ.ಎಂ ಆಗಿದ್ದಾರೆ' ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಟೀಕಿಸಿದರು.

ಕಂದಾಯ ಇಲಾಖೆ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧಿಕಾರಿಗಳಿಗೆ ಕೃಷ್ಣ ಬೈರೇಗೌಡ ಸೂಚನೆ

# ವ್ಯಾಜ್ಯ ಇತ್ಯರ್ಥಕ್ಕೆ 4 ತಿಂಗಳ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಹಶೀಲ್ದಾರ್, ಉಪವಿಭಾಗಾಧಿಕಾರಿಗಳು ಮತ್ತು ಜಿಲ್ಲಾಧಿಕಾರಿ ಮಟ್ಟದ ನ್ಯಾಯಾಲಯಗಳಲ್ಲಿ 6 ತಿಂಗಳಿಂದ 5 ವರ್ಷಗಳವರೆಗಿನ ನೂರಾರು ತಕರಾರು ಪ್ರಕರಣಗಳು ಬಾಕಿ ಉಳಿದಿದ್ದು, ಈ ಎಲ್ಲ ಪ್ರಕರಣಗಳನ್ನು ನಾಲ್ಕು ತಿಂಗಳ ಕಾಲಮಿತಿಯಲ್ಲಿ ಇತ್ಯರ್ಥಪಡಿಸಬೇಕು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅಧಿಕಾರಿಗಳಿಗೆ ಗಡುವು ನೀಡಿದ್ದಾರೆ.

ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ ಕಂದಾಯ ಇಲಾಖೆ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿ, ಐದು ವರ್ಷಗಳಿಂದ ಬಾಕಿ ಉಳಿದಿರುವ ಎಲ್ಲ ಪ್ರಕರಣಗಳನ್ನು ಇತ್ಯರ್ಥಗೊಳಿಸಬೇಕು ಎಂದರು.


ಬೆಂಗಳೂರು ಪ್ರಾದೇಶಿಕ ವಿಭಾಗದ ತಹಶೀಲ್ದಾರ್ ನ್ಯಾಯಾಲಯಗಳಲ್ಲಿ 6 ತಿಂಗಳಿಂದ 5 ವರ್ಷಗಳವರೆಗಿನ 6,859 ಪ್ರಕರಣಗಳ ಬಾಕಿ ಉಳಿದಿವೆ. ಇದರಿಂದ ಸಾರ್ವಜನಿಕರು ಪ್ರತಿ ನಿತ್ಯ ತಹಶೀಲ್ದಾರ್ ಕಚೇರಿಗೆ ಅಲೆಯುವಂತಾಗಿದೆ. ತಹಶೀಲ್ದಾರ್ ಕಚೇರಿಯಲ್ಲಿ ಬಾಕಿ ಉಳಿದಿರುವ 4,000 ಪ್ರಕರಣಗಳನ್ನು ಮುಂದಿನ 4 ತಿಂಗಳ ಒಳಗಾಗಿ ಇತ್ಯರ್ಥಗೊಳಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಉಪವಿಭಾಗಾಧಿಕಾರಿಗಳ ನ್ಯಾಯಾಲಯಗಳ ಪೈಕಿ ದೊಡ್ಡಬಳ್ಳಾಪುರ 5,683, ಬೆಂಗಳೂರು ದಕ್ಷಿಣ 6129, ಬೆಂಗಳೂರು ಉತ್ತರ 6035, ಚಿಕ್ಕಬಳ್ಳಾಪುರ 3014, ಚಿತ್ರದುರ್ಗ 1374, ದಾವಣಗೆರೆ 152, ಹೊನ್ನಾಳಿ 456, ಕೋಲಾರ 5112, ರಾಮನಗರ 4210, ಶಿವಮೊಗ್ಗ 613,ಸಾಗರ 411, ತುಮಕೂರು 7354,ಮಧುಗಿರಿ 3167 ಮತ್ತು ತಿಪಟೂರಿನ 742 ಪ್ರಕರಣಗಳೂ ಸೇರಿ ಒಟ್ಟು 45,482 ಪ್ರಕರಣಗಳು ಬಾಕಿ ಇವೆ. ಜಿಲ್ಲಾಧಿಕಾರಿ ನ್ಯಾಯಾಲಯಗಳ ಪೈಕಿ ಬೆಂಗಳೂರು ಗ್ರಾಮಾಂತರ 1384, ಬೆಂಗಳೂರು ನಗರ 4974, ಚಿಕ್ಕಬಳ್ಳಾಪುರ 429, ಚಿತ್ರದುರ್ಗ 1711, ದಾವಣಗೆರೆ 81, ಕೋಲಾರ 102, ರಾಮನಗರ 501, ಶಿವಮೊಗ್ಗ 73, ತುಮಕೂರಿನ 697 ಸೇರಿ ಒಟ್ಟು 10,065 ಪ್ರಕರಣಗಳು ಬಾಕಿ ಇವೆ ಎಂದರು.

**ಪೈಕಿ ಪಹಣಿ ಪರಿಹಾರಕ್ಕೆ ಸೂಚನೆ:** ಸರ್ವೇ ಇಲಾಖೆಯ ಪ್ರಗತಿ ಪರಿಶೀಲನೆ ನಡೆಸಿದ ಸಚಿವರು, ಬೆಂಗಳೂರು ಪ್ರಾದೇಶಿಕ ವಿಭಾಗದಲ್ಲಿ 7,271 ಪೈಕಿ ಪಹಣಿಗಳು ಬಾಕಿ ಇರುವುದನ್ನು ಪ್ರಸ್ತಾಪಿಸಿದರು. ಮುಂದಿನ ನಾಲ್ಕು ತಿಂಗಳಲ್ಲಿ ಎಲ್ಲ ಪೈಕಿ ಪಹಣಿಗಳನ್ನು ಪರಿಹರಿಸಲು ಸೂಚನೆ ನೀಡಿದರು.

### ಒತ್ತುವರಿ ತಡೆಗೆ ಬೀಟ್ ವ್ಯವಸ್ಥೆ

'ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆ ಸೇರಿ ಹಲವು ಜಿಲ್ಲೆಗಳಲ್ಲಿ ಸರ್ಕಾರಿ ಜಮೀನು ಒತ್ತುವರಿ ನಡೆಯುತ್ತಿದೆ. ಇದನ್ನು ಸಹಿಸಲು ಸಾಧ್ಯವಿಲ್ಲ' ಎಂದು ಕೃಷ್ಣ ಬೈರೇಗೌಡ ಅಸಮಾಧಾನ ಹೇಳಿದರು.


ಕೃಷ್ಣ ಬೈರೇಗೌಡ

'ವಿಶೇಷ ಅಭಿಯಾನ ಕೈಗೊಂಡು ಎಲ್ಲಾ ಸರ್ಕಾರಿ ಜಮೀನುಗಳನ್ನು ಭೂಮಿ ತಂತ್ರಾಂಶದಲ್ಲಿ ಕಡ್ಡಾಯವಾಗಿ ಅಳವಡಿಸುವ ಕೆಲಸ ತಕ್ಷಣವೇ ಆಗಬೇಕು. ಆಯಾ ಭಾಗದ ಗ್ರಾಮ ಆಡಳಿತ ಅಧಿಕಾರಿ ಪ್ರತಿ ಮೂರು ತಿಂಗಳಿಗೊಮ್ಮೆ ಸರ್ಕಾರಿ ಜಮೀನಿಗೆ ಭೇಟಿ ನೀಡಿ ಒತ್ತುವರಿ ಆಗಿಲ್ಲ ಎಂಬುದನ್ನು ಖಚಿತಪಡಿಸಬೇಕು. ಇಂತಹ ಬೀಟ್ ವ್ಯವಸ್ಥೆಯನ್ನು ಎಲ್ಲ ವಿಭಾಗದಲ್ಲೂ ಅಧಿಕಾರಿಗಳು ಪಾಲಿಸಬೇಕು' ಎಂದೂ ಕೃಷ್ಣ ಬೈರೇಗೌಡ ಸೂಚಿಸಿದರು.

# ಶೀಘ್ರ 'ಆವರ್ತ ಆರ್ಥಿಕ ನೀತಿ' ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲೆಕ್ಟ್ರಾನಿಕ್ ತ್ಯಾಜ್ಯ ಕಡಿಮೆಗೊಳಿಸಲು, ತ್ಯಾಜ್ಯದ ಮರುಬಳಕೆ ಮಾಡಲು, ಮರು ಉತ್ಪಾದನೆಗೆ ಆದ್ಯತೆ ನೀಡಲು 'ಆವರ್ತ ಆರ್ಥಿಕ ನೀತಿ' ಜಾರಿಗೆ ರಾಜ್ಯ ಸರ್ಕಾರ ಚಿಂತನೆ ನಡೆಸಿದೆ.

ಸರ್ಕಾರಿ ಮತ್ತು ಖಾಸಗಿ ವಲಯಗಳಲ್ಲಿ ಉತ್ಪಾದನೆಯಾಗುವ 'ಇ-ತ್ಯಾಜ್ಯ'ದ ಮರು ಬಳಕೆಗೆ ಬೇಕಾದ ಸುಸ್ಥಿರ ವ್ಯವಸ್ಥೆ ರೂಪಿಸುವುದನ್ನು ಈ ನೀತಿ ಒಳಗೊಂಡಿರಲಿದೆ.

'ಆವರ್ತ ಆರ್ಥಿಕ ನೀತಿಯನ್ನು ನಾವು ಸರಿಯಾಗಿ ಅನುಷ್ಠಾನಕ್ಕೆ ತಂದರೆ 2030ರ ವೇಳೆಗೆ ಭಾರತದ ಆವರ್ತ ಆರ್ಥಿಕತೆಯು ₹ 21,800 ಕೋಟಿಯಾಗಲಿದೆ' ಎಂದು ಹೊಸ ನೀತಿಯನ್ನು ಸಿದ್ಧಪಡಿಸುತ್ತಿರುವ ಐಟಿ, ಬಿಟಿ ಇಲಾಖೆಯ ಸಚಿವ ಪ್ರಿಯಾಂಕ್ ಖರ್ಗೆ 'ಪ್ರಜಾವಾಣಿ'ಗೆ ತಿಳಿಸಿದರು.

ಉತ್ಪಾದನೆ ಮತ್ತು ಬಳಕೆ ಮಾದರಿಯನ್ನು ಈ ನೀತಿ ಒಳಗೊಂಡಿದ್ದು, ಉತ್ಪನ್ನಗಳ ಬಾಳಿಕೆಯ ಅವಧಿಯನ್ನು ವಿಸ್ತರಿಸುವುದೇ ಇದರ ಪ್ರಮುಖ ಉದ್ದೇಶವಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು 27 ಜಿಲ್ಲೆಗಳಲ್ಲಿ ತಲಾ ₹ 2 ಕೋಟಿ ವೆಚ್ಚದಲ್ಲಿ ತ್ಯಾಜ್ಯ ಸಂಗ್ರಹ ಸೌಲಭ್ಯ ಕೇಂದ್ರಗಳನ್ನು ಸ್ಥಾಪಿಸಲಿದೆ. ಈ ಸೌಲಭ್ಯವು ತ್ಯಾಜ್ಯ ವಿಲೇವಾರಿಯಲ್ಲಿ ನಿರಂತರತೆ ಮತ್ತು ವೈಜ್ಞಾನಿಕ ನಿರ್ವಹಣೆಯನ್ನು ಕಾಯ್ದುಕೊಳ್ಳಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಳೆದ ತಿಂಗಳು ಮಂಡಿಸಿದ 2023-24ರ ಬಜೆಟ್‌ನಲ್ಲಿಯೇ ಘೋಷಿಸಿದ್ದರು. ಈ ಕಾರ್ಯವು ಆವರ್ತ ಆರ್ಥಿಕತೆಯ ಉಪಯೋಗವನ್ನು ತೋರಿಸುವ ಮೊದಲ ಹೆಜ್ಜೆಯಾಗಲಿದೆ ಎಂದು ಪ್ರಿಯಾಂಕ್ ಖರ್ಗೆ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

### ಹೊಸ ನೀತಿಗೆ ಜನರ ಬೆಂಬಲ

ರಾಜ್ಯಕ್ಕೆ ಆವರ್ತ ಆರ್ಥಿಕ ನೀತಿ ಅಗತ್ಯವಿದೆಯೇ ಎಂದು ಎಕ್ಸ್ (ಆಗ ಟ್ವಿಟರ್) ಮೂಲಕ ನಾಗರಿಕರ ಅಭಿಪ್ರಾಯವನ್ನು ಸಚಿವ ಖರ್ಗೆ ಕೇಳಿದ್ದರು. ಈ ಸಮೀಕ್ಷೆಯಲ್ಲಿ 2,876 ಪಾಲ್ಗೊಂಡಿದ್ದು, ಶೇ 84ರಷ್ಟು ಮಂದಿ ಅಗತ್ಯವಿದೆ ಎಂದು ಪ್ರತಿಕ್ರಿಯಿಸಿದ್ದರು.

ಸರ್ಕಾರವು ಅತಿದೊಡ್ಡ ಎಂಜಿನಿಯರಿಂಗ್ ವಿಭಾಗವನ್ನು ಹೊಂದಿದೆ. ಪ್ಲಾಸ್ಟಿಕ್ ತ್ಯಾಜ್ಯವನ್ನು ಬಳಸಿ ರಸ್ತೆಗಳನ್ನು ನಿರ್ಮಿಸಬಹುದು. ಅದೇ ರೀತಿ ಹೊಸ ಯಂತ್ರ ಖರೀದಿಯ ಬದಲು ನವೀಕರಿಸಿದ 'ಸೆಕೆಂಡ್ ಹ್ಯಾಂಡ್' ಯಂತ್ರಗಳನ್ನು ಕೂಡ ಬಳಸಬಹುದು ಎಂಬುದು ಪ್ರಿಯಾಂಕ್ ಅವರ ಆಶಯವಾಗಿದೆ.

ಸ್ಟಾರ್ಟ್‌ಅಪ್ ನೀತಿ, ಕರ್ನಾಟಕ ರಾಜ್ಯ ನಗರ ಘನ ತ್ಯಾಜ್ಯ ನಿರ್ವಹಣಾ ನೀತಿ, ಕರ್ನಾಟಕ ನೋಂದಾಯಿತ ವಾಹನ ಸ್ಕ್ರ್ಯಾಪಿಂಗ್ ನೀತಿ ಮತ್ತು ಇ-ತ್ಯಾಜ್ಯ (ನಿರ್ವಹಣೆ) ನಿಯಮ ಸೇರಿದಂತೆ ಈಗಾಗಲೇ ಆವರ್ತ ಆರ್ಥಿಕತೆಯ ಆಶಯವನ್ನು ಪ್ರತಿಪಾದಿಸುವ ನೀತಿಗಳನ್ನು ಕರ್ನಾಟಕವು ಹೊಂದಿದೆ. ವಿವಿಧ ಇಲಾಖೆಗಳ ಒಳಗೊಳ್ಳುವಿಕೆ ಈ ನೀತಿಗೆ ಅಗತ್ಯವಾಗಿದೆ. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯರ ಜತೆಗೆ ಚರ್ಚಿಸಲಾಗುವುದು ಎಂದು ಪ್ರಿಯಾಂಕ್ ಮಾಹಿತಿ ನೀಡಿದರು.

### 'ಸಂದರ್ಶನ'ಕ್ಕೆ ಕೆಪಿಎಸ್‌ಸಿ ಪಟ್ಟು

ಒಂದನೇ ಪುಟದಿಂದ...

ನೇಮಕಾತಿಯಲ್ಲಿ ಮೀಸಲಾತಿ ವರ್ಗೀಕರಣಕ್ಕೆ ಸಂಬಂಧಪಟ್ಟಂತೆ ಕೆಪಿಎಸ್‌ಸಿಗೆ ಸ್ಪಷ್ಟನೆ ನೀಡಿರುವ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜೂನ್ 19ರಂದು ಹೊರಡಿಸಿರುವ ಅನಧಿಕೃತ ಟಿಪ್ಪಣಿಯನ್ನು ಉಲ್ಲೇಸಿ, 'ಮುಸ್ಲಿಮರಿಗೆ 'ಪ್ರವರ್ಗ 2ಬಿ' ಅಡಿ ನೀಡಿದ್ದ ಮೀಸಲಾತಿ ರದ್ದುಪಡಿಸಿರುವ ಪ್ರಕರಣ ಕೋರ್ಟ್‌ನಲ್ಲಿ ಇತ್ಯರ್ಥವಾಗುವವರೆಗೆ 2002 ಮಾರ್ಚ್ 30ರ ಆದೇಶದಲ್ಲಿರುವ ಮೀಸಲಾತಿ ವಿಧಾನವೇ ಅನ್ವಯವಾಗಲಿದೆ' ಎಂದು ಹೇಳಿದೆ. ಹೀಗಾಗಿ, ಹಳೆ ಮೀಸಲಾತಿ ವಿಧಾನದಲ್ಲಿಯೇ ನೇಮಕಾತಿ ಅಧಿಸೂಚನೆ ಹೊರಡಿಸಲು ಕೆಪಿಎಸ್‌ಸಿ ಮುಂದಾಗಿದೆ.

ಈ ಹುದ್ದೆಗಳಿಗೆ ಸಂದರ್ಶನ ಅಗತ್ಯವಿದೆ ಎಂದು ಇಲಾಖೆ ಕಾರ್ಯದರ್ಶಿಗೆ ಕೆಪಿಎಸ್‌ಸಿ ಕಾರ್ಯದರ್ಶಿ ಪತ್ರ ಬರೆದಿದ್ದಾರೆ.

# ವಾಂತಿ–ಭೇದಿ: 13 ಜನ ಅಸ್ವಸ್ಥ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಕಲುಷಿತ ನೀರು ಸೇವನೆಯಿಂದ ಆರು ಜನ ಸಾವಿಗೀಡಾಗಿ, ನೂರಾರು ಜನ ಅಸ್ವಸ್ಥರಾಗಿದ್ದ ಇಲ್ಲಿನ ಕವಾಡಿಗರಹಟ್ಟಿ ಸಮೀಪದ ಆಶ್ರಯ ಬಡಾವಣೆಯಲ್ಲಿ ಶುಕ್ರವಾರ ವಾಂತಿ-ಬೇಧಿ ಪ್ರಕರಣಗಳು ವರದಿಯಾಗಿವೆ.

ಅಸ್ವಸ್ಥಗೊಂಡಿರುವ 13 ಜನರ ಪೈಕಿ 10 ಜನರು ಜಿಲ್ಲಾ ಆಸ್ಪತ್ರೆಯಲ್ಲಿ ಹೊರ ರೋಗಿಗಳಾಗಿ ಚಿಕಿತ್ಸೆ ಪಡೆದಿದ್ದಾರೆ. ತೀವ್ರವಾಗಿ ಅಸ್ವಸ್ಥರಾಗಿರುವ ಮೂವರು ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ. ಆಶ್ರಯ ಬಡಾವಣೆಯಲ್ಲಿ ತಾತ್ಕಾಲಿಕ ಚಿಕಿತ್ಸಾ ಕೇಂದ್ರ ತೆರೆಯಲಾಗಿದೆ. ಕಲುಷಿತ ನೀರಿನಿಂದ ವಾಂತಿ- ಭೇದಿ ಕಾಣಿಸಿಕೊಂಡಿರುವ ಅನುಮಾನ ವ್ಯಕ್ತವಾಗಿದ್ದು, ನೀರಿನ ಮಾದರಿಗಳನ್ನು ಸಂಗ್ರಹಿಸಿ ಪ್ರಯೋಗಾಲಯಕ್ಕೆ ರವಾನಿಸಲಾಗಿದೆ.

'ಬಡಾವಣೆಯ ನಿವಾಸಿಗಳಲ್ಲಿ ಎರಡು ದಿನಗಳಿಂದ ವಾಂತಿ-ಭೇದಿ ಕಾಣಿಸಿಕೊಂಡಿದೆ. ಮಾಹಿತಿ ಲಭ್ಯವಾದ ತಕ್ಷಣ ಸ್ಥಳಕ್ಕೆ ತೆರಳಿ ಆರೋಗ್ಯ ತಪಾಸಣೆ ಮಾಡಲಾಗಿದೆ. ಚಿಕಿತ್ಸಾ ಕೇಂದ್ರ ತೆರೆಯಲಾಗಿದ್ದು, ವೈದ್ಯಕೀಯ ಸಿಬ್ಬಂದಿ ನಿಗಾ ವಹಿಸಿದ್ದಾರೆ. ವಾಂತಿ-ಭೇದಿಗೆ ಕಾರಣ ಪತ್ತೆ ಮಾಡಲಾಗುತ್ತಿದೆ' ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಆರ್. ರಂಗನಾಥ್ ಮಾಹಿತಿ ನೀಡಿದ್ದಾರೆ.

**ಇಬ್ಬರ ಸಾವು:** ಆಶ್ರಯ ಬಡಾವಣೆಯ ಫಕ್ರುದ್ದೀನ್ (76) ಎಂಬುವರು ಗುರುವಾರ ಮೃತಪಟ್ಟಿದ್ದು, ವಾಂತಿ-ಭೇದಿಯೇ ಕಾರಣ ಎಂದು ಸ್ಥಳೀಯರು ಆರೋಪಿಸುತ್ತಿದ್ದಾರೆ.

ಆಗಸ್ಟ್ 7ರಂದು ಅಸ್ವಸ್ಥಗೊಂಡು ಆಸ್ಪತ್ರೆಗೆ ದಾಖಲಾಗಿದ್ದ ಕವಾಡಿಗರಹಟ್ಟಿಯ ಶಿವಮ್ಮ (72) ಶುಕ್ರವಾರ ಮೃತಪಟ್ಟಿದ್ದಾರೆ. ಈ ಇಬ್ಬರ ಸಾವಿಗೆ ವಾಂತಿ-ಭೇದಿ ಕಾರಣವಲ್ಲ ಎಂಬುದಾಗಿ ಆರೋಗ್ಯ ಇಲಾಖೆ ಹೇಳುತ್ತಿದೆ.

'ವಾಂತಿ-ಭೇದಿ ಸಮಸ್ಯೆಯಿಂದ ಜಿಲ್ಲಾ ಆಸ್ಪತ್ರೆಗೆ ದಾಖಲಾಗಿದ್ದ ಫಕ್ರುದ್ದೀನ್ ಅವರಿಗೆ 25 ವರ್ಷಗಳಿಂದ ಕಣ್ಣು ಕಾಣುತ್ತಿರಲಿಲ್ಲ. ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಅವರಿಗೆ ರಕ್ತದೊತ್ತಡ ಹೆಚ್ಚಾಗಿತ್ತು. ವಾಂತಿ-ಭೇದಿಯಿಂದ ಗುಣಮುಖರಾಗಿದ್ದ ಶಿವಮ್ಮ ಪಾರ್ಶ್ವವಾಯು ಸಮಸ್ಯೆಯಿಂದ ಮೃತಪಟ್ಟಿದ್ದಾರೆ' ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ರಂಗನಾಥ್ ಸ್ಪಷ್ಟಪಡಿಸಿದ್ದಾರೆ.

### 'ಪಕ್ಷಕ್ಕೆ ಬಂದರೆ ಸ್ವಾಗತ'

ಬೆಳಗಾವಿ: 'ಯಾರಾದರೂ ಕಾಂಗ್ರೆಸ್ ಪಕ್ಷಕ್ಕೆ ಬರಲು ಇಚ್ಛಿಸಿದರೆ ಬೇಡ ಎನ್ನಲ್ಲ. ಆಪರೇಷನ್ ಹಸ್ತ ಮಾಡುತ್ತಿಲ್ಲ. ಬೇರೆ ಪಕ್ಷಗಳ ಶಾಸಕರು ಬಂದರೆ, ಬೇಡ ಎನ್ನಲ್ಲ' ಎಂದು ಗೃಹಸಚಿವ ಡಾ.ಜಿ. ಪರಮೇಶ್ವರ ಹೇಳಿದರು.

# ಬಿರುಗಾಳಿ ತಡೆಗೆ ಬಿಜೆಪಿ ಯತ್ನ

ಒಂದನೇ ಪುಟದಿಂದ

ಯಡಿಯೂರಪ್ಪ ಮನೆಯಲ್ಲಿ ನಡೆದ ಸಭೆಯಲ್ಲಿ ಪಾಲ್ಗೊಂಡ ಬಳಿಕ ಮಾತನಾಡಿದ ಗೋಪಾಲಯ್ಯ, ತಾವು ಕಾಂಗ್ರೆಸ್ ಸೇರುವುದಿಲ್ಲ. ಈ ಕುರಿತು ಸುಳ್ಳು ಸುದ್ದಿ ಹಬ್ಬಿಸಲಾಗುತ್ತಿದೆ. ಇದನ್ನು ನಂಬಬಾರದು ಎಂದು ಮನವಿ ಮಾಡಿದರು.

ಮುನಿರತ್ನ ಮಾತನಾಡಿ,' ಬೈರತಿ ಬಸವರಾಜು ಅವರೂ ನನಗೆ ದೂರವಾಣಿ ಕರೆ ಮಾಡಿ ಕಾಂಗ್ರೆಸ್ ಸೇರುವುದಿಲ್ಲ. ಇದನ್ನು ಮಾಧ್ಯಮಗಳಿಗೆ ಹೇಳುವಂತೆಯೂ ಮನವಿ ಮಾಡಿದ್ದರು. ಕಾಂಗ್ರೆಸ್‌ನಿಂದ ಬಂದಿರುವ ನಾವು ಮತ್ತೆ ಆ ಪಕ್ಷ ಸೇರುವ ಪ್ರಶ್ನೆಯೇ ಇಲ್ಲ' ಎಂದರು.

**ಸೋಮಶೇಖರ್ ವರಸೆ ಏನು?:** ಎಸ್.ಟಿ.ಸೋಮಶೇಖರ್ ಅವರು ಗುರುವಾರ ಸುದ್ದಿಗೋಷ್ಠಿ ನಡೆಸಿ, 'ಬಿಜೆಪಿಯ ಸ್ಥಳೀಯ ಕಾರ್ಯಕರ್ತರು ಚುನಾವಣೆ ಸಂದರ್ಭದಲ್ಲಿ ನನಗೆ ತೊಂದರೆ ನೀಡಿದ್ದರು. ನನ್ನನ್ನು ಸೋಲಿಸಲು ಪ್ರಯತ್ನಿಸಿದ್ದರು. ನಾನು ಹೋಗುವುದಿಲ್ಲ ಎಂದರೂ ಬಿಜೆಪಿಯವರೇ ನನ್ನನ್ನು ಪಕ್ಷದಿಂದ ಕಳುಹಿಸಲು ಸಿದ್ಧರಾಗಿದ್ದಾರೆ' ಎಂದು ಹೇಳಿಕೆ ನೀಡಿದ್ದರು. ಇದರ ಬೆನ್ನಲ್ಲಿ ಗುರುವಾರ ರಾತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿ, ಕ್ಷೇತ್ರದಲ್ಲಿ ಬಿಜೆಪಿ ಕಾರ್ಯಕರ್ತರ ಬಗ್ಗೆ ದೂರು ನೀಡಿದರು ಎಂದು ಮೂಲಗಳು ತಿಳಿಸಿವೆ.

**ಆಪರೇಷನ್ ಹಸ್ತ:** ಲೋಕಸಭಾ ಚುನಾವಣೆಗೆ ತಯಾರಿ ನಡೆಸುತ್ತಿರುವ ಕಾಂಗ್ರೆಸ್ ಅದಕ್ಕೆ ಪೂರಕವಾಗಿ ಬಿಜೆಪಿ ಮತ್ತು ಜೆಡಿಎಸ್‌ನಿಂದ ಕೆಲವು ಶಾಸಕರನ್ನು ಸೆಳೆದು ಹೆಚ್ಚು ಸ್ಥಾನಗಳನ್ನು ಗೆಲ್ಲಲು ತಂತ್ರ ರೂಪಿಸುತ್ತಿದೆ. ಕೆಲವು ಶಾಸಕರನ್ನು ಸಂಪರ್ಕಿಸಿದೆ ಎಂದು ಹೇಳಲಾಗಿದೆ.

ಕಳೆದ ಲೋಕಸಭಾ ಚುನಾವಣೆಗೂ ಮುನ್ನ ಬಿಜೆಪಿ ಸೇರಿ ಬಳಿಕ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿ ನೇಮಕಗೊಂಡ ಜಯಪ್ರಕಾಶ್ ಹೆಗ್ಡೆ ಕೂಡ ಕಾಂಗ್ರೆಸ್ ನಾಯಕರ ಸಂಪರ್ಕದಲ್ಲಿದ್ದು, ಉಡುಪಿ-ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದಿಂದ ಲೋಕಸಭೆಗೆ ಸ್ಪರ್ಧಿಸಲಿದ್ದಾರೆ ಎಂದು ಹೇಳಲಾಗುತ್ತಿದೆ.

**10-15 ಶಾಸಕರು ಬರ್ತಾರೆ:** '10 ರಿಂದ 15 ಮಾಜಿ ಹಾಗೂ ಹಾಲಿ ಶಾಸಕರು ಕಾಂಗ್ರೆಸ್ ಸೇರಲು ಸಿದ್ಧರಿದ್ದು, ಈ ಕುರಿತು ಮಾತುಕತೆ ನಡೆಯುತ್ತಿದೆ. ಕೆಲವೇ ದಿನಗಳಲ್ಲಿ ಎಲ್ಲವೂ ಅಂತಿಮವಾಗಲಿದೆ. ಯಾರೆಲ್ಲ ಬರಲಿದ್ದಾರೆ ಎಂಬುದನ್ನು ಹೇಳಲು ಸಾಧ್ಯವಿಲ್ಲ. ಬಿಜೆಪಿ ಹಾಗೂ ಜೆಡಿಎಸ್‌ನಿಂದ ಬರುವುದು ಖಚಿತ' ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಮೈಸೂರಿನಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ರಾಯಚೂರಿನಲ್ಲಿ ಮಾತನಾಡಿರುವ ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸರಾಜು, ಕಲ್ಯಾಣ ಕರ್ನಾಟಕ ವ್ಯಾಪ್ತಿಯಲ್ಲಿ ಬೇರೆ ಪಕ್ಷಗಳ ಹಾಲಿ, ಮಾಜಿ ಶಾಸಕರು ಹಾಗೂ ಮುಂಬೈ ಕರ್ನಾಟಕದ ಪ್ರಮುಖ ನಾಯಕರು ಕಾಂಗ್ರೆಸ್ ಪಕ್ಷ ಸೇರ್ಪಡೆಯಾಗಲಿದ್ದಾರೆ ಎಂದಿದ್ದಾರೆ.

### ಸೋಲಿಸಲು ಯತ್ನಿಸಿದ್ದರು: ಹೆಬ್ಬಾರ್

ಯಲ್ಲಾಪುರ (ಉತ್ತರ ಕನ್ನಡ ಜಿಲ್ಲೆ): 'ವಿಧಾನಸಭೆ ಚುನಾವಣೆ ವೇಳೆ ನನ್ನನ್ನು ಸೋಲಿಸಲು ಸ್ವಪಕ್ಷದ ಕೆಲ ಸ್ಥಳೀಯ ಮುಖಂಡರು ಪ್ರಯತ್ನಿಸಿದ್ದರು. ಅವರ ವಿರುದ್ಧ ಶಿಸ್ತುಕ್ರಮಕ್ಕೆ ಪಕ್ಷದ ಹಿರಿಯ ನಾಯಕರಿಗೆ ಪತ್ರ ಬರೆದಿರುವೆ. ಲೋಕಸಭೆ ಚುನಾವಣೆಗೆ ಇಂತಹ ತಪ್ಪು ಮರುಕಳಿಸಬಾರದೆಂದರೆ, ತಪ್ಪಿತಸ್ಥರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು. ಪಕ್ಷದ ನಿರ್ಣಯಕ್ಕೆ ಕಾಯುತ್ತಿರುವೆ' ಎಂದು ಶಾಸಕ ಶಿವರಾಂ ಹೆಬ್ಬಾರ್ ಹೇಳಿದರು.

### ಬಿಜೆಪಿ ಬಿಡುವುದಿಲ್ಲ: ಗೋಪಾಲಯ್ಯ

ಬೆಂಗಳೂರು: 'ಬಿಜೆಪಿ ಸಿದ್ಧಾಂತ, ನಾಯಕರನ್ನು ನಂಬಿಯೇ ಪಕ್ಷ ಸೇರ್ಪಡೆಯಾಗಿದ್ದೇನೆ. ಯಾವುದೇ ಕಾರಣಕ್ಕೂ ಬಿಜೆಪಿ ಬಿಟ್ಟು ಕಾಂಗ್ರೆಸ್ ಸೇರುವ ಪ್ರಮೇಯವೇ ಇಲ್ಲ. ಈಗ ಕೇಳಿ ಬರುತ್ತಿರುವ ಸುದ್ದಿಗಳು ಕೇವಲ ವದಂತಿ' ಎಂದು ಶಾಸಕ ಕೆ.ಗೋಪಾಲಯ್ಯ ಹೇಳಿದ್ದಾರೆ.

## ಸುದ್ದಿ 2 ನಿಮಿಷ

### ಕಾಡಾನೆ ದಾಳಿ: ಮಹಿಳೆ ಸಾವು

ಸಕಲೇಶಪುರ (ಹಾಸನ): ತಾಲ್ಲೂಕಿನ ವಡೂರು ಗ್ರಾಮದಲ್ಲಿ ಶುಕ್ರವಾರ ಬೆಳಿಗ್ಗೆ ಕಾಡಾನೆ ದಾಳಿಯಿಂದ ಕವಿತಾ (37) ಎಂಬ ಮಹಿಳೆ ಮೃತಪಟ್ಟಿದ್ದಾರೆ.

ಬೇಲೂರು ತಾಲ್ಲೂಕಿನ ನಾರ್ವೆ ಗ್ರಾಮದ ಕಾರ್ಮಿಕ ಮಹಿಳೆ ಕವಿತಾ, ಕೆಲ ತಿಂಗಳ ಹಿಂದೆ ಪತಿಯನ್ನು ಕಳೆದುಕೊಂಡಿದ್ದರು. ವಡೂರಿನ ತಾಯಿ ಮನೆಗೆ ಗುರುವಾರ ಬಂದಿದ್ದ ಅವರು ಶುಕ್ರವಾರ ಬೆಳಿಗ್ಗೆ ಮನೆಯ ಮುಂಭಾಗದ ತೋಟಕ್ಕೆ ಹೋಗುವಾಗ ದಾಳಿ ಮಾಡಿದ ಆನೆಯು ಸೊಂಡಿಲಿಂದ ಎತ್ತಿ ಹಾಕಿತು.

ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಅವರನ್ನು ಗ್ರಾಮಸ್ಥರು ಕೂಡಲೇ ಇಲ್ಲಿನ ಕ್ರಾಫರ್ಡ್ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದರು. ತುರ್ತು ಚಿಕಿತ್ಸೆ ನೀಡಿ ಹಾಸನದ ಜಿಲ್ಲಾಸ್ಪತ್ರೆಗೆ ಕಳುಹಿಸಲಾಗಿತ್ತು.

**ಪ್ರತಿಭಟನಾಕಾರರ ಬಂಧನ:** ಮರಣೋತ್ತರ ಪರೀಕ್ಷೆ ನಂತರ ಮೃತದೇಹವನ್ನು ಆಂಬುಲೆನ್ಸ್‌ನಲ್ಲಿ ಸಾಗಿಸುವ ಸಂದರ್ಭದಲ್ಲಿ ಪ್ರತಿಭಟನೆ ನಡೆಸಲು ಮುಂದಾಗಿದ್ದವರನ್ನು ಪೊಲೀಸರು ಬಂಧಿಸಿದರು. ಪೊಲೀಸರ ರಕ್ಷಣೆಯಲ್ಲಿಯೇ ಮೃತದೇಹವನ್ನು ನಾರ್ವೆ ಗ್ರಾಮಕ್ಕೆ ಕಳುಹಿಸಲಾಯಿತು.

### 'ಲ್ಯಾಂಡರ್' ಮತ್ತಷ್ಟು ಚಂದ್ರನ ಸನಿಹ




ಬೆಂಗಳೂರು(ಪಿಟಿಐ): ನೋದನ ಘಟಕದಿಂದ ಪ್ರತ್ಯೇಕಗೊಂಡಿರುವ ಲ್ಯಾಂಡರ್‌ನ ವೇಗ ತಗ್ಗಿಸುವ ಪ್ರಕ್ರಿಯೆ (ಡೀಬೂಸ್ಟ್) ಯಶಸ್ವಿಯಾಗಿದ್ದು, ಮತ್ತಷ್ಟು ಚಂದ್ರನ ಸಮೀಪ ಸಾಗುತ್ತಿದೆ ಎಂದು ಇಸ್ರೊ ಶುಕ್ರವಾರ ಹೇಳಿದೆ.

'ಚಂದ್ರಯಾನ-3' ನೌಕೆಯ ಲ್ಯಾಂಡರ್ ಘಟಕ ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿದೆ. ಲ್ಯಾಂಡರ್(ವಿಕ್ರಮ್) ಹಾಗೂ ರೋವರ್ (ಪ್ರಗ್ಯಾನ್) ಒಳಗೊಂಡಿರುವ ಈ ಘಟಕದ ಎರಡನೇ ಹಂತದ 'ಡೀಬೂಸ್ಟ್' ಪ್ರಕ್ರಿಯೆಯನ್ನು ಆಗಸ್ಟ್ 20ರಂದು ರಾತ್ರಿ 2ಕ್ಕೆ ನೆರವೇರಿಸಲಾಗುತ್ತದೆ ಎಂದು ತಿಳಿಸಿದೆ.

'ಎರಡನೇ ಹಂತದಲ್ಲಿ ಕೈಗೊಳ್ಳುವ ವೇಗ ತಗ್ಗಿಸುವ ಕಾರ್ಯಾಚರಣೆಯು ಲ್ಯಾಂಡರ್ ಘಟಕವನ್ನು ಚಂದ್ರನ ಮೇಲ್ಮೈಗೆ ಬಹಳ ಹತ್ತಿರದಲ್ಲಿರುವ ಕಕ್ಷೆ ಸೇರುವಂತೆ ಮಾಡಲಿದೆ' ಎಂಬ ಮಾಹಿತಿಯನ್ನು ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ಇಸ್ರೊ ಹಂಚಿಕೊಂಡಿದೆ.

ನೋದನ ಘಟಕದಿಂದ (ಪ್ರೊಪಲ್ಷನ್ ಮಾಡ್ಯೂಲ್) ಲ್ಯಾಂಡರ್ ಘಟಕ ಗುರುವಾರ ಪ್ರತ್ಯೇಕಗೊಂಡಿದೆ. ನೋದನ ಘಟಕವು ಪ್ರಸ್ತುತ ತಾನಿರುವ ಕಕ್ಷೆಯಲ್ಲಿಯೇ ತಿಂಗಳು/ವರ್ಷಗಟ್ಟಲೇ ಪರಿಭ್ರಮಿಸುತ್ತಿರಲಿದೆ ಎಂದೂ ತಿಳಿಸಿದೆ.

ಲ್ಯಾಂಡರ್ ಘಟಕವನ್ನು ಆಗಸ್ಟ್ 23ರಂದು ಚಂದ್ರನ ದಕ್ಷಿಣ ಧ್ರುವದ ಅಂಗಳದಲ್ಲಿ (ಸಾಫ್ಟ್ ಲ್ಯಾಂಡಿಂಗ್) ಇಳಿಸಲಾಗುತ್ತದೆ.

### ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

| ಜಲಾಶಯ | ಗರಿಷ್ಠ ಮಟ್ಟ (ಅಡಿಗಳಲ್ಲಿ) | ಇಂದಿನ ಮಟ್ಟ | ಒಳಹರಿವು (ಕ್ಯುಸೆಕ್‌ಗಳಲ್ಲಿ) | ಹೊರಹರಿವು |
|---|---|---|---|---|
| ಕೆ ಆರ್ ಎಸ್* | 124.80 | 108.27 | 2,255 | 15,591 |
| ಹಾರಂಗಿ | 2,859 | 2,858 | 1,195 | 1,750 |
| ಕಬಿನಿ | 2284.00 | 2,278.70 | 1,935 | 7,325 |
| ಹೇಮಾವತಿ | 2,922 | 2,914 | 1,891 | 6,755 |
| ಲಿಂಗನಮಕ್ಕಿ | 1,819 | 1,790.30 | 4,071 | 6,377.80 |
| ಸೂಪಾ (ಮೀ) | 564 | 546.35 | 2,277 | 4,751 |
| ಮಾಣಿ | 595 | 580.88 | 586 | 662 |
| ತುಂಗಭದ್ರಾ | 1,633 | 1,628.02 | 1,150 | 9,824 |
| ಮಲಪ್ರಭಾ | 2079.50 | 2,067.10 | 1,194 | 194 |
| ಘಟಪ್ರಭಾ | 2175 | 2,165.53 | 2,776 | 3,946 |
| ಭದ್ರಾ | 186 | 166.40 | 771 | 3,225 |
| ಆಲಮಟ್ಟಿ (ಮೀ) | 519.60 | 519.60 | 901 | 901 |
| ನಾರಾಯಣಪುರ (ಮೀ) | 492.25 | 491.18 | 58 | 9,471 |

* ನೆಲಮಟ್ಟದಿಂದ

### ಕರಾವಳಿ: ಬಿರುಸಿನ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ಕರಾವಳಿ ಜಿಲ್ಲೆಗಳ ಬಹುತೇಕ ಕಡೆಗಳಲ್ಲಿ ಹಾಗೂ ಒಳನಾಡು ವ್ಯಾಪ್ತಿಯ ಅಲ್ಲಲ್ಲಿ ಶನಿವಾರ, ಭಾನುವಾರ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕಳೆದ ಕೆಲವು ದಿನಗಳಿಂದ ಬಿಡುವು ನೀಡಿದ್ದ ಮಳೆಯು ಅಲ್ಲಲ್ಲಿ ರಭಸದಿಂದ ಸುರಿಯುವ ಸಾಧ್ಯತೆಯಿದೆ ಎಂದು ಐಎಂಡಿ ಸೂಚನೆ ನೀಡಿದೆ.

ಬೆಂಗಳೂರಿನಲ್ಲಿ ಸಾಮಾನ್ಯವಾಗಿ ಮೋಡ ಕವಿದ ವಾತಾವರಣ ಇರಲಿದೆ. ಕೆಲವೊಮ್ಮೆ ಬಲವಾದ ಮೇಲ್ಮೈ ಗಾಳಿ ಬೀಸುವ ಸಾಧ್ಯತೆಯಿದೆ ಎಂದು ತಿಳಿಸಿದೆ.

### ದೇಗುಲ ಅನುದಾನ ತಡೆ ಆದೇಶ ವಾಪಸ್

ಬೆಂಗಳೂರು: 'ಮುಜರಾಯಿ ಇಲಾಖೆ ವ್ಯಾಪ್ತಿಗೆ ಒಳಪಡುವ ದೇವಸ್ಥಾನಗಳ ಅನುದಾನಕ್ಕೆ ತಡೆ ನೀಡಿದ್ದ ಆದೇಶ ವಾಪಸ್ ಪಡೆಯುವಂತೆ ಆಯುಕ್ತರಿಗೆ ಸೂಚನೆ ನೀಡಿದ್ದೇನೆ' ಎಂದು ಮುಜರಾಯಿ ಸಚಿವ ರಾಮಲಿಂಗಾ ರೆಡ್ಡಿ ಹೇಳಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, 'ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ನೀಡಲಾಗಿದ್ದ ಅನುದಾನ ತಡೆ ಹಿಡಿಯಲು ಹೊರಡಿಸಿದ್ದ ಆದೇಶ ನನ್ನ ಗಮನಕ್ಕೆ ಬಂದಿರಲಿಲ್ಲ. ಗಮನಕ್ಕೆ ಬಂದ ತಕ್ಷಣ ಆದೇಶ ವಾಪಸ್ ಪಡೆಯಲು ಸೂಚಿಸಿದ್ದೇನೆ. ಆವಶ್ಯಕತೆ ಇದ್ದರೆ ದೇವಸ್ಥಾನಗಳ ಅಭಿವೃದ್ಧಿಗೆ ಇನ್ನೂ ಹೆಚ್ಚಿನ ಅನುದಾನದ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು' ಎಂದಿದ್ದಾರೆ.

# ರಾಷ್ಟ್ರೀಯ ಪ್ರಶಸ್ತಿಗೆ ಅಶ್ವಿನಿ ಭಿಡೆ ದೇಶಪಾಂಡೆ ಆಯ್ಕೆ

ಪ್ರಜಾವಾಣಿ ವಾರ್ತೆ


ಅಶ್ವಿನಿ ಭಿಡೆ ಉದಯ ಇಮಾನ ದಾಸ್

ಧಾರವಾಡ: ಸ್ವರ ಸಾಮ್ರಾಟ ಪಂಡಿತ ಬಸವರಾಜ ರಾಜಗುರು ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ನೀಡುವ ಪಂಡಿತ ಬಸವರಾಜ ರಾಜಗುರು ರಾಷ್ಟ್ರೀಯ ಪ್ರಶಸ್ತಿಗೆ ಮುಂಬೈಯ ಸಂಗೀತ ಕಲಾವಿದೆ ಅಶ್ವಿನಿ ಭಿಡೆ ದೇಶಪಾಂಡೆ, ಯುವ ಪ್ರಶಸ್ತಿಗೆ ಧಾರವಾಡದ ತಬಲಾ ವಾದಕ ಉದಯ ಕುಲಕರ್ಣಿ ಹಾಗೂ ಬೆಂಗಳೂರಿನ ಗಾಯಕ ಇಮಾನ ದಾಸ್ ಅವರನ್ನು ಆಯ್ಕೆ ಮಾಡಲಾಗಿದೆ.

ಪಂಡಿತ ಬಸವರಾಜ ರಾಜಗುರು ರಾಷ್ಟ್ರೀಯ ಪ್ರಶಸ್ತಿ ₹ 1 ಲಕ್ಷ ನಗದು, ಯುವಪ್ರಶಸ್ತಿ ತಲಾ ₹ 25 ಸಾವಿರ ನಗದು ಪುರಸ್ಕಾರ ಒಳಗೊಂಡಿದೆ.

ಧಾರವಾಡದ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಆಗಸ್ಟ್ 24ರಂದು ಜರುಗುವ ಪಂಡಿತ ಬಸವರಾಜ ರಾಜಗುರು ಅವರ 103ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಟ್ರಸ್ಟ್ ಸದಸ್ಯ ಕಾರ್ಯದರ್ಶಿ ಕುಮಾರ ಬೆಕ್ಕೇರಿ ತಿಳಿಸಿದ್ದಾರೆ.

# ಮಾನವ ಹಕ್ಕು ಆಯೋಗದಲ್ಲಿ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಮೈಸೂರು: 'ಧರ್ಮಸ್ಥಳದಲ್ಲಿ ನಡೆದಿದ್ದ ಬಾಲಕಿ ಸೌಜನ್ಯಾ ಅಪಹರಣ, ಅತ್ಯಾಚಾರ ಹಾಗೂ ಕೊಲೆ ಪ್ರಕರಣದಲ್ಲಿ ಆರೋಪಿ ಎಂದು ಬಿಂಬಿಸಲಾಗಿದ್ದ ಸಂತೋಷ್‌ರಾವ್ ನಿರ್ದೋಷಿಯಾಗಿರುವುದರಿಂದ ಅವರಿಗೆ ನ್ಯಾಯ ಕೊಡಿಸಬೇಕು' ಎಂದು ಕೋರಿ ಇಲ್ಲಿನ ಒಡನಾಡಿ ಸೇವಾ ಸಂಸ್ಥೆಯು ಸಲ್ಲಿಸಿದ್ದ ಮನವಿಗೆ ಸ್ಪಂದಿಸಿರುವ ರಾಜ್ಯ ಮಾನವ ಹಕ್ಕುಗಳ ಆಯೋಗವು ಬುಧವಾರ ಪ್ರಕರಣ ದಾಖಲಿಸಿಕೊಂಡಿದ್ದು, ತನಿಖೆಗೆ ಆದೇಶಿಸಿದೆ.

> ಸೌಜನ್ಯಾ ಪ್ರಕರಣ ಮರು ತನಿಖೆಗಾಗಿ ಸಾರ್ವಜನಿಕ ವಲಯದಲ್ಲಿ ಚರ್ಚೆಯಾಗುತ್ತಿದೆ. ಮರುತನಿಖೆಗೆ ಸರ್ಕಾರ ತೀರ್ಮಾನಿಸಿಲ್ಲ
> **ಜಿ. ಪರಮೇಶ್ವರ,** ಗೃಹ ಸಚಿವ

ಸಂಸ್ಥೆಯ ನಿರ್ದೇಶಕ ಪರಶುರಾಮ್ ಎಂ.ಎಲ್. ಈ ಬಗ್ಗೆ ಆಯೋಗಕ್ಕೆ ಇತ್ತೀಚೆಗೆ ಪತ್ರ ಬರೆದಿದ್ದರು. 'ಮಾನವ ಹಕ್ಕುಗಳ ಉಲ್ಲಂಘನೆ ಪ್ರಕರಣವೆಂದು ದಾಖಲಿಸಿ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದ್ದರು.

### ಕೆಆರ್‌ಎಸ್ ಪಕ್ಷದಿಂದ ಪಾದಯಾತ್ರೆ

ಮಂಗಳೂರು: ಧರ್ಮಸ್ಥಳದ ಸೌಜನ್ಯಾ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಮರು ತನಿಖೆಗೆ ಆಗ್ರಹಿಸಿ ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷದಿಂದ ಇದೇ 26ರಿಂದ ಸೆಪ್ಟೆಂಬರ್ 8ರ ವರೆಗೆ ಬೆಳ್ತಂಗಡಿಯಿಂದ ಬೆಂಗಳೂರಿಗೆ 'ದೌರ್ಜನ್ಯದ ವಿರುದ್ಧ ಸೌಜನ್ಯಾ' ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷ ಲಿಂಗೇಗೌಡ ಹೇಳಿದರು.

'ಆಗಸ್ಟ್ 26ರಂದು ಬೆಳ್ತಂಗಡಿಯಿಂದ ಹೊರಡುವ ಪಾದಯಾತ್ರೆ ಧರ್ಮಸ್ಥಳದಲ್ಲಿ ತಂಗಲಿದೆ. ನಂತರ ಉಜಿರೆ, ಕೊಟ್ಟಿಗೆಹಾರ ಮಾರ್ಗವಾಗಿ ಸೆಪ್ಟೆಂಬರ್ 7ರಂದು ಬೆಂಗಳೂರು ತಲುಪಲಿದೆ ಎಂದರು.

# 3,892 ಕ್ವಿಂಟಲ್ ಅಕ್ಕಿ ನಾಪತ್ತೆ

ಪ್ರಜಾವಾಣಿ ವಾರ್ತೆ

ಬಂಟ್ವಾಳ (ದಕ್ಷಿಣ ಕನ್ನಡ): ಪಡಿತರ ವಿತರಣೆಗೆ ದಾಸ್ತಾನು ಮಾಡಿದ್ದ ಗೋದಾಮಿನಿಂದ ಅಂದಾಜು ₹1.32 ಕೋಟಿ ಮೌಲ್ಯದ 3,892 ಕ್ವಿಂಟಲ್ ಅಕ್ಕಿ ನಾಪತ್ತೆಯಾಗಿರುವ ಬಗ್ಗೆ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಮಂಗಳೂರು ಕಚೇರಿ ವ್ಯವಸ್ಥಾಪಕ ಶರತ್ ಕುಮಾರ್ ಶುಕ್ರವಾರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಆಹಾರ ನಿಗಮದ ಬಂಟ್ವಾಳ ಗೋದಾಮಿನ ನಿರ್ವಾಹಕರಾಗಿರುವ ಕಿರಿಯ ಸಹಾಯಕ ವಿಜಯ್ ವಿರುದ್ಧ ಐಪಿಸಿ ಸೆಕ್ಷನ್ 409ರ (ನೌಕರನಿಂದ ಅಪರಾಧಿಕ ನಂಬಿಕೆ ದ್ರೋಹ) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಇಲ್ಲಿನ ಕಳ್ಳಿಗೆ ಗ್ರಾಮದ ಕೆಎಸ್‌ಆರ್‌ಟಿಸಿ ಡಿಪೊ ಎದುರಿನ ಸಗಟು ಗೋದಾಮಿನಿಂದ ನ್ಯಾಯಬೆಲೆ ಅಂಗಡಿಗಳಿಗೆ ಪಡಿತರ ಅಕ್ಕಿ ಸರಬರಾಜು ಆಗುತ್ತದೆ. ವಿತರಣೆಯಲ್ಲಿ ವಿಳಂಬ ಆಗುತ್ತಿರುವ ಬಗ್ಗೆ ದೂರು ಬಂದಿದ್ದರಿಂದ ಆಹಾರ ನಿಗಮದ ಜಿಲ್ಲಾ ವ್ಯವಸ್ಥಾಪಕರು ಇದನ್ನು ಪರಿಶೀಲಿಸುವಂತೆ ಮೌಖಿಕ ಆದೇಶ ನೀಡಿದ್ದು, ಮಂಗಳೂರು ಕಚೇರಿಯ ಅಧಿಕಾರಿಗಳು ಗುರುವಾರ ಗೋದಾಮಿಗೆ ಭೇಟಿ ನೀಡಿ ಪರಿಶೀಲಿಸಿದ್ದರು. ಫಿಸ್ಟ್ ತಂತ್ರಾಂಶದ ಪ್ರಕಾರ ಮಳಿಗೆಯಲ್ಲಿ ಇರಬೇಕಾಗಿದ್ದ ಅಕ್ಕಿಗಿಂತ ಸುಮಾರು 3,892 ಕ್ವಿಂಟಾಲ್ ಅಕ್ಕಿ ಕೊರತೆ ಕಂಡು ಬಂದಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.


ಬಂಟ್ವಾಳ ತಾಲ್ಲೂಕಿನ ಕಳ್ಳಿಗೆ ಗ್ರಾಮದ ಅಕ್ಕಿ ದಾಸ್ತಾನು ಗೋದಾಮಿಗೆ ಎಸ್ಪಿ ರಿಷ್ಯಂತ್, ಜಿಲ್ಲಾಧಿಕಾರಿ ಮುಲ್ಲೈ ಮುಗಿಲನ್ ಭೇಟಿ ನೀಡಿದರು

'ಗೋದಾಮಿನಲ್ಲಿರುವ ಅಕ್ಕಿ ದಾಸ್ತಾನಿನಲ್ಲಿ ದೊಡ್ಡ ಪ್ರಮಾಣದ ವ್ಯತ್ಯಾಸ ಕಂಡುಬಂದಿದ್ದು, ಈ ಸಂಬಂಧ ಆಹಾರ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಜೊತೆ ಮಾತನಾಡಿದ್ದೇನೆ. ಆಹಾರ ನಿಗಮದ ಹಿರಿಯ ಅಧಿಕಾರಿಗಳು ಶನಿವಾರ ಗೋದಾಮಿಗೆ ಭೇಟಿ ನೀಡಲಿದ್ದಾರೆ. ಪ್ರಕರಣದಲ್ಲಿ ಯಾರ್‍ಯಾರು ಭಾಗಿಯಾಗಿದ್ದಾರೆ ಎಂಬುದು ತನಿಖೆಯ ನಂತರವಷ್ಟೇ ಗೊತ್ತಾಗಲಿದೆ. ಆಗಸ್ಟ್ ತಿಂಗಳ ಪಡಿತರ ವಿತರಣೆಯಲ್ಲಿ ಯಾವುದೇ ಸಮಸ್ಯೆ ಆಗಿಲ್ಲ' ಎಂದು ಜಿಲ್ಲಾಧಿಕಾರಿ ಮುಲ್ಲೈ ಮುಗಿಲನ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಪ್ರವಾಸೋದ್ಯಮ ಇಲಾಖೆಯಿಂದ ಮಹತ್ವದ ಮೊದಲ ಯೋಜನೆಗೆ ಪ್ರಸ್ತಾವ

# ರಾಣಿಝರಿಯಲ್ಲಿ ಗಾಜಿನ ಸೇತುವೆ

• ವಿಜಯಕುಮಾರ್ ಎಸ್.ಕೆ.

ಚಿಕ್ಕಮಗಳೂರು: ಮುಳ್ಳಯ್ಯನಗಿರಿ ಮೇಲಿನ ಸಂಚಾರ ದಟ್ಟಣೆ ಕಡಿಮೆ ಮಾಡಲು, ಬೇರೆ ಸ್ಥಳಗಳಿಗೂ ಪ್ರವಾಸಿಗರು ಹೋಗುವಂತೆ ಮಾಡಲು ಜಿಲ್ಲಾಡಳಿತ ಹಲವು ಯೋಜನೆಗಳನ್ನು ರೂಪಿಸುತ್ತಿದೆ. ಪಶ್ಚಿಮ ಘಟ್ಟದ ಅಂಚಿನಲ್ಲಿರುವ ರಾಣಿಝರಿ ವ್ಯೂವ್ ಪಾಯಿಂಟ್ ವೀಕ್ಷಿಸಲು ರಾಜ್ಯದಲ್ಲೇ ಮೊದಲ ಗಾಜಿನ ಸೇತುವೆ ನಿರ್ಮಿಸಲು ಪ್ರವಾಸೋದ್ಯಮ ಇಲಾಖೆ ಯೋಜನೆ ರೂಪಿಸಿದೆ.

ಮೂಡಿಗೆರೆ ತಾಲ್ಲೂಕಿನ ಅಂಚಿನಲ್ಲಿರುವ ಈ ಅದ್ಭುತ ಪ್ರವಾಸಿ ತಾಣಕ್ಕೆ 'ರಾಣಿಝರಿ ಕೊನೆ ಅಂಚು' ಎಂದೇ ಹೆಸರು. ಸುಂಕಸಾಲೆ ಗ್ರಾಮದ ಸಮೀಪ ಇರುವ ಈ ಜಾಗದಲ್ಲಿನ ಪ್ರಪಾತದ ಮೇಲ್ಭಾಗ ಚಿಕ್ಕಮಗಳೂರು ಜಿಲ್ಲೆಗೆ ಸೇರಿದರೆ, ಕೆಳಭಾಗ ದಕ್ಷಿಣ ಕನ್ನಡ ಜಿಲ್ಲೆಗೆ ಸೇರುತ್ತದೆ. ಪಶ್ಚಿಮಘಟ್ಟ ಆರಂಭದ ಘಟ್ಟವೂ ಇದೇ ಆಗಿದ್ದು, ಕರಾವಳಿ ಕಡೆಯಿಂದ ಬರುವ ಮೋಡಗಳನ್ನು ತಡೆಯುವ ಮೊದಲ ಶಿಖರ ಇದು. ಸುಮಾರು ಒಂದು ಕಿಲೋ ಮೀಟರ್‌ನಷ್ಟು ಪ್ರಪಾತದ ಮೇಲಿರುವ ತುತ್ತ ತುದಿಯಲ್ಲಿ ಪ್ರಕೃತಿಯ ಸೊಬಗು ಹೊದ್ದಿರುವ ರಮಣೀಯವಾದ ಸ್ಥಳ ಇದೆ.


ಮೂಡಿಗೆರೆ ತಾಲ್ಲೂಕಿನ ಸುಂಕಸಾಲೆ ಸಮೀಪ ಇರುವ 'ರಾಣಿಝರಿ'

ಸಮೀಪದಲ್ಲೇ ಇರುವ ಬಲ್ಲಾಳರಾಯನದುರ್ಗ ಕೋಟೆ ಬಗ್ಗೆ ಎಲ್ಲರಿಗೂ ಗೊತ್ತಿದೆ. ಆದರೆ, ರಾಣಿ ಝರಿ ಬಗ್ಗೆ ಬಹುತೇಕರಿಗೆ ಗೊತ್ತಿಲ್ಲ. ಆದ್ದರಿಂದ ಅಷ್ಟೇನು ಪ್ರಚಾರಕ್ಕೆ ಬಂದಿಲ್ಲ ಎಂದು ಪ್ರವಾಸೋದ್ಯಮ ಇಲಾಖೆ ಅಧಿಕಾರಿಗಳು ಹೇಳುತ್ತಾರೆ.

ಮುಳ್ಳಯ್ಯನಗಿರಿಯಂತೆ ಪ್ರವಾಸಿಗರನ್ನು ಸೂಜಿಗಲ್ಲಿನಂತೆ ಸೆಳೆಯಬಲ್ಲ ಪ್ರಕೃತಿ ಸೌಂದರ್ಯ ಹೊಂದಿರುವ ಸ್ಥಳ ಇದಾಗಿದೆ. ಕರಾವಳಿ ಕಡೆಯಿಂದ ಬರುವ ಮೋಡಗಳು ಈ ಶಿಖರಕ್ಕೆ ತಗುಲಿ ಮೇಲೆ ಏರುವ ದೃಶ್ಯ ನೋಡುವುದೇ ಸೊಬಗು.

ಈ ಸೊಬಗನ್ನು ಇನ್ನಷ್ಟು ಹತ್ತಿರವಾಗಿಸಲು 'ರಾಣಿ ಝರಿ' ವ್ಯೂವ್ ಪಾಯಿಂಟ್ ಬಳಿ ಗಾಜಿನ ಸೇತುವೆ ನಿರ್ಮಿಸಲು ಪ್ರವಾಸೋದ್ಯಮ ಇಲಾಖೆ ಮುಂದಾಗಿದೆ. ಈ ಸಂಬಂಧ ಪ್ರಸ್ತಾವ ಸಿದ್ಧಪಡಿಸಿ ಅಧಿಕಾರಿಗಳು ಸರ್ಕಾರಕ್ಕೆ ಕಳುಹಿಸಿದ್ದಾರೆ. ಗಾಜಿನ ಸೇತುವೆ ನಿರ್ಮಿಸುವ ಯೋಜನೆಗೆ ಎಷ್ಟು ವೆಚ್ಚವಾಗಲಿದೆ, ಯಾವ ರೀತಿ ನಿರ್ಮಾಣ ಮಾಡಬಹುದು ಎಂಬುದರ ಸಂಪೂರ್ಣ ವಿವರ ಒಳಗೊಂಡ ಅಂದಾಜು ಪಟ್ಟಿ ತಯಾರಿಸಲು ಇಲಾಖೆಯ ಉನ್ನತ ಮಟ್ಟದ ಅಧಿಕಾರಿಗಳು ಸ್ಥಳೀಯ ಅಧಿಕಾರಿಗಳಿಗೆ ತಿಳಿಸಿದ್ದಾರೆ.

'ಈ ಯೋಜನೆ ಸಾಕಾರಗೊಂಡರೆ ರಾಣಿ ಝರಿಯು ಚಿಕ್ಕಮಗಳೂರು ಜಿಲ್ಲೆಯ ಮತ್ತೊಂದು ಬಹುಮುಖ್ಯ ಪ್ರವಾಸಿ ತಾಣ ಆಗಲಿದೆ' ಎಂದು ಅಧಿಕಾರಿಗಳು ವಿವರಿಸುತ್ತಾರೆ.

ಗಾಜಿನ ಸೇತುವೆ ನಿರ್ಮಾಣ ಮಾಡುವುದು ರಾಜ್ಯಕ್ಕೆ ಹೊಸತು. ಕೊಡಗಿನಲ್ಲಿ ಮೊದಲ ಗಾಜಿನ ಸೇತುವೆ ಇದೆ. ಆದರೆ, ಅದು ಖಾಸಗಿ ಜಾಗದಲ್ಲಿದ್ದು, ಖಾಸಗಿ ವ್ಯಕ್ತಿಗಳೇ ನಿರ್ಮಿಸಿಕೊಂಡಿದ್ದಾರೆ. ಕೇರಳದಲ್ಲೂ ಈ ರೀತಿಯ ಸೇತುವೆಗಳಿವೆ. ಇವೆಲ್ಲವನ್ನೂ ಪರಿಶೀಲಿಸಿ ರಾಣಿ ಝರಿಯಲ್ಲಿ ಗಾಜಿನ ಸೇತುವೆ ನಿರ್ಮಿಸಲು ಯೋಚಿಸಲಾಗಿದೆ. ಈ ಸಂಬಂಧ ಅಧ್ಯಯನ ನಡೆಯುತ್ತಿದೆ ಎಂದು ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

# ದ್ವೇಷ ಭಾಷಣ– ಪಕ್ಷಪಾತ ಬೇಡ: ‘ಸುಪ್ರೀಂ’

ಪ್ರಜಾವಾಣಿ ವಾರ್ತೆ



**ನವದೆಹಲಿ:** ‘ದ್ವೇಷ ಭಾಷಣ ಮಾಡುವವರು ಯಾರೇ ಆಗಲಿ ಅವರ ವಿರುದ್ಧ ಕಾನೂನು ಪ್ರಕಾರ ಕ್ರಮ ಜರುಗಿಸಬೇಕು. ಈ ವಿಷಯದಲ್ಲಿ ಎಲ್ಲ ಕಡೆಯವರನ್ನು ಒಂದೇ ರೀತಿ ಪರಿಗಣಿಸಬೇಕು’ ಎಂದು ಸುಪ್ರೀಂಕೋರ್ಟ್ ಶುಕ್ರವಾರ ಹೇಳಿದೆ.

‘ತೆಹಸೀನ್ ಪೂನಾವಾಲಾ ಪ್ರಕರಣದಲ್ಲಿ ನೀಡಲಾಗಿರುವ ಮಾರ್ಗಸೂಚಿಗಳ ಪಾಲನೆ ಯಾಗುತ್ತಿದೆ ಎಂಬ ಭರವಸೆ ಇದೆ’ ಎಂದು ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಹಾಗೂ ಎಸ್.ವಿ.ಎನ್.ಭಟ್ಟಿ ಅವರಿದ್ದ ನ್ಯಾಯಪೀಠ ಹೇಳಿತು.

ನೂಹ್ ಜಿಲ್ಲೆಯಲ್ಲಿ ನಡೆದ ಕೋಮು ಹಿಂಸಾಚಾರ ನಂತರ ಮುಸ್ಲಿಮರನ್ನು ಬಹಿಷ್ಕರಿಸುವಂತೆ ಕರೆ ನೀಡಿದ್ದ ಕೆಲ ಸಂಘಟನೆಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿ ಸಲ್ಲಿಸಿದ್ದ ಅರ್ಜಿಗಳ ವಿಚಾರಣೆಯನ್ನು ನ್ಯಾಯಪೀಠ ನಡೆಸಿತು.

ವಿಚಾರಣೆ ವೇಳೆ, ಅರ್ಜಿದಾರರೊಬ್ಬರ ಪರ ಹಾಜರಿದ್ದ ವಕೀಲ ಮಾತನಾಡಿ, ‘ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ (ಐಯುಎಂಎಲ್) ರ‍್ಯಾಲಿಯಲ್ಲಿ ದ್ವೇಷ ಭಾಷಣ ಮಾಡಲಾಗಿದೆ. ಹಿಂದೂಗಳನ್ನು ಹತ್ಯೆ ಮಾಡುತ್ತೇವೆ ಎಂಬ ಘೋಷಣೆಗಳನ್ನು ಕೂಗಲಾಗಿದೆ’ ಎಂದು ನ್ಯಾಯಪೀಠಕ್ಕೆ ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ, ಕೇರಳ ಮೂಲದ ಶಾಹೀನ್ ಅಬ್ದುಲ್ಲಾ ಪರ ವಕೀಲ ನಿಜಾಮ್ ಪಾಷಾ, ‘ದ್ವೇಷ ಭಾಷಣಕ್ಕೆ ಯಾವುದೇ ಬಣ ಇಲ್ಲ, ನಾವೆಲ್ಲರೂ ಒಂದೇ ಕಡೆ ಇದ್ದೇವೆ’ ಎಂದರು.

‘ಈ ವಿಷಯದಲ್ಲಿ ನಾವು ಸ್ಪಷ್ಟವಾಗಿದ್ದೇವೆ. ಆ ಕಡೆಯವರಾಗಲಿ ಅಥವಾ ಈ ಕಡೆಯವರಾಗಲಿ ಎಲ್ಲರನ್ನೂ ಒಂದೇ ರೀತಿ ಪರಿಗಣಿಸಬೇಕು. ದ್ವೇಷ ಭಾಷಣ ಮಾಡುವವರು ಯಾರೇ ಆಗಲಿ ಅವರ ವಿರುದ್ಧ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕು ಎಂದು ಈಗಾಗಲೇ ಹೇಳಿದ್ದೇವೆ. ಈ ಮಾತನ್ನು ಮತ್ತೊಮ್ಮೆ ಹೇಳುವ ಅಗತ್ಯ ಇಲ್ಲ ಎನಿಸುತ್ತದೆ’ ಎಂದು ನ್ಯಾಯಮೂರ್ತಿ ಖನ್ನಾ ಹೇಳಿದರು.

ಐಯುಎಂಎಲ್ ರ‍್ಯಾಲಿ ಕುರಿತು ಪ್ರಸ್ತಾಪಿಸಿದ್ದ ವಕೀಲ ಇದಕ್ಕೆ ಪ್ರತಿಕ್ರಿಯಿಸಿ, ‘ಐಯುಎಂಎಲ್ ರ‍್ಯಾಲಿಯ ಕುರಿತ ಸಂಪೂರ್ಣ ಮಾಹಿತಿಯನ್ನು ಪಾಷಾ ಅವರು ನ್ಯಾಯಾಲಯದ ಮುಂದೆ ಇಡುತ್ತಿಲ್ಲ’ ಎಂದರು. ನಂತರ ನಡೆದ ವಾದ-ಪ್ರತಿವಾದಗಳನ್ನು ಆಲಿಸಿದ ನ್ಯಾಯಪೀಠ, ವಿಚಾರಣೆಯನ್ನು ಮುಂದಿನ ಶುಕ್ರವಾರಕ್ಕೆ ಮುಂದೂಡಿತು.

## ಪಿತ್ರಾರ್ಜಿತ ಆಸ್ತಿ: ಕಾಯ್ದಿರಿಸಿದ ತೀರ್ಪು

**ನವದೆಹಲಿ (ಪಿಟಿಐ):** ಮದುವೆಗೂ ಮುನ್ನ ಜೋಡಿಗೆ ಜನಿಸಿದ ಮಕ್ಕಳಿಗೆ ಹಿಂದೂ ಉತ್ತರಾಧಿಕಾರ ಕಾಯ್ದೆಯಡಿ ಪಿತ್ರಾರ್ಜಿತ ಆಸ್ತಿ ಹಕ್ಕು ಕುರಿತ ಅರ್ಜಿಗೆ ಸಂಬಂಧಿಸಿದ ತೀರ್ಪನ್ನು ಸುಪ್ರೀಂಕೋರ್ಟ್ ಶುಕ್ರವಾರ ಕಾಯ್ದಿರಿಸಿತು. ಅರ್ಜಿಗೆ ಸಂಬಂಧಿಸಿ ಹಲವು ವಕೀಲರು ಮಂಡಿಸಿದ ವಾದಗಳನ್ನು ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದಿವಾಲಾ ಹಾಗೂ ಮನೋಜ್ ಮಿಶ್ರಾ ಅವರಿದ್ದ ನ್ಯಾಯಪೀಠ ಆಲಿಸಿತು.

‘ವಿವಾಹವಾಗುವುದಕ್ಕೂ ಮುನ್ನ ಜೋಡಿಗೆ ಜನಿಸಿದ ಮಕ್ಕಳು ಹಿಂದೂ ವಿವಾಹ ಕಾಯ್ದೆ ಸೆಕ್ಷನ್ 16(3)ರಡಿ ಪಾಲಕರ ಸ್ವಯಾರ್ಜಿತ ಆಸ್ತಿ ಮೇಲಷ್ಟೆ ಹಕ್ಕು ಹೊಂದಿದ್ದಾರೆಯೇ ಎಂಬ ಬಗ್ಗೆಯೂ ನ್ಯಾಯಪೀಠ ನಿರ್ಧಾರ ಪ್ರಕಟಿಸಲಿದೆ. ಈ ವಿಷಯ ಕುರಿತ ಅರ್ಜಿ 2011ರಿಂದ ಬಾಕಿ ಉಳಿದಿದೆ. ವಿಚಾರಣೆ ನಡೆಸಿದ್ದ ಇಬ್ಬರು ನ್ಯಾಯಮೂರ್ತಿಗಳಿದ್ದ ನ್ಯಾಯಪೀಠ, ಅರ್ಜಿಯನ್ನು ವಿಸ್ತೃತ ಪೀಠಕ್ಕೆ ವರ್ಗಾಯಿಸಿ 2011ರ ಮಾರ್ಚ್ 31ರಂದು ಆದೇಶಿಸಿತ್ತು.

‘ಕಾನೂನುಸಮ್ಮತ ವಿವಾಹಸಂಬಂಧದಲ್ಲಿ ಜನಿಸದ ಮಕ್ಕಳಿಗೆ ಪೂರ್ವಿಕರ ಆಸ್ತಿಯಲ್ಲಿ ಪಾಲು ಪಡೆಯುವ ಹಕ್ಕಿದೆಯೇ ಅಥವಾ ಹಿಂದೂ ವಿವಾಹ ಕಾಯ್ದೆ ಸೆಕ್ಷನ್ 16(3) ಅಡಿ ತಮ್ಮ ಪಾಲಕರ ಸ್ವಯಾರ್ಜಿತ ಆಸ್ತಿ ಮೇಲಷ್ಟೆ ಹಕ್ಕಿದೆಯೇ ಎಂಬುದೇ ಈ ಪ್ರಕರಣದ ಮುಖ್ಯ ಪ್ರಶ್ನೆಯಾಗಿದೆ’ ಎಂದು ಇಬ್ಬರು ನ್ಯಾಯಮೂರ್ತಿಗಳ ಪೀಠ ಹೇಳಿತ್ತು.

‘ರದ್ದುಗೊಳಿಸಲಾದ ಅಥವಾ ರದ್ದುಗೊಳಿಸಬಹುದಾದ ವಿವಾಹ-ಸಂಬಂಧದಲ್ಲಿ ಜನಿಸಿದ ಮಕ್ಕಳಿಗೆ ಮಾತ್ರ ತಮ್ಮ ಪಾಲಕರ ಆಸ್ತಿ ಮೇಲೆ ಹಕ್ಕಿದೆ ಎಂದು ಕಾಯ್ದೆಯಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ’ ಎಂದೂ ಪೀಠ ಹೇಳಿತ್ತು.

## ಲಾಲುಗೆ ಜಾಮೀನು: ‘ಸುಪ್ರೀಂ’ ಮೊರೆ ಹೋದ ಸಿಬಿಐ

**ನವದೆಹಲಿ (ಪಿಟಿಐ):** ಮೇವು ಹಗರಣಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ರಾಷ್ಟ್ರೀಯ ಜನತಾ ದಳದ (ಆರ್‌ಜೆಡಿ) ಅಧ್ಯಕ್ಷ ಲಾಲು ಪ್ರಸಾದ್ ಅವರಿಗೆ ಜಾಮೀನು ಮಂಜೂರು ಮಾಡಿರುವುದನ್ನು ಪ್ರಶ್ನಿಸಿ ಸಿಬಿಐ ಸುಪ್ರೀಂ ಕೋರ್ಟ್ ಮೊರೆ ಹೋಗಿದೆ.

ಸಿಬಿಐ ಪರವಾಗಿ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ. ರಾಜು ಅವರು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ನ್ಯಾಯಪೀಠಕ್ಕೆ ಮೇಲ್ಮನವಿ ಸಲ್ಲಿಸಿದ್ದು, ಆಗಸ್ಟ್ 25 ರಂದು ವಿಚಾರಣೆ ನಡೆಸಲು ನ್ಯಾಯಪೀಠವು ಪಟ್ಟಿಮಾಡಿದೆ.

ಮೇವು ಹಗರಣದ ಜೊತೆ ನಂಟವುಳ್ಳ ಡೊರಾಂಡಾ ಖಜಾನೆ ಪ್ರಕರಣದಲ್ಲಿ ಲಾಲು ಪ್ರಸಾದ್ ಅವರಿಗೆ 2022ರ ಏಪ್ರಿಲ್ 22ರಂದು ಜಾರ್ಖಂಡ್ ಹೈಕೋರ್ಟ್ ಜಾಮೀನು ಮಂಜೂರು ಮಾಡಿತ್ತು. ಸಿಬಿಐ ವಿಶೇಷ ನ್ಯಾಯಾಲಯವು ಈ ಪ್ರಕರಣದಲ್ಲಿ ಲಾಲು ಅವರಿಗೆ ಐದು ವರ್ಷಗಳ ಜೈಲು ಶಿಕ್ಷೆ ವಿಧಿಸಿತ್ತು.

# ಸಂಸತ್ತಿನ ಸ್ಥಾಯಿ ಸಮಿತಿ ಪರಿಶೀಲನೆಗೆ 3 ಮಸೂದೆ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಭಾರತೀಯ ದಂಡ ಸಂಹಿತೆ (ಐಪಿಸಿ), ಅಪರಾಧ ದಂಡ ಸಂಹಿತೆ (ಸಿಆರ್‌ಪಿಸಿ) ಮತ್ತು ಭಾರತೀಯ ಸಾಕ್ಷ್ಯ ಕಾಯ್ದೆಗೆ ಬದಲಾಗಿ ಜಾರಿಗೊಳಿಸುವ ಉದ್ದೇಶದಿಂದ ಮಂಡಿಸಿರುವ ಮೂರು ಮಸೂದೆಗಳನ್ನು ರಾಜ್ಯಸಭೆ ಸಭಾಪತಿ ಜಗದೀಪ್ ಧನ್ಕರ್ ಅವರು ಗೃಹ ಸಚಿವಾಲಯದ ಸಂಸದೀಯ ಸ್ಥಾಯಿಸಮಿತಿಯ ಪರಿಶೀಲನೆಗಾಗಿ ಒಪ್ಪಿಸಿದ್ದಾರೆ.

ಬಿಜೆಪಿ ಸಂಸದ, ಉತ್ತರ ಪ್ರದೇಶದ ಮಾಜಿ ಡಿಜಿಪಿ ಬ್ರಿಜ್‌ಲಾಲ್ ನೇತೃತ್ವದ ಸಮಿತಿಗೆ ಈ ಸಂಬಂಧ ವರದಿ ನೀಡಲು ಮೂರು ತಿಂಗಳು ಸಮಯಾವಕಾಶ ನೀಡಿದೆ. ನವೆಂಬರ್ ಮೂರನೇ ವಾರ ಆರಂಭವಾಗುವ ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಮಸೂದೆಗಳನ್ನು ಚರ್ಚೆಗೆ ತೆಗೆದುಕೊಳ್ಳುವ ಸಾಧ್ಯತೆ ಇದೆ.



# ‘ಗರ್ಭಪಾತ: ಬಾಲಕಿ ಹೆಸರು ಬಹಿರಂಗಪಡಿಸುವ ಅಗತ್ಯ ಇಲ್ಲ’

**ಚೆನ್ನೈ (ಪಿಟಿಐ):** ಸಮ್ಮತಿಯ ಲೈಂಗಿಕ ಸಂಪರ್ಕ ಕಾರಣದಿಂದಾಗಿ ಗರ್ಭಿಣಿಯಾದ ಬಾಲಕಿಯು ಗರ್ಭಪಾತ ಮಾಡಿಸಿಕೊಳ್ಳಲು ಬಂದಾಗ ವೈದ್ಯರು ಆಕೆಯ ಹೆಸರನ್ನು ಬಹಿರಂಗಪಡಿಸುವ ಅಗತ್ಯ ಇಲ್ಲ ಎಂದು ಮದ್ರಾಸ್ ಹೈಕೋರ್ಟ್ ಹೇಳಿದೆ.

ಪೋಕ್ಸೊ ಪ್ರಕರಣಗಳಿಗೆ ಸಂಬಂಧಿಸಿದ ಅರ್ಜಿಗಳ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿಗಳಾದ ಎನ್.ಆನಂದ ವೆಂಕಟೇಶ್ ಹಾಗೂ ಸುಂದರಮೋಹನ್ ಅವರಿದ್ದ ನ್ಯಾಯಪೀಠ ಇತ್ತೀಚೆಗೆ ಈ ಕುರಿತು ಆದೇಶ ಹೊರಡಿಸಿದೆ.

‘ಇಂತಹ ಪ್ರಕರಣಗಳಿಗೆ ಸಂಬಂಧಿಸಿ ಸುಪ್ರೀಂ ಕೋರ್ಟ್ ನೀಡಿರುವ ನಿರ್ದೇಶನಗಳನ್ನು ನ್ಯಾಯಪೀಠವು ಆದೇಶದಲ್ಲಿ ಉಲ್ಲೇಖಿಸಿದೆ.

‘ಸಮ್ಮತಿಯ ಲೈಂಗಿಕ ಸಂಪರ್ಕದಿಂದಾಗಿ ಗರ್ಭಿಣಿಯಾದ ಬಾಲಕಿಯೊಬ್ಬಳು ಗರ್ಭಪಾತ ಮಾಡಿಸಿಕೊಳ್ಳುವುದಕ್ಕಾಗಿ ನೋಂದಾಯಿತ ವೈದ್ಯಕೀಯ ವೃತ್ತಿನಿರತರ (ಆರ್‌ಎಂಪಿ) ಬಳಿ ತೆರಳಿದ ಸಂದರ್ಭದಲ್ಲಿ, ಪೋಕ್ಸೊ ಕಾಯ್ದೆ ಸೆಕ್ಷನ್ 19(1) ಅಡಿ ವೈದ್ಯರು, ಈ ವಿಷಯ ಕುರಿತು ಸಂಬಂಧಪಟ್ಟ ಪ್ರಾಧಿಕಾರಕ್ಕೆ ತಿಳಿಸಬೇಕು’ ಎಂದು ಸುಪ್ರೀಂಕೋರ್ಟ್ ಆದೇಶದಲ್ಲಿನ ಈ ಅಂಶವನ್ನು ಉಲ್ಲೇಖಿಸಿದೆ.

‘ಇಂತಹ ಸಂದರ್ಭಗಳಲ್ಲಿ ಬಾಲಕಿಯರು ಮತ್ತು ಅವರ ಪೋಷಕರ ಮುಂದೆ ಎರಡೇ ಆಯ್ಕೆಗಳಿರುತ್ತವೆ. ಒಂದೋ ಅವರು, ಆರ್‌ಎಂಪಿ ಬಳಿ ತೆರಳುವುದು ಹಾಗೂ ಪೋಕ್ಸೊ ಕಾಯ್ದೆಯಡಿ ನಡೆಯುವ ವಿಚಾರಣೆಯನ್ನು ಎದುರಿಸುವುದು. ಇಲ್ಲವೇ, ಅರ್ಹತೆ ಹೊಂದಿರದ ವೈದ್ಯನ ಬಳಿ ಹೋಗಿ ಗರ್ಭಪಾತ ಮಾಡಿಸಿಕೊಳ್ಳಬೇಕು’ ಎಂದೂ ಸುಪ್ರೀಂಕೋರ್ಟ್ ಹೇಳಿತ್ತು.

‘ಪೋಕ್ಸೊ ಕಾಯ್ದೆ ಸೆಕ್ಷನ್ 19(1) ಅಡಿ ಬಾಲಕಿಯ ಹೆಸರನ್ನು ಬಹಿರಂಗಪಡಿಸಬೇಕು ಎಂಬ ಒತ್ತಾಯವಿದ್ದಲ್ಲಿ, ಗರ್ಭಪಾತಕ್ಕಾಗಿ ಬಾಲಕಿಯರು ಆರ್‌ಎಂಪಿ ಬಳಿ ಹೋಗುವ ಸಾಧ್ಯತೆ ಕಡಿಮೆ ಇರುತ್ತದೆ’ ಎಂದೂ ಹೇಳಿತ್ತು.

‘ಈ ಎಲ್ಲ ಅಂಶಗಳಿಂದ ಸ್ಪಷ್ಟವಾಗುವ ವಿಷಯವೆಂದರೆ, ಸಮ್ಮತಿಯ ಲೈಂಗಿಕ ಸಂಪರ್ಕದಿಂದಾಗಿ ಗರ್ಭಿಣಿಯಾಗುವ ಬಾಲಕಿಯು ಗರ್ಭಪಾತ ಮಾಡಿಸಿಕೊಳ್ಳಲು ಆರ್‌ಎಂಪಿ ಬಳಿ ತೆರಳಿದ ಸಂದರ್ಭದಲ್ಲಿ, ಆಕೆಯ ಹೆಸರನ್ನು ಬಹಿರಂಗಪಡಿಸುವಂತೆ ಒತ್ತಾಯಪಡಿಸುವ ಅಗತ್ಯ ಇಲ್ಲ’ ಎಂದಿದೆ.





## ಪಾನ್ಸರೆ, ದಾಭೋಲ್ಕರ್, ಕಲಬುರ್ಗಿ, ಗೌರಿ ಲಂಕೇಶ್ ಹತ್ಯೆ

# ಸಮಾನ ಪಿತೂರಿ ಪತ್ತೆ: ಸಿಬಿಐಗೆ ಸೂಚನೆ

ಪ್ರಜಾವಾಣಿ ವಾರ್ತೆ

**ನವದೆಹಲಿ:** ವಿಚಾರವಾದಿಗಳಾದ ಗೋವಿಂದ ಪಾನ್ಸರೆ, ನರೇಂದ್ರ ದಾಭೋಲ್ಕರ್, ಎಂ.ಎಂ.ಕಲಬುರ್ಗಿ ಹಾಗೂ ಗೌರಿ ಲಂಕೇಶ್ ಅವರ ಹತ್ಯೆಗಳ ನಡುವೆ ಸಮಾನ ಅಂಶಗಳಿವೆಯೇ ಎಂಬುದನ್ನು ಪತ್ತೆ ಮಾಡುವಂತೆ ಸಿಬಿಐಗೆ ಸುಪ್ರೀಂಕೋರ್ಟ್ ಶುಕ್ರವಾರ ಸೂಚಿಸಿದೆ.

ನ್ಯಾಯಮೂರ್ತಿಗಳಾದ ಸಂಜಯಕಿಶನ್ ಕೌಲ್ ಮತ್ತು ಸುಧಾಂಶು ಧುಲಿಯಾ ಅವರಿದ್ದ ನ್ಯಾಯಪೀಠವು, ಸಿಬಿಐ ಪರ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯ ಭಾಟಿ ಅವರನ್ನು ಉದ್ದೇಶಿಸಿ ಈ ಮಾತು ಹೇಳಿತು.

ನರೇಂದ್ರ ದಾಭೋಲ್ಕರ್ ಪುತ್ರಿ ಮುಕ್ತಾ ದಾಭೋಲ್ಕರ್ ಸಲ್ಲಿಸಿರುವ ಅರ್ಜಿ ವಿಚಾರಣೆಯನ್ನು ನ್ಯಾಯಪೀಠ ನಡೆಸಿತು.

ಇದಕ್ಕೂ ಮುನ್ನ ವಾದ ಮಂಡಿಸಿದ ಮುಕ್ತಾ ಪರ ವಕೀಲ ಆನಂದ್ ಗ್ರೋವರ್,‘ಪ್ರಕರಣದ ಮೇಲ್ವಿಚಾರಣೆ ನಡೆಸಲು ಬಾಂಬೆ ಹೈಕೋರ್ಟ್ ನಿರಾಕರಿಸಿದೆ’ ಎಂದು ನ್ಯಾಯಪೀಠಕ್ಕೆ ತಿಳಿಸಿದರು. ‘ಈ ಪ್ರಕರಣ ಎರಡು ವಿಷಯಗಳನ್ನು ಒಳಗೊಂಡಿದೆ. ಕೋರ್ಟ್‌ನಿಂದ ಆದೇಶವಿದ್ದರೂ ಸಿಬಿಐ ತನಿಖೆಯನ್ನು ಪೂರ್ಣಗೊಳಿಸಿಲ್ಲ. ಎರಡನೆದಾಗಿ, ಪಾನ್ಸರೆ, ದಾಭೋಲ್ಕರ್, ಕಲಬುರ್ಗಿ ಹಾಗೂ ಗೌರಿ ಲಂಕೇಶ್ ಅವರ ಹತ್ಯೆಗಳ ನಡುವೆ ನಂಟಿದೆ ಎಂಬುದನ್ನು ಪ್ರಾಸಂಗಿಕ ಸಾಕ್ಷ್ಯಗಳು ಕೂಡ ಹೇಳುತ್ತವೆ’ ಎಂದರು.

‘ವಿಚಾರಣೆ ಪ್ರಗತಿಯಲ್ಲಿದ್ದು, ಹಲವಾರು ಸಾಕ್ಷಿಗಳ ಹೇಳಿಕೆಗಳನ್ನು ದಾಖಲಿಸಿಕೊಂಡಿರುವ ಕಾರಣ ತನಿಖೆಯ ಮೇಲ್ವಿಚಾರಣೆ ನಡೆಸಲು ಬಾಂಬೆ ಹೈಕೋರ್ಟ್ ನಿರಾಕರಿಸಿದೆ’ ಎಂದು ನ್ಯಾಯಪೀಠ ಹೇಳಿತು.

ಇದಕ್ಕೆ ಪ್ರತಿಕ್ರಿಯಿಸಿದ ಗ್ರೋವರ್, ‘ತಲೆಮರೆಸಿಕೊಂಡವರನ್ನು ಇನ್ನೂ ಪತ್ತೆ ಮಾಡಿ, ಬಂಧಿಸಿಲ್ಲ. ಈ ಹತ್ಯೆಗಳ ಹಿಂದೆ ದೊಡ್ಡ ಪಿತೂರಿ ಇದೆ’ ಎಂದರು.

‘ವಕೀಲ ಗ್ರೋವರ್ ಹೇಳಿದಂತೆ, ಈ ನಾಲ್ವರು ವಿಚಾರವಾದಿಗಳ ಹತ್ಯೆಗಳ ನಡುವೆ ಇರಬಹುದಾದ ಸಾಮಾನ್ಯ ಪಿತೂರಿಯನ್ನು ಪತ್ತೆ ಮಾಡಬೇಕು’ ಎಂದು ಹೆಚ್ಚುವರಿ ಸಾಲಿಸಿಟರ್ ಜನರಲ್ ಭಾಟಿ ಅವರನ್ನು ಉದ್ದೇಶಿಸಿ ನ್ಯಾಯಪೀಠ ಹೇಳಿತು.

ಪ್ರಕರಣಕ್ಕೆ ಸಂಬಂಧಿಸಿ ಹೆಚ್ಚುವರಿ ದಾಖಲೆಗಳನ್ನು ಸಲ್ಲಿಸಲು ಅರ್ಜಿದಾರ ಪರ ವಕೀಲ ಗ್ರೋವರ್ ಅವರಿಗೆ ಎರಡು ವಾರಗಳ ಕಾಲಾವಕಾಶ ನೀಡಿ ನ್ಯಾಯಪೀಠ ಆದೇಶಿಸಿತು.







**ಪ್ರವಾಹ ಸಂಕಷ್ಟ** ಹಿಮಾಚಲ ಪ್ರದೇಶದಲ್ಲಿ ಬಿಯಾಸ್ ನದಿ ಅಪಾಯದ ಮಟ್ಟ ಮೀರಿ ಹರಿಯುತ್ತಿದ್ದು, ಪ್ರವಾಹಪೀಡಿತ ಸ್ಥಳಗಳಿಂದ ಜನರು ಜಾನುವಾರುಗಳನ್ನು ರಕ್ಷಣೆ ಮಾಡಿದರು –ಎಎಫ್‌ಪಿ ಚಿತ್ರ

## ಡಬ್ಲ್ಯುಎಚ್‌ಒ ಮುಖ್ಯಸ್ಥ ಘೆಬ್ರೆಯೆಸಸ್ ಅಭಿಮತ

# ‘ಕೋವಿಡ್ ಈಗಲೂ ಅಪಾಯಕಾರಿ’

**ಗಾಂಧಿನಗರ (ಪಿಟಿಐ):** ‘ಕೋವಿಡ್–19 ಸದ್ಯ ಆರೋಗ್ಯ ತುರ್ತು ಪರಿಸ್ಥಿತಿ ಘೋಷಿಸುವಷ್ಟು ಗಂಭೀರ ಅಲ್ಲವಾದರೂ, ಈಗಲೂ ಅದು ಆರೋಗ್ಯದ ದೃಷ್ಟಿಯಿಂದ ‘ಜಾಗತಿಕವಾಗಿ ಅಪಾಯಕಾರಿ’ಯಾಗಿದೆಯೇ ಇದೆ’ ಎಂದು ಡಬ್ಲ್ಯುಎಚ್‌ಒ ಪ್ರಧಾನ ನಿರ್ದೇಶಕ ಡಾ.ಟೆಡ್ರೊಸ್ ಘೆಬ್ರೆಯೆಸಸ್ ಶುಕ್ರವಾರ ಹೇಳಿದರು.

ಇಲ್ಲಿ ನಡೆದ ಜಿ 20 ಶೃಂಗದ ಸದಸ್ಯ ರಾಷ್ಟ್ರಗಳ ಆರೋಗ್ಯ ಸಚಿವರ ಸಭೆ ಉದ್ದೇಶಿಸಿ ಅವರು ಮಾತನಾಡಿದರು.



‘ಡಬ್ಲ್ಯುಎಚ್‌ಒ ಈಚೆಗೆ ಕೊರೊನಾದ ಹೊಸ ತಳಿಯನ್ನು ವರ್ಗೀಕರಿಸಿದೆ. ಇದು ದೊಡ್ಡ ಪ್ರಮಾಣದಲ್ಲಿ ರೂಪಾಂತರ ಹೊಂದಬಹುದಾಗಿದೆ. ಬಿಎ.2.86 ರೂಪಾಂತರ ತಳಿಯನ್ನು ಸದ್ಯ ಸೂಕ್ಷ್ಮವಾಗಿ ಗಮನಿಸಲಾಗುತ್ತಿದೆ. ಎಲ್ಲ ರಾಷ್ಟ್ರಗಳು ಈ ವಿಷಯದಲ್ಲಿ ಕಟ್ಟೆಚ್ಚರ ವಹಿಸಬೇಕಾಗಿದೆ’ ಎಂದೂ ಹೇಳಿದರು.

‘ಸಾಂಕ್ರಾಮಿಕ ಸ್ಥಿತಿಯ ಸಂದರ್ಭದಲ್ಲಿ ಅನುಸರಿಸಬೇಕಾಗಿರುವ ಕ್ರಮಗಳನ್ನು ಎಲ್ಲ ರಾಷ್ಟ್ರಗಳು ಅಂತಿಮಗೊಳಿಸಬೇಕು. ಇದನ್ನು ಆಧರಿಸಿ ಮುಂದಿನ ವರ್ಷ ನಡೆಯಲಿರುವ ವಿಶ್ವ ಆರೋಗ್ಯ ಸಮ್ಮೇಳನದಲ್ಲಿ ನಿರ್ಣಯವನ್ನು ಕೈಗೊಳ್ಳಬಹುದು’ ಎಂದು ಸಲಹೆ ಮಾಡಿದರು.

‘ದೇಹದ ಆರೋಗ್ಯವು ಹದಗೆಟ್ಟರೆ ಎಲ್ಲವೂ ಹದಗೆಡಲಿದೆ ಎಂಬ ಮುಖ್ಯವಾದ ಪಾಠವನ್ನು ಕೋವಿಡ್–19 ಪಿಡುಗು ನಮಗೆ ಕಲಿಸಿಕೊಟ್ಟಿದೆ. ಈ ಸಾಂಕ್ರಾಮಿಕದಿಂದ ಜಗತ್ತು ನೋವಿನ ಪಾಠಗಳನ್ನು ಕಲಿತಿದೆ’ ಎಂದು ಡಾ. ಘೆಬ್ರೆಯೆಸಸ್ ಅಭಿಪ್ರಾಯಪಟ್ಟರು.

ಸಾಂಕ್ರಾಮಿಕ ಸಂದರ್ಭದಲ್ಲಿ ಪಾಲಿಸಬೇಕಾದ ನಿಯಮಗಳನ್ನು ಕುರಿತ ಚರ್ಚೆ ಮತ್ತು ಅಂತರರಾಷ್ಟ್ರೀಯ ಆರೋಗ್ಯ ನಿಯಮಗಳಿಗೆ ತಿದ್ದುಪಡಿ ಪ್ರಕ್ರಿಯೆಗಳು ನಡೆದಿವೆ ಎಂದರು.

**ಭಾರತಕ್ಕೆ ಶ್ಲಾಘನೆ:** ಪ್ರಾಥಮಿಕ ಆರೋಗ್ಯಚಿಕಿತ್ಸಾ ಕೇಂದ್ರದ ಹಂತದಲ್ಲಿ ಟೆಲಿಮೆಡಿಸಿನ್ ವ್ಯವಸ್ಥೆ ಜಾರಿಗೊಳಿಸಿರುವ ಕ್ರಮಕ್ಕಾಗಿ ಡಬ್ಲ್ಯುಎಚ್‌ಒ ಮುಖ್ಯಸ್ಥರು ಭಾರತದ ಕ್ರಮವನ್ನು ಇದೇ ಸಂದರ್ಭದಲ್ಲಿ ಶ್ಲಾಘಿಸಿದರು.

## ಸನ್ನದ್ಧರಾಗಲು ಮೋದಿ ಸಲಹೆ



ನರೇಂದ್ರ ಮೋದಿ

**ಗಾಂಧಿನಗರ (ಪಿಟಿಐ):** ಸಾರ್ವಜನಿಕರ ಆರೋಗ್ಯ ರಕ್ಷಣೆಗಾಗಿ ನವೀನ ಆವಿಷ್ಕಾರಗಳು ಹಾಗೂ ತಂತ್ರಜ್ಞಾನದ ಸಮಾನ ಲಭ್ಯತೆಗೆ ಪೂರಕವಾಗಿ ಕಾರ್ಯನಿರ್ವಹಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಜಿ 20 ಶೃಂಗದ ಸದಸ್ಯ ರಾಷ್ಟ್ರಗಳಿಗೆ ಕರೆ ನೀಡಿದರು.

ಇಲ್ಲಿ ನಡೆದ ಜಿ 20 ಸದಸ್ಯ ರಾಷ್ಟ್ರಗಳ ಆರೋಗ್ಯ ಸಚಿವರ ಸಭೆ ಉದ್ದೇಶಿಸಿ ವಿಡಿಯೊ ಕಾನ್ಫರೆನ್ಸ್ ಮೂಲಕ ಮಾತನಾಡಿದ ಅವರು, ಮುಂದಿನ ಆರೋಗ್ಯ ತುರ್ತು ಅನ್ನು ಪರಿಣಾಮಕಾರಿಯಾಗಿ ಎದುರಿಸಲು ಸರ್ವರೂ ಸಜ್ಜಾಗಿರಬೇಕು ಎಂದು ಅಭಿಪ್ರಾಯಪಟ್ಟರು.

ಡಿಜಿಟಲ್ ಪರಿಹಾರ ಕ್ರಮಗಳು, ನವೀನ ಅನ್ವೇಷಣೆಗಳು ನಮ್ಮ ಪ್ರಯತ್ನಗಳು ಸಮಾನವಾಗಿ ತಲುಪಲು, ಸೇರ್ಪಡೆಯುಕ್ತ ಕ್ರಮದಲ್ಲಿ ಜಾರಿಗೊಳಿಸಲು ಅನುಕೂಲಕರ. ತಂತ್ರಜ್ಞಾನದ ನೆರವು ಎಲ್ಲರಿಗೂ ತಲುಪುವಂತಹ ವ್ಯವಸ್ಥೆ ರೂಪಿಸೋಣ. ಇದು, ಜಾಗತಿಕ ಆರೋಗ್ಯ ರಕ್ಷಣೆ ಗುರಿಯತ್ತ ನಮ್ಮನ್ನು ಕರೆದೊಯ್ಯುತ್ತದೆ ಎಂದರು.

ಕ್ಷಯವನ್ನು ಜಾಗತಿಕ ಗಡುವಿಗೆ ಮೊದಲೇ ಭಾರತ ನಿರ್ಮೂಲನೆ ಮಾಡಲಿದೆ ಎಂದು ಸಭೆಗೆ ಮಾಹಿತಿ ನೀಡಿದ ಪ್ರಧಾನಿ, ಕ್ಷಯ ನಿರ್ಮೂಲನೆ ವಿಷಯದಲ್ಲಿ ಕೈಜೋಡಿಸುವಂತೆ ನಾಗರಿಕರಿಗೂ ಕೋರಲಾಗಿದೆ ಕ್ಷಯ ನಿರ್ಮೂಲನೆಗೆ 2030 ಜಾಗತಿಕ ಗಡುವಾಗಿದೆ. ಅದಕ್ಕೇ ಮೊದಲೇ ಭಾರತ ಗುರಿ ಸಾಧಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in





## ಸುಭಾಷಿತ

ಎಲ್ಲ ಶಕ್ತಿಗಳೂ ನಿಮ್ಮೊಳಗೇ ಇವೆ. ನೀವು ಏನು ಬೇಕಾದರೂ ಮಾಡಬಹುದು.

–ಸ್ವಾಮಿ ವಿವೇಕಾನಂದ

# ಲಿಂಗತ್ವ ಪೂರ್ವಗ್ರಹ: 'ಸುಪ್ರೀಂ' ಕೈಪಿಡಿ ಸಮುದಾಯಗಳಿಗೂ ದಾರಿದೀಪ

**ಸಮಾಜದಲ್ಲಿ** ಬೇರುಬಿಟ್ಟಿರುವ ಪೂರ್ವಗ್ರಹಗಳನ್ನು ನಿವಾರಿಸಲು ಇರುವ ಒಂದು ಪ್ರಮುಖ ಅಸ್ತ್ರ ಭಾಷೆ ಹಾಗೂ ಭಾವದಲ್ಲಿ ಬದಲಾವಣೆ. ಪೂರ್ವಗ್ರಹಗಳು ಮಹಿಳೆಯ ವಿಚಾರದಲ್ಲಿ ಹೆಚ್ಚಾಗಿ ಇವೆ. ನಿರ್ದಿಷ್ಟ ಸಮುದಾಯಗಳನ್ನು ಗುರಿಯಾಗಿಸಿಕೊಂಡೂ ಪೂರ್ವಗ್ರಹಗಳನ್ನು ಸಮಾಜ ಬೆಳೆಸಿಕೊಂಡಿದೆ. ಇವುಗಳನ್ನೆಲ್ಲ ನಿವಾರಿಸಬೇಕಿರುವುದು ಸಭ್ಯ ಸಮಾಜದ ಹೊಣೆ ಹೌದು. ಆದರೆ ನಿವಾರಿಸುವ ಬಗೆ ಸರಳವಾಗಿಲ್ಲ. ಸಮಾಜದಲ್ಲಿ ಪೂರ್ವಗ್ರಹಗಳು ಸಂಕೀರ್ಣ ಸ್ವರೂಪದಲ್ಲಿ ಬೆಳೆದುಬಂದಿರುವ ಕಾರಣ, ತೀರಾ ಸರಳವಾದ ಪರಿಹಾರ ಮಾರ್ಗಗಳು ಸಿಗಲಿಕ್ಕಿಲ್ಲ. ಮಹಿಳೆಯರನ್ನು ಉದ್ದೇಶಿಸಿ ಆಡುವ ಮಾತುಗಳಲ್ಲಿ ಪೂರ್ವಗ್ರಹಗಳು ಕೆಲವೊಮ್ಮೆ ಸಹಜ ಎಂಬಂತೆ ವ್ಯಕ್ತವಾಗುತ್ತಿರುತ್ತವೆ. ಇಂತಹ ಪೂರ್ವಗ್ರಹಗಳನ್ನು ನಿವಾರಿಸುವ ಉದ್ದೇಶದಿಂದ ಕೈಪಿಡಿಯೊಂದನ್ನು ಸುಪ್ರೀಂ ಕೋರ್ಟ್ ಈಚೆಗೆ ಸಿದ್ಧಪಡಿಸಿದೆ. ಬಹಳ ಪ್ರಗತಿಪರವಾದ ನಡೆ ಇದು. ನ್ಯಾಯಾಲಯದ ಕಲಾಪಗಳಲ್ಲಿ ಮಹಿಳೆಯರಿಗೆ ಸಂಬಂಧಿಸಿದ ವಿಷಯಗಳನ್ನು ನಿಭಾಯಿಸುವ ಸಂದರ್ಭಗಳಲ್ಲಿ ಪೂರ್ವಗ್ರಹವನ್ನು ಗಟ್ಟಿಗೊಳಿಸುವ ಪದಗಳನ್ನು ಬಳಸಬಾರದು; ಅವುಗಳ ಬದಲಿಗೆ ಹೆಚ್ಚು ಸಂವೇದನಾಶೀಲವಾದ ಪರ್ಯಾಯ ಪದಗಳನ್ನು ಬಳಸಬೇಕು ಎಂದು ಈ ಕೈಪಿಡಿಯಲ್ಲಿ ಹೇಳಲಾಗಿದೆ. ಮಹಿಳೆಯರನ್ನು ಉದ್ದೇಶಿಸಿ ಆಡುವ, ಪೂರ್ವಗ್ರಹಪೀಡಿತ ನಿರ್ದಿಷ್ಟ ಪದಗಳ ಬದಲಾಗಿ, ಹೆಚ್ಚು ಸಭ್ಯವಾದ ಪದಗಳ ಪಟ್ಟಿಯನ್ನು ನೀಡಲಾಗಿದೆ. ಇದು ನ್ಯಾಯಾಲಯದ ಕಲಾಪಗಳಿಗೆ ಅನ್ವಯವಾಗುತ್ತದೆಯಾದರೂ, ಸಾರ್ವಜನಿಕ ಜೀವನದಲ್ಲಿ ಎಲ್ಲ ಹಂತಗಳಲ್ಲಿಯೂ ಅಳವಡಿಸಿಕೊಳ್ಳಲು ಕೂಡ ಸೂಕ್ತವಾಗಿದೆ.



ಪೂರ್ವಗ್ರಹಗಳನ್ನು ನಿವಾರಿಸುವ ಹಾಗೂ ಸಮಾಜವನ್ನು ಇನ್ನಷ್ಟು ಸಂವೇದನಾಶೀಲವಾಗಿಸುವ ಕೆಲಸದಲ್ಲಿ ಸಮುದಾಯಗಳು ತೊಡಗಿಸಿಕೊಳ್ಳುವುದಕ್ಕೆ ಸುಪ್ರೀಂ ಕೋರ್ಟ್ ಸಿದ್ಧಪಡಿಸಿರುವ ಈ ಕೈಪಿಡಿಯು ಮಾರ್ಗದರ್ಶಿಯಾಗಿ ನೆರವಿಗೆ ಬರಬಲ್ಲದು

'ಮಹಿಳೆಯ ಅಭಿವ್ಯಕ್ತಿಯ ಬಗೆಯನ್ನು ಆಧರಿಸಿ ಅಥವಾ ಆಕೆಯ ಲೈಂಗಿಕ ಹಿನ್ನೆಲೆಯನ್ನು ಗಮನಿಸಿ ಆ ಮಹಿಳೆಯ ವ್ಯಕ್ತಿತ್ವ ಹಾಗೂ ನಡತೆಯ ಬಗ್ಗೆ ಕೆಲವು ನಂಬಿಕೆಗಳನ್ನು ಬೆಳೆಸಿಕೊಳ್ಳಲಾಗುತ್ತದೆ. ಆದರೆ, ನ್ಯಾಯಾಲಯದ ಕಲಾಪಗಳ ಸಂದರ್ಭದಲ್ಲಿ ಮಹಿಳೆಯ ನಡೆ ಹಾಗೂ ಹೇಳಿಕೆಗಳನ್ನು ಸ್ವೀಕರಿಸುವ ಬಗೆಯ ಮೇಲೆ ಇಂತಹ ನಂಬಿಕೆಗಳು ಪ್ರಭಾವ ಬೀರುತ್ತವೆ. ಮಹಿಳೆಯ ನಡತೆ ಅಥವಾ ಆಕೆ ಧರಿಸುವ ಬಟ್ಟೆಯನ್ನು ಆಧರಿಸಿದ ನಂಬಿಕೆಗಳು, ಲೈಂಗಿಕ ಸಂಬಂಧಗಳ ವಿಚಾರದಲ್ಲಿ ಮಹಿಳೆಯ ಒಪ್ಪಿಗೆಗೆ ಇರುವ ಮಹತ್ವವನ್ನು ಕುಗ್ಗಿಸುತ್ತವೆ. ಮಹಿಳೆಯರ ಕ್ರಿಯಾಸ್ವಾತಂತ್ರ್ಯ ಹಾಗೂ ಅವರ ವ್ಯಕ್ತಿತನಕ್ಕೆ ಇರುವ ಮಹತ್ವವನ್ನು ಕೂಡ ತಗ್ಗಿಸುತ್ತವೆ' ಎಂದು ಸುಪ್ರೀಂ ಕೋರ್ಟ್ ಸಿದ್ಧಪಡಿಸಿರುವ ಕೈಪಿಡಿಯಲ್ಲಿ ಹೇಳಲಾಗಿದೆ. ಈ ಕೈಪಿಡಿಯಲ್ಲಿ ಬಳಸಿರುವ ಭಾಷೆ, ಆ ಭಾಷೆಯು ಹೊಮ್ಮಿಸುವ ಭಾವ ಬಹಳ ಮಾನವೀಯವಾಗಿವೆ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಭಾರತೀಯ ಸಮಾಜದಲ್ಲಿ ಎಲ್ಲ ಸಮುದಾಯ, ಎಲ್ಲ ವರ್ಗಗಳ ವಿಚಾರದಲ್ಲಿಯೂ ಪೂರ್ವಗ್ರಹಗಳು ಬೆಳೆದಿವೆಯಾದರೂ, ಎಲ್ಲ ಸಮುದಾಯಗಳಲ್ಲಿಯೂ ಇರುವ ಮಹಿಳೆಯರ ಬಗ್ಗೆ ಪೂರ್ವಗ್ರಹಗಳು ಹೆಚ್ಚೇ ಇವೆ. ವ್ಯಕ್ತಿಯೊಬ್ಬ ವ್ಯಗ್ರಗೊಂಡಾಗ ಬಳಸುವ ಭಾಷೆಯು ಮಹಿಳೆಯನ್ನು ತೀರಾ ಕೆಟ್ಟದಾಗಿ ನಿಂದಿಸುವ ಬಗೆಯಲ್ಲಿಯೇ ಇರುತ್ತದೆ.

ಪೂರ್ವಗ್ರಹಗಳನ್ನು ಇನ್ನಷ್ಟು ಗಟ್ಟಿಗೊಳಿಸುವ ರೀತಿಯಲ್ಲಿ ಇರುವ ಭಾಷೆಯ ಬಳಕೆಯಲ್ಲಿ ಬದಲಾವಣೆಗಳನ್ನು ತರುವ ಕೆಲಸವನ್ನು ಸರ್ಕಾರ, ನ್ಯಾಯಾಂಗ ಮಾಡಬಹುದು. ಅಥವಾ ಯಾವುದೇ ಸಂಸ್ಥೆ ಈ ಕೆಲಸ ಮಾಡಬಹುದು. ಆದರೆ, ಇಂತಹ ಸಾಂಸ್ಥಿಕ ಪ್ರಯತ್ನಗಳಿಗೆ ಕೂಡ ಒಂದು ಮಿತಿ ಇರುತ್ತದೆ. ಭಾಷೆಯು ವ್ಯಕ್ತಿಯಲ್ಲಿನ ಭಾವವನ್ನು ಹೇಳುತ್ತಿರುತ್ತದೆ. ವ್ಯಕ್ತಿಯ ಹಂತದಲ್ಲಿ ಮೂಡುವ ಭಾವವನ್ನು ಯಾವುದೇ ಸಾಂಸ್ಥಿಕ ಪ್ರಯತ್ನದ ಮೂಲಕ ಪೂರ್ತಿಯಾಗಿ ಸರಿಪಡಿಸಲಾಗದು. ಹೆಣ್ಣಿನ ವಿಚಾರದಲ್ಲಿಯಾಗಲೀ, ಸಮಾಜದ ಯಾವುದೇ ವರ್ಗದ ವಿಚಾರದಲ್ಲಿಯಾಗಲೀ ವ್ಯಾಪಕವಾಗಿ ಬೆಳೆದುನಿಂತಿರುವ ಪೂರ್ವಗ್ರಹಗಳನ್ನು ವ್ಯಕ್ತಿಗತ ನೆಲೆಯಲ್ಲಿಯೂ ಸರಿಪಡಿಸಬೇಕು. ಈ ಕೆಲಸವನ್ನು ಸರ್ಕಾರ ಅಥವಾ ಇನ್ಯಾವುದೇ ಸಂಸ್ಥೆ ಮಾಡಬೇಕು ಎಂದು ಅಪೇಕ್ಷಿಸುವುದಕ್ಕಿಂತ, ಇದರಲ್ಲಿ ಸಮುದಾಯಗಳು ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು. ಮಹಿಳೆಯರನ್ನು ಉದ್ದೇಶಿಸಿ ಇರುವ ಪೂರ್ವಗ್ರಹಗಳು ಸರ್ಕಾರ, ನ್ಯಾಯಾಂಗದಂತಹ ಸಾಂಸ್ಥಿಕ ವ್ಯವಸ್ಥೆ ರೂಪುಗೊಳ್ಳುವುದಕ್ಕಿಂತಲೂ ಬಹಳ ಹಿಂದಿನಿಂದ ಇವೆ. ಅಷ್ಟೇ ಅಲ್ಲ, ಪೂರ್ವಗ್ರಹಗಳು ಸಾಂಸ್ಥಿಕ ವ್ಯವಸ್ಥೆಯ ಆಚೆಗೂ ಬಹಳ ಆಳವಾಗಿ ಬೇರುಬಿಟ್ಟಿವೆ. ಈ ಕಾರಣದಿಂದಾಗಿಯೇ ಪೂರ್ವಗ್ರಹಗಳನ್ನು ಕಿತ್ತುಹಾಕುವ ಕೆಲಸವು ಯಾವುದೇ ಒಂದು ಸಂಸ್ಥೆಯಿಂದ ಆಗುವಂಥದ್ದಲ್ಲ. ಆದರೆ, ಪೂರ್ವಗ್ರಹಗಳನ್ನು ನಿವಾರಿಸುವ ಹಾಗೂ ಸಮಾಜವನ್ನು ಇನ್ನಷ್ಟು ಮಾನವೀಯವಾಗಿಸುವ, ಸಂವೇದನಾಶೀಲವಾಗಿಸುವ ಕೆಲಸದಲ್ಲಿ ಸಮುದಾಯಗಳು ತೊಡಗಿಸಿಕೊಳ್ಳುವುದಕ್ಕೆ ಸುಪ್ರೀಂ ಕೋರ್ಟ್ ಸಿದ್ಧಪಡಿಸಿರುವ ಈ ಕೈಪಿಡಿಯು ಒಂದು ಮಾರ್ಗದರ್ಶಿಯಾಗಿ ಖಂಡಿತ ನೆರವಿಗೆ ಬರಬಲ್ಲದು.

## ದಿನದ ಟ್ವೀಟ್


### ಬಲಿಗಾಗಿ ಕಾಯುತ್ತಿದ್ದಾರೆಯೇ?



**ಬೆಂಗಳೂರಿನಾದ್ಯಂತ ನೇತಾಡುತ್ತಿರುವ ಅಪಾಯಕಾರಿ ಕೇಬಲ್‌ಗಳಿಗೆ ಸಂಬಂಧಿಸಿದಂತೆ ಬಿಬಿಎಂಪಿ ಆಯುಕ್ತರು ಕೋರ್ಟ್ ಆದೇಶ ಜಾರಿಗೊಳಿಸುವರೇ ಅಥವಾ ಸಾವು ಸಂಭವಿಸುವವರೆಗೆ ಕಾಯುವರೇ?**

**ಕವಿತಾ ರೆಡ್ಡಿ,** ಪರಿಸರ ಕಾರ್ಯಕರ್ತೆ

## ಕಿಡಿನುಡಿ



**ಆಡಳಿತ ನಡೆಸುವವರು ಪುರೋಗಾಮಿಗಳಾಗಿರಬೇಕು. ಪ್ರತಿಗಾಮಿಗಳಾಗಬಾರದು...!!!**

(ಅಧಿಕಾರಕ್ಕೆ ಬಂದ ನಂತರ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರದ್ದು ಮಾಡುತ್ತೇವೆ ಎಂದಿದ್ದ ಮಾತಿಗೆ ಬದ್ಧರಾಗಿದ್ದೇವೆ ಎಂಬ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಟ್ವೀಟ್‌ಗೆ ಪ್ರತಿಕ್ರಿಯೆ)

**ಬಿ.ಎಲ್.ಸಂತೋಷ್,** ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ

## 25 ವರ್ಷಗಳ ಹಿಂದೆ

ಬುಧವಾರ, 19-8-1998

- **ಲೈಂಗಿಕ ಹಗರಣ: ಅಮೆರಿಕ ಅಧ್ಯಕ್ಷ ಕ್ಲಿಂಟನ್ ತಪ್ಪೊಪ್ಪಿಗೆ**

**ವಾಷಿಂಗ್ಟನ್, ಆ. 18 (ಪಿಟಿಐ, ಯುಎನ್‌ಐ)**– ಶ್ವೇತಭವನದ ಸಹಾಯಕಿ ಮೋನಿಕಾ ಲೆವಿನ್‌ಸ್ಕಿ ಜತೆ ತಾವು 'ಅನುಚಿತ, ಅನೈತಿಕ ಸಂಬಂಧ' ಹೊಂದಿದ್ದುದಾಗಿ ಅಮೆರಿಕದ ಅಧ್ಯಕ್ಷ ಬಿಲ್ ಕ್ಲಿಂಟನ್ ಅವರು ನಿನ್ನೆ ರಾತ್ರಿ ರಾಷ್ಟ್ರವನ್ನುದ್ದೇಶಿಸಿ ಮಾಡಿದ ವಿಶೇಷ ಭಾಷಣದಲ್ಲಿ ಒಪ್ಪಿಕೊಂಡರು.

'ನಾನು ಲೆವಿನ್‌ಸ್ಕಿ ಜತೆ ಉಚಿತವಲ್ಲದ ಅನೈತಿಕ ಲೈಂಗಿಕ ಸಂಬಂಧ ಹೊಂದಿದ್ದುದು ನಿಜ. ಆ ಸಂಬಂಧ ತಪ್ಪು' ಎಂದು ತಮ್ಮ ಅಧ್ಯಕ್ಷತೆಗೇ ಸಂಚಕಾರ ತರಬಲ್ಲುದಾದ ಲೈಂಗಿಕ ಹಗರಣದ ಕುರಿತು 23 ಸದಸ್ಯರ ನ್ಯಾಯದರ್ಶಿಗಳ ಮಂಡಳಿಗೆ ಐದು ತಾಸುಗಳ ಕಾಲ ಸಾಕ್ಷ್ಯ ನೀಡಿದ ನಂತರ ಮಾಡಿದ ಐದು ನಿಮಿಷಗಳ ಭಾಷಣದಲ್ಲಿ ಕ್ಲಿಂಟನ್ ಒಪ್ಪಿಕೊಂಡರು.

'ಉಚಿತ– ಅನುಚಿತಗಳ ಬಗೆಗಿನ ವಿವೇಕ ನನಗಿಲ್ಲದೇ ಹೋಯಿತು. ನನ್ನ ವೈಯಕ್ತಿಕ ಸೋಲು ಇದು. ಇದಕ್ಕೆಲ್ಲ ನಾನೊಬ್ಬನೇ ಸಂಪೂರ್ಣವಾಗಿ ಹೊಣೆ' ಎಂದು ಅವರು ತಮ್ಮ ಭಾಷಣದಲ್ಲಿ ತಪ್ಪೊಪ್ಪಿಕೊಂಡು, 'ಈ ಮೂಲಕ ನಾನು ನನ್ನ ಪತ್ನಿಯನ್ನೂ ಮಗಳನ್ನೂ ಗಾಸಿಗೊಳಿಸಿದ್ದೇನೆ' ಎಂದರು.

- **ಉ.ಪ್ರದೇಶದಲ್ಲಿ ಭೂಕುಸಿತ, ಪ್ರವಾಹ: ನೃತ್ಯ ಕಲಾವಿದೆ ಪ್ರತಿಮಾ ಬೇಡಿ ಸೇರಿ 180 ಮಂದಿ ದುರ್ಮರಣ**

**ನೈನಿತಾಲ್, ಆ. 18 (ಯುಎನ್‌ಐ)**– ಉತ್ತರಪ್ರದೇಶದ ಪಿತೋರ್‌ಗಢ ಜಿಲ್ಲೆಯಲ್ಲಿ ಭಾರೀ ಮಳೆಯಿಂದ ಪ್ರವಾಹ ಹಾಗೂ ಭೂಕುಸಿತಕ್ಕೆ ಸಿಲುಕಿ, ಕೈಲಾಸ ಮಾನಸ ಸರೋವರ ಯಾತ್ರೆ ಹೊರಟಿದ್ದ ಸುಮಾರು 60 ಮಂದಿಯೂ ಸೇರಿದಂತೆ ಕನಿಷ್ಠ 180 ಜನರು ಸತ್ತಿದ್ದಾರೆ.

ಈ ದುರ್ಘಟನೆಯಲ್ಲಿ ಸತ್ತಿರುವವರ ಪಟ್ಟಿಯಲ್ಲಿ ಹೆಸರಾಂತ ನೃತ್ಯ ಕಲಾವಿದೆ, ಪ್ರತಿಮಾ ಬೇಡಿಯವರ ಹೆಸರೂ ಸೇರಿದೆ.

## 50 ವರ್ಷಗಳ ಹಿಂದೆ

ಭಾನುವಾರ, 19-8-1973

- **ಕಾಳಸಂತೆಕೋರರಿಗೆ ಸಮಾಜದ ಬಹಿಷ್ಕಾರ– ಇಂದಿರಾ ಗಾಂಧಿ ಕರೆ**

**ನವದೆಹಲಿ, ಆ. 18**– ಕಾಳಸಂತೆಕೋರರು ಮತ್ತು ಧಾನ್ಯ ಬಚ್ಚಿಡುವವರು ಮಾಮೂಲಾದ ಸಾಮಾಜಿಕ ಜೀವನ ನಡೆಸುವುದಕ್ಕೆ ದುಸ್ತರವಾಗುವಂತಹ ವಾತಾವರಣವನ್ನು ತರುಣರು ಸೃಷ್ಟಿಸಬೇಕೆಂದು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಅವರು ಇಂದು ಕರೆ ಕೊಟ್ಟಿದ್ದಾರೆ.

ಇಲ್ಲಿ ದೆಹಲಿ ಪ್ರದೇಶದ ಯುವಜನ ಕಾಂಗ್ರೆಸ್ ಸಭೆಯನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ, ಸರ್ಕಾರ ಅಂಥವರ ವಿರುದ್ಧ ಉಗ್ರ ಕ್ರಮ ತೆಗೆದುಕೊಳ್ಳುತ್ತಿದೆಯೆಂದು ಹೇಳಿ, ಈ ಪಿಡುಗನ್ನು ಶಾಸನದ ಮೂಲಕ ಮಾತ್ರವಲ್ಲದೆ ಸಂಘಟಿತ ಜನಾಭಿಪ್ರಾಯದ ಮೂಲಕವೂ ಎದುರಿಸಲು ತಾವು ಬಯಸುವುದಾಗಿ ತಿಳಿಸಿದರು.

- **ಹಸಿವಿಗೆ ಮೂವರು ಬಲಿ**

**ಕಲ್ಲಿಕೋಟೆ, ಆ. 18**– ಕಣ್ಣಾನೂರು ಜಿಲ್ಲೆಯ ಚಿತ್ತರಮೂಲ ಎಂಬಲ್ಲಿ ಕಳೆದ ವಾರ ಒಂದೇ ಕುಟುಂಬದ ಮೂವರು ಹಸಿವಿಗೆ ಬಲಿಯಾದ ಸುದ್ದಿ ವರದಿಯಾಗಿದೆ.

ಚಿಂತಾಜನಕ ಸ್ಥಿತಿಯಲ್ಲಿದ್ದ ಇನ್ನೂ ಮೂವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಸೇರಿಸಲಾಯಿತು.

ವಿವಿಧ ಸ್ತರಗಳ ಚುನಾಯಿತ ಪ್ರತಿನಿಧಿಗಳಿಗೆ ಸಾಮಾಜಿಕ ನ್ಯಾಯದ ಕುರಿತು ಅರಿವಿರಬೇಕು

# 'ಸಾಮಾಜಿಕ ನ್ಯಾಯ' ಪಠ್ಯ ಸೇರಲಿ



ವಿಶ್ಲೇಷಣೆ

ಎಚ್.ಕಾಂತರಾಜ

**ಚಾತುರ್ವರ್ಣ** ಪದ್ಧತಿಯ ಕಾರಣದಿಂದ ಭಾರತದಲ್ಲಿ ತಳ ಸಮುದಾಯಗಳ ಜನರು ಶತಮಾನಗಳ ಕಾಲದಿಂದಲೂ ಸಾಮಾಜಿಕವಾಗಿ ಶೋಷಣೆಗೆ ಗುರಿಯಾಗಿದ್ದಾರೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳೂ ಸೇರಿದಂತೆ ಎಲ್ಲ ತಳ ಸಮುದಾಯಗಳ ಜನರಿಗೆ ದೇಶಕ್ಕೆ ಸ್ವಾತಂತ್ರ್ಯ ದೊರಕಿ, ಸಂವಿಧಾನವನ್ನು ಅಳವಡಿಸಿಕೊಳ್ಳುವವರೆಗೂ ಸಾಮಾಜಿಕ ನ್ಯಾಯ ಮತ್ತು ಸಮಾನತೆ ಎಂಬುದು ಮರೀಚಿಕೆಯಾಗಿಯೇ ಇತ್ತು. ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯ ಪರಿಣಾಮವಾಗಿ ದೇಶದ ಬಹುಸಂಖ್ಯಾತರು ಅನುಭವಿಸಿದ್ದ ಶೋಷಣೆಗೆ ಪರಿಹಾರ ಒದಗಿಸಲೆಂದೇ ಸಂವಿಧಾನದಲ್ಲಿ 'ಸಾಮಾಜಿಕ ನ್ಯಾಯ'ದ ತತ್ವವನ್ನು ಅಳವಡಿಸಲಾಗಿದೆ.

ಪ್ರಜಾಪ್ರಭುತ್ವ, ಸಮಾಜವಾದ ಮತ್ತು ಜಾತ್ಯತೀತತೆ ಭಾರತದ ಸಂವಿಧಾನವು ಒಳಗೊಂಡಿರುವ ಬಹುಮುಖ್ಯ ವಿಷಯಗಳು. 'ಸಮಾಜವಾದ' ಎಂದರೆ 'ಸಾಮಾಜಿಕ ನ್ಯಾಯ' ಎಂದರ್ಥ. 'ಸರ್ವರಿಗೂ ಸಮಪಾಲು– ಸರ್ವರಿಗೂ ಸಮಬಾಳು' ಎಂಬುದೇ ಸಾಮಾಜಿಕ ನ್ಯಾಯದ ತಿರುಳು. ಚಾತುರ್ವರ್ಣದ ಆಧಾರದಲ್ಲಿ ಅಸ್ತಿತ್ವದಲ್ಲಿದ್ದ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯು ಈ ನೆಲದ ತಳ ಸಮುದಾಯಗಳಿಗೆ ಮಾಡಿರುವ ಗಾಸಿಯನ್ನು ಸಂಪೂರ್ಣವಾಗಿ ಗುಣಪಡಿಸುವವರೆಗೂ ಸಾಮಾಜಿಕ ನ್ಯಾಯದ ರಥವನ್ನು ಮುಂದಕ್ಕೆ ಎಳೆಯುವುದು ಅಗತ್ಯ. ಆದರೆ, ಈ ಪ್ರಕ್ರಿಯೆಯು ಸುಸೂತ್ರವಾಗಿ ನಡೆಯಬೇಕಾದರೆ ನಮ್ಮ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದಲ್ಲಿ ಕಾರ್ಯನಿರ್ವಹಿಸುವವರಿಗೆ ಸಾಮಾಜಿಕ ನ್ಯಾಯದ ಪರಿಕಲ್ಪನೆ, ಅದರ ಅಗತ್ಯ, ಸಾಮಾಜಿಕ ನ್ಯಾಯವನ್ನು ಜಾರಿಗೊಳಿಸುವುದರಿಂದ ದೇಶದಲ್ಲಿ ಆಗುವ ಬದಲಾವಣೆಗಳ ಕುರಿತು ಅರಿವು ಇರಬೇಕಾಗುತ್ತದೆ. ಈ ವಿಚಾರದಲ್ಲಿ ಅರಿವಿನ ಕೊರತೆಯು ಭವಿಷ್ಯದ ದಿನಗಳಲ್ಲಿ ದೊಡ್ಡ ಹಿನ್ನಡೆಗೆ ಕಾರಣವಾಗುವ ಅಪಾಯವಿದೆ.

ಸಂವಿಧಾನವೇ ದೇಶದ ಪರಮೋಚ್ಚ ಕಾನೂನು. ಪ್ರತಿಯೊಬ್ಬ ಪ್ರಜ್ಞೆಯೂ ಸಂವಿಧಾನದ ತತ್ವಗಳನ್ನು ಗೌರವಿಸಿ ಪಾಲಿಸಲೇಬೇಕಾದುದು ಕರ್ತವ್ಯ ಎಂದು ಭಾರತ ಸಂವಿಧಾನದ ವಿಧಿ 51-ಎ ಆಜ್ಞಾಪಿಸಿದೆ. ಸಂವಿಧಾನದ ಪ್ರಸ್ತಾವನೆಯಲ್ಲಿ, ಪ್ರತಿಯೊಬ್ಬ ಪ್ರಜೆಗೂ ನ್ಯಾಯ ಸಿಗಬೇಕು ಎಂದು ಹೇಳುವಾಗ ಸಾಮಾಜಿಕ ನ್ಯಾಯಕ್ಕೆ ಆದ್ಯತೆ ನೀಡಲಾಗಿದೆ. ಇದರ ಸಾಧನೆಯ ಮಾರ್ಗಗಳು 14, 15 (4), 16(4), 340, 341, 342ನೇ ವಿಧಿಗಳು ಸೇರಿದಂತೆ ಸಂವಿಧಾನದ ಇನ್ನೂ ಹಲವು ಭಾಗಗಳಲ್ಲಿ ಅಡಕವಾಗಿವೆ. ಸಾಮಾಜಿಕ ನ್ಯಾಯದ ತತ್ವಕ್ಕೆ ಸಂವಿಧಾನದಲ್ಲಿ ಇಷ್ಟೊಂದು ಆದ್ಯತೆಯನ್ನು ಏಕೆ ನೀಡಲಾಯಿತು ಎಂಬ ಪ್ರಶ್ನೆಯನ್ನು ಹಾಕಿಕೊಂಡರೆ, ಸಂವಿಧಾನವನ್ನು ಅಳವಡಿಸಿಕೊಳ್ಳುವುದಕ್ಕೂ ಮೊದಲು ದೇಶದಲ್ಲಿ ಇದ್ದ ಅಪರಿಮಿತ ಸಾಮಾಜಿಕ ಅಸಮಾನತೆಯ ಕುರುಹುಗಳು ಉತ್ತರದ ರೂಪದಲ್ಲಿ ಕಾಣಸಿಗುತ್ತವೆ. ಸಾಮಾಜಿಕ ನ್ಯಾಯವು ಸಂವಿಧಾನದ ಬದಲಿಸಲಾಗದ ಮೂಲ ತತ್ವಗಳಲ್ಲಿ ಒಂದಾಗಿದೆ. ದೇಶದ ಪ್ರತಿ ಪ್ರಜೆಯೂ ಸಾಮಾಜಿಕ ನ್ಯಾಯವನ್ನು ಅರ್ಥ ಮಾಡಿಕೊಂಡು, ಎಲ್ಲ ಹಂತದಲ್ಲೂ ಅದನ್ನು ಅನುಷ್ಠಾನಕ್ಕೆ ತರಬೇಕಿದೆ. 'ದೇಶದ ಸಾಂವಿಧಾನಿಕ ನ್ಯಾಯಾಲಯಗಳು (ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್) ಯಾವುದೇ ವ್ಯಾಜ್ಯದಲ್ಲಿ ತೀರ್ಪು ನೀಡಿದರೂ, ಆ ತೀರ್ಪು ಸಾಮಾಜಿಕ ನ್ಯಾಯದ ತತ್ವವನ್ನು ಪ್ರತಿಬಿಂಬಿಸುವಂತೆ ಇರಬೇಕು' ಎಂದು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯಾಗಿದ್ದ ವಿ.ಆರ್. ಕೃಷ್ಣ ಅಯ್ಯರ್ ಹೇಳಿದ್ದರು. ಇದು ನ್ಯಾಯಾಂಗಕ್ಕೆ ಸೀಮಿತವಾದ ಸಂಗತಿಯಲ್ಲ. ಅವರ ಮಾತುಗಳು ಶಿಕ್ಷಣ, ಉದ್ಯೋಗ, ಆಸ್ತಿಯ ಒಡೆತನ ಸೇರಿದಂತೆ ಎಲ್ಲ ಕ್ಷೇತ್ರಗಳಿಗೂ ಅನ್ವಯವಾಗುತ್ತವೆ. ದೇಶದೊಳಗೆ ನಡೆಯುವ ಪ್ರತಿ ಬೆಳವಣಿಗೆಯಲ್ಲೂ ಸಾಮಾಜಿಕ ನ್ಯಾಯದ ತಿರುಳನ್ನು ಹಂಚಬೇಕು ಎಂಬುದೇ ಇದರ ಹಿಂದಿರುವ ದೊಡ್ಡ ಆಶಯ.

1950ರಲ್ಲಿ ನಮ್ಮ ದೇಶವು ಸಂವಿಧಾನವನ್ನು ಜಾರಿಗೊಳಿಸಿತು. ಆ ದಿನಗಳಿಂದಲೇ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಸೌಲಭ್ಯ ದೊರಕಿತು. ಆದರೆ, ಕೇಂದ್ರ ಸರ್ಕಾರದ ಉದ್ಯೋಗಗಳಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ದೊರಕಿದ್ದು 1992ರಲ್ಲಿ ಇಂದಿರಾ ಸಾಹ್ನಿ (ಮಂಡಲ್) ಪ್ರಕರಣದ ತೀರ್ಪು ಪ್ರಕಟವಾದ ಬಳಿಕ. ಅಲ್ಲಿಗೆ ದೇಶದಲ್ಲಿ ಸಂವಿಧಾನ ಜಾರಿಗೆ ಬಂದು 42 ವರ್ಷಗಳು ಕಳೆದುಹೋಗಿದ್ದವು. ಐಐಟಿ, ಐಐಎಂನಂಥ ಶಿಕ್ಷಣ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಸಿಗಲು ಮತ್ತಷ್ಟು ಕಾಲ ಬೇಕಾಯಿತು. ಹಿಂದುಳಿದ ವರ್ಗಗಳಿಗೆ ನಿಗದಿಪಡಿಸಿರುವ ಶೇಕಡ 27ರಷ್ಟು ಮೀಸಲಾತಿಯು ನ್ಯಾಯಯುತವಾಗಿ, ತೃಪ್ತಿಕರ ರೀತಿಯಲ್ಲಿ ಜನರನ್ನು ತಲುಪುತ್ತಿಲ್ಲ ಎಂಬುದು ನಿರ್ವಿವಾದವಾದ ಸಂಗತಿ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಸ್ಥಿತಿ–ಗತಿಯೂ ಇದೇ ರೀತಿ ಇದೆ. ಆಡಳಿತ ನಡೆಸುವವರು ಸಾಮಾಜಿಕ ನ್ಯಾಯದ ಕುರಿತು ಸರಿಯಾಗಿ ಅರಿಯದೇ ಇರುವುದು ಇದಕ್ಕೆ ಮೂಲ ಕಾರಣ. ಸಾಮಾಜಿಕ ನ್ಯಾಯವು ನಮ್ಮ ಶಿಕ್ಷಣದ ಭಾಗವಾಗದಿರುವುದರಿಂದಲೇ ಈ ಪರಿಸ್ಥಿತಿ ನಿರ್ಮಾಣವಾಗಿದೆ.

ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷನಾಗಿದ್ದ ಅವಧಿಯಲ್ಲಿ ನಾನು ರಾಜ್ಯದಾದ್ಯಂತ ನೂರಾರು ವಿದ್ಯಾರ್ಥಿನಿಲಯಗಳು, ಶಾಲೆ, ಕಾಲೇಜುಗಳಿಗೆ ಭೇಟಿ ನೀಡುತ್ತಿದ್ದೆ. ಶಾಲೆಗಳಲ್ಲಿ ಮಾತ್ರವಲ್ಲ ಕಾಲೇಜು ವಿದ್ಯಾರ್ಥಿಗಳಲ್ಲೂ ಬಹುತೇಕರಿಗೆ ಸಾಮಾಜಿಕ ನ್ಯಾಯದ ಕುರಿತು ಅರಿವೇ ಇಲ್ಲ ಎಂಬ ಆಘಾತಕಾರಿ ಸಂಗತಿ ಆಗ ನನ್ನ ಗಮನಕ್ಕೆ ಬಂದಿತು. ಇದಕ್ಕೆ ಕಾರಣ ಹುಡುಕಲು ಹೊರಟರೆ, ಸಾಮಾಜಿಕ ನ್ಯಾಯಕ್ಕೆ ಸಂಬಂಧಿಸಿದ ವಿಚಾರಗಳನ್ನು ನಮ್ಮ ವಿದ್ಯಾರ್ಥಿಗಳ ಮನಸ್ಸಿನ ಆಳಕ್ಕೆ ಇಳಿಸುವಂತಹ ವಿಸ್ತೃತವಾದ ಪಠ್ಯಕ್ರಮಗಳಾಗಲೀ ಬೋಧನಾ ವ್ಯವಸ್ಥೆಯಾಗಲೀ ಇಲ್ಲ ಎಂಬುದು ತಿಳಿಯಿತು.

'ಶಿಕ್ಷಣವು ನಾಗರಿಕರನ್ನು ಕೆಲವು ಗುರಿ, ಉದ್ದೇಶ ಮತ್ತು ಆದರ್ಶಗಳಿಗೆ ದುಡಿಯುವುದಕ್ಕೆ ಪ್ರೇರೇಪಿಸಬೇಕು. ಇಲ್ಲವಾದರೆ ಅಂತಹ ಶಿಕ್ಷಣ ವ್ಯವಸ್ಥೆಯೇ ಅರ್ಥಹೀನ ಮತ್ತು ಪ್ರಾಮುಖ್ಯ ಇಲ್ಲದ್ದು' ಎಂದು ದೇಶದ ಶಿಕ್ಷಣ ಸಚಿವರೂ ಆಗಿದ್ದ ನ್ಯಾಯಮೂರ್ತಿ ಎಂ.ಸಿ. ಛಾಗ್ಲಾ ಅವರು ತಮ್ಮ ಆತ್ಮಕಥನ 'ರೋಸಸ್ ಇನ್ ಡಿಸೆಂಬರ್'ನಲ್ಲಿ ಹೇಳಿದ್ದರು. ಸಾಮಾಜಿಕ ನ್ಯಾಯದ ಅನುಷ್ಠಾನದಲ್ಲಿ ಶಿಕ್ಷಣ ವ್ಯವಸ್ಥೆಯು ಪ್ರಮುಖವಾದ ಪಾತ್ರವನ್ನು ನಿರ್ವಹಿಸಬೇಕು ಎಂಬುದೇ ಅವರ ಮಾತುಗಳ ಹಿಂದಿರುವ ಕಾಳಜಿ. ಛಾಗ್ಲಾ ಅವರ ವಿಚಾರಧಾರೆಯ ನೆರಳಿನಲ್ಲಿ ಸಾಮಾಜಿಕ ನ್ಯಾಯಕ್ಕೆ ಸಂಬಂಧಿಸಿದ ಪಠ್ಯಕ್ರಮವನ್ನು ಮಾಧ್ಯಮಿಕ ಶಿಕ್ಷಣದ ಹಂತದಲ್ಲೇ ಅಳವಡಿಸಿಕೊಳ್ಳಬೇಕಿದೆ.





ಕಾರ್ಯಾಂಗ, ನ್ಯಾಯಾಂಗದಲ್ಲಿ ಕೆಲಸ ಮಾಡುವವರು, ಸ್ಥಳೀಯ ಸಂಸ್ಥೆಗಳಿಂದ ಸಂಸತ್ತಿನವರೆಗೆ ವಿವಿಧ ಸ್ತರಗಳಲ್ಲಿ ಚುನಾಯಿತ ಪ್ರತಿನಿಧಿಗಳಾಗಿ ಕೆಲಸ ಮಾಡುವವರಿಗೆ ಸಾಮಾಜಿಕ ನ್ಯಾಯದ ಕುರಿತು ಅರಿವು ಇರಬೇಕು. ಸಮಾಜದ ಎಲ್ಲ ಕ್ಷೇತ್ರಗಳಲ್ಲಿ ಕೆಲಸ ಮಾಡುವವರಿಗೂ ಈ ಕುರಿತ ಅರಿವು ಮುಖ್ಯ. ಅದರ ಜತೆಯಲ್ಲೇ ಸಾಮಾಜಿಕ ನ್ಯಾಯದ ತಿರುಳನ್ನು ಹಂಚುವ ಬದ್ಧತೆಯನ್ನೂ ರೂಢಿಸಬೇಕು. ಇದಕ್ಕಾಗಿ ಮಾಧ್ಯಮಿಕ ಶಿಕ್ಷಣದ ಹಂತದಲ್ಲೇ ಸಾಮಾಜಿಕ ನ್ಯಾಯದ ಪಠ್ಯವು ಕಲಿಕೆಯ ಭಾಗವಾಗಬೇಕು. ಅದು ಪಠ್ಯೇತರ ಚಟುವಟಿಕೆಯಂತೆ ಇರಬಾರದು. ನಿಗದಿತ ಅಂಕಗಳಿಗೆ ಪರೀಕ್ಷೆಯನ್ನೂ ಒಳಗೊಂಡು ಕಲಿಕೆಯ ಬಹುಮುಖ್ಯ ಅಂಗವಾದರೆ ಮಾತ್ರವೇ ಎಲ್ಲ ಹಂತಗಳಲ್ಲೂ ಸಾಮಾಜಿಕ ನ್ಯಾಯದ ರಥವನ್ನು ಮುಂದಕ್ಕೆ ಎಳೆಯುವ ಭವಿಷ್ಯದ ತಲೆಮಾರುಗಳಲ್ಲಿ ಈ ಪರಿಕಲ್ಪನೆ ಮೊಳಕೆಯೊಡೆದು, ಹೆಮ್ಮರವಾಗಬಹುದು.

ಬಿ.ಆರ್. ಅಂಬೇಡ್ಕರ್ ಅವರು 1949ರ ನವೆಂಬರ್ 25ರಂದು ಸಂವಿಧಾನ ರಚನಾ ಸಮಿತಿಯ ಸಭೆಯಲ್ಲಿ ಮಾಡಿದ್ದ ಚರಿತ್ರಾರ್ಹ ಭಾಷಣದಲ್ಲಿ, 'ನಾವು ರಾಜಕೀಯ ಪ್ರಜಾಪ್ರಭುತ್ವವನ್ನು ಸಾಮಾಜಿಕ ಪ್ರಜಾಪ್ರಭುತ್ವವನ್ನಾಗಿ ಮಾಡಬೇಕು. ಇಲ್ಲವಾದಲ್ಲಿ ರಾಜಕೀಯ ಪ್ರಜಾಪ್ರಭುತ್ವ ಉಳಿಯಲಾರದು. ಮತ್ತೊಂದು ಮರೆಯಲಾರದ ಮಾತು. ಎಷ್ಟೇ ಒಳ್ಳೆಯ ಸಂವಿಧಾನವಿದ್ದರೂ ಅದನ್ನು ಜಾರಿಗೊಳಿಸುವವರು ಒಳ್ಳೆಯವರಾಗಿರದಿದ್ದರೆ ಅದರ ಗುರಿ, ಉದ್ದೇಶ ಈಡೇರುವುದಿಲ್ಲ. ಸಂವಿಧಾನ ಸರಿ ಇಲ್ಲದಿದ್ದರೂ, ಅದನ್ನು ಜಾರಿಗೊಳಿಸುವವರು ಸರಿ ಇದ್ದರೆ ಫಲಿತಾಂಶ ಉತ್ತಮವೇ ಆಗಿರುತ್ತದೆ' ಎಂದಿದ್ದರು.

ಈಗ ನಾವು ಶಿಕ್ಷಣ ವ್ಯವಸ್ಥೆಯ ಮೂಲಕ 'ಸಾಮಾಜಿಕ ನ್ಯಾಯ'ದ ಕುರಿತು ಅರಿವು ಮೂಡಿಸುವ ಕೆಲಸವನ್ನು ಮಾಡಿದರೆ ಭಾರತದ ಸಂವಿಧಾನದ ಮೂಲ ಆಶಯಗಳಿಗೆ ಮುಕ್ಕಾಗದಂತಹ ಫಲಿತಾಂಶವನ್ನು ಎಂದೆಂದೂ ನಿರೀಕ್ಷಿಸಲು ಸಾಧ್ಯ.

ಲೇಖಕ: ಹಿರಿಯ ವಕೀಲ ಮತ್ತು ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ

## ಚುರುಮುರಿ



### ಸಿನಿಮಾ ರಜೆ

• ಆನಂದ

**'ಹಿಂದೆಲ್ಲ** ಯಾವಯಾವುದಕ್ಕೋ ರಜ ಕೊಡ್ತಿದ್ದರಲ್ವಾ?' ಮಡದಿ ಹಳೆಯ ದಿನಗಳನ್ನು ಮೆಲುಕು ಹಾಕಿದಳು. 'ನಿಜ ನಿಜ, ನಾನು ಹೈಸ್ಕೂಲಿನಲ್ಲಿದ್ದಾಗ ಶಾಲೆಗೆ ಜಿಲ್ಲಾ ಚರ್ಚಾಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಬಂದಿದ್ದಕ್ಕೆ ರಜಾ ಕೊಟ್ಟಿದ್ದರು' ಎಂದೆ.

'ಬಹುಮಾನಕ್ಕಿಂತ ಇದೇ ನಿಮಗೆ ಹೆಚ್ಚು ಸಂತೋಷ ಕೊಟ್ಟಿರಬಹುದು?'

'ರಜಕ್ಕಿಂತ ಇನ್ಯಾವುದು ಹೆಚ್ಚು ಖುಷಿ ಕೊಡುತ್ತೆ ಹೇಳು'.

'ನಾವು ಕಾಲೇಜಿನಲ್ಲಿದ್ದಾಗ ವಿವಿಐಪಿಗಳು ಯಾರಾದರೂ ಸೀರಿಯಸ್ ಅಂತ ಸುದ್ದಿ ಬಂದಾಗ, ಅವರು ಶನಿವಾರ ತೀರಿಕೊಳ್ಳದಿರಲಿ ಅಂತ ಪ್ರಾರ್ಥಿಸುತ್ತಿದ್ದೆವು. ಮರುದಿನ ಭಾನುವಾರ ಬಂದು ಒಂದು ದಿನದ ರಜಾ ಹೋಗ್ತಿತ್ತಲ್ಲ, ಅದಕ್ಕೆ. ಹುಡುಗಬುದ್ಧಿ ನೋಡಿ'.

'ಈಗಲೂ ಸರ್ಕಾರಿ ನೌಕರರು ಇದೇ ಪ್ರೇಯರ್ ಮಾಡ್ತಿರ್ತಾರೆ. ಅದ್ಸರಿ ಈಗ್ಯಾಕೆ ರಜದ ವಿಷಯ?'

'ಅದೇ ನೋಡಿ ಮೊನ್ನೆ ತಮಿಳುನಾಡಿನಲ್ಲಿ ರಜನಿಕಾಂತ್‌ರ ಚಿತ್ರ ಬಿಡುಗಡೆಯಾದಾಗ ಅನೇಕ ಕಂಪನಿಗಳು ರಜಾ ಘೋಷಿಸಿದವು'.

'ಇದೇನು ರಜನಿಕಾಂತರ ಬಗ್ಗೆ ಅಭಿಮಾನವೋ ಚಿತ್ರ ಚೆನ್ನಾಗಿರುತ್ತೆ ಮೊದಲ ದಿನವೇ ನೋಡಿ ಆನಂದಿಸಲಿ ಅಂತಲೋ?'

'ಟೂ ಇನ್ ಒನ್. ತಲೈವರ್ ಅಭಿಮಾನಿಗಳು ಹೇಗಿದ್ದರೂ ಮೊದಲ ದಿನ ನೋಡೇ ನೋಡ್ತಾರೆ. ಕಂಪನಿಯೇ ರಜೆ ಕೊಟ್ಟರೆ ಇನ್ನೂ ಖುಷಿಯಿಂದ ನೋಡ್ತಾರೆ, ಕಂಪನಿ ಬಗ್ಗೆ ಗೌರವ ಇನ್ನಷ್ಟು ಹೆಚ್ಚಲಿ ಅನ್ನೋ ಉದ್ದೇಶ ಇರಬಹುದು'.

'ಮರುದಿನ ಟಿಕೆಟ್ ತೋರಿಸಿದರೆ ಹಣ ಮರುಪಾವತಿ ಮಾಡಿದರೋ ಹೇಗೆ?'

'ಗೊತ್ತಿಲ್ಲ. ರಜೆ ಕೊಟ್ಟಿದ್ದಂತೂ ಗ್ಯಾರಂಟಿ'.

'ನಮ್ಮ ಸರ್ಕಾರಾನೂ ಹೀಗೆ ಏನಾದರೂ ಮಾಡಬಹುದೇನೋ ಲೋಕಸಭಾ ಚುನಾವಣೆಯ ಹೊತ್ತಿಗೆ?'

'ಆದರೆ ಈಗ ರಜನಿಕಾಂತ್ ತರಹ ಹೀರೊ ಎಲ್ಲಿದ್ದಾರೆ ಕನ್ನಡದಲ್ಲಿ?'

'ಹೀರೊ ಆಯ್ಕೆ ನೌಕರರಿಗೆ ಬಿಟ್ಟು, ಫಸ್ಟ್ ಡೇ ಫಸ್ಟ್ ಶೋ ನೋಡೋರಿಗೆ ರಜೆ ಕೊಟ್ಟರೆ ಹೇಗೆ?'

'ರೇಷನ್ ಅಕ್ಕಿ ಮಾರಿಕೊಂಡ ಹಾಗೆ ಆಗುತ್ತೆ ಅಷ್ಟೆ'.

## ಸಂಗತ

# ಸೊಳ್ಳೆ ಕಡಿತ: ಸುರಕ್ಷೆಯ ಸವಾಲು

**ಕೀಟಗಳ ಸಂಖ್ಯೆ ತೀವ್ರವಾಗಿ ವೃದ್ಧಿಯಾಗಿರುವ ಈ ಸಂದರ್ಭದಲ್ಲಿ, ಅವುಗಳ ಕಡಿತದಿಂದ ಪಾರಾಗುವುದು ಜನ, ಜಾನುವಾರುಗಳಿಗೆ ದೊಡ್ಡ ಸವಾಲು**

• ಡಾ. ಮುರಳೀಧರ ಕಿರಣಕೆರೆ

**ಆ** ರೈತ ಕುಟುಂಬದ ದನದ ಕೊಟ್ಟಿಗೆ ಅಗ್ನಿ ಅವಘಡದಲ್ಲಿ ಸಂಪೂರ್ಣ ಸುಟ್ಟುಹೋಗಿತ್ತು. ಇದಾಗಿದ್ದು ರಾತ್ರಿ ಸಮಯದಲ್ಲಿ. ಮನೆಯೊಳಗೆ ಮಲಗಿದ್ದವರ ಅರಿವಿಗೆ ಬರುವ ಮುನ್ನವೇ ಕೊಟ್ಟಿಗೆ ಉರಿದುಹೋಗಿತ್ತು. ಕಟ್ಟಿ ಹಾಕಿದ್ದ ಐದು ಜಾನುವಾರುಗಳಲ್ಲಿ ಎರಡು ಕುತ್ತಿಗೆಗೆ ಕಟ್ಟಿದ್ದ ಕಣ್ಣಿ (ಹಗ್ಗ) ತುಂಡು ಮಾಡಿಕೊಂಡು ತಪ್ಪಿಸಿಕೊಂಡಿದ್ದರೆ ಮತ್ತೆ ಮೂರು ದನಗಳು ಬೆಂಕಿಗೆ ಬಲಿಯಾಗಿದ್ದವು!

ಇಂತಹದ್ದೊಂದು ಅನಾಹುತಕ್ಕೆ ಪ್ರಮುಖ ಕಾರಣ ಮನೆಯವರ ಬೇಜವಾಬ್ದಾರಿತನ. ಅವರ ಮನೆ ಇರುವುದು ಜಮೀನಿನ ನಡುವೆ. ಮುಂಭಾಗ ಭತ್ತದ ಗದ್ದೆ, ಹಿಂಭಾಗದಲ್ಲಿ ಅಡಿಕೆ ತೋಟ. ಸಹಜವಾಗಿಯೇ ಅಲ್ಲಿ ಸೊಳ್ಳೆಕಾಟ ವಿಪರೀತ. ಅದರಲ್ಲೂ ಕತ್ತಲು ಕವುಚುತ್ತಿರುವ ವೇಳೆಯಲ್ಲಿ ಜಾನುವಾರುಗಳಿಗೆ ಮುತ್ತಿಗೆ ಹಾಕಿ ರಕ್ತ ಹೀರುತ್ತಿದ್ದ ಸೊಳ್ಳೆಗಳಿಂದ ರಕ್ಷಿಸಲು ಕೊಟ್ಟಿಗೆಯಲ್ಲಿ ಅಡಿಕೆ ಸಿಪ್ಪೆಯ ಹೊಗೆ ಹಾಕುತ್ತಿದ್ದರು. ಆ ದಟ್ಟ ಹೊಗೆಯಿಂದಾಗಿ ಕೀಟಗಳು ದೂರವಾಗಿ ದನಕರುಗಳು ನೆಮ್ಮದಿಯಾಗಿ ಮಲಗಲಿ ಎಂಬ ಕಾಳಜಿ.

ಸಂಜೆಯ ಸಮಯದಲ್ಲಿ ತಗಡಿನ ಡಬ್ಬಿಗೆ ಸಿಪ್ಪೆ ತುಂಬಿ ಕೆಂಡ ಸುರಿಯುತ್ತಿದ್ದರು. ರಾತ್ರಿ ಮಲಗುವಾಗ ತಪ್ಪದೆ ಬೆಂಕಿ ಆರಿಸುವ ಅಭ್ಯಾಸ. ಅವತ್ತು ಹಾಗೆ ಮಾಡಲು ಮರೆತಿದ್ದರಿಂದ ದೊಡ್ಡ ಪ್ರಮಾದವಾಗಿತ್ತು. ಗಾಳಿಯಲ್ಲಿ ಕಿಡಿ ಹಾರಿ, ಕೊಟ್ಟಿಗೆಗೆ ಹಾಸಿದ್ದ ದರುಗಿಗೆ ತಗುಲಿತ್ತು. ಅಲ್ಲಿಂದ ಪಕ್ಕದ ಭಾಗದಲ್ಲಿ ಕೂಡಿಟ್ಟಿದ್ದ ಒಣಹುಲ್ಲಿಗೆ ಬೆಂಕಿ ತಗುಲಿ ಇಡೀ ಕೊಟ್ಟಿಗೆಯನ್ನು ಸುಟ್ಟಿದ್ದಲ್ಲದೆ ಆಕಳುಗಳನ್ನೂ ಆಹುತಿ ಪಡೆದಿತ್ತು!

ಹೌದು, ಇಂತಹ ಪ್ರಕರಣಗಳು ಅಲ್ಲಲ್ಲಿ ನಡೆಯುತ್ತಲೇ ಇರುತ್ತವೆ. ಸೊಳ್ಳೆಗಳು, ಕಚ್ಚುವ ನೊಣ, ನುಸಿಗಳನ್ನು ಓಡಿಸಲು ಹೊಗೆ, ಧೂಮ ಹಾಕುವ ಅಭ್ಯಾಸ ಹಲವೆಡೆ ಇದೆ. ಜಾನುವಾರುಗಳಿಗೆ ಕೀಟ ಬಾಧೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ತಪ್ಪಿಸುವ ದಿಸೆಯಲ್ಲಿ ಇಂತಹ ಸಾಂಪ್ರದಾಯಿಕ ಕ್ರಮಗಳು ಅನಿವಾರ್ಯವಾದರೂ ತುಸು ಎಚ್ಚರ ತಪ್ಪಿದರೆ ಆಗುವ ಹಾನಿಯೂ ತುಂಬಾ ದೊಡ್ಡದು. ಅದರಲ್ಲೂ ಮುಂಗಾರು ಏರುಪೇರಾಗಿರುವ ಈ ಬಾರಿ ಸೊಳ್ಳೆಗಳ ಕಾಟವೂ ಹೆಚ್ಚಿದೆ. ಆಗಾಗ್ಗೆ ಬೀಳುತ್ತಿರುವ ಸಣ್ಣ ಮಳೆಯಿಂದಾಗಿ ಅಲ್ಲಲ್ಲಿ ನಿಂತಿರುವ ನೀರು, ಸೊಳ್ಳೆಗಳ ಸಂತಾನಾಭಿವೃದ್ಧಿಗೆ ಪ್ರಶಸ್ತ ಸ್ಥಳ. ತಾಪಮಾನದ ಏರಿಕೆ, ತತ್ಸಂಬಂಧದ ವಿಕೋಪಗಳ ಕಾರಣ ಕೀಟಗಳ ಸಂಖ್ಯೆ ತೀವ್ರವಾಗಿ ವೃದ್ಧಿಯಾಗಿರುವ ಈ ವೇಳೆಯಲ್ಲಿ, ಅವುಗಳ ಕಡಿತದಿಂದ ಪಾರಾಗುವುದು ಜನ, ಜಾನುವಾರುಗಳಿಗೆ ದೊಡ್ಡ ಸವಾಲು.

ಸೊಳ್ಳೆಗಳು ಕಡಿತದಿಂದ ಉರಿ, ನವೆ, ಚರ್ಮದ ಅಲರ್ಜಿಯನ್ನಷ್ಟೇ ತರುವುದಿಲ್ಲ, ಹಲವು ರೋಗಾಣುಗಳ ವಾಹಕಗಳು ಸಹ ಆಗಿರುತ್ತವೆ. ಮಲೇರಿಯಾ, ಡೆಂಗಿ, ಚಿಕೂನ್‌ಗುನ್ಯ, ಆನೆಕಾಲು ರೋಗ, ಹಳದಿ ಜ್ವರ, ಮೆದುಳು ಜ್ವರದಂತಹ ರೋಗಗಳನ್ನು ಹರಡಿಸುತ್ತಾ ಸಾರ್ವಜನಿಕ ಸ್ವಾಸ್ಥ್ಯಕ್ಕೆ ಸವಾಲೊಡ್ಡುತ್ತಿವೆ. ಜಾನುವಾರುಗಳಲ್ಲಿ ನೀಲಿನಾಲಿಗೆ ರೋಗ, ಎಫಿಮೆರಾಲ್ ಜ್ವರ, ಚರ್ಮಗಂಟು ರೋಗದ ಕ್ರಿಮಿಗಳನ್ನು ಹರಡಿಸುವಲ್ಲಿ ಇವುಗಳದ್ದೇ ಮುಖ್ಯ ಪಾತ್ರ. ಹೈನೋತ್ಪಾದನೆಗೂ ಸೊಳ್ಳೆಗಳೇ ದೊಡ್ಡ ಆಪತ್ತು.

ಗುಂಪು ಗುಂಪಾಗಿ ದಾಳಿಯಿಡುವ ಸೊಳ್ಳೆಗಳಿಂದ ತಪ್ಪಿಸಿಕೊಳ್ಳಲು ರಾಸುಗಳು ಜೋರಾಗಿ ಕತ್ತು ಆಡಿಸುವುದು, ಬಾಲದಲ್ಲಿ ಹೊಡೆದುಕೊಳ್ಳುವುದು, ಕುಣಿಯುವುದು ಮಾಡುತ್ತವೆ. ಇದು ಮೆಲುಕು ಕ್ರಿಯೆಗೆ ಭಂಗ ತರುತ್ತದೆ. ಮೇಯುವಾಗ ಹಾಗೆಯೇ ನುಂಗಿದ ಆಹಾರವನ್ನು ವಿಶ್ರಾಂತಿ ಸಮಯದಲ್ಲಿ ಹೊಟ್ಟೆಯ ಮೆಲುಕು ಚೀಲದಿಂದ ಮರಳಿ ಬಾಯಿಗೆ ತಂದುಕೊಂಡು ಜೊಲ್ಲುರಸದೊಂದಿಗೆ ಚೆನ್ನಾಗಿ ಜಗಿದು ಪುನಃ ನುಂಗುವ ಮೆಲುಕು ಕ್ರಿಯೆ ಜಾನುವಾರುಗಳ ಸ್ವಾಸ್ಥ್ಯದ ದೃಷ್ಟಿಯಿಂದ ತುಂಬಾ ಮಹತ್ವದ್ದು. ಸೊಳ್ಳೆಗಳ ಕಾಟ ತೀವ್ರವಾಗಿರುವಾಗ ಅವುಗಳನ್ನು ಓಡಿಸುವತ್ತಲೇ ಚಿತ್ತ ನೆಟ್ಟಿರುವುದರಿಂದ ಮೆಲುಕು ಹಾಕುವ ಪ್ರಕ್ರಿಯೆಗೆ ತೀವ್ರ ಅಡಚಣೆಯಾಗುತ್ತದೆ. ಜೀರ್ಣಕ್ರಿಯೆ ಸಮರ್ಪಕವಾಗಿ ನಡೆಯದೆ ಹಾಲಿನ ಇಳುವರಿ ಜೊತೆಗೆ ಗುಣಮಟ್ಟವೂ (ಡಿಗ್ರಿ) ಕುಸಿಯುತ್ತದೆ. ಕೀಟಬಾಧೆ ಒತ್ತಡ ಉಂಟುಮಾಡುವುದರಿಂದ ಕಾರ್ಟಿಸಾಲ್ ನಂತಹ ಒತ್ತಡದ ಹಾರ್ಮೋನ್‌ಗಳು ಹೆಚ್ಚಿಗೆ ಸ್ರವಿಸಿ ಉತ್ಪಾದನಾ ಸಾಮರ್ಥ್ಯ ಕುಂಠಿತಗೊಳಿಸುವ ಜೊತೆಗೆ ಹೈನು ರಾಸುಗಳ ರೋಗನಿರೋಧಕ ಶಕ್ತಿಯೂ ದುರ್ಬಲವಾಗುತ್ತದೆ!



ರಾಸಾಯನಿಕ ಸೊಳ್ಳೆನಾಶಕಗಳ ಬಳಕೆಯು ಜನ, ಜಾನುವಾರು, ಪರಿಸರ ಸ್ವಾಸ್ಥ್ಯದ ಮೇಲೆ ದುಷ್ಪರಿಣಾಮ ಬೀರುವುದರಿಂದ, ಕೀಟಗಳ ನಿಯಂತ್ರಣಕ್ಕಾಗಿ ನಿಸರ್ಗಸ್ನೇಹಿ ಉಪಾಯಗಳು ಸೂಕ್ತ. ಹಲವು ಹೈನುಗಾರರು ಮನೆಯೊಳಗೆ ಬಳಸುವಂತೆ ಕೊಟ್ಟಿಗೆಗೂ ಸೊಳ್ಳೆಪರದೆ ಕಟ್ಟಿ ತಮ್ಮ ಜಾನುವಾರುಗಳನ್ನು ಸೊಳ್ಳೆಗಳಿಂದ ರಕ್ಷಿಸುತ್ತಿದ್ದಾರೆ. ಕರ್ಪೂರ ಉರಿಸುವುದು, ಬೇವು- ತೆಂಗಿನೆಣ್ಣೆ ಸವರುವುದು, ಸೊಳ್ಳೆ ವಿಕರ್ಷಕ ಅಗರಬತ್ತಿ ಬಳಕೆ, ಕಣ್ಣಾವಲಿನಲ್ಲಿ ಬೇವು, ಲಕ್ಕಿಸೊಪ್ಪಿನ ಹೊಗೆ ಹಾಕುವುದು, ತ್ಯಾಜ್ಯಗಳ ಸಮರ್ಪಕ ನಿರ್ವಹಣೆ, ಸುತ್ತಲೂ ಸ್ವಚ್ಛತೆ ಕಾಪಾಡುವುದು, ನೀರು ಅಲ್ಲಲ್ಲಿ ನಿಲ್ಲದಂತೆ ಎಚ್ಚರ ವಹಿಸುವುದು ಸೊಳ್ಳೆಗಳ ಪರಿಣಾಮಕಾರಿ ನಿಯಂತ್ರಣದ ಕೆಲವು ವಿಧಾನಗಳು.

ಆಗಸ್ಟ್ 20 'ವಿಶ್ವ ಸೊಳ್ಳೆ ದಿವಸ'. 1897ರ ಇದೇ ದಿನ, ಭಾರತೀಯ ಸಂಜಾತ ಬ್ರಿಟಿಷ್ ವೈದ್ಯ ಸರ್ ರೊನಾಲ್ಡ್ ರಾಸ್, ಸೊಳ್ಳೆಗಳೇ ಮಲೇರಿಯಾ ರೋಗಾಣುಗಳ ವಾಹಕಗಳು ಎಂದು ನಿಖರವಾಗಿ ಪತ್ತೆಹಚ್ಚಿದ್ದು. ಮಲೇರಿಯಾ ಸೇರಿದಂತೆ ಸೊಳ್ಳೆಗಳಿಂದ ಹರಡಬಹುದಾದ ವಿವಿಧ ಕಾಯಿಲೆಗಳು, ನಿಯಂತ್ರಣ ಕುರಿತಾಗಿ ಅರಿವು ಮೂಡಿಸುವ ದಿನವಾಗಿ ಇದು ಆಚರಣೆಯಲ್ಲಿದೆ.

ಲೇಖಕ: ಮುಖ್ಯ ಪಶುವೈದ್ಯಾಧಿಕಾರಿ ಸರ್ಕಾರಿ ಪಶುಆಸ್ಪತ್ರೆ, ತೀರ್ಥಹಳ್ಳಿ

## ವಾಚಕರ ವಾಣಿ

### 'ವಾಸ್ತು' ಹೇರಿಕೆ ಎಷ್ಟು ಸರಿ?

ಹಾಸನದಲ್ಲಿ ನೂತನವಾಗಿ ನಿರ್ಮಿಸಿರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ವಾಸ್ತು ಪ್ರಕಾರವೇ ಕೆಲಸ ಮಾಡುವಂತೆ ಶಾಸಕ ಎಚ್.ಡಿ.ರೇವಣ್ಣ ಅವರು ಅಧಿಕಾರಿಗಳಿಗೆ ಸಲಹೆ ನೀಡಿದ್ದಾರೆ. ಈ ಮೂಲಕ, ಅವರು ತಮಗಿರುವ ಮೂಢನಂಬಿಕೆಯನ್ನು ಇತರರ ಮೇಲೆ ಹೇರುವುದು ಎಷ್ಟು ಸರಿ? ಮುಂದೊಮ್ಮೆ ವೈದ್ಯರಿಗೂ ಅವರು ಇಂತಹುದೇ ನಿರ್ದೇಶನ ನೀಡಿದರೆ ಗತಿ ಏನು?

'ವಿದ್ಯುತ್ ಕೇಂದ್ರವನ್ನು ವಾಸ್ತು ಪ್ರಕಾರ ಉತ್ತರ, ದಕ್ಷಿಣಕ್ಕೆ ಹಾಕಬಹುದೇ ನೋಡಿ' ಎಂದಿದ್ದಾರೆ. ಅದೆಲ್ಲ ಪರಿಣತ ಎಂಜಿನಿಯರುಗಳ ಕೆಲಸ. 'ವಿದ್ಯುತ್ ಕೇಂದ್ರಕ್ಕೆ ಅರ್ಧ ಎಕರೆ ಬೇಡ, 10 ಗುಂಟೆ ಸಾಕು' ಎಂದದ್ದು ಮಾತ್ರ ಸೂಕ್ತ. ಇವೆಲ್ಲವನ್ನೂ ಕಿವಿಗೆ ಹಾಕಿಕೊಳ್ಳದೆ, ಗಾಳಿ, ಬೆಳಕು, ಬಿಸಿಲು ಆಧರಿಸಿ, ಸ್ಥಳಾವಕಾಶ, ಅನುಕೂಲದ ಪ್ರಕಾರ ಆಸ್ಪತ್ರೆಯ ಒಳಭಾಗದ ವಿನ್ಯಾಸ ರೂಪಿಸಲಿ.

**ರಾಮಚಂದ್ರ ಎಸ್. ಕುಲಕರ್ಣಿ,** ಧಾರವಾಡ

### ವೇತನ ಪರಿಷ್ಕರಣೆ: ಸೂಕ್ತ ನಡೆ

ರಾಜ್ಯದ ಗ್ರಾಮ ಪಂಚಾಯಿತಿಗಳ ಗ್ರಂಥಪಾಲಕರ ಬಹುದಿನಗಳ ಬೇಡಿಕೆಯಾಗಿದ್ದ ವೇತನ ಪರಿಷ್ಕರಣೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಮುಂದಾಗಿರುವುದು ಸಂತೋಷದ ಸಂಗತಿ. ಈ ದಿಸೆಯಲ್ಲಿ ಸರ್ಕಾರದ ಬದ್ಧತೆ ಮತ್ತು ಕಳಕಳಿ ಸ್ವಾಗತಾರ್ಹ. ಗ್ರಂಥಪಾಲಕರ ಬದುಕಿಗೆ ವೇತನವೇ ಆಧಾರವಾಗಿರುತ್ತದೆ. ಜೀವನಾವಶ್ಯಕ ವಸ್ತುಗಳ ಬೆಲೆ ಗಗನಕ್ಕೆ ಏರಿರುವ ಈ ಸಂದರ್ಭದಲ್ಲಿ, ಗ್ರಂಥಪಾಲಕರ ವೇತನ ಪರಿಷ್ಕರಣೆ ಕಾರ್ಯ ಅತಿ ಮುಖ್ಯವಾಗಿ ಆಗಬೇಕಿತ್ತು. ರಾಜ್ಯ ಸರ್ಕಾರ ಸರಿಯಾದ ಸಮಯದಲ್ಲಿ ಈ ಕ್ರಮ ಕೈಗೊಂಡಿದೆ.

**ಭೀಮಾಶಂಕರ ದಾದೆಲಿ ಹಳಿಸಗರ,** ಶಹಾಪುರ

### ವಿಶ್ವಾಸಾರ್ಹರಾಗಿರಲಿ ಬ್ಯಾಂಕ್ ಸಿಬ್ಬಂದಿ

ಬೆಂಗಳೂರಿನಲ್ಲಿ ವೃದ್ಧೆಯೊಬ್ಬರ ಮನೆಯ ವಾಸ್ತು ಸರಿಯಿಲ್ಲ ಎಂದು ಅವರನ್ನು ನಂಬಿಸಿ, ಮನೆಯನ್ನು ₹ 3.5 ಕೋಟಿಗೆ ಮಾರಾಟ ಮಾಡಿಸಿರುವ ನಾಲ್ವರು ವ್ಯಕ್ತಿಗಳು, ಬ್ಯಾಂಕಿನಲ್ಲಿ ಆ ಹಣವನ್ನು ಠೇವಣಿ ಇಡಿಸಿ ಅದನ್ನು ದುರುಪಯೋಗ ಮಾಡಿಕೊಂಡಿರುವುದು ವರದಿಯಾಗಿದೆ. ಈ ಆರೋಪಿಗಳಲ್ಲಿ ಬ್ಯಾಂಕ್ ಸಿಬ್ಬಂದಿಯಾಗಿರುವ ಇಬ್ಬರು, ತಮ್ಮದೇ ಬ್ಯಾಂಕಿನಲ್ಲಿ ಹಣ ಇಡುವಂತೆ ನೋಡಿಕೊಂಡು, ಬಳಿಕ ವೃದ್ಧೆಯಿಂದ ಖಾಲಿ ಚೆಕ್‌ಗಳಿಗೆ ಸಹಿ ಹಾಕಿಸಿಕೊಂಡು ಹಣ ಲಪಟಾಯಿಸಿರುವುದು ದುರದೃಷ್ಟಕರ. ಸಾರ್ವಜನಿಕರು ಬ್ಯಾಂಕುಗಳನ್ನು ನಂಬುವುದು ತಮಗೆ ಯಾವುದೇ ಮೋಸ ಆಗುವುದಿಲ್ಲವೆಂಬ ವಿಶ್ವಾಸದಿಂದ. ನಮ್ಮ ಎಲ್ಲಾ ಆರ್ಥಿಕ ವ್ಯವಸ್ಥೆಯು ಬ್ಯಾಂಕುಗಳನ್ನು ಅವಲಂಬಿಸಿದೆ.

ಸಾರ್ವಜನಿಕರು ಬ್ಯಾಂಕುಗಳಲ್ಲಿ ಖಾತೆ ತೆರೆಯುವುದು, ಹಣವನ್ನು ಠೇವಣಿ ಇಡುವುದು ಮಾಮೂಲು. ಜಮೀನು ಮಾರಿದ್ದು ಅಥವಾ ನಿವೃತ್ತಿ ನಂತರ ಬಂದ ಹಣವನ್ನು ಅಲ್ಲಿ ಠೇವಣಿಯಾಗಿ ಇಡುವುದು, ಮುಂದಿನ ದಿನಗಳಲ್ಲಿ ತಮ್ಮ ಮಕ್ಕಳ ಮದುವೆಗೋ ಮನೆ ಕಟ್ಟಲಿಕ್ಕೋ ಇನ್ನಿತರ ಅಗತ್ಯಗಳಿಗೋ ಒದಗಲಿ ಎಂಬ ಕಾರಣಕ್ಕೆ. ಬರುವ ಬಡ್ಡಿ ಹಣದಿಂದ ಕಷ್ಟಗಳು ನಿವಾರಣೆಯಾಗುತ್ತವೆ ಎಂದು ನಂಬಿರುತ್ತಾರೆ. ಹಣದ ಮಾಹಿತಿ ಗೊತ್ತಿರುವ ಬ್ಯಾಂಕ್ ಸಿಬ್ಬಂದಿಯೇ ಈ ರೀತಿಯ ಮೋಸ, ಭ್ರಷ್ಟಾಚಾರದಲ್ಲಿ ತೊಡಗಿದರೆ ಸಾರ್ವಜನಿಕರು ಯಾವ ಧೈರ್ಯದಲ್ಲಿ ಬ್ಯಾಂಕಿಗೆ ಬರಬೇಕು? ಇನ್ನೆಲ್ಲಿ ನಮ್ಮ ಹಣಕ್ಕೆ ಭದ್ರತೆ? ಕೆಲವು ಬ್ಯಾಂಕುಗಳು ಈಗಾಗಲೇ ಸಾರ್ವಜನಿಕರ ಹಣವನ್ನು ತಮ್ಮಲ್ಲಿ ತೊಡಗಿಸಿಕೊಂಡು ಮೋಸ ಮಾಡಿರುವ ಉದಾಹರಣೆಗಳಿವೆ. ಸಾರ್ವಜನಿಕರ ಹಣವನ್ನು ಕಾಪಾಡಬೇಕಾಗಿರುವುದು ಬ್ಯಾಂಕುಗಳ ಕರ್ತವ್ಯವಲ್ಲವೇ?

**ಮಲ್ಲತಹಳ್ಳಿ ಡಾ. ಎಚ್. ತುಕಾರಾಂ,** ಬೆಂಗಳೂರು

### ಪ್ರಚಾರಕ್ಕೆ ಬಳಕೆಯಾದ ಸ್ವಾತಂತ್ರ್ಯೋತ್ಸವ ವೇದಿಕೆ

ಈ ಬಾರಿಯ ಸ್ವಾತಂತ್ರ್ಯ ದಿನಾಚರಣೆ ಎರಡು ಕಾರಣಕ್ಕಾಗಿ ಜನಮಾನಸದಲ್ಲಿ ಅಚ್ಚರಿ ಮೂಡಿಸಿತು. ಮೊದಲನೆಯದು, ಪ್ರಧಾನಿ ನರೇಂದ್ರ ಮೋದಿ ಅವರು ಮುಂಬರುವ ಲೋಕಸಭಾ ಚುನಾವಣೆಗಾಗಿ ದೆಹಲಿಯ ಐತಿಹಾಸಿಕ ಕೆಂಪುಕೋಟೆಯ ಧ್ವಜಾರೋಹಣ ಸಂದರ್ಭದ ತಮ್ಮ ಭಾಷಣವನ್ನು ಬಳಸಿಕೊಂಡದ್ದು ಮತ್ತು ಎರಡನೆಯದು, ಬೆಂಗಳೂರಿನ ಮಾಣೆಕ್ ಶಾ ಪರೇಡ್ ಮೈದಾನದಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ತಮ್ಮ ಸರ್ಕಾರದ 'ಭಾಗ್ಯ'ಗಳ ಬಗ್ಗೆ ಪ್ರಚಾರ ಮಾಡಿಕೊಂಡದ್ದು.

ಯುವಪೀಳಿಗೆಗೆ ಸ್ವಾತಂತ್ರ್ಯದ ಮಹತ್ವ, ಬಲಿದಾನ, ತ್ಯಾಗದ ಅರ್ಥ ತಿಳಿಸಬೇಕಿದ್ದ ಈ ಕಾರ್ಯಕ್ರಮಗಳು ರಾಜಕೀಯ ಪ್ರಚಾರಕ್ಕೆ ವೇದಿಕೆಯಾದದ್ದು ಬೇಸರ ತರಿಸಿತು. ದೇಶಭಕ್ತಿ, ಜಾತ್ಯತೀತತೆ ಬಗ್ಗೆ ಮಾತನಾಡುವ ರಾಜಕಾರಣಿಗಳಿಗೆ ಸಮಯ, ಸಂದರ್ಭದ ಮಹತ್ವ ತಿಳಿಯುವುದಿಲ್ಲವೇ?

**ಮಂಡಲಗಿರಿ ಪ್ರಸನ್ನ,** ರಾಯಚೂರು

### ರಾಷ್ಟ್ರಧ್ವಜದ ನಿಯಮ ಪ್ರಚಾರವಾಗಲಿ


ಪ್ರತಿವರ್ಷವೂ ಸ್ವಾತಂತ್ರ್ಯ ದಿನಾಚರಣೆ ಮತ್ತು ಗಣರಾಜ್ಯೋತ್ಸವದ ಅಂಗವಾಗಿ ಸಾರ್ವಜನಿಕರು ರಾಷ್ಟ್ರಧ್ವಜ ಹಾರಿಸಿ ಸಂಭ್ರಮಿಸುತ್ತಾರೆ. ಇದು ಹೆಮ್ಮೆಯ ವಿಷಯ. ಆದರೆ ಅನೇಕರಿಗೆ ಧ್ವಜಾರೋಹಣ ಮಾಡುವಾಗ ಇರುವ ಉತ್ಸಾಹ ಧ್ವಜಾವರೋಹಣ ಮಾಡುವಲ್ಲಿ ಇರುವುದಿಲ್ಲ ಎಂಬುದು ವಿಷಾದಕರ. ಸೂರ್ಯೋದಯದ ನಂತರ ಆರೋಹಣ ಮಾಡಿ ಸೂರ್ಯಾಸ್ತದ ಮುನ್ನ ಅವರೋಹಣ ಆಗಬೇಕು ಎಂಬುದು ಪ್ರಮುಖ ನಿಯಮ. ಇದರ ಜೊತೆಗೆ ಮತ್ತಷ್ಟು ನಿಯಮಗಳು ಇದ್ದರೂ ಅವುಗಳ ಮಾಹಿತಿ ಸಾರ್ವಜನಿಕರಿಗೆ ಇಲ್ಲ.

ಹಲವರು ಸೂರ್ಯಾಸ್ತಮಾನದ ನಂತರ ಹಾಗೂ ಎರಡು– ಮೂರು ದಿನಗಳಾದರೂ ಧ್ವಜ ಇಳಿಸಿರುವುದಿಲ್ಲ. ಇದು ನಿಜಕ್ಕೂ ನಮ್ಮ ರಾಷ್ಟ್ರಧ್ವಜಕ್ಕೆ ಮಾಡುವ ಅಪಮಾನ. ಇನ್ನು ಪ್ಲಾಸ್ಟಿಕ್ ಧ್ವಜಗಳನ್ನು ನೋಡಿದರಂತೂ ಮನಸ್ಸಿಗೆ ಹಿಂಸೆಯಾಗುತ್ತದೆ. ಕೆಲವರಿಗಂತೂ ತಮ್ಮ ವಾಹನ ಅಥವಾ ಕಟ್ಟಡಗಳ ಮೇಲೆ ಧ್ವಜ ಹಾರಿಸಿ ಅದರ ಚಿತ್ರ ತೆಗೆದು ಸಾಮಾಜಿಕ ಜಾಲತಾಣಗಳಲ್ಲಿ ಹರಿಯಬಿಟ್ಟು, ಒಂದಷ್ಟು ಲೈಕುಗಳನ್ನು ಪಡೆದುಬಿಟ್ಟರೆ ಅಲ್ಲಿಗೆ ಕೃತಾರ್ಥರಾದ ಭಾವ. ಇಂದಿನವರಿಗೆ ಸ್ವಾತಂತ್ರ್ಯಪೂರ್ವ ಕಷ್ಟ ನಷ್ಟಗಳ ಕುರಿತು ಅರಿವಿಲ್ಲದಿರುವುದೇ ಸ್ವಾತಂತ್ರ್ಯದ ಮಹತ್ವ ತಿಳಿಯದಿರುವುದಕ್ಕೆ ಪ್ರಮುಖ ಕಾರಣ. ಹಾಗಾಗಿ, ಸರ್ಕಾರವು ರಾಷ್ಟ್ರಧ್ವಜ ಕುರಿತ ನಿಯಮಗಳನ್ನು ಸಾರ್ವಜನಿಕರಿಗೆ ತಿಳಿಯುವಂತೆ ಪ್ರಚಾರ ಮಾಡಲಿ. ಆಗ ರಾಷ್ಟ್ರಧ್ವಜಕ್ಕೆ ಸಾರ್ವಜನಿಕರಿಂದ ಆಗುವ ಅಪಮಾನ ತಪ್ಪಿ ಗೌರವ ದೊರಕುವಂತೆ ಆಗುತ್ತದೆ.

**ಪತ್ತಂಗಿ ಎಸ್. ಮುರಳಿ,** ಬೆಂಗಳೂರು


Printed and published by B A Ravi on behalf of The Printers (Mysore ) Private Ltd., at The Printers (Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. 

## ಅಪರಾಧಿಕ ಕಾನೂನುಗಳ ಹೆಸರು ಬದಲಾವಣೆ




# ಅರ್ಥಹೀನ, ಅರೆಬೆಂದ ಪ್ರಯತ್ನ

**ದೇಶದ ನ್ಯಾಯಾಲಯಗಳಲ್ಲಿ ನ್ಯಾಯಿಕ ಪ್ರಕ್ರಿಯೆಗಳು ಇಂಗ್ಲಿಷ್ ಮತ್ತು ಇತರೆ ರಾಜ್ಯ ಭಾಷೆಗಳಲ್ಲಿ ನಡೆಯಬಹುದು. ಇಲ್ಲಿಯೂ ಇಂಗ್ಲಿಷ್ ಒಂದು ಭಾಷೆಯಾಗಿ ಬಳಕೆ ಕಡ್ಡಾಯ. ಹಾಗೆಯೇ ಸುಪ್ರೀಂ ಕೋರ್ಟ್ ಭಾಷೆ ಇಂಗ್ಲಿಷ್ ಮಾತ್ರವೇ ಆಗಿದೆ. ಹೀಗಾಗಿರುವುದು ಸಂವಿಧಾನದ ನಿರ್ದೇಶನದಂತೆ. ಹೀಗಿದ್ದೂ ಕಾಯ್ದೆಗಳ ಅಥವಾ ಸಂಹಿತೆಗಳ ಹೆಸರುಗಳನ್ನು ಹಿಂದಿ ಭಾಷೆಯಲ್ಲಿ ಇರಿಸುವ ಪ್ರಯತ್ನ ಅರ್ಥಹೀನವಲ್ಲದೇ, ಈ ಮಸೂದೆಗಳ ಮೂಲಕ ಹಿಂದಿ ಹೇರಿಕೆಗೆ ಮತ್ತೊಂದು ಮಾರ್ಗವನ್ನು ಕಂಡುಕೊಳ್ಳುವ ಹುನ್ನಾರ ನಡೆಸಲಾಗಿದೆ**



• ಸಿ.ಎಚ್.ಹನುಮಂತರಾಯ

ನಮ್ಮ ದೇಶದ ನೂರಾರು ಅಪರಾಧಿಕ ಕಾನೂನುಗಳ ಪೈಕಿ ಮೂರು ಕಾಯ್ದೆ ಅಥವಾ ಸಂಹಿತೆಗಳನ್ನು ಮಾತ್ರವೇ ಪ್ರಮುಖವಾದವುಗಳೆಂದು ಗುರುತಿಸಿ, ಪಾಲಿಸಲಾಗುತ್ತಿದೆ. ಈ ಪಾಲನೆಗೆ ನೂರಾರು ವರ್ಷಗಳ ಚರಿತ್ರೆಯಿದೆ. ಈಗಲೂ ಅವುಗಳನ್ನು, 'ಇಂಡಿಯನ್ ಪೀನಲ್ ಕೋಡ್', 'ಕೋಡ್ ಆಫ್ ಕ್ರಿಮಿನಲ್ ಪ್ರೊಸೀಜರ್' ಮತ್ತು 'ಇಂಡಿಯನ್ ಎವಿಡೆನ್ಸ್ ಆ್ಯಕ್ಟ್' ಎಂದು ಕರೆಯಲಾಗುತ್ತದೆ. ಕ್ರಮವಾಗಿ, 'ಭಾರತೀಯ ದಂಡ ಸಂಹಿತೆ', 'ದಂಡ ಪ್ರಕ್ರಿಯಾ ಸಂಹಿತೆ' ಮತ್ತು 'ಭಾರತೀಯ ಸಾಕ್ಷ್ಯ ಅಧಿನಿಯಮ' ಎಂದು ಅರ್ಥೈಸುತ್ತೇವೆ.

ಇತ್ತೀಚೆಗೆ ಈ ಕಾಯ್ದೆಗಳಿಗೆ ಸಂಬಂಧಪಟ್ಟಂತೆ ಲೋಕಸಭೆಯಲ್ಲಿ ಮಂಡಿಸಿರುವ ಮಸೂದೆಗಳು, ಅವುಗಳನ್ನು, 'ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ ಕಾಯ್ದೆ' ಎಂದು ಹೆಸರಿಸಬೇಕೆಂದಿವೆ. ಇದೊಂದು ಅರೆಬೆಂದ ಪ್ರಯತ್ನವೆನ್ನದೆ ಗತಿಯಿಲ್ಲ. ಕಾರಣ, ನಮ್ಮ ಸಂವಿಧಾನದ ಹೆಸರೇ 'ದಿ ಕಾನ್ಸ್ಟಿಟ್ಯೂಷನ್ ಆಫ್ ಇಂಡಿಯಾ' (ಇಂಡಿಯಾದ ಸಂವಿಧಾನ) ಎಂದಿರುವಾಗ, ಸಂವಿಧಾನದ ಹೆಸರಿಗೆ ತಿದ್ದುಪಡಿ ತಂದು 'ಭಾರತೀಯ ಸಂವಿಧಾನ' (ದಿ ಕಾನ್ಸ್ಟಿಟ್ಯೂಷನ್ ಆಫ್ ಭಾರತ್) ಎಂದು ಮಾಡಿಕೊಳ್ಳದ ಹೊರತು, ಅದರ ಅಡಿಯಲ್ಲಿ ಹುಟ್ಟು ಪಡೆಯುವ ಯಾವುದೇ ಸಂಹಿತೆ ಅಥವಾ ಕಾಯ್ದೆ, ಭಾರತೀಯ ಕಾಯ್ದೆ ಅಥವಾ ಭಾರತೀಯ ಸಂಹಿತೆ ಆಗುವುದಾದರೂ ಹೇಗೆ?

ದೇಶದ ನ್ಯಾಯಾಲಯಗಳಲ್ಲಿ ನ್ಯಾಯಿಕ ಪ್ರಕ್ರಿಯೆಗಳು ಇಂಗ್ಲಿಷ್ ಮತ್ತು ಇತರೆ ರಾಜ್ಯ ಭಾಷೆಗಳಲ್ಲಿ ನಡೆಯಬಹುದು. ಇಲ್ಲಿಯೂ ಇಂಗ್ಲಿಷ್ ಒಂದು ಭಾಷೆಯಾಗಿ ಬಳಕೆ ಕಡ್ಡಾಯ. ಹಾಗೆಯೇ ಸುಪ್ರೀಂ ಕೋರ್ಟ್ ಭಾಷೆ ಇಂಗ್ಲಿಷ್ ಮಾತ್ರವೇ ಆಗಿದೆ. ಹೀಗಾಗಿರುವುದು ಸಂವಿಧಾನದ ನಿರ್ದೇಶನದಂತೆ. ಹೀಗಿದ್ದೂ ಕಾಯ್ದೆಗಳ ಅಥವಾ ಸಂಹಿತೆಗಳ ಹೆಸರುಗಳನ್ನು ಹಿಂದಿ ಭಾಷೆಯಲ್ಲಿ ಇರಿಸುವ ಪ್ರಯತ್ನ ಅರ್ಥಹೀನವಲ್ಲದೇ, ಈ ಮಸೂದೆಗಳ ಮೂಲಕ ಹಿಂದಿ ಹೇರಿಕೆಗೆ ಮತ್ತೊಂದು ಮಾರ್ಗವನ್ನು ಕಂಡುಕೊಳ್ಳುವ ಹುನ್ನಾರ ನಡೆಸಲಾಗಿದೆ.

ನಮ್ಮ ಸಂವಿಧಾನದಲ್ಲಿ ಸಂಸತ್ತು ಮತ್ತು ವಿಧಾನಸಭೆಗಳು ಮಾಡುವ ಕಾನೂನುಗಳು, ಮಂಡಿಸುವ ಮಸೂದೆಗಳು ಹಾಗೂ ರಾಷ್ಟ್ರಪತಿ ಮತ್ತು ರಾಜ್ಯಪಾಲರು ಹೊರಡಿಸುವ ಸುಗ್ರೀವಾಜ್ಞೆಗಳು ಇಂಗ್ಲಿಷ್ ಭಾಷೆಯಲ್ಲಿ ಇರತಕ್ಕದ್ದು ಎಂದು ಒತ್ತಿ ಹೇಳಲಾಗಿದೆ. ಈ ಹಿನ್ನೆಲೆಯಲ್ಲಿ 'ಇಂಡಿಯಾ' ಎಂಬ ನಾಮಾಂಕಿತವನ್ನು ಹೊರತುಪಡಿಸಿ ಯಾವುದೇ ಕಾನೂನನ್ನು ಮಾಡುವ ಉಪಾಯವನ್ನು ಕೇಂದ್ರ ಗೃಹ ಸಚಿವರು ದೇಶದ ಮುಂದಿರಿಸಿಲ್ಲ.

ಮುಂದುವರೆದಂತೆ, ನಮ್ಮ ಸಂವಿಧಾನದ 7ನೇ ಪರಿಚ್ಛೇದದ, 3ನೇ ಪಟ್ಟಿಯಲ್ಲಿ ಕೇಂದ್ರ ಸರ್ಕಾರವು ತರಲಾಗುವ ಬದಲಾವಣೆಗಳ ಪಟ್ಟಿಯಲ್ಲಿ, 'ಇಂಡಿಯನ್ ಪೀನಲ್ ಕೋಡ್' ಮತ್ತು 'ಕೋಡ್ ಆಫ್ ಕ್ರಿಮಿನಲ್ ಪ್ರೊಸೀಜರ್' ಕೂಡಾ ಸೇರಿದ್ದು, ಇವುಗಳಿಗೆ ಈಗ ಮಂಡಿಸಲಿರುವ ಮಸೂದೆಯಲ್ಲಿ ತರುವ ತಿದ್ದುಪಡಿಯನ್ನು ಅನ್ವಯಿಸಬೇಕಾದರೆ, ಸಂವಿಧಾನಕ್ಕೆ ಮತ್ತೊಂದು ತಿದ್ದುಪಡಿಯನ್ನು ದೇಶದ ಶೇ 50ರಷ್ಟು ರಾಜ್ಯಗಳ ಸಮ್ಮತಿಯೊಂದಿಗೆ ತರಬೇಕಾದ ಅನಿವಾರ್ಯತೆ ಇದೆ. ಆದರೆ, ಈ ಕುರಿತಂತೆಯೂ ಕೇಂದ್ರ ಗೃಹ ಸಚಿವರಿಂದ ಯಾವುದೇ ಹೇಳಿಕೆ ಹೊರಬಿದ್ದಿಲ್ಲ.

ಈಗಾಗಲೇ ಚಾಲ್ತಿಯಲ್ಲಿರುವ ಮೂರು ಕಾಯ್ದೆಗಳಿಗೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರಗಳೂ ತಮಗೆ ಅನುಕೂಲವಾಗುವಂತೆ ತಂದಿರುವ ತಿದ್ದುಪಡಿಗಳು ಇದ್ದು, ಮಂಡನೆಗೊಳ್ಳುತ್ತಿರುವ ಮಸೂದೆಗಳು ಆ ತಿದ್ದುಪಡಿಗಳನ್ನು ಒಳಗೊಂಡಿರದೆ, ಮತ್ತೊಮ್ಮೆ ರಾಜ್ಯ ಸರ್ಕಾರಗಳು ಹೊಸದಾಗಿ ತಿದ್ದುಪಡಿಗಳನ್ನು ತಂದುಕೊಳ್ಳಬೇಕಾಗುತ್ತದೆ. ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳುವ ಹೊಣೆ ರಾಜ್ಯ ಸರ್ಕಾರಗಳ ಮೇಲಿದೆ. ಅವುಗಳೊಂದಿಗೆ ಸಮಾಲೋಚನೆ ನಡೆಸದೆ ಮಸೂದೆಗಳು ರೂಪಿತವಾಗಿದ್ದರೆ, ಅವುಗಳ ಸ್ವೀಕಾರಾರ್ಹತೆ ಕ್ಷೀಣಿಸುತ್ತದೆ.

ಈ ಮಸೂದೆಗಳನ್ನು ಸಿದ್ಧಪಡಿಸುವ ಸಮಿತಿಯ ಪ್ರಯತ್ನಗಳಲ್ಲಿ ಪಾರದರ್ಶಕತೆ ಮತ್ತು ಪ್ರಾತಿನಿಧ್ಯಗಳ ಕೊರತೆಯಿದ್ದು ಈಗ ಸಂಸತ್ತಿನ ಸ್ಥಾಯಿ ಸಮಿತಿಗೆ ಪರಿಶೀಲನೆಗಾಗಿ ಒಪ್ಪಿಸಿರುವುದು ದೌರ್ಬಲ್ಯಪೂರಿತವಾಗಿದೆ. ಮೂರು ಮಸೂದೆಗಳಲ್ಲಿ ಮುನ್ನೂರಕ್ಕೂ ಹೆಚ್ಚು ಬದಲಾವಣೆ ತರಲು ಮಾಡುತ್ತಿರುವ ಪ್ರಯತ್ನ ಅಪೂರ್ಣವಾಗಿಯೇ ಉಳಿಯುವ ಎಲ್ಲ ಲಕ್ಷಣಗಳನ್ನು ತನ್ನೊಳಗೇ ಉಳಿಸಿಕೊಂಡಿದೆ.

ಮಸೂದೆಯಲ್ಲಿನ ಉದ್ದೇಶಿತ ಬದಲಾವಣೆಗಳು, ರಾಜ್ಯಗಳ ವಕೀಲರ ಪರಿಷತ್ತು, ನ್ಯಾಯಶಾಸ್ತ್ರ ಪರಿಣತರ, ನಿವೃತ್ತ ಪೊಲೀಸ್ ಅಧಿಕಾರಿಗಳ, ನಿವೃತ್ತ ಆಡಳಿತಾಧಿಕಾರಿಗಳೊಂದಿಗೆ ಸಮಾಲೋಚಿಸಿ ರೂಪುಗೊಳ್ಳದಿರುವ ಕೊರತೆಯೂ ಎದ್ದು ಕಾಣುತ್ತಿದೆ.

ಹಳೆಯ ಕಾಯ್ದೆಗಳನ್ನು ರದ್ದುಗೊಳಿಸಿ, ಇಲ್ಲವೇ ಹಿಂಪಡೆದು, ಕೆಲವು ಬದಲಾವಣೆಗಳೊಂದಿಗೆ, ಅದರದೇ ಆದ ಆತ್ಮವನ್ನೊಳಗೊಂಡ, ಹೊಸ ನಾಮಾಂಕಿತವನ್ನು ಪ್ರಮುಖವಾಗಿ ಹೊಂದಿರುವ ಮಸೂದೆ ಅಪ್ರಸ್ತುತ. ಕಾರಣ, ಕೇಂದ್ರ ಸರ್ಕಾರ ತರಲಿಚ್ಛಿಸಿರುವ ಬದಲಾವಣೆಗಳನ್ನು, ಈಗಿರುವ ಕಾಯ್ದೆ ಅಥವಾ ಸಂಹಿತೆಗಳಲ್ಲಿ ತಿದ್ದುಪಡಿ ತರುವ ಮೂಲಕವೇ ಸರ್ಕಾರದ ನ್ಯಾಯದಾನದ ಉದ್ದೇಶ ಪರಿಪೂರ್ಣಗೊಳ್ಳುವ ಅವಕಾಶವಿದೆ.

ಒಂದು ಅಪರಾಧಕ್ಕೆ ಶಿಕ್ಷೆಯನ್ನು ಹೆಚ್ಚಿಸುವ ಲೈಂಗಿಕ ದೌರ್ಜನ್ಯ ಪ್ರಕರಣಗಳಲ್ಲಿ ಸಂತ್ರಸ್ತೆಯ ಹೇಳಿಕೆಯ ವಿಡಿಯೊ ದಾಖಲೀಕರಣ ಕಡ್ಡಾಯ ಮಾಡುವ; ಗುರುತು ಮರೆಮಾಚಿ ಮಹಿಳೆಯನ್ನು ಮದುವೆಯಾಗುವ; ಆರೋಪ ಪಟ್ಟಿಯನ್ನು 90 ದಿನಗಳ ಒಳಗೆ ಸಲ್ಲಿಸಬೇಕೆಂದಿರುವ ಕಾಲಾವಧಿಯನ್ನು 180 ದಿನಗಳಿಗೆ ವಿಸ್ತರಿಸುವ; ಸರ್ಕಾರಿ ನೌಕರರ ವಿರುದ್ಧ ಪ್ರಕರಣ ದಾಖಲು ಮಾಡಲು ಸಂಬಂಧಿಸಿದ ಇಲಾಖೆಯಿಂದ 120 ದಿನಗಳ ಒಳಗೆ ಅನುಮತಿ ಬಾರದೇ ಹೋದರೆ, ಅದನ್ನು ನೀಡಿದೆ ಎಂದು ಅರ್ಥೈಸುವ; ಅಪರಾಧಿಯ ಆಸ್ತಿಯಿಂದಲೇ ಪರಿಹಾರ ನೀಡುವ ಅವಕಾಶ; ಆರೋಪಿ ತಲೆ ಮರೆಸಿಕೊಂಡಿದ್ದರೂ ಆತನ ವಿರುದ್ಧ ವಿಚಾರಣೆ ನಡೆಸುವ ಅವಕಾಶ; ವೀಡಿಯೊ ದಾಖಲೀಕರಣ ಮಾಡಿಕೊಂಡ ಮೇಲೆ ವಾಹನಗಳನ್ನು ಬಿಡುಗಡೆ ಮಾಡುವ ಮತ್ತು ಮೂರು ವರ್ಷಗಳ ಒಳಗೆ ಪ್ರಕರಣಗಳು ಇತ್ಯರ್ಥವಾಗಬೇಕು; ಸಮುದಾಯ ಶಿಕ್ಷೆ (ಪ್ರೊಬೆಷನ್ ಆಫ್ ಅಫೆಂಡರ್ಸ್ ಆ್ಯಕ್ಟ್) ಮುಂತಾದವುಗಳನ್ನು ಕುರಿತು ಪ್ರಸ್ತುತ ಕಾಯ್ದೆಗಳಲ್ಲಿ ಸಾಕಷ್ಟು ಒತ್ತು ಕೊಟ್ಟಿರುವುದು ಕಂಡು ಬಂದರೂ, ಮಸೂದೆಯಲ್ಲಿ ಅವುಗಳಿಗೆ ಅಂಗರಾಗ ಲೇಪಿಸಿ, ಸೌಂದರ್ಯ ಹೆಚ್ಚಿಸುವ, ಅರ್ಥಾತ್, ಅವುಗಳ ರೂಪವನ್ನು ಸುಧಾರಿಸುವ ಪ್ರಯತ್ನ ಮಾತ್ರವೇ ನಡೆಯುತ್ತಿರುವುದು ಕಂಡುಬರುತ್ತಿದೆ. ಅವುಗಳ ಮೂಲ ತತ್ವ, ಸಿದ್ಧಾಂತ ಮತ್ತು ಧೋರಣೆಗಳು ಅಲುಗಾಡದೆ ಉಳಿದುಕೊಂಡಿವೆ.

ಈ ನಿಟ್ಟಿನಲ್ಲಿ ಉದ್ದೇಶಿತ ಬದಲಾವಣೆಗಳಲ್ಲಿ ಈಗಿನ ಅಗತ್ಯಗಳಿಗೆ ಅನುಗುಣವಾಗಿ ಕಾನೂನುಗಳಿಗೆ ಬದಲಾವಣೆ ತರಲಾಗುತ್ತಿದೆ ಅನ್ನಿಸಿದರೂ, ಅವುಗಳೆಲ್ಲವನ್ನೂ, ಈಗಿರುವ ಕಾಯ್ದೆಗೆ ಅಥವಾ ಸಂಹಿತೆಗೆ ಸರಳ ತಿದ್ದುಪಡಿ ತರುವುದರ ಮೂಲಕವೇ ಈಡೇರಿಸಿಕೊಂಡರೆ, ಸಂಸತ್ತು ಮತ್ತು ರಾಜ್ಯ ವಿಧಾನ ಸಭೆಗಳಲ್ಲಿ ಅಸಮರ್ಥನೀಯ ಚರ್ಚೆ ಮತ್ತು ಅನೂಹ್ಯ ಖರ್ಚುಗಳನ್ನು ತಪ್ಪಿಸಬಹುದು. ಅಲ್ಲದೇ, ಸಂವಿಧಾನಕ್ಕೆ ಮಾಡಬೇಕಾಗಿ ಬರುವ ತಿದ್ದುಪಡಿ ಹಾಗೂ ರಾಜ್ಯ ಸರ್ಕಾರಗಳು ಹೊಸ ಕಾಯ್ದೆಗಳಿಗೆ ಅನುಗುಣವಾಗಿಯೇ ಮಾಡಿಕೊಳ್ಳಬೇಕಾದ ತಿದ್ದುಪಡಿಗಳನ್ನೂ ತಪ್ಪಿಸಬಹುದು.


ಲೇಖಕ: ಹೈಕೋರ್ಟ್ ಹಿರಿಯ ವಕೀಲರು

ನಿರೂಪಣೆ
ಬಿ.ಎಸ್. ಷಣ್ಮುಖಪ್ಪ

# ದೂರವಾದ ವಸಾಹತುಶಾಹಿ ದುರ್ವಾಸನೆ

**ಲೋಕಮಾನ್ಯ ತಿಲಕ್ ಮತ್ತು ಮಹಾತ್ಮ ಗಾಂಧೀಜಿಯವರನ್ನು ದೇಶದ್ರೋಹಕ್ಕಾಗಿ ಸೆರೆಮನೆಗೆ ತಳ್ಳಿದ, ಸಾವರ್ಕರ್ ಅವರನ್ನು ಕಾಲಾಪಾನಿ ಶಿಕ್ಷೆಗೆ ದೂಡಿದ, ಭಗತ್ ಸಿಂಗ್‌ರನ್ನು ನೇಣಿಗೆ ಹಾಕಿದ, ದಂಡ ಸಂಹಿತೆಗಳ ತುಂಬೆಲ್ಲಾ ವಸಾಹತುಶಾಹಿಯ ದುರ್ವಾಸನೆಯಿದೆ. ಜಲಿಯನ್ ವಾಲಾಬಾಗ್‌ನಲ್ಲಿ ಎರಡು ಸಾವಿರಕ್ಕೂ ಹೆಚ್ಚು ಅಮಾಯಕರನ್ನು ಕೊಂದ ಬ್ರಿಗೇಡಿಯರ್ ಆರ್.ಇ.ಎಚ್. ಡಯರ್‌ಗೆ ಯಾವ ಶಿಕ್ಷೆಯನ್ನೂ ವಿಧಿಸದ ಈ ಸಂಹಿತೆಗಳ ಉದ್ದೇಶ ನ್ಯಾಯವೋ ಅಥವಾ ಅಮಾಯಕರ ದಂಡನೆಯೋ ಎಂಬುದು ಸರ್ವವಿಧಿತ**

• ಶ್ರೀಧರ ಪ್ರಭು



ಇತಿಹಾಸ ತಜ್ಞ ಥಾಮಸ್ ಮೆಕಾಲೆ 1835ರಲ್ಲಿ ಕರಡನ್ನು ತಯಾರಿಸಿ ಈಸ್ಟ್ ಇಂಡಿಯಾ ಕಂಪನಿಗೆ ಸಲ್ಲಿಸಿದ ಎರಡು ದಶಕಗಳ ನಂತರದಲ್ಲಿ (1855) ಭಾರತೀಯ ದಂಡ ಸಂಹಿತೆಯನ್ನು (IPC) ಅಂದಿನ ವಿಧಾನ ಪರಿಷತ್ತಿನೆದುರು ಮಂಡಿಸಲಾಯಿತು. ಕಾರಣಾಂತರಗಳಿಂದ ಪರಿಷತ್ತು ಈ ದಂಡ ಸಂಹಿತೆಯನ್ನು ಅನುಮೋದಿಸಲಿಲ್ಲ. ಇದರ ಬೆನ್ನಲ್ಲೇ 1857ರಲ್ಲಿ ಪ್ರಾರಂಭವಾದ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಈಸ್ಟ್ ಇಂಡಿಯಾ ಕಂಪನಿಯ ಅಸ್ತಿತ್ವವನ್ನೇ ಕೊನೆಗಾಣಿಸಿ ಬ್ರಿಟಿಷ್ ಸರ್ಕಾರದ ನೇರ ಆಡಳಿತಕ್ಕೆ ನಾಂದಿ ಹಾಡಿತು.

ಅಂದಿನ ವಿಧಾನ ಪರಿಷತ್ತಿನ ಪ್ರಮುಖ ಸದಸ್ಯರಲ್ಲಿ ಒಬ್ಬರಾದ ಬ್ಯಾರಿಸ್ಟರ್ ಜಾರ್ಜ್ ಬರ್ನ್ಸ್ ಪಿಕಾಕ್, ದಂಡ ಸಂಹಿತೆಯನ್ನು ಬಳಸಿ ಭಾರತದಲ್ಲಿ ಹೇಗೆ ಮತ್ತೊಂದು ಸ್ವಾತಂತ್ರ್ಯ ಸಂಗ್ರಾಮದ ಸಾಧ್ಯತೆಗಳನ್ನು ಅಳಿಸಿ ಹಾಕಬಹುದೆಂದು ನಿರೂಪಿಸಿದರು. ಇದಕ್ಕೆ ಬಹುಮಾನದ ಸ್ವರೂಪದಲ್ಲಿ ಪಿಕಾಕರನ್ನು ಕೆಲ ವರ್ಷಗಳ ನಂತರ ಕಲ್ಕತ್ತಾ ಹೈಕೋರ್ಟಿನ ಮುಖ್ಯ ನ್ಯಾಯಮೂರ್ತಿಯನ್ನಾಗಿ ನೇಮಿಸಲಾಯಿತು. ಇತರ ಅನೇಕ ಪರಿಷತ್ ಸದಸ್ಯರು ನ್ಯಾಯಮೂರ್ತಿಗಳಾದರು.

ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಪ್ರತ್ಯಸ್ತ್ರವಾಗಿ 1860ರಲ್ಲಿ ಭಾರತೀಯ ದಂಡ ಸಂಹಿತೆ ಜಾರಿಗೆ ಬಂದಿತು. 1882ರಲ್ಲಿ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಜಾರಿಗೊಳಿಸಲಾಯಿತು. ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಸೇನಾನಿಗಳು ಮತ್ತು ಅವರಿಗೆ ಬೆಂಬಲ ನೀಡಿದ ಭಾರತದ ಪ್ರಜೆಗಳಿಗೆ ದಂಡಿಸುವ ಏಕೈಕ ಉದ್ದೇಶದಿಂದ ತಯಾರಾದ ಈ ದಂಡಸಂಹಿತೆಗಳ ಮೇಲೆಲ್ಲಾ ನಮ್ಮ ಸ್ವಾತಂತ್ರ್ಯ ಯೋಧರ ರಕ್ತದ ಕಲೆಗಳಿವೆ. ಲೋಕಮಾನ್ಯ ತಿಲಕ್ ಮತ್ತು ಮಹಾತ್ಮ ಗಾಂಧೀಜಿಯವರನ್ನು ದೇಶದ್ರೋಹಕ್ಕಾಗಿ ಸೆರೆಮನೆಗೆ ತಳ್ಳಿದ, ಸಾವರ್ಕರ್ ಅವರನ್ನು ಕಾಲಾಪಾನಿ ಶಿಕ್ಷೆಗೆ ದೂಡಿದ, ಭಗತ್ ಸಿಂಗ್‌ರನ್ನು ನೇಣಿಗೆ ಹಾಕಿದ, ದಂಡ ಸಂಹಿತೆಗಳ ತುಂಬೆಲ್ಲಾ ವಸಾಹತುಶಾಹಿಯ ದುರ್ವಾಸನೆಯಿದೆ. ಜಲಿಯನ್ ವಾಲಾಬಾಗ್‌ನಲ್ಲಿ ಎರಡು ಸಾವಿರಕ್ಕೂ ಹೆಚ್ಚು ಅಮಾಯಕರನ್ನು ಕೊಂದ ಬ್ರಿಗೇಡಿಯರ್ ಆರ್.ಇ.ಎಚ್. ಡಯರ್‌ಗೆ ಯಾವ ಶಿಕ್ಷೆಯನ್ನೂ ವಿಧಿಸದ ಈ ಸಂಹಿತೆಗಳ ಉದ್ದೇಶ ನ್ಯಾಯವೋ ಅಥವಾ ಅಮಾಯಕರ ದಂಡನೆಯೋ ಎಂಬುದು ಸರ್ವವಿಧಿತ. ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸ ಈ ದಂಡ ಸಂಹಿತೆಗಳ ವಿರುದ್ಧದ ಸಮರದ ಇತಿಹಾಸವೂ ಹೌದು.

ಇಂದಿನ ಕಾಲದ ಕಾನೂನು ರಚನೆಗೆ ಹೋಲಿಸಿದರೆ ಬ್ರಿಟಿಷರ ಕರಡು ರಚನೆಯ ಸೌಂದರ್ಯ ಮತ್ತು ಸ್ಪಷ್ಟತೆಗಳು ಐತಿಹ್ಯಪೂರ್ಣವಾದವು ಎಂಬುದನ್ನು ಅನೇಕರು ಒಪ್ಪುತ್ತಾರೆ. ಹೀಗಿರುವಾಗ, ನೂರೈವತ್ತಕ್ಕೂ ಹೆಚ್ಚು ವರ್ಷಗಳ ಕಾಲ ಜಾರಿಯಲ್ಲಿರುವ ದಂಡ ಸಂಹಿತೆಗಳನ್ನು ಬ್ರಿಟಿಷರ ಕಾಲದ್ದು ಎಂಬ ಒಂದೇ ಉದ್ದೇಶದಿಂದ ಬದಲಿಸಬೇಕೇ? ಇದು ಅನೇಕರ ವಾದ.

ಭಾರತೀಯ ದಂಡ ಸಂಹಿತೆಯನ್ನು ಈವರೆಗೆ 78 ಬಾರಿ ತಿದ್ದುಪಡಿ ಮಾಡಲಾಗಿದೆ. 2003ರಲ್ಲಿ ನ್ಯಾಯಮೂರ್ತಿ ವಿ.ಎಸ್.ಮಳಿಮಠ ಆಯೋಗವು ದಂಡ ಮತ್ತು ಪ್ರಕ್ರಿಯಾ ಸಂಹಿತೆಗಳಿಗೆ ಅಮೂಲಾಗ್ರ ಪರಿಷ್ಕರಣೆಯ ಶಿಫಾರಸು ಮಾಡಿತು. 2007ರಲ್ಲಿ ಎನ್. ಆರ್.ಮಾಧವ ಮೆನನ್ ಆಯೋಗವೂ ದಂಡ ಪ್ರಕ್ರಿಯಾ ಸಂಹಿತೆಗೆ ಸಾಕಷ್ಟು ಬದಲಾವಣೆಗಳನ್ನು ಸೂಚಿಸಿತು.

ಸುಪ್ರೀಂ ಕೋರ್ಟ್ 2017ರ ಜೋಸೆಫ್ ಶೈನ್ ಪ್ರಕರಣದಲ್ಲಿ ಕಲಂ 497 ಅನ್ನು ಮತ್ತು 2018ರ ನವತೇಜ್ ಜೋಹಾರ್ ಪ್ರಕರಣದಲ್ಲಿ 377ನೇ ಕಲಂ ಅನ್ನು ಸಂವಿಧಾನಬಾಹಿರವೆಂದು ಘೋಷಿಸಿ ದಂಡ ಸಂಹಿತೆಯಿಂದ ಹೊರಹಾಕಿತು.

ಈ ಎರಡೂ ಪ್ರಕರಣಗಳಲ್ಲಿ ದಂಡ ಸಂಹಿತೆಯ ಸಾಕಷ್ಟು ಕಲಂಗಳು 'ವಿಕ್ಟೋರಿಯನ್ ನೈತಿಕತೆ'ಯನ್ನಾಧರಿಸಿವೆ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ. ದಂಡ ಸಂಹಿತೆಯನ್ನು ಹೊರತುಪಡಿಸಿ, ನಮ್ಮ ದೇಶದ ಸುಮಾರು 350 ಕಾನೂನುಗಳು ಒಂದಿಲ್ಲೊಂದು ಕೃತ್ಯ ಅಥವಾ ಲೋಪವನ್ನು ಅಪರಾಧವೆಂದು ಸಾರಿ ಶಿಕ್ಷೆಯನ್ನು ಘೋಷಿಸುತ್ತವೆ. ಇನ್ನು ದೇಶದ್ರೋಹಕ್ಕೆ ಶಿಕ್ಷೆ ವಿಧಿಸುವ ಕಲಂ ಸೇರಿದಂತೆ ದಂಡ ಪ್ರಕ್ರಿಯೆಯ ಅನೇಕ ಕಲಂಗಳ ಸಂವಿಧಾನಬದ್ಧತೆಯನ್ನು ಪ್ರಶ್ನಿಸಿ ಪ್ರಕರಣಗಳು ದಾಖಲಾಗಿವೆ. ಇತ್ತೀಚೆಗೆ ಘೋಷಿತವಾದ ಸಂಹಿತೆಗಳ ಬಗ್ಗೆ ಗಂಭೀರ ಭಿನ್ನಾಭಿಪ್ರಾಯಗಳಿದ್ದವರೂ ಸಹ, ಇಂದಿರುವ ಸಂಹಿತೆಗಳನ್ನು ಸಮಗ್ರವಾಗಿ ಪರಿಷ್ಕರಿಸಬೇಕಿದೆ ಎಂಬುದನ್ನು ಒಪ್ಪಿಕೊಳ್ಳುತ್ತಾರೆ.

ಪ್ರಸ್ತಾವಿತ ಸಂಹಿತೆಗಳ ಘೋಷಿತ ಉದ್ದೇಶ ದಂಡದ ಬದಲು ನ್ಯಾಯ. ದಂಡ ಸಂಹಿತೆಗಳ ಮುಖ್ಯಾಂಶಗಳು ಇಂತಿವೆ: ಎಫ್‌ಐಆರ್ ಹಂತದಿಂದಲೇ ಸಂಪೂರ್ಣ ತನಿಖಾ ಪ್ರಕ್ರಿಯೆಯ ಡಿಜಿಟಲೀಕರಣ, ಇ-ಎಫ್‌ಐಆರ್ ಕಡ್ಡಾಯ. ಏಳು ವರ್ಷಕ್ಕಿಂತ ಹೆಚ್ಚಿನ ಶಿಕ್ಷೆಯಿರುವ ಪ್ರತಿ ಅಪರಾಧದ ತನಿಖೆಯಲ್ಲಿ, ಅಪರಾಧ ಸ್ಥಳಕ್ಕೆ ಫೋರೆನ್ಸಿಕ್ ತನಿಖಾ ತಂಡದ ಭೇಟಿ ಕಡ್ಡಾಯ, ಪ್ರತಿ ಜಿಲ್ಲೆಯಲ್ಲೂ ಚಲಿಸುವ ಫೋರೆನ್ಸಿಕ್ ಪ್ರಯೋಗಾಲಯ ಸ್ಥಾಪನೆ, ಜೀರೊ ಎಫ್‌ಐಆರ್ ಯಾವುದೇ ಪೊಲೀಸ್ ಠಾಣೆಯಲ್ಲಿ ದಾಖಲಿಸಿದರೂ, ಹದಿನೈದು ದಿನಗಳೊಳಗೆ ಸಂಬಂಧಿತ ಠಾಣೆಗೆ ವರ್ಗಾವಣೆ... ಹೀಗೆ ಅನೇಕ ಬದಲಾವಣೆಗಳನ್ನು ಪ್ರಸ್ತಾಪಿಸಲಾಗಿದೆ. ಬಂಧಿತ ವ್ಯಕ್ತಿಯ ಸುರಕ್ಷತೆ ನನ್ನ ಜವಾಬ್ದಾರಿಯೆಂದು ಘೋಷಿಸಿ ಪ್ರಮಾಣಪತ್ರವನ್ನು ನೀಡಲು ಓರ್ವ ಅಧಿಕಾರಿಯನ್ನು ನೇಮಿಸಲಾಗುತ್ತದೆ. ಈ ಪ್ರಮಾಣ ಪತ್ರವನ್ನು ಬಂಧಿತ ವ್ಯಕ್ತಿಯ ಕುಟುಂಬಕ್ಕೆ ಆನ್‌ಲೈನ್ ಮತ್ತು ಖುದ್ದಾಗಿ ನೀಡಲಾಗುತ್ತದೆ. ಲೈಂಗಿಕ ಅಪರಾಧಗಳಿಗೆ ಬಲಿಯಾದ ವ್ಯಕ್ತಿಗಳ ಹೇಳಿಕೆಯನ್ನು ಕಡ್ಡಾಯವಾಗಿ ವಿಡಿಯೊ ಚಿತ್ರೀಕರಣ ಮಾಡಬೇಕಿದೆ.

ಪೊಲೀಸರು ಪ್ರತಿಯೊಂದು ಪ್ರಕರಣದ ತನಿಖಾ ಪ್ರಗತಿ ವರದಿಯನ್ನು ತೊಂಬತ್ತು ದಿನಗಳಲ್ಲಿ ನೀಡಬೇಕಿದೆ. ಏಳು ವರ್ಷಕ್ಕಿಂತ ಹೆಚ್ಚಿನ ಶಿಕ್ಷೆಯಿರುವ ಯಾವುದೇ ಅಪರಾಧಕ್ಕೆ ಬಲಿಯಾದ ವ್ಯಕ್ತಿಯನ್ನು ಕೇಳದೇ ಸರ್ಕಾರ ಪ್ರಕರಣವನ್ನು ಹಿಂಪಡೆಯುವಂತಿಲ್ಲ. ತೀರಾ ಸಣ್ಣ ಅಪರಾಧಗಳಡಿ ಶಿಕ್ಷೆಗೆ ಪರ್ಯಾಯವಾಗಿ ಸಮುದಾಯ ಸೇವೆ ನಿಜವಾಗಲೂ ವಿನೂತನವಾದದ್ದು. ಮೂರು ವರ್ಷಕ್ಕೂ ಕಡಿಮೆ ಶಿಕ್ಷೆಯಿರುವ ಅಪರಾಧಗಳನ್ನು ಸಂಕ್ಷೇಪವಾದ ವಿಚಾರಣೆಯ ಮೂಲಕ ನಡೆಸುವ ಪ್ರಸ್ತಾವನೆಯಿದೆ. ಇದರಿಂದಾಗಿ ಸೆಷನ್ಸ್ ನ್ಯಾಯಾಲಗಳ ಮೇಲಿನ ಒತ್ತಡ ಸಾಕಷ್ಟು ಕಡಿಮೆಯಾಗಲಿದೆ. ತೊಂಬತ್ತು ದಿನಗಳಲ್ಲಿ ಚಾರ್ಜ್ ಶೀಟ್ (ಅಂತಿಮ ವರದಿ) ಸಲ್ಲಿಸಲೇಬೇಕು ಮತ್ತು 180 ದಿನಗಳಲ್ಲಿ ತನಿಖೆ ಮುಗಿಯಲೇಬೇಕೆಂಬ ಕಟ್ಟಳೆಗಳನ್ನೂ ಸೇರಿಸಲಾಗಿದೆ. ವಿಚಾರಣೆ ಮುಗಿದ 30 ದಿನಗಳಲ್ಲಿ ತೀರ್ಪನ್ನು ನೀಡಲೇಬೇಕಿದೆ ಮತ್ತು ಒಂದು ವಾರದೊಳಗೆ ಕೋರ್ಟಿನ ಜಾಲತಾಣಕ್ಕೆ ರವಾನಿಸಬೇಕಿದೆ.

ಸರ್ಕಾರಿ ನೌಕರರ ಮೇಲೆ ಪ್ರಕರಣ ದಾಖಲಿಸಲು 120 ದಿನಗಳೊಳಗೆ ಮೇಲಧಿಕಾರಿಗಳು ಪರವಾನಗಿ ನೀಡದಿದ್ದರೆ, ತಂತಾನೇ ಪರವಾನಗಿ ನೀಡಿದಂತಾಯಿತೆಂದು ಸಂಹಿತೆಯಲ್ಲಿದೆ. ಅಪರಾಧಿಯ ಆಸ್ತಿಯನ್ನು ಮಾರಿ ಪರಿಹಾರ ಕೊಡಿಸಬಹುದಾಗಿದೆ. ಮಹಿಳೆಯರಿಗೆ ಮದುವೆ ಮತ್ತು ನೌಕರಿ ಇತ್ಯಾದಿ ಆಮಿಷಗಳನ್ನು ತೋರಿಸಿ ವಂಚಿಸುವುದನ್ನು ಶಿಕ್ಷಾರ್ಹ ಅಪರಾಧವೆಂದು ಘೋಷಿಸಲಾಗಿದೆ. ಗ್ಯಾಂಗ್ ರೇಪ್‌ಗೆ (ಸಮೂಹ ಅತ್ಯಾಚಾರ) 20 ವರ್ಷಗಳ ಶಿಕ್ಷೆಯಿದೆ. ಅಪ್ರಾಪ್ತ ವಯಸ್ಸಿನ ಬಾಲಕಿಯರ ಮೇಲಿನ ಅತ್ಯಾಚಾರಕ್ಕೆ ಗಲ್ಲುಶಿಕ್ಷೆ ಮತ್ತು ಗುಂಪು ಹತ್ಯೆ ಮತ್ತು ಸಂಘಟಿತ ಅಪರಾಧಗಳಿಗೆ ಹೆಚ್ಚಿನ ಶಿಕ್ಷೆಯಿದೆ.

ಹಾಗೆಯೇ, ಭಯೋತ್ಪಾದನೆಗೆ ವ್ಯಾಖ್ಯಾನ ನೀಡಲಾಗಿದೆ. ಪ್ರಕರಣ ಕೊನೆಗೊಳ್ಳುವವರೆಗೆ ವಾಹನಗಳನ್ನು ಪೊಲೀಸ್ ಠಾಣೆಯಲ್ಲಿ ನಿಲ್ಲಿಸಬೇಕಾದ ಪ್ರಮೇಯವಿಲ್ಲ. ವಿಡಿಯೊ ಚಿತ್ರೀಕರಣದ ನಂತರ ವಾಹನವನ್ನು ಕೊಂಡೊಯ್ಯಬಹುದಾಗಿದೆ. ರಾಜಕೀಯ ಕಾರಣಗಳಿಂದ ಶಿಕ್ಷೆಯ ಅವಧಿಯನ್ನು ಮನ್ನಾ ಮಾಡುವ ಅಧಿಕಾರವನ್ನು ತೆಗೆದು, ಒಂದಷ್ಟು ವರ್ಷಗಳ ಮೊಟಕುಗೊಳಿಸುವಿಕೆಯನ್ನು ಮಾತ್ರವೇ ಅನುಮತಿಸಲಾಗಿದೆ.

ವಸಾಹತುಶಾಹಿ ಛಾಪಿನ ಹಳೆಯ ದಂಡ ಸಂಹಿತೆಗಳ ಬದಲು ಹೊಸ ಸಂಹಿತೆಗಳನ್ನು ಪರಿಚಯಿಸಿದ್ದನ್ನು ರಾಜಕೀಯ ಕಾರಣಗಳಿಗಾಗಿ ವಿರೋಧಿಸದೇ ವಸ್ತುನಿಷ್ಠ ಮನಸ್ಥಿತಿಯಿಂದ ಅವಲೋಕಿಸಬೇಕಾದ ಅಗತ್ಯವಿದೆ.

ಲೇಖಕ: ಹೈಕೋರ್ಟ್ ವಕೀಲರು

# ಕ್ಲೈಮ್ಯಾಕ್ಸ್‌ನಲ್ಲಿ ಸೋಲುವ ಕಥೆ, ಗೆಲ್ಲುವ ನಾಯಕ



**ರೈತರನ್ನು**, ಕೃಷಿ ವಿಷಯವನ್ನು ಕೇಂದ್ರವಾಗಿಟ್ಟು-ಕೊಂಡು ಹಲವು ಸಿನಿಮಾಗಳು ತೆರೆಕಂಡಿವೆ. ಈ ಪ್ರಭೇದದ ಸಿನಿಮಾಗಳಿಗೆ ಕಮರ್ಷಿಯಲ್ ಚೌಕಟ್ಟು ಹಾಕುವುದು ಕಷ್ಟಸಾಧ್ಯ. ಹೀಗಿದ್ದರೂ ಇಂತಹ ಒಂದು ಪ್ರಯತ್ನ 'ಕ್ಷೇತ್ರಪತಿ'ಯಲ್ಲಿದೆ. ನಾಯಕ ನವೀನ್ ಶಂಕರ್ ಸಮರ್ಥ ನಟನೆಯ ಹೊರತಾಗಿಯೂ ಚಿತ್ರದ ಕಥೆ ಕ್ಲೈಮ್ಯಾಕ್ಸ್ ಹಂತ ತಲುಪುವ ಹೊತ್ತಿಗೆ ದುರ್ಬಲವಾಗಿಬಿಟ್ಟಿದೆ.

ಬೆಂಗಳೂರಿನಲ್ಲಿ ಎಂಜಿನಿಯರಿಂಗ್ ಮಾಡುತ್ತಿರುವ ರೈತನ ಮಗ ಬಸವ(ನವೀನ್ ಶಂಕರ್) ತನ್ನ ತಂದೆಯ ಆತ್ಮಹತ್ಯೆ ಸುದ್ದಿ ತಿಳಿದು ಊರಿಗೆ ಮರಳುತ್ತಾನೆ. ವಾಸ್ತವದಂತೆ ಈ ಘಟನೆಗೂ 'ಸಾಲ'ವೇ ಖಳ. ತಂದೆ ಮಾಡಿಟ್ಟ ಸಾಲದ ಬಿಸಿಯನ್ನು ಸಾಹುಕಾರ ವೀರಭದ್ರ (ರಾಹುಲ್ ಐನಾಪುರ್) ಬಸವನ ಕುಟುಂಬಕ್ಕೆ ನೀಡುತ್ತಾನೆ. ಈ ವೀರಭದ್ರ ಆಡಳಿತದಲ್ಲಿರುವ ರಾಜಕೀಯ ಪಕ್ಷದ ಜಿಲ್ಲಾ ಅಧ್ಯಕ್ಷ. ಈ ಕಷ್ಟ ತನ್ನ ತಂದೆಗಷ್ಟೇ ಅಲ್ಲವೆಂದು ಓದನ್ನು ಅರ್ಧದಲ್ಲೇ ಬಿಟ್ಟು, ಊರಿನಲ್ಲಿದ್ದುಕೊಂ-ಡೇ ಸಾಹುಕಾರನನ್ನು ಎದುರು ಹಾಕಿಕೊಂಡು ಒಕ್ಕಲುತನ ಮಾಡಿ ಮುನ್ನಡೆಯುವ ನಿರ್ಧಾರಕ್ಕೆ ಬರುತ್ತಾನೆ ಬಸವ. ಮಾರುಕಟ್ಟೆಯಲ್ಲಿ ತನ್ನ ಬೆಳೆಗೆ ಸೂಕ್ತ ಬೆಲೆ ದೊರೆಯದೇ ಇದ್ದಾಗ ಎಪಿಎಂಸಿ ಎದುರಿಗೇ ತಾತ್ಕಾಲಿಕ ಅಂಗಡಿ ತೆರೆದು ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡುತ್ತಾನೆ. ಇತರರಿಗೂ ಮಾದರಿಯಾಗುತ್ತದೆ ಈ ನಡೆ. ಈ ರೀತಿ ಬೆಳೆದ ಬಸವನನ್ನು ವ್ಯವಸ್ಥೆಯು ವ್ಯವಸ್ಥಿತವಾಗಿ ಹತ್ತಿಕ್ಕುವ ತಂತ್ರಗಳೇ ಮುಂದಿನ ಕಥೆ.

ಚಿತ್ರದ ಕಥೆಗೆ ಮೊದಲಾರ್ಧದಲ್ಲಿ ಗಟ್ಟಿಯಾದ ಅಡಿಪಾಯ ಹಾಕಿಕೊಟ್ಟಿದ್ದಾರೆ ನಿರ್ದೇಶಕ ಶ್ರೀಕಾಂತ್. ಅದರಂತೆ ತಮ್ಮೊಳಗಿನ ನಟನೆಯ ಸಾಮರ್ಥ್ಯವನ್ನೂ

**ನಾವು ನೋಡಿದ ಸಿನಿಮಾ**

**ಕ್ಷೇತ್ರಪತಿ (ಕನ್ನಡ)**

- ನಿರ್ದೇಶನ: ಶ್ರೀಕಾಂತ್ ಕಟಗಿ
- ನಿರ್ಮಾಣ: ಆಶ್ರಗ ಕ್ರಿಯೇಷನ್ಸ್
- ತಾರಾಗಣ: ನವೀನ್ ಶಂಕರ್, ಅರ್ಚನಾ ಜೋಯಿಸ್, ಅಚ್ಯುತ್‌ಕುಮಾರ್, ರಾಹುಲ್ ಐನಾಪುರ, ಕೃಷ್ಣ ಹೆಬ್ಬಾಳೆ, ನಾಟ್ಯರಂಗ ಮತ್ತಿತರರು

ನವೀನ್ ಇಲ್ಲಿ ತೋರ್ಪಡಿಸಿದ್ದಾರೆ. ಅವರದ್ದು ಅದ್ಭುತ ನಟನೆ. ಆಂಬುಲೆನ್ಸ್ ಎದುರು ಓಡುವ ದೃಶ್ಯವೊಂದೇ ಸಾಕು, ನವೀನ್ ಅವರ ನಟನೆಗೆ ಅಂಕ ನೀಡಲು. ತಂದೆಯ ಶವದೆದುರು ಮೌನಿಯಾದಾಗ, ಅದುಮಿಟ್ಟ ದುಃಖ ಸ್ಫೋಟಗೊಂಡಾಗ, ಸಾಹುಕಾರನೆದುರು ಸವಾಲೊಡ್ಡಿ ಕುಳಿತುಕೊಂಡಾಗ, ಸಾಹಸ ದೃಶ್ಯಗಳಲ್ಲಿ ನವೀನ್ 'ಬಸವ'ನಾಗಿಯೇ ಜೀವಿಸಿದ್ದಾರೆ. ಇಡೀ ಕಥೆಯನ್ನು ಮೊದಲಾರ್ಧ ಅವರೇ ಹೊತ್ತು ಸಾಗುತ್ತಾರೆ.

ಇಡೀ ಸಿನಿಮಾ ಸಂಭಾಷಣೆಯ ಮೇಲೆಯೇ ನಿಂತಿದೆ. ಸಿನಿಮಾದ ಅವಧಿ ಲಂಬಿಸಿರುವುದೂ ಇದೇ ಕಾರಣಕ್ಕೆ. ದ್ವಿತೀಯಾರ್ಧದಲ್ಲಿ ಕಥೆ ಪಕ್ವವಾಗಿಲ್ಲ. ಹೀಗಾಗಿ ಹಲವು ದೃಶ್ಯಗಳು ಅತಿ ಸಿನಿಮೀಯವೆನಿಸುತ್ತವೆ ಜೊತೆಗೆ ಚಿತ್ರಕಥೆಯನ್ನು ಹಿಂಜಿದಂತೆ ಭಾಸವಾಗುತ್ತದೆ. ರೈತನೊಬ್ಬನ ಮನೆಯ ಮೇಲೆ ಐಟಿ ದಾಳಿಯಾಗುತ್ತದೆ, ವಿಭಿನ್ನವಾದ ಕ್ರಾಂತಿ ಮೂಲಕ ಪರಿಹಾರ ನೀಡುವ ಪ್ರಯತ್ನವನ್ನು ನಾಯಕ ಮಾಡುತ್ತಾನೆ. ಸೂಕ್ತ ಎಳೆ ಇಲ್ಲದ ಕಾರಣ ಕಥೆ ಪೇಲವವಾಗುತ್ತಾ ಸಾಗುತ್ತದೆ. ಕೋರ್ಟ್ ದೃಶ್ಯವಂತೂ ಕೃತಕ. ಹೀಗಾಗಿ ಕ್ಲೈಮ್ಯಾಕ್ಸ್ ಹಂತ ತಲುಪುತ್ತಾ ಸಿನಿಮಾ ಎಡವುತ್ತದೆ.

ರೈತರ ಆರ್ಥಿಕ ಸ್ಥಿತಿ, ವ್ಯವಸ್ಥೆಯ ಕುತಂತ್ರಗಳು, ಕಾರ್ಪೊರೇಟ್ ಕಂಪನಿಗಳ ಹಿಡಿತ, ದಲ್ಲಾಳಿಗಳ ಆಟ, ರೈತರಿಗೆ ಸಿಗುವ ಬಿಡಿಗಾಸು ಹೀಗೆ ಹಲವು ವಿಷಯಗಳನ್ನು ಸಿನಿಮಾ ಪ್ರಸ್ತಾಪಿಸುತ್ತದೆ. ಇದಕ್ಕೊಂದು ವಿಭಿನ್ನ ಆಯಾಮ ನೀಡುವ ಪ್ರಯತ್ನವಾಗಿದ್ದರೆ ಕಥೆ ಕುತೂಹಲ ಪಡೆಯುತ್ತಿತ್ತು. ಸಾಲ ಮನ್ನಾ, ಬೆಂಬಲ ಬೆಲೆ ಘೋಷಣೆ ಒಂದೇ ರೈತರ ಎಲ್ಲ ಸಮಸ್ಯೆಗಳಿಗೆ ಪರಿಹಾರವಲ್ಲ; ಬೆಳೆ ಬೆಳೆಯುವ ಮುನ್ನವೇ ಲಾಭದಾಯಕ ಬೆಲೆ ನಿಗದಿ ಎನ್ನುವ ಕಾನೂನು ಬರಬೇಕು ಎನ್ನುವ ಗಟ್ಟಿಯಾದ ಸಂದೇಶವನ್ನು ಸಿನಿಮಾ ಸಾರುತ್ತದೆ.

ಉತ್ತರ ಕರ್ನಾಟಕ ಭಾಷೆಯ ಸೊಗಡನ್ನು ಈ ಸಿನಿಮಾದಲ್ಲಿ ಸವಿಯಬಹುದು. ಖಳನಾಗಿ ರಾಹುಲ್ ಐನಾಪುರ್ ಅಂಕ ಗಿಟ್ಟಿಸುತ್ತಾರೆ. ಅಚ್ಯುತ್ ಕುಮಾರ್, ಅರ್ಚನಾ ಜೋಯಿಸ್, ಕೃಷ್ಣ ಹೆಬ್ಬಾಳೆ ಪಾತ್ರಕ್ಕೆ ತೂಕವಿಲ್ಲ. ರವಿ ಬಸ್ರೂರ್ ಹಳ್ಳಿಯ ಫೈಟಿಂಗ್‌ಗೂ ಡಿಶುಂ ಡಿಶುಂ ತೂರಿಸಿದ್ದಾರೆ!

**ಅಭಿಲಾಷ್ ಪಿ. ಎಸ್.**

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ
https://www.prajavani.net

## ಪದಬಂಧ 5415


– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**

3. ಗಣಿತದಲ್ಲಿ ವರ್ಗಸಂಖ್ಯೆ ಬರಲು ಕಾರಣವಾದ ಸಂಖ್ಯೆ (4)
4. ಮಠದ ಹತ್ತಿರ ಕಾಣಿಸಿಕೊಂಡಿರುವ ಆಮೆ (3)
5. ಕೊನೆಗೆ ವಿಕ್ರಯಿಸಿ ಮೋಸ ಹೋಗು! (3)
6. ಯುದ್ಧಕ್ಕೊಂದು ಪರ್ಯಾಯ ಪದ (3)
8. ಕಳೆಯುವ ಲೆಕ್ಕವಿದು (5)
10. ಮುಳ್ಳುಗಳ ನಡುವೆ ಅರಳುವ ಹೂವು (3)
12. ಸಾವು ಈ ರೀತಿ ಬಂದಿದೆ (3)
13. ಜಡಿ ಮಳೆಯಲ್ಲಿ ಖರೀದಿಸಿರುವ ವಂದರಿ (3)
15. ತಡವಾಗಿ ಕಾಣಿಸಿದ ಜಲಪಾತ (4)

**ಮೇಲಿಂದ ಕೆಳಕ್ಕೆ**

1. ದುರ್ಗತಿಯಲ್ಲಿರುವ ಕೋಟೆ (2)
2. ಪಂಚಪಾಂಡವರಲ್ಲಿ ಎರಡನೆಯವನು (2)
3. ಪ್ರವರ್ತಕನ ಬಳಿಯಿರುವ ವ್ಯಾಪಾರಿ (3)
4. ಹಸುವಿನ ಮರಿಯಿದು (2)
5. ಎಲ್ಲರನ್ನೂ ಒಂದುಗೂಡಿಸುವುದು (5)
7. ಇದು ಹೊಸದು (2)
9. ಅಳು ಪದದ ವಿರುದ್ಧ ಪದ (2)
11. ಸೂರ್ಯನ ಕಾವು ಇಲ್ಲಿದೆ (3)
12. ಮಹಡಿಯಲ್ಲೇ ಮಾಡಿದ ಪಾತಿ! (2)
14. ಬೆಲೆ ಬಾಳುವ ಮಣಿ (2)
16. ಮಲಗುವ ಮನೆಯಲ್ಲಿ ಧಾನ್ಯ ಕಾಣಿಸಿತೇ? (2)



**5414ನೇ ಪದಬಂಧದ ಉತ್ತರ**

**ಎಡದಿಂದ ಬಲಕ್ಕೆ:**
1.ಪಿತಾಮಹ
3.ಮನೋಬಲ
5.ಕೀಚಕ 6.ಕಸರತ್ತು
7.ದಳಪತಿ
9.ತರದೂದು 11.ಸದಗರ
13.ಚಾಕರ
15.ಪಾದಾಚಾರಿ
16.ಸದ್ಭಾವನೆ

**ಮೇಲಿಂದ ಕೆಳಕ್ಕೆ:**
1.ಪಿಚ್ಚು 2.ಹಕೀಕತ್ತು
3.ಮಕರಂದ 4.ಲಕ್ಷ್ಮಿ
6.ಕಡಿತ 8.ತಿಮಿರ
10.ದುರಾಚಾರಿ
11.ಸಮರಸ 12.ಶಪಾ
14.ಮನೆ

## ಸುಡೊಕು 5801

| | | | | | | | | |
|---|---|---|---|---|---|---|---|---|
| | | | | 9 | | 1 | | 8 |
| | 1 | 2 | | 3 | | | 6 | |
| | | 7 | 4 | | | 3 | | 9 |
| 2 | 9 | | | | 4 | 6 | | |
| 1 | 4 | | | 5 | | | | 2 |
| | | | 1 | | | | 9 | 4 |
| 3 | | 9 | | | 5 | | 7 | |
| | 8 | | | 1 | | 9 | | 3 |
| 4 | | 1 | 3 | | 9 | | 8 | |

**5800 ಸುಡೊಕು**

| | | | | | | | | |
|---|---|---|---|---|---|---|---|---|
| 3 | 4 | 8 | 2 | 7 | 9 | 6 | 5 | 1 |
| 9 | 6 | 1 | 5 | 8 | 3 | 2 | 7 | 4 |
| 5 | 7 | 2 | 1 | 6 | 4 | 3 | 9 | 8 |
| 6 | 9 | 4 | 7 | 3 | 5 | 1 | 8 | 2 |
| 2 | 8 | 5 | 6 | 9 | 1 | 7 | 4 | 3 |
| 1 | 3 | 7 | 4 | 2 | 8 | 9 | 6 | 5 |
| 8 | 5 | 9 | 3 | 1 | 6 | 4 | 2 | 7 |
| 7 | 1 | 6 | 8 | 4 | 2 | 5 | 3 | 9 |
| 4 | 2 | 3 | 9 | 5 | 7 | 8 | 1 | 6 |

**ಆಡುವುದು ಹೇಗೆ?**

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

## ಗುಂಡಣ್ಣ




## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಆಗಸ್ಟ್ 19, 2023

**ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ:** ಶ್ರಾವಣ ಶುಕ್ಲ ತೃತೀಯ ಗಂ. 22-20 ನಕ್ಷತ್ರ: ಉತ್ತರಫಲ್ಗುನಿ ಗಂ. 25-48 ಯೋಗ: ಸಿದ್ಧಿ ಗಂ. 21-19 ಕರಣ: ತೈತಿಲ ಗಂ. 09-13, ಸಿಂಹ ಮಾಸದ 02 ನೇ ದಿನ,
ಮಳೆನಕ್ಷತ್ರ: ಮಘಾ 1. ರಾಹುಕಾಲ : ಬೆಳಗ್ಗೆ 09-00 - 10-30
ಸೂರ್ಯೋದಯ : 06-22 ಸೂರ್ಯಾಸ್ತ : 06-47
ಮುಸ್ಲಿಂ ದಿನಾಂಕ : 02 ಸಫರ್ ದಿನ ವಿಶೇಷ : ಮಧುಶ್ರಾವ ತೃತೀಯ (ತೀಜ್)
ಅದೃಷ್ಟ ಸಂಖ್ಯೆ : 2, 6

**ಮೇಷ:** ನೈತಿಕವಾಗಿ ಪರಸ್ಪರ ಬೆಂಬಲವಾಗಿರುವ ಸ್ನೇಹ ಸಂಬಂಧಕ್ಕೆ ಪೌಷ್ಟಿಕತೆ ಸಿಕ್ಕಿ ಮುಂದುವರೆಯಲಿ. ಕೆಲಸದಲ್ಲಿದ್ದ ಸಣ್ಣಪುಟ್ಟ ತೊಡಕು ನಿವಾರಿಸಿಕೊಳ್ಳುವುದನ್ನು ಸ್ವಂತವಾಗಿ ಅಭ್ಯಾಸಿಸಿ.

**ವೃಷಭ:** ಕೆಲವು ಸವಾಲುಗಳನ್ನು ಎದುರಿಸುವ ಸಂದರ್ಭಗಳು ಎದುರಾಗಬಹುದು ಮತ್ತು ಸಮ್ಮಿಶ್ರ ಫಲಿತಾಂಶ ಪಡೆಯುವಂತಾಗಲಿದೆ. ವಿದ್ಯಾರ್ಥಿಗಳು ಬಿಡುವಿನ ಸಮಯದಲ್ಲಿ ಕಂಪ್ಯೂಟರ್ ಅಧ್ಯಯನ ಮಾಡುವ ಬಗ್ಗೆ ಯೋಚಿಸಿ.

**ಮಿಥುನ:** ಕೌಟುಂಬಿಕವಾಗಿ ಸಹೋದರನ ಏಳಿಗೆಯನ್ನು ಹಾರೈಸುವ ಮನೋಭಿಲಾಷೆ ಬೆಳೆಸಿಕೊಳ್ಳಿರಿ. ಪುಣ್ಯ ಸಂಪಾದನೆಗೆ ದಾನ-ಧರ್ಮ ಮಾಡುವ ಮನೋಭಾವವನ್ನು ಬೆಳೆಸಿಕೊಳ್ಳಿರಿ. ಮಹಾಲಕ್ಷ್ಮಿಯ ಅನುಗ್ರಹ ಸಿಗುವುದು.

**ಕರ್ಕಾಟಕ:** ಸತತ ಪರಿಶ್ರಮದ ಫಲವಾಗಿ ಅವಮಾನಿಸಿದ ವ್ಯಕ್ತಿಗಳಿಂದ ಗೌರವ ಪಡೆಯುವಂಥ ಕಾಲವನ್ನು ನೀವು ಇಂದು ನಿರೀಕ್ಷಿಸಬಹುದು. ಗಣ್ಯ ವ್ಯಕ್ತಿಗಳಿಗೆ ಸಮಾಜ ಮತ್ತು ರಾಜಕೀಯ ಕ್ಷೇತ್ರದಲ್ಲಿ ಸ್ಥಾನ-ಮಾನ, ಗೌರವಗಳು ಲಭಿಸಲಿದೆ.

**ಸಿಂಹ:** ಸ್ವರ್ಣ, ಲೋಹ ಹಾಗೂ ಗೃಹೋಪಕರಣಗಳ ವ್ಯವಹಾರಗಳಲ್ಲಿ ಉತ್ತಮ ಆದಾಯ ಹೊಂದಬಹುದು. ಬೆಳ್ಳಿ ವಸ್ತುಗಳ ಮಾರಾಟ ಮಾಡುವವರು ಹೆಚ್ಚಿನ ಆದಾಯ ಗಳಿಸುವಿರಿ. ಹಳದಿ ಬಣ್ಣ ಅಶುಭ ನೀಡುವುದು.

**ಕನ್ಯಾ:** ಸುತ್ತಮುತ್ತಲಿನ ಜನರೊಂದಿಗೆ ಬೆರೆಯುವುದರ ಪ್ರಯೋಜನ ಅನುಭವಕ್ಕೆ ಬರಲಿದೆ. ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಆಸಕ್ತಿ ಮೂಡಲಿದೆ. ವೈದ್ಯ ವೃತ್ತಿಯವರಿಗೆ ಲಾಭದ ದಿನ. ಹೆಂಡತಿಯ ಮಾತು ಮುಖ್ಯವೆನಿಸುತ್ತದೆ.

**ತುಲಾ:** ಸಂಗೀತದ ಕಲಿಕೆಯಲ್ಲಿನ ಅತೀವ ಆಸಕ್ತಿಗೆ ತಂದೆ-ತಾಯಿಯವರಿಂದ ಪ್ರೋತ್ಸಾಹ ಸಿಗಲಿದೆ. ರಾಜಕೀಯ ರಂಗದಲ್ಲಿ ದಾಳ ಉರುಳಿದ್ದೇ ಗೊತ್ತಾಗದಂತೆ ನಿಮ್ಮ ವಿರುದ್ಧವಾಗಿ ಸಂಚು ನಡೆಯಲಿದೆ.

**ವೃಶ್ಚಿಕ:** ಆಲಸ್ಯದ ಸ್ವಭಾವ ಹೆಚ್ಚಾಗಿರುವುದರಿಂದ ಕೆಲಸವು ಬಾಕಿ ಉಳಿಯಲಿದೆ. ಪರಾವಲಂಬಿಯಾಗಿರುವ ನೀವು ಸ್ವಾವಲಂಬಿಯಾಗಿರಲು ಪ್ರಯತ್ನಿಸಿ. ಆಹಾರ ಪದ್ಧತಿಯು ಅನಾರೋಗ್ಯಕ್ಕೆ ಮೂಲ ಕಾರಣವಾಗುತ್ತದೆ.


**ಧನು:** ಕುಟುಂಬದವರೊಡನೆ ಸಂತೋಷದಲ್ಲಿ ಇರಬೇಕೆಂಬ ಈ ದಿನದ ಆಲೋಚನೆಗೆ ಯಾವುದೋ ಒಂದು ಅಡ್ಡಿ ಎದುರಾಗಲಿದೆ. ಹಣಕಾಸಿನ ಸ್ಥಿತಿಯು ನಷ್ಟದ ದಾರಿಯನ್ನು ನೋಡುವುದು.

**ಮಕರ:** ಸಮಯ ಪಾಲನೆ ಮಾಡುವುದನ್ನು ಜೀವನದಲ್ಲಿ ರೂಢಿಸಿಕೊಳ್ಳಿ. ಷೇರುಪೇಟೆಯ ವಹಿವಾಟಿನಲ್ಲಿ ಉತ್ತಮ ಪ್ರಗತಿ ಕಂಡುಬರಲಿದೆ. ಯೋಗ್ಯ ವಯಸ್ಕರಿಗೆ ಸರಿಸಮಾನ ರೀತಿಯಲ್ಲಿ ವಿವಾಹ ಭಾಗ್ಯ ಒದಗಿ ಬರಲಿದೆ.

**ಕುಂಭ:** ಉದ್ಯೋಗದ ಅನ್ವೇಷಣೆಯಲ್ಲಿರುವವರು ವಾಣಿಜ್ಯ ಸಂಸ್ಥೆಯೊಂದರಲ್ಲಿ ಕೆಲಸ ಸಂಪಾದಿಸಿಕೊಳ್ಳಬಹುದು. ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಯಲ್ಲಿ ಅನೇಕ ತರಹದ ಅವಕಾಶಗಳು ಒದಗಿ ಬರುತ್ತದೆ. ಮಹಾಗಣಪತಿ ಆರಾಧಿಸಿ.

**ಮೀನ:** ಮೊಬೈಲ್ ಫೋನ್‌ಗಳ ಅಥವಾ ಕಂಪ್ಯೂಟರ್‌ಗಳ ಮಾರಾಟಗಾರರಿಗೆ ಆದಾಯ ಕಂಡುಬರುತ್ತದೆ. ರಾಜಕೀಯ ವರ್ಗದವರು ಇಂದಿನ ದಿನಚರಿಯನ್ನು ಗೌಪ್ಯತೆಯಲ್ಲಿ ಇಟ್ಟುಕೊಳ್ಳುವುದರಿಂದ ಲಾಭವಿದೆ.

**ಷೇರುಪೇಟೆ ವಹಿವಾಟು**




**ಎನ್‌ಎಸ್‌ಇ ನಿಫ್ಟಿ**

| | |
|---|---|
| ಹಿಂದಿನ ಅಂತ್ಯ | 19,365 |
| ಇಂದಿನ ಅಂತ್ಯ | 19,310 |
| ▼ | 55 |
| ದಿನದ ಕನಿಷ್ಠ | 19,378 |

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**

| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹500 |
| 12 ಮೊಟ್ಟೆಗೆ | ₹65 |
| ಮೈಸೂರು | |
| 100 ಮೊಟ್ಟೆಗೆ | ₹520 |

**ಖಾದ್ಯ ತೈಲ ಮುಂಬೈ**

(10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1850(1850) |
| ಸೋಯಾ (ರಿಫೈನ್ಡ್) | ₹950(950) |
| ಸೂರ್ಯಕಾಂತಿ (ರಿಫೈನ್ಡ್) | ₹960(960) |
| ಪಾಮೋಲಿನ್ | ₹855(860) |

**ಎನ್.ಆರ್.ಪುರ ರಬ್ಬರ್**



(ಪ್ರತಿ ಕೆ.ಜಿಗೆ)

| | |
|---|---|
| ಆರ್‌ಎಸ್‌ಎಸ್-4 | ₹141.50 |
| ಆರ್‌ಎಸ್‌ಎಸ್-5 | ₹135 |
| ಗುಡ್ ಲಾಟ್ | ₹120 |

**ಕೊಬ್ಬರಿ ಧಾರಣೆ**

| | |
|---|---|
| ಅರಸೀಕೆರೆ | ₹8500-8810 |
| ತಿಪಟೂರು | ₹7500-9000 |
| ತುರುವೇಕೆರೆ | ₹8800-8800 |

**ರಾಮನಗರ ರೇಷ್ಮೆಗೂಡು**



| | |
|---|---|
| ಮಿಶ್ರತಳಿ (ಸಿ.ಬಿ) | ₹360-576 |
| ದ್ವಿತಳಿ (ಬಿ.ವಿ) | ₹381-692 |

ಬ್ಯಾಂಕ್ ಹಾಗೂ ಬ್ಯಾಂಕೇತರ ಹಣಕಾಸು ಸಂಸ್ಥೆಗಳಿಗೆ ಭಾರತೀಯ ರಿಸರ್ವ್ ಬ್ಯಾಂಕ್ ಸೂಚನೆ ● ಡಿಸೆಂಬರ್ 31ಕ್ಕೆ ಮೊದಲು ಜಾರಿಗೆ ತಾಕೀತು

# ಸಾಲಗಾರರಿಗೆ ನಿಶ್ಚಿತ ದರದ ಬಡ್ಡಿ ಆಯ್ಕೆ ಸೌಲಭ್ಯ

ಮುಂಬೈ (ಪಿಟಿಐ): ಸಾಲವನ್ನು ಸಮಾನ ಕಂತುಗಳಲ್ಲಿ (ಇಎಂಐ) ತೀರಿಸುತ್ತಿರುವವರಿಗೆ, ನಿಶ್ಚಿತ ಬಡ್ಡಿ ದರ ವ್ಯವಸ್ಥೆಗೆ ಬದಲಾಗಲು ಅವಕಾಶ ಕಲ್ಪಿಸಬೇಕು ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಸೂಚನೆ ನೀಡಿದೆ.



ಸಾಲದ ಮರುಪಾವತಿ ಅವಧಿಯನ್ನು ವಿಸ್ತರಿಸಿಕೊಳ್ಳಲು ಕೂಡ ಅವಕಾಶ ಕಲ್ಪಿಸಬೇಕು ಎಂದು ಆರ್‌ಬಿಐ ಹೇಳಿದೆ. ಬಡ್ಡಿ ದರ ಹೆಚ್ಚುತ್ತಿರುವ ಸಂದರ್ಭದಲ್ಲಿ, ಸಾಲ ಮಾಡಿದವರು ಅದನ್ನು ತೀರಿಸಲಿಕ್ಕೇ ಆಗದ ಸ್ಥಿತಿಯಲ್ಲಿ ಸಿಲುಕಬಾರದು ಎಂಬ ಉದ್ದೇಶದಿಂದ ಆರ್‌ಬಿಐ ಈ ಸೂಚನೆ ನೀಡಿದೆ.

ಆರ್‌ಬಿಐ 2022ರ ಮೇ ತಿಂಗಳಿನಿಂದ ರೆಪೊ ದರವನ್ನು ಹೆಚ್ಚಿಸುತ್ತ ಬಂದಿದೆ. ಅದರ ಪರಿಣಾಮವಾಗಿ ಸಾಲದ ಮೇಲಿನ ಬಡ್ಡಿ ದರವು ಹೆಚ್ಚಾಗಿದೆ. ಗೃಹಸಾಲ, ವಾಹನ ಸಾಲ, ವೈಯಕ್ತಿಕ ಸಾಲದ ಮೇಲಿನ ಬಡ್ಡಿ ದರವು ರೆಪೊ ದರದ ಏರಿಳಿತಗಳಿಗೆ ಹೊಂದಿಕೊಂಡಿರುತ್ತದೆ. 2022ರ ಮೇ ತಿಂಗಳ ನಂತರದಲ್ಲಿ ರೆಪೊ ದರವು ಶೇ 2.50ರಷ್ಟು ಹೆಚ್ಚಾಗಿದೆ.

ಸಾಲದ ಮೇಲಿನ ಬಡ್ಡಿ ದರ ಹೆಚ್ಚಾದ ನಂತರದಲ್ಲಿ, ಹಲವು ಸಾಲಗಾರರು ಸಾಲ ಮರುಪಾವತಿಸಲು ಕಟ್ಟುವ ಇಎಂಐ ಕಂತು, ಅವರ ಸಾಲದ ಮೇಲಿನ ತಿಂಗಳ ಬಡ್ಡಿಯ ಮೊತ್ತಕ್ಕೂ ಸಾಲದಾಯಿತು. ಇಎಂಐ ಪಾವತಿಯಲ್ಲಿ ಯಾವುದೇ ಲೋಪ ಆಗದಿದ್ದರೂ, ಅಸಲು ಮೊತ್ತವು ಹಾಗೆ ಉಳಿಯಿತು. ತೀರಿಸದೆ ಉಳಿದ ಬಡ್ಡಿಯು ಅಸಲಿಗೆ ಸೇರಿ, ಅಸಲು ಮೊತ್ತ ಹೆಚ್ಚುತ್ತ ಹೋಯಿತು. ಇಂತಹ ಪರಿಸ್ಥಿತಿ ಮತ್ತೆ ನಿರ್ಮಾಣವಾಗದಂತೆ ನೋಡಿಕೊಳ್ಳಲು ಆರ್‌ಬಿಐ ಈ ಮಾರ್ಗಸೂಚಿ ಹೊರಡಿಸಿದೆ.

ಗ್ರಾಹಕರ ಒಪ್ಪಿಗೆ ಪಡೆಯದೆ, ಗ್ರಾಹಕರಿಗೆ ಸರಿಯಾಗಿ ಮಾಹಿತಿ ನೀಡದೆ ಸಾಲದ ಮರುಪಾವತಿ ಅವಧಿಯನ್ನು ವಿಸ್ತರಿಸಿರುವ ಅಥವಾ ಇಎಂಐ ಮೊತ್ತವನ್ನು ಹೆಚ್ಚು ಮಾಡಿರುವ ದೂರುಗಳು ಬಂದಿವೆ ಎಂದು ಆರ್‌ಬಿಐ ಹೇಳಿದೆ.

## ಆರ್‌ಬಿಐ ಸೂಚನೆಗಳು

- ಇಎಂಐ ಆಧಾರಿತ, ನಿಶ್ಚಿತವಲ್ಲದ ಬಡ್ಡಿ ದರದ ವೈಯಕ್ತಿಕ ಸಾಲ ನೀಡುವ ಸಂದರ್ಭದಲ್ಲಿ ಬ್ಯಾಂಕುಗಳು ಹಾಗೂ ಬ್ಯಾಂಕೇತರ ಹಣಕಾಸು ಸಂಸ್ಥೆಗಳು (ಎನ್‌ಬಿಎಫ್‌ಸಿ) ಸಾಲ ಬಯಸಿದವರ ಮರುಪಾವತಿ ಸಾಮರ್ಥ್ಯವನ್ನು ಪರಿಗಣಿಸಬೇಕು.
- ಮುಂದಿನ ದಿನಗಳಲ್ಲಿ ಬಡ್ಡಿ ದರ ಹೆಚ್ಚಿದರೆ, ವ್ಯಕ್ತಿಯ ಸಾಲದ ಮರುಪಾವತಿ ಅವಧಿಯನ್ನು ವಿಸ್ತರಿಸಲು ಅಥವಾ ಇಎಂಐ ಮೊತ್ತವನ್ನು ಹೆಚ್ಚು ಮಾಡಲು ಅವಕಾಶ ಇದೆ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕು.
- ಬಡ್ಡಿ ದರದಲ್ಲಿ ಬದಲಾವಣೆ ತರುವ ಸಂದರ್ಭದಲ್ಲಿ, ನೋಂದಾಯಿತ ಹಣಕಾಸು ಸಂಸ್ಥೆಗಳು ನಿಶ್ಚಿತ ಬಡ್ಡಿ ದರದ ವ್ಯವಸ್ಥೆಗೆ ಬದಲಾಗಲು ಗ್ರಾಹಕರಿಗೆ ಅವಕಾಶ ಕಲ್ಪಿಸಬೇಕು. ಇದಕ್ಕೆ ಅವು ತಮ್ಮ ಆಡಳಿತ ಮಂಡಳಿಯ ಮೂಲಕ ನಿಯಮ ರೂಪಿಸಬಹುದು.
  ಗ್ರಾಹಕರು ತಮ್ಮ ಸಾಲದ ಬಡ್ಡಿ ವ್ಯವಸ್ಥೆಯಲ್ಲಿ ಎಷ್ಟು ಬಾರಿ ಬದಲಾವಣೆ ಮಾಡಿಕೊಳ್ಳಬಹುದು ಎಂಬುದನ್ನು ಆಡಳಿತ ಮಂಡಳಿ ತೀರ್ಮಾನಿಸಬಹುದು.
- ರೆಪೊ ದರದಲ್ಲಿ ಆಗುವ ಬದಲಾವಣೆಗಳು ಇಎಂಐ ಹಾಗೂ ಸಾಲದ ಮರುಪಾವತಿ ಅವಧಿಯ ಮೇಲೆ ಯಾವ ಪರಿಣಾಮ ಬೀರುತ್ತವೆ ಎಂಬುದನ್ನು ನೋಂದಾಯಿತ ಸಂಸ್ಥೆಗಳು ಸಾಲವನ್ನು ಮಂಜೂರು ಮಾಡುವಾಗ ಗ್ರಾಹಕರಿಗೆ ಸ್ಪಷ್ಟವಾಗಿ ತಿಳಿಸಬೇಕು. ನಂತರ, ಇಎಂಐ ಹೆಚ್ಚಳ ಅಥವಾ ಮರುಪಾವತಿ ಅವಧಿ ವಿಸ್ತರಣೆಯನ್ನು ಸೂಕ್ತ ರೀತಿಯಲ್ಲಿ ತಕ್ಷಣವೇ ತಿಳಿಸಬೇಕು.
- ಹಾಲಿ ಸಾಲದ ಖಾತೆಗಳಿಗೆ ಹಾಗೂ ಹೊಸ ಸಾಲದ ಖಾತೆಗಳಿಗೆ ಈ ನಿಯಮಗಳು ಡಿಸೆಂಬರ್ 31ರೊಳಗೆ ಅನ್ವಯವಾಗುವಂತೆ ಬ್ಯಾಂಕುಗಳು ಹಾಗೂ ಎನ್‌ಬಿಎಫ್‌ಸಿಗಳು ಖಾತರಿಪಡಿಸಿಕೊಳ್ಳಬೇಕು.



- ಇಎಂಐ ಮೊತ್ತವನ್ನು ಹೆಚ್ಚಿಸಿಕೊಳ್ಳುವ ಅಥವಾ ಸಾಲದ ಮರುಪಾವತಿ ಅವಧಿಯನ್ನು ವಿಸ್ತರಿಸಿಕೊಳ್ಳುವ ಆಯ್ಕೆಯನ್ನು ಗ್ರಾಹಕರಿಗೆ ನೀಡಬೇಕು. ಅಲ್ಲದೆ, ಇಎಂಐ ಮೊತ್ತವನ್ನು ತುಸು ಹೆಚ್ಚಿಸಿಕೊಂಡು, ಮರುಪಾವತಿ ಅವಧಿಯನ್ನು ಕೂಡ ತುಸು ಹೆಚ್ಚಿಸಿಕೊಳ್ಳುವ ಆಯ್ಕೆಯನ್ನು ಕೂಡ ಕೊಡಬಹುದು.
- ಸಾಲವನ್ನು ಯಾವುದೇ ಸಂದರ್ಭದಲ್ಲಿ ಪೂರ್ತಿಯಾಗಿ ಮರುಪಾವತಿಸುವ, ಅಂಶಿಕವಾಗಿ ಮರುಪಾವತಿ ಮಾಡುವ ಅವಕಾಶ ನೀಡಬೇಕು. ಸಾಲದ ಮರುಪಾವತಿ ಅವಧಿಯನ್ನು ವಿಸ್ತರಿಸಿದ ಪರಿಣಾಮವಾಗಿ, ಸಾಲ ತೀರಿಸುವುದೇ ಅಸಾಧ್ಯ ಎಂಬ ಸ್ಥಿತಿ ನಿರ್ಮಾಣವಾಗಬಾರದು.
- ನೋಂದಾಯಿತ ಸಂಸ್ಥೆಗಳು ಪ್ರತಿ ತ್ರೈಮಾಸಿಕದ ಕೊನೆಯಲ್ಲಿ ಅದುವರೆಗೆ ವಸೂಲು ಮಾಡಲಾದ ಅಸಲು ಹಾಗೂ ಬಡ್ಡಿ ಮೊತ್ತ, ಇಎಂಐ ಮೊತ್ತ, ಬಾಕಿ ಇರುವ ಇಎಂಐ ಮುಂತಾದ ವಿವರಗಳನ್ನು ಗ್ರಾಹಕರಿಗೆ ಒದಗಿಸಬೇಕು.

## ‘ದಂಡ ಶುಲ್ಕ ಮಾತ್ರ, ದಂಡದ ರೂಪದ ಬಡ್ಡಿ ಇಲ್ಲ’

ಮುಂಬೈ (ಪಿಟಿಐ): ಬ್ಯಾಂಕುಗಳು ಹಾಗೂ ಬ್ಯಾಂಕೇತರ ಹಣಕಾಸು ಸಂಸ್ಥೆಗಳು (ಎನ್‌ಬಿಎಫ್‌ಸಿ) ತಮ್ಮ ವರಮಾನ ಹೆಚ್ಚಿಸಿಕೊಳ್ಳುವ ಕ್ರಮವಾಗಿ ‘ದಂಡದ ರೂಪದಲ್ಲಿ ಬಡ್ಡಿ’ ವಿಧಿಸುವ ಮಾರ್ಗ ಕುಲಿಯುತ್ತಿರುವುದನ್ನು ತಡೆಯಲು ಆರ್‌ಬಿಐ ಕೆಲವು ನಿಯಮಗಳನ್ನು ಜಾರಿಗೆ ತಂದಿದೆ.

ಸಾಲ ಪಡೆದವರು ಸಾಲವನ್ನು ಸರಿಯಾಗಿ ಮರುಪಾವತಿ ಮಾಡದೆ ಇದ್ದಲ್ಲಿ ಬ್ಯಾಂಕುಗಳು ಹಾಗೂ ಎನ್‌ಬಿಎಫ್‌ಸಿಗಳು ‘ಸಕಾರಣ ಪ್ರಮಾಣದಲ್ಲಿ ದಂಡ ಶುಲ್ಕವನ್ನು’ ವಿಧಿಸಬಹುದು ಎಂದು ಹೇಳಿದೆ.

2024ರ ಜನವರಿ 1ರಿಂದ ಅನ್ವಯಿಸುವಂತೆ ಬ್ಯಾಂಕ್ ಹಾಗೂ ಇತರ ಹಣಕಾಸು ಸಂಸ್ಥೆಗಳು ಸಾಲದ ಮೇಲೆ ‘ದಂಡ ರೂಪದ ಬಡ್ಡಿ’ಯನ್ನು ವಿಧಿಸಲು ಅವಕಾಶ ಇರುವುದಿಲ್ಲ ಎಂದು ಆರ್‌ಬಿಐ ಅಧಿಸೂಚನೆ ಹೇಳಿದೆ.

‘ಗ್ರಾಹಕರಿಗೆ ವಿಧಿಸುವ ದಂಡ ಶುಲ್ಕವು ಸಕಾರಣ ಮಟ್ಟದಲ್ಲಿ ಇರಬೇಕು. ತಾರತಮ್ಯಕ್ಕೆ ಆಸ್ಪದ ಮಾಡಿಕೊಡುವಂತೆ ಇರಬಾರದು’ ಎಂದು ಹೇಳಿದೆ. ಆದರೆ ಈ ನಿರ್ದೇಶನಗಳು ಕ್ರೆಡಿಟ್ ಕಾರ್ಡ್‌ಗಳಿಗೆ ಅನ್ವಯವಾಗುವುದಿಲ್ಲ.

‘ದಂಡ ಶುಲ್ಕವನ್ನು ವಿಧಿಸುವ ಉದ್ದೇಶ ಸಾಲ ಪಡೆದವರಲ್ಲಿ ಶಿಸ್ತನ್ನು ಮೂಡಿಸುವುದೇ ವಿನಾ, ಆ ಶುಲ್ಕವನ್ನು ವರಮಾನ ಹೆಚ್ಚಿಸುವ ಉದ್ದೇಶಕ್ಕೆ ಬಳಸಿಕೊಳ್ಳಬಾರದು’ ಎಂದು ಆರ್‌ಬಿಐ ತಾಕೀತು ಮಾಡಿದೆ.



**ಮುಂಬೈ ಧಾರಣೆ**

**ಶೇಂಗಾ**

18–8–2023

| | |
|---|---|
| ಜಾವಾ 70/80(ಹೊಸ) | 13300-13400 |
| ಜಾವಾ 80/90(ಹೊಸ) | 11900-12000 |
| ದಪ್ಪ ಮಧ್ಯಪ್ರದೇಶ(ಹೊಸ) | 12900-13000 |
| ದಪ್ಪ ಗುಜರಾತ್(ಹೊಸ) | 14200-14300 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1860(1860) |
| ಒಂದು ವಾರದ ಡೆಲಿವರಿ | 1855(1855) |
| ಸೋಯಾ ಕಚ್ಚಾ | 907(915) |
| ಪಾಮ್ ವಾರದ ಡೆಲಿವರಿ | 853(858) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 890(880) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10ಗ್ರಾಂ
58350(58400)
ಬೆಳ್ಳಿ ಕೆ.ಜಿ 70500(70450)

ಆವರಣದಲ್ಲಿ ಹಿಂದಿನ ದಿನದ ಧಾರಣೆ



## ಸೆನ್ಸೆಕ್ಸ್ ಮತ್ತು ನಿಫ್ಟಿ ಇಳಿಕೆ

ಮುಂಬೈ (ಪಿಟಿಐ): ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಶುಕ್ರವಾರದ ವಹಿವಾಟಿನಲ್ಲಿ 65 ಸಾವಿರಕ್ಕಿಂತ ಕೆಳಕ್ಕೆ ಕುಸಿಯಿತು. ಹೂಡಿಕೆದಾರರು ಐ.ಟಿ., ರಿಯಾಲ್ಟಿ ಮತ್ತು ಲೋಹ ವಲಯದ ಷೇರುಗಳನ್ನು ಹೆಚ್ಚಾಗಿ ಮಾರಾಟ ಮಾಡಿದರು.

ವಿದೇಶಿ ಹೂಡಿಕೆಯ ಹೊರಹರಿವು ಕೂಡ ಸೂಚ್ಯಂಕದ ಇಳಿಕೆಗೆ ಕಾರಣವಾಯಿತು ಎಂದು ವರ್ತಕರು ತಿಳಿಸಿದ್ದಾರೆ. ಸೆನ್ಸೆಕ್ಸ್ 202 ಅಂಶ ಇಳಿಕೆ ಕಂಡರೆ, ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 55 ಅಂಶ ಇಳಿದಿದೆ.

ಇಡೀ ವಾರದ ಅವಧಿಯಲ್ಲಿ ಸೆನ್ಸೆಕ್ಸ್ 373 ಅಂಶ, ನಿಫ್ಟಿ 118 ಅಂಶ ಕುಸಿದಿವೆ. ‘ಐ.ಟಿ. ಹಾಗೂ ರಿಯಾಲ್ಟಿ ವಲಯದ ಷೇರುಗಳಲ್ಲಿ ಹೆಚ್ಚು ಕುಸಿತ ಕಂಡುಬಂತು’ ಎಂದು ರೆಲಿಗೇರ್ ಬ್ರೋಕಿಂಗ್ ಕಂಪನಿಯ ತಾಂತ್ರಿಕ ಸಂಶೋಧನಾ ವಿಭಾಗದ ಹಿರಿಯ ಉಪಾಧ್ಯಕ್ಷ ಅಜಿತ್ ಮಿಶ್ರಾ ಹೇಳಿದ್ದಾರೆ.

# ಭಾರತಕ್ಕೆ ಔಡಿ ಕ್ಯು8 ಇಟ್ರಾನ್

● ವಿಶ್ವನಾಥ ಎಸ್.

ಮುಂಬೈ: ಔಡಿ ಕಂಪನಿಯು ಭಾರತದ ಮಾರುಕಟ್ಟೆಗೆ ಶುಕ್ರವಾರ ವಿದ್ಯುತ್ ಚಾಲಿತ (ಇ.ವಿ) ‘ಕ್ಯು8 ಇ-ಟ್ರಾನ್’ ಕಾರು ಬಿಡುಗಡೆ ಮಾಡಿದೆ.

ಔಡಿ ಕ್ಯು8 50 ಇ-ಟ್ರಾನ್, 55 ಇ-ಟ್ರಾನ್, ಔಡಿ ಕ್ಯು8 ಸ್ಪೋರ್ಟ್ ಬ್ಯಾಕ್ 50 ಇ-ಟ್ರಾನ್ ಮತ್ತು ಔಡಿ ಕ್ಯು8 ಸ್ಪೋರ್ಟ್ ಬ್ಯಾಕ್ 55 ಇ-ಟ್ರಾನ್ ಹೀಗೆ ಒಟ್ಟು ನಾಲ್ಕು ಆವೃತ್ತಿಗಳಲ್ಲಿ ಇದು ಲಭ್ಯವಿದೆ. ಎಕ್ಸ್‌ಷೋರೂಂ ಬೆಲೆಯು ₹1,13,70,000ಯಿಂದ ಆರಂಭ ಆಗುತ್ತದೆ ಎಂದು ಔಡಿ ಇಂಡಿಯಾದ ಮುಖ್ಯಸ್ಥ ಬಲ್ಬೀರ್ ಸಿಂಗ್ ದಿಲ್ಲೋನ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ವಾಹನ ಉದ್ಯಮದಲ್ಲೇ ಅತಿದೊಡ್ಡದಾದ 114 ಕಿಲೋ ವಾಟ್ ಬ್ಯಾಟರಿಯನ್ನು ಇದು ಹೊಂದಿದೆ. ಔಡಿ ಕ್ಯು8 55 ಇ-ಟ್ರಾನ್ ಮತ್ತು ಸ್ಪೋರ್ಟ್ ಬ್ಯಾಕ್ 55 ಇ-ಟ್ರಾನ್ ಒಮ್ಮೆ ಚಾರ್ಜ್ ಮಾಡಿದರೆ ಗರಿಷ್ಠ 600 ಕಿ.ಮೀ ಚಲಾಯಿಸಬಹುದು. ಕ್ಯು8 50 ಇ-ಟ್ರಾನ್ ಮತ್ತು ಸ್ಪೋರ್ಟ್ ಬ್ಯಾಕ್ 50 ಇ-ಟ್ರಾನ್ ಒಮ್ಮೆ ಚಾರ್ಜ್ ಮಾಡಿದರೆ ಗರಿಷ್ಠ 505 ಕಿ.ಮೀ.ವರೆಗೆ ಚಲಾಯಿಸಬಹುದು ಎಂದು ಅವರು ತಿಳಿಸಿದರು. ಕಾರಿನ ಎರಡೂ ಕಡೆಗಳಲ್ಲಿ ಚಾರ್ಜಿಂಗ್ ಸಾಕೆಟ್ ನೀಡಿರುವುದು ಪಾರ್ಕಿಂಗ್ ಸುಲಭವಾಗಿಸಿದೆ.



ಕ್ಯು8 ಸ್ಪೋರ್ಟ್‌ಬ್ಯಾಕ್ ಇ-ಟ್ರಾನ್ ಕಾರಿನ ಜೊತೆ ಬಲ್ಬೀರ್ ಸಿಂಗ್ ದಿಲ್ಲಾನ್

ಬ್ಯಾಟರಿಯು ಶೇ 20ರಷ್ಟು ಮಟ್ಟದಿಂದ ಶೇ 80ರಷ್ಟು ಮಟ್ಟಕ್ಕೆ ಚಾರ್ಜ್ ಆಗಲು 26 ನಿಮಿಷ ಹಾಗೂ ಶೇ 10ರಷ್ಟು ಮಟ್ಟದಿಂದ ಶೇ 80ರಷ್ಟಕ್ಕೆ ಚಾರ್ಜ್ ಆಗಲು 31 ನಿಮಿಷ ಬೇಕು. ಹೊಸ ವಿನ್ಯಾಸ, ಐಷಾರಾಮಿ, ಆರಾಮದಾಯಕ ಸೌಲಭ್ಯಗಳು, ಸುಧಾರಿತ ಕಾರ್ಯಕ್ಷಮತೆ, ಹೆಚ್ಚಿನ ಸಾಮರ್ಥ್ಯದ ಬ್ಯಾಟರಿ ಹಾಗೂ ಚಾಲನಾ ಅನುಭವವನ್ನು ಇನ್ನಷ್ಟು ಹೆಚ್ಚಿಸುವ ಗುಣಗಳಿಂದಾಗಿ ಇ-ಟ್ರಾನ್ ಯಶಸ್ಸಿಗೆ ಕ್ಯು8 ಇ-ಟ್ರಾನ್ ಕಾರಣವಾಗಲಿದೆ ಎಂದರು. ಕಾರಿನ ಮುಂದೆ ಮತ್ತು ಹಿಂದೆ ಒಟ್ಟು ಎರಡು ಎಲೆಕ್ಟ್ರಿಕ್ ಮೋಟರ್ ಇದೆ. ನಿಂತ ಸ್ಥಿತಿಯಿಂದ ಗಂಟೆಗೆ 100 ಕಿ.ಮೀ. ವೇಗವನ್ನು ತಲುಪಲು 55 ಇ-ಟ್ರಾನ್ ಮತ್ತು ಸ್ಪೋರ್ಟ್ ಬ್ಯಾಕ್ 55 ಇ-ಟ್ರಾನ್‌ಗೆ 5.6 ಸೆಕೆಂಡ್ ಬೇಕು. 50 ಇ-ಟ್ರಾನ್ ಮತ್ತು ಸ್ಪೋರ್ಟ್ ಬ್ಯಾಕ್ 50 ಇ-ಟ್ರಾನ್ 6.0 ಸೆಕೆಂಡ್‌ಗಳನ್ನು ತೆಗೆದುಕೊಳ್ಳುತ್ತವೆ ಎಂದು ಕಂಪನಿ ತಿಳಿಸಿದೆ.

ಗ್ರೌಂಡ್ ಕ್ಲಿಯರೆನ್ಸ್ ಗರಿಷ್ಠ 226 ಎಂಎಂ ಇದೆ.

(ಕಂಪನಿಯ ಆಹ್ವಾನದ ಮೇರೆಗೆ ಪ್ರತಿನಿಧಿ ಮುಂಬೈಗೆ ತೆರಳಿದ್ದರು)

## ದೇಶದಾದ್ಯಂತ ಮಾರುಕಟ್ಟೆ ಧಾರಣೆ

| | |
|---|---|
| **ಏಲಕ್ಕಿ ಧಾರಣೆ** | |
| **ಸಕಲೇಶಪುರ** | |
| ಕೂಳೆ | 750-800 |
| ನಡುಗೋಲು | 900-950 |
| ರಾಶಿ | 1,000-1,100 |
| ರಾಶಿ ಉತ್ತಮ | 1,150-1,200 |
| ಹೆರಕಿದ್ದು | 1,600-1,700 |
| ಹಸಿರು ಸಾಧಾರಣ | 1,200-1,250 |
| ಹಸಿರು ಉತ್ತಮ | 1,600-1,700 |
| ಹಸಿರು ಅತಿ ಉತ್ತಮ | 1,900-2,000 |
| ಕಾಳುಮೆಣಸು | - 600 |
| **ಅಡಿಕೆ** | |
| **ಬಂಟ್ವಾಳ** | |
| ಕೋಕ | 12,500-25,000 |
| ಹೊಸತು | 27,500-44,500 |
| ಹಳತು | 46,000-48,000 |
| **ಹೊಸನಗರ** | |
| ಬಿಳಿಗೋಟು | 31,199-31,399 |
| ಚಾಲಿ | 36,599-37,899 |
| ಕೆಂಪುಗೋಟು | 28,000-39,509 |
| ರಾಶಿ | 45,000-51,609 |
| **ಕುಮಟಾ** | |
| ಚಿಪ್ಪು | 31,999-35,019 |
| ಕೋಕ | 21,089-33,689 |
| ಫ್ಯಾಕ್ಟರಿ | 12,019-23,299 |
| ಹಳೆಚಾಲಿ | 40,099-42,699 |
| ಹೊಸಚಾಲಿ | 38,699-41,299 |
| **ಶಿವಮೊಗ್ಗ** | |
| ಗೊರಬಲು | 17,009-40,299 |
| ರಾಶಿ | 40,119-51,512 |
| **ಸಿದ್ದಾಪುರ** | |
| ಬಿಳಿಗೋಟು | 31,699-35,509 |
| ಚಾಲಿ | 37,809-41,100 |
| ಕೋಕ | 30,109-34,499 |
| ಕೆಂಪುಗೋಟು | 33,319-35,689 |
| ರಾಶಿ | 44,569-49,599 |
| ತಟ್ಟಿಬೆಟ್ಟೆ | 41,019-49,199 |
| **ಶಿರಸಿ** | |
| ಬೆಟ್ಟೆ | 39,899-45,709 |
| ಬಿಳಿಗೋಟು | 30,150-36,899 |
| ಚಾಲಿ | 37,898-43,099 |
| ಕೆಂಪುಗೋಟು | 23,199-37,899 |
| ರಾಶಿ | 47,089-49,508 |

**ಕಾಫಿ** (50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ | ಹಾಸನ | | |
|---|---|---|---|---|
| | ಮುದ್ರೆಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | 13,500 | 13,500 | 13,450 | 147ಸೆಂಟ್ಸ್ |
| ಎಸಿ | 7,000 | 6,700 | 6,750 | |
| ಆರ್‌ಪಿ | 1,020 | 10,000 | 10,050 | ಲಂಡನ್ |
| ಆರ್‌ಸಿ | 5,960 | 236 | 5,900 | - ಡಾಲರ್ಸ್ 2575 |

## ಭಾರತೀಯ ಮೀನುಗಾರರ ಮೇಲೆ ದಾಳಿ: ಕೇಂದ್ರದ ವಿರುದ್ಧ ಸ್ಟಾಲಿನ್ ಕಿಡಿ

ರಾಮನಾಥಪುರಂ (ತಮಿಳುನಾಡು) (ಪಿಟಿಐ): ಶ್ರೀಲಂಕಾ ನೌಕಾಪಡೆಯು ಭಾರತೀಯ ಮೀನುಗಾರರ ಮೇಲೆ ನಿರಂತರ ದಾಳಿ ನಡೆಸುತ್ತಿರುವುದು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ದುರ್ಬಲವಾಗಿದೆ ಎಂಬುದನ್ನು ತೋರಿಸುತ್ತದೆ ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಶುಕ್ರವಾರ ಹೇಳಿದ್ದಾರೆ.

## ಬೀದರ್–ಬೆಂಗಳೂರು ವಿಮಾನ ತಿರುಪತಿವರೆಗೂ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೀದರ್: ಬೀದರ್–ಬೆಂಗಳೂರು ನಡುವೆ ನಿತ್ಯ ಸಂಚರಿಸುವ ‘ಸ್ಟಾರ್ ಏರ್’ ವಿಮಾನವು ಆಗಸ್ಟ್ 24ರಿಂದ ವಾರದಲ್ಲಿ ಐದು ದಿನ ತಿರುಪತಿವರೆಗೂ ಸಂಚರಿಸಲಿದೆ ಎಂದು ಕೇಂದ್ರ ರಾಸಾಯನಿಕ, ರಸಗೊಬ್ಬರ ಮತ್ತು ನವೀಕರಿಸಬಹುದಾದ ಇಂಧನ ಖಾತೆ ರಾಜ್ಯ ಸಚಿವ ಭಗವಂತ ಖೂಬಾ ತಿಳಿಸಿದ್ದಾರೆ.



ಭಗವಂತ ಖೂಬಾ

ಸೋಮವಾರ, ಗುರುವಾರ, ಶುಕ್ರವಾರ, ಶನಿವಾರ ಹಾಗೂ ಭಾನುವಾರ ತಿರುಪತಿ ತನಕ ವಿಮಾನ ಪಯಣ ಬೆಳೆಸಲಿದೆ. ಪ್ರತಿ ಸೋಮವಾರ ಮತ್ತು ಶುಕ್ರವಾರ ಬೀದರ್‌ನಿಂದ ಸಂಜೆ 5.30ಕ್ಕೆ ಹೊರಟು ಬೆಂಗಳೂರಿಗೆ 6.45ಕ್ಕೆ ತಲುಪಲಿದೆ. ಅಲ್ಲಿಂದ ರಾತ್ರಿ 7.10ಕ್ಕೆ ನಿರ್ಗಮಿಸಿ ರಾತ್ರಿ 8ಕ್ಕೆ ತಿರುಪತಿ ಸೇರಲಿದೆ. ಅದೇ ದಿನ ರಾತ್ರಿ 8.25ಕ್ಕೆ ತಿರುಪತಿಯಿಂದ ಹೊರಡುವ ವಿಮಾನ ರಾತ್ರಿ 9.15ಕ್ಕೆ ಬೆಂಗಳೂರಿಗೆ ಬರಲಿದೆ.

ಮರುದಿನ ಮಧ್ಯಾಹ್ನ 3ಕ್ಕೆ ಬೆಂಗಳೂರಿನಿಂದ ನಿರ್ಗಮಿಸಿ 4.10ಕ್ಕೆ ಬೀದರ್ ತಲುಪಲಿದೆ ಎಂದು ಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಳಿದ ಮೂರು ದಿನಗಳಾದ ಗುರುವಾರ, ಶನಿವಾರ ಮತ್ತು ಭಾನುವಾರ ಬೀದರ್‌ನಿಂದ ಸಂಜೆ 4.50ಕ್ಕೆ ಹೊರಟು ಸಂಜೆ 6.05ಕ್ಕೆ ಬೆಂಗಳೂರು ತಲುಪಲಿದೆ.

ಸಂಜೆ 6.30ಕ್ಕೆ ಬೆಂಗಳೂರಿನಿಂದ ಹೊರಟು ರಾತ್ರಿ 7.20ಕ್ಕೆ ತಿರುಪತಿ ಸೇರಲಿದೆ. ತಿರುಪತಿಯಿಂದ ರಾತ್ರಿ 7.45ಕ್ಕೆ ಹೊರಟು ರಾತ್ರಿ 8.35ಕ್ಕೆ ಬೆಂಗಳೂರು ತಲುಪಲಿದೆ.

ಮರುದಿನ ಮಧ್ಯಾಹ್ನ ಎಂದಿನಂತೆ ಬೆಂಗಳೂರಿನಿಂದ ಬೀದರ್‌ಗೆ ವಿಮಾನ ಪ್ರಯಾಣ ಬೆಳೆಸಲಿದೆ ಎಂದು ಮಾಹಿತಿ ಹಂಚಿಕೊಂಡಿದ್ದಾರೆ.


# ರಾಜ್ಯಸಭೆ: 27 ಸದಸ್ಯರು ಶತಕೋಟಿ ಒಡೆಯರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಸಭಾ ಸದಸ್ಯರ ವಿದ್ಯಾರ್ಹತೆ, ಆಸ್ತಿ ವಿವರ, ಅವರ ಮೇಲಿರುವ ಅಪರಾಧ ಪ್ರಕರಣಗಳ ಕುರಿತ ವಿಸ್ತೃತ ವರದಿಯನ್ನು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಬಿಡುಗಡೆ ಮಾಡಿದ್ದು, 27 ಸದಸ್ಯರು ಶತಕೋಟ್ಯಧಿಪತಿಗಳು ಎಂದು ತಿಳಿದುಬಂದಿದೆ. ಇವರಲ್ಲಿ ಆಂಧ್ರ ಪ್ರದೇಶ ಹಾಗೂ ತೆಲಂಗಾಣ ರಾಜ್ಯಗಳ ಸಂಸದರೇ ಹೆಚ್ಚು ಶ್ರೀಮಂತರು ಎಂದು ವರದಿಯಲ್ಲಿ ಹೇಳಲಾಗಿದೆ. ಎಡಿಆರ್ ಹಾಗೂ ನ್ಯಾಷನಲ್ ಎಲೆಕ್ಷನ್ ವಾಚ್ ಸಂಸ್ಥೆಗಳು ಜಂಟಿಯಾಗಿ ವರದಿ ಸಿದ್ಧಪಡಿಸಿದ್ದು, ಒಟ್ಟು 250 ಸದಸ್ಯರ ಪೈಕಿ 225 ಸಂಸದರ ವಿವರಗಳನ್ನು ಮಾತ್ರ ವರದಿಗಾಗಿ ಪರಿಗಣಿಸಲಾಗಿದೆ.


### ರಾಜ್ಯವಾರು ಶತಕೋಟ್ಯಧಿಪತಿ ಸಂಸದರ ವಿವರ

- ಮೊದಲು 3 ಸ್ಥಾನದಲ್ಲಿ ಪ್ರಾದೇಶಿಕ ಪಕ್ಷಗಳ ಸಂಸದರೇ ಇದ್ದಾರೆ. ಮೊದಲ ಸ್ಥಾನದಲ್ಲಿ ತೆಲಂಗಾಣದ ಬಿಆರ್‌ಎಸ್ ಸಂಸದ ಬಂಡಿ ಪಾರ್ಥ ಸಾರಥಿ ರೆಡ್ಡಿ (₹5,300 ಕೋಟಿ), ಎರಡನೇ ಸ್ಥಾನದಲ್ಲಿ ಆಂಧ್ರ ಪ್ರದೇಶದ ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ಸಂಸದ ಅಳ್ಳಾ ಆಯೋಧ್ಯ ರಾಮಿ ರೆಡ್ಡಿ (₹2,577 ಕೋಟಿ), ಮೂರನೇ ಸ್ಥಾನದಲ್ಲಿ ಉತ್ತರ ಪ್ರದೇಶದ ಸಮಾಜವಾದಿ ಪಕ್ಷದ ಜಯಾ ಬಚ್ಚನ್ (₹1,000 ಕೋಟಿ) ಇದ್ದಾರೆ
- ಬಿಜೆಪಿಯ 85 ಸದಸ್ಯರ ಪೈಕಿ 6 ಸದಸ್ಯರು, ಕಾಂಗ್ರೆಸ್‌ನ 30 ಸದಸ್ಯರ ಪೈಕಿ 4 ಸದಸ್ಯರು ಹಾಗೂ ವೈಆರ್‌ಎಸ್ ಕಾಂಗ್ರೆಸ್‌ನ 9 ಸದಸ್ಯರ ಪೈಕಿ 4 ಸದಸ್ಯರು ಶತಕೋಟಿ ಒಡೆಯರಾಗಿದ್ದಾರೆ




ಪ್ರಜಾವಾಣಿ ಗ್ರಾಫಿಕ್ಸ್

### ಅಪರಾಧ ಪ್ರಕರಣ




### ವರದಿಯ ಇತರ ವಿವರಗಳು

- ಹೆಚ್ಚು ಆದಾಯ ತೆರಿಗೆ ಸಲ್ಲಿಸಿರುವವರಲ್ಲಿ ಕರ್ನಾಟಕದ ಸದಸ್ಯ ರಾಜೀವ್ ಚಂದ್ರಶೇಖರ್ ಒಂಬತ್ತನೇ ಸ್ಥಾನದಲ್ಲಿದ್ದಾರೆ. ಇವರ ವಿರುದ್ಧ ಒಟ್ಟು ನಾಲ್ಕು ಅಪರಾಧ ಪ್ರಕರಣಗಳು ದಾಖಲಾಗಿವೆ
- ರಾಜ್ಯಸಭೆಯ 225 ಸದಸ್ಯರ ಪೈಕಿ ಮಹಿಳಾ ಸಂಸದರ ಸಂಖ್ಯೆ 29 ಮಾತ್ರ. ಎನ್‌ಸಿಪಿಯ 3 ಸಂಸದರ ಪೈಕಿ ಇಬ್ಬರು ಮಹಿಳಾ ಸಂಸದರಿದ್ದಾರೆ. ಜಾರ್ಖಂಡ್ ಮುಕ್ತಿ ಮೋರ್ಚಾದ (ಜೆಎಂಎಂ) 2 ಸಂಸದರ ಪೈಕಿ ಒಬ್ಬರು ಮಹಿಳಾ ಸಂಸದರಿದ್ದಾರೆ. ದೊಡ್ಡ ದೊಡ್ಡ ಪಕ್ಷಗಳಿಗೆ ಹೋಲಿಸಿದರೆ, ಪ್ರಾದೇಶಿಕ ಪಕ್ಷಗಳೇ ಮಹಿಳಾ ಪ್ರಾತಿನಿಧ್ಯಕ್ಕೆ ಹೆಚ್ಚು ಒತ್ತು ನೀಡಿವೆ
- ಜೆಡಿಎಸ್ ವರಿಷ್ಠ, ಸಂಸದ ಎಚ್‌.ಡಿ. ದೇವೇಗೌಡ ಅವರು ಅತಿ ಹಿರಿಯ (90), ಸಂಸದ ಮನಮೋಹನ್ ಸಿಂಗ್ ಅವರು ಎರಡನೇ ಅತಿ ಹಿರಿಯ (89) ಸಂಸದರಾಗಿದ್ದಾರೆ

ಮೊದಲ ಟಿ20 ಪಂದ್ಯ: ಪುನರಾಗಮನದಲ್ಲಿ ಮಿಂಚಿದ ಬೂಮ್ರಾ, ಪ್ರಸಿದ್ಧ

# ಮಳೆ ಅಡ್ಡಿ: ಭಾರತಕ್ಕೆ ಜಯ

**ಡಬ್ಲಿನ್ (ಪಿಟಿಐ):** ಭಾರತ ತಂಡಕ್ಕೆ ಪುನರಾಗಮನ ಮಾಡಿದ ಜಸ್‌ಪ್ರೀತ್ ಬೂಮ್ರಾ ಮತ್ತು ಪ್ರಸಿದ್ಧ ಕೃಷ್ಣ ಅವರು ಶುಕ್ರವಾರ ಉತ್ತಮ ಬೌಲಿಂಗ್ ಪ್ರದರ್ಶಿಸಿದರು. ಮಳೆಯಿಂದ ಮೊಟಕಾದ ಐರ್ಲೆಂಡ್ ವಿರುದ್ಧದ ಮೊದಲ ಟಿ20 ಪಂದ್ಯವನ್ನು ಭಾರತ, ಡಕ್ವರ್ಥ್ ಲೂಯಿಸ್ ನಿಯಮದನ್ವಯ ಎರಡು ರನ್‌ಗಳಿಂದ ಗೆದ್ದುಕೊಂಡಿತು.

ಮೂರು ಪಂದ್ಯಗಳ ಸರಣಿಯಲ್ಲಿ ಭಾರತ ತಂಡವು 1–0ಯಿಂದ ಮುನ್ನಡೆ ಪಡೆಯಿತು.

ಮೊದಲು ಬ್ಯಾಟಿಂಗ್ ಮಾಡಿದ ಆತಿಥೇಯ ತಂಡ ಬ್ಯಾರಿ ಮೆಕಾರ್ಥಿ ಅವರ ಬಿರುಸಿನ ಅರ್ಧ ಶತಕದ ನೆರವಿನಿಂದ 7 ವಿಕೆಟ್‌ಗಳಿಗೆ 139 ರನ್‌ಗಳ ಗೌರವಾರ್ಹ ಮೊತ್ತ ಗಳಿಸಿತು.

ಈ ಮೊತ್ತವನ್ನು ಬೆನ್ನುಹತ್ತಿದ ಭಾರತ ತಂಡಕ್ಕೆ ಯಶಸ್ವಿ ಜೈಸ್ವಾಲ್ (24) ಮತ್ತು ಋತುರಾಜ್ ಗಾಯಕವಾಡ್ (ಔಟಾಗದೆ 19) ಮೊದಲ ವಿಕೆಟ್‌ಗೆ 46 ರನ್ ಗಳಿಸಿ ಉತ್ತಮ ಆರಂಭ ಒದಗಿಸಿದ್ದರು. ಆದರೆ, 7ನೇ ಓವರ್‌ನಲ್ಲಿ ಜೈಸ್ವಾಲ್ ಮತ್ತು ತಿಲಕ್ ವರ್ಮಾ (0) ಅವರು ಕ್ರೇಗ್ ಯಂಗ್ ಅವರಿಗೆ ವಿಕೆಟ್ ಒಪ್ಪಿಸಿದರು. ಮಳೆಯಿಂದ ಆಟ ನಿಂತಾಗ ಭಾರತವು 6.5 ಓವರುಗಳಲ್ಲಿ 2 ವಿಕೆಟ್‌ಗೆ 47 ರನ್ ಗಳಿಸಿತ್ತು. ಡಕ್ವರ್ಥ್ ಲೂಯಿಸ್ ನಿಯಮದಂತೆ 2 ರನ್ ಮುಂದಿತ್ತು.



ವಿಕೆಟ್ ಗಳಿಸಿದ ಸಂಭ್ರಮದಲ್ಲಿ ಭಾರತ ತಂಡದ ನಾಯಕ ಜಸ್‌ಪ್ರೀತ್ ಬೂಮ್ರಾ ಮತ್ತು ಸಹ ಆಟಗಾರರು –ಪಿಟಿಐ ಚಿತ್ರ

ಮೊದಲು ಬ್ಯಾಟಿಂಗ್ ಮಾಡಿದ ಐರ್ಲೆಂಡ್ ತಂಡ ಒಂದು ಹಂತದಲ್ಲಿ 11 ಓವರುಗಳಲ್ಲಿ 59 ರನ್ನಿಗೆ 6 ವಿಕೆಟ್ ಕಳೆದುಕೊಂಡಿತ್ತು. ಆದರೆ, ಏಳನೇ ವಿಕೆಟ್‌ಗೆ ಕರ್ಟಿಸ್ ಕ್ಯಾಂಫರ್ (39, 33 ಎಸೆತ) ಮತ್ತು ಮೆಕಾರ್ಥಿ (ಔಟಾಗದೇ 51, 33ಎ, 4x6, 4x4) ಅತ್ಯಮೂಲ್ಯ 57 ರನ್ ಸೇರಿಸಿ ಪ್ರತಿರೋಧ ತೋರಿದರು.

ಅರ್ಷದೀಪ್ ಅವರು ಮಾಡಿದ ಕೊನೆಯ ಓವರ್‌ನ ಕೊನೆಯ ಎಸೆತವನ್ನು ಕವರ್ಸ್ ಮೇಲೆ ಸಿಕ್ಸರ್‌ಗೆತ್ತುವ ಮೂಲಕ ಮೆಕಾರ್ಥಿ ಅರ್ಧಶತಕ ಪೂರೈಸಿದರು. ದುಬಾರಿಯಾದ ಅರ್ಷದೀಪ್ ಈ ಓವರ್‌ನಲ್ಲಿ 22 ರನ್ ತೆತ್ತರು.

ಬೂಮ್ರಾ ಮೊದಲ ಓವರ್‌ನಲ್ಲೇ ಆ್ಯಂಡ್ರೂ ಬಲ್ಬರ್ನಿ ಅವರನ್ನು ಬೌಲ್ಡ್ ಮಾಡಿದರು. ಅದೇ ಓವರ್‌ನಲ್ಲಿ ಲೋರ್ಕನ್ ಟಕ್ಕರ್ ಅವರನ್ನೂ ಪೆವಿಲಿಯನ್‌ಗೆ ಮರಳಿಸಿದರು. ನಾಲ್ಕು ಓವರುಗಳ ನಂತರ ದಾಳಿಗಿಳಿದ ಪ್ರಸಿದ್ಧ ಕೃಷ್ಣ ಮೊದಲ ಓವರ್‌ನಲ್ಲೇ ಹ್ಯಾರಿ ಟೆಕ್ಟರ್ (9) ಅವರ ಪರದಾಟಕ್ಕೆ ತೆರೆಯೆಳೆದರು. ಬಿಷ್ಣೋಯಿ ಅವರ ಗೂಗ್ಲಿ ಎಸೆತವನ್ನು ಅರಿಯದೇ ನಾಯಕ ಪಾಲ್ ಸ್ಟರ್ಲಿಂಗ್ (11) ಬೌಲ್ಡ್ ಆದರು. ಪವರ್‌ಪ್ಲೇ ಆಗುವಷ್ಟರಲ್ಲಿ ಐರ್ಲೆಂಡ್ 4 ವಿಕೆಟ್‌ಗೆ 27 ರನ್ ಗಳಿಸಿತ್ತು.

ಬೆನ್ನಿನ ಶಸ್ತ್ರಚಿಕಿತ್ಸೆಯಿಂದಾಗಿ 11 ತಿಂಗಳ ಕಾಲ ದೀರ್ಘ ವಿಶ್ರಾಂತಿಯ ನಂತರ ಮರಳಿದ ಬೂಮ್ರಾ 24 ರನ್ನಿಗೆ 2 ವಿಕೆಟ್ ಪಡೆದರೆ, ಸೊಂಟದ ನೋವಿನಿಂದ ಚೇತರಿಸಿಕೊಂಡಿರುವ ಕನ್ನಡಿಗ ಪ್ರಸಿದ್ಧ ಕೃಷ್ಣ 32 ರನ್ನಿಗೆ 2 ವಿಕೆಟ್ ಪಡೆದರು. ಇದು ಪ್ರಸಿದ್ಧ ಅವರ ಮೊದಲ ಟಿ–20 ಪಂದ್ಯ. ಸ್ಪಿನ್ನರ್ ರವಿ ಬಿಷ್ಣೋಯಿ ಕೂಡ 2 ವಿಕೆಟ್ ಪಡೆದರು.

**ಸಂಕ್ಷಿಪ್ತ ಸ್ಕೋರ್:** ಐರ್ಲೆಂಡ್: 20 ಓವರುಗಳಲ್ಲಿ 7 ವಿಕೆಟ್‌ಗೆ 139 (ಕರ್ಟಿಸ್ ಕ್ಯಾಂಫರ್ 39, ಬ್ಯಾರಿ ಮೆಕಾರ್ಥಿ ಔಟಾಗದೇ 51; ಜಸ್‌ಪ್ರೀತ್ ಬೂಮ್ರಾ 24ಕ್ಕೆ2, ಪ್ರಸಿದ್ಧ ಕೃಷ್ಣ 32ಕ್ಕೆ2, ರವಿ ಬಿಷ್ಣೋಯಿ 23ಕ್ಕೆ2). ಭಾರತ: 6.5 ಓವರುಗಳಲ್ಲಿ 2 ವಿಕೆಟ್‌ಗೆ 47 (ಯಶಸ್ವಿ ಜೈಸ್ವಾಲ್ 24, ಋತುರಾಜ್ ಗಾಯಕವಾಡ್ 19; ಕ್ರೇಗ್ ಯಂಗ್ 2ಕ್ಕೆ 2); **ಫಲಿತಾಂಶ:** ಡಕ್ವರ್ಥ್ ನಿಯಮದನ್ವಯ ಭಾರತಕ್ಕೆ 2 ರನ್‌ಗಳ ಜಯ

## 2022ರ ಐಪಿಎಲ್: ಬಿಸಿಸಿಐ ₹2,429 ಕೋಟಿ ಗಳಿಕೆ

**ನವದೆಹಲಿ (ಎಎಫ್‌ಪಿ):** ಜಗತ್ತಿನ ಶ್ರೀಮಂತ ಕ್ರಿಕೆಟ್ ಮಂಡಳಿ ಎನಿಸಿರುವ ಬಿಸಿಸಿಐ, ಕಳೆದ ವರ್ಷದ ಐಪಿಎಲ್ ಟೂರ್ನಿಯಿಂದ ₹ 2,429 ಕೋಟಿ ಆದಾಯ ಗಳಿಸಿದೆ ಎಂದು ಮಂಡಳಿ ಬಿಡುಗಡೆಗೊಳಿಸಿದ ಹಣಕಾಸು ದಾಖಲೆಗಳು ತಿಳಿಸಿವೆ.

2008ರಲ್ಲಿ ಆರಂಭವಾದ ಐಪಿಎಲ್, ಮಾಧ್ಯಮ ಹಕ್ಕುಗಳ ಮಾರಾಟ ಸೇರಿದಂತೆ ವಿವಿಧ ಮೂಲಗಳಿಂದ ಬಿಸಿಸಿಐಗೆ ಭಾರಿ ಆದಾಯ ತಂದುಕೊಡುತ್ತಿದೆ.

2017ರಿಂದ 2022ರ ವರೆಗೆ ಬಿಸಿಸಿಐ ಗಳಿಸಿರುವ ಆದಾಯದ ವಿವರಗಳನ್ನು ಮಂಡಳಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. 2017ರ ಬಳಿಕ ಬಿಸಿಸಿಐ ತನ್ನ ಹಣಕಾಸಿನ ವಿವರವಾದ ವರದಿಯನ್ನು ಬಹಿರಂಗಪಡಿಸಿದ್ದು ಇದೇ ಮೊದಲು. 2022ರ ಏಪ್ರಿಲ್‌ಗೆ ಅಂತ್ಯಗೊಳ್ಳುವ ಹಿಂದಿನ 5 ವರ್ಷಗಳಲ್ಲಿ ಮಂಡಳಿಯು ₹32 ಸಾವಿರ ಕೋಟಿಗೂ ಅಧಿಕ ಆದಾಯ ಗಳಿಸಿದೆ.

ಕಳೆದ ವರ್ಷ (2022) ನಡೆದ ಐಪಿಎಲ್ ಟೂರ್ನಿಯಿಂದ ಮಂಡಳಿ ಒಟ್ಟು ₹ 6,414 ಕೋಟಿ ವರಮಾನ ಗಳಿಸಿದೆ. ಟೂರ್ನಿಯ ಆಯೋಜನೆಗೆ ₹ 3,985 ಕೋಟಿ ಖರ್ಚಾಗಿದ್ದು, ₹2,429 ಕೋಟಿ ನಿವ್ವಳ ಲಾಭ ಗಳಿಸಿದೆ.

ಐಪಿಎಲ್ 2023ರಿಂದ 2027ರ ವರೆಗಿನ ಪ್ರಸಾರ ಹಕ್ಕುಗಳ ಮಾರಾಟದಿಂದ ಬಿಸಿಸಿಐ ₹ 48 ಸಾವಿರ ಕೋಟಿ ಗಳಿಸಿತ್ತು.

# ಮೈಸೂರು ವಾರಿಯರ್ಸ್‌ಗೆ ಜಯ

## ಮಹಾರಾಜ ಟ್ರೋಫಿ ಕ್ರಿಕೆಟ್: ನಾಯಕ ಕರುಣ್ ಅರ್ಧಶತಕ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಾಯಕ ಕರುಣ್ ನಾಯರ್ ಅವರ ಬಿರುಸಿನ ಅರ್ಧಶತಕದ ನೆರವಿನಿಂದ ಮೈಸೂರು ವಾರಿಯರ್ಸ್ ತಂಡ, ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ 12 ರನ್‌ಗಳಿಂದ ಶಿವಮೊಗ್ಗ ಲಯನ್ಸ್ ತಂಡವನ್ನು ಮಣಿಸಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ವಾರಿಯರ್ಸ್, ನಿಗದಿತ ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 190 ರನ್ ಗಳಿಸಿತು.

ಕರುಣ್ 33 ಎಸೆತಗಳಲ್ಲಿ 60 ರನ್ ಗಳಿಸಿದರು. ಅವರು 9 ಬೌಂಡರಿ ಹಾಗೂ ಒಂದು ಸಿಕ್ಸರ್ ಹೊಡೆದರು. ಸಿ.ಎ.ಕಾರ್ತಿಕ್ (46) ಮತ್ತು ಕರುಣ್ ಎರಡನೇ ವಿಕೆಟ್‌ಗೆ 90 ರನ್ ಸೇರಿಸಿದ್ದರಿಂದ ತಂಡ ಸವಾಲಿನ ಮೊತ್ತ ಪೇರಿಸಿತು.

ಗುರಿ ಬೆನ್ನಟ್ಟಿದ ಲಯನ್ಸ್ 9 ವಿಕೆಟ್‌ಗಳಿಗೆ 178 ರನ್ ಗಳಿಸಲಷ್ಟೇ ಶಕ್ತವಾಯಿತು. ವಾರಿಯರ್ಸ್ ತಂಡದ ಎಂ.ವೆಂಕಟೇಶ್ (18ಕ್ಕೆ 3) ಪರಿಣಾಮಕಾರಿ ದಾಳಿ ನಡೆಸಿದರು. ಸತತ ಮೂರು ಗೆಲುವು ಪಡೆದಿದ್ದ ಲಯನ್ಸ್‌ಗೆ ಎದುರಾದ ಮೊದಲ ಸೋಲು ಇದು.

ದಿನದ ಎರಡನೇ ಪಂದ್ಯದಲ್ಲಿ ಮಂಗಳೂರು ಡ್ರಾಗನ್ಸ್ ತಂಡ 23 ರನ್‌ಗಳಿಂದ ಬೆಂಗಳೂರು ಬ್ಲಾಸ್ಟರ್ಸ್ ವಿರುದ್ಧ ಗೆದ್ದಿತು. ಡ್ರಾಗನ್ಸ್ ತಂಡದ ಕೆ.ಸಿದ್ಧಾರ್ಥ್ (ಔಟಾಗದೆ 100, 64 ಎ., 4X9, 6X4) ಶತಕ ಗಳಿಸಿ ಮಿಂಚಿದರು.



ಅರ್ಧಶತಕ ಗಳಿಸಿದ ಮೈಸೂರು ವಾರಿಯರ್ಸ್ ತಂಡದ ಕರುಣ್ ನಾಯರ್ ಬ್ಯಾಟಿಂಗ್ ವೈಖರಿ –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ

**ಸಂಕ್ಷಿಪ್ತ ಸ್ಕೋರ್:** **ಮೈಸೂರು ವಾರಿಯರ್ಸ್** 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 190 (ಸಿ.ಎ.ಕಾರ್ತಿಕ್ 46, ಕರುಣ್ ನಾಯರ್ 60, ಮನೋಜ್ ಭಾಂಡಗೆ 29, ವಾಸುಕಿ ಕೌಶಿಕ್ 34ಕ್ಕೆ 2, ಕ್ರಾಂತಿ ಕುಮಾರ್ 35ಕ್ಕೆ 2) **ಶಿವಮೊಗ್ಗ ಲಯನ್ಸ್** 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 178 (ರೋಹನ್ ಕದಂ 31, ರೋಹನ್ ನವೀನ್ 28, ಅಭಿನವ್ ಮನೋಹರ್ 26, ಎಸ್.ಶಿವರಾಜ್ ಔಟಾಗದೆ 29, ಎಂ.ವೆಂಕಟೇಶ್ 18ಕ್ಕೆ 3, ಸಿ.ಎ.ಕಾರ್ತಿಕ್ 28ಕ್ಕೆ 2) **ಫಲಿತಾಂಶ:** ಮೈಸೂರು ವಾರಿಯರ್ಸ್‌ಗೆ 12 ರನ್ ಗೆಲುವು

**ಮಂಗಳೂರು ಡ್ರಾಗನ್ಸ್** 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 194 (ಕೆ. ಸಿದ್ಧಾರ್ಥ್ ಔಟಾಗದೆ 100, ಬಿ.ಯು. ಶಿವಕುಮಾರ್ 40, ಅನಿರುದ್ಧ ಜೋಶಿ ಔಟಾಗದೆ 31, ರಿಷಿ ಬೋಪಣ್ಣ 40ಕ್ಕೆ 1) **ಬೆಂಗಳೂರು ಬ್ಲಾಸ್ಟರ್ಸ್** 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 171 (ಡಿ.ನಿಶ್ಚಲ್ 61, ಶುಭಾಂಗ್ ಹೆಗ್ಡೆ 45, ಆದಿತ್ಯ ಗೋಯಲ್ 35ಕ್ಕೆ 3, ಸಂಕಲ್ಪ್ 20ಕ್ಕೆ 2) **ಫಲಿತಾಂಶ:** ಮಂಗಳೂರು ಡ್ರಾಗನ್ಸ್‌ಗೆ 23 ರನ್ ಗೆಲುವು

**ಇಂದಿನ ಪಂದ್ಯಗಳು**

ಬೆಂಗಳೂರು ಬ್ಲಾಸ್ಟರ್ಸ್– ಮೈಸೂರು ವಾರಿಯರ್ಸ್ (ಮಧ್ಯಾಹ್ನ 1 ರಿಂದ)

ಹುಬ್ಬಳ್ಳಿ ಟೈಗರ್ಸ್– ಶಿವಮೊಗ್ಗ ಲಯನ್ಸ್ (ಸಂಜೆ 5.30 ರಿಂದ)


**ನೇರ ಪ್ರಸಾರ:** ಸ್ಟಾರ್ ಸ್ಪೋರ್ಟ್ಸ್ ಕನ್ನಡ, ಫ್ಯಾನ್‌ಕೋಡ್ ಆ್ಯಪ್

## ದ್ಯುತಿ ಚಾಂದ್‌ಗೆ 4 ವರ್ಷ ನಿಷೇಧ: ಮೇಲ್ಮನವಿ ಸಲ್ಲಿಸಲು ನಿರ್ಧಾರ

**ನವದೆಹಲಿ (ಪಿಟಿಐ):** ಉದ್ದೀಪನ ಮದ್ದು ಸೇವಿಸಿದ್ದು ಸಾಬೀತಾದ ಹಿನ್ನೆಲೆಯಲ್ಲಿ, ಎರಡು ಬಾರಿಯ ಏಷ್ಯನ್ ಗೇಮ್ಸ್ ಪದಕ ವಿಜೇತೆ ದ್ಯುತಿ ಚಾಂದ್ ಅವರ ಮೇಲೆ ನಾಲ್ಕು ವರ್ಷಗಳ ನಿಷೇಧ ಹೇರಲಾಗಿದೆ.

ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಘಟಕವು (ನಾಡಾ) ವಿಧಿಸಿರುವ ಶಿಕ್ಷೆಯ ವಿರುದ್ಧ ಮೇಲ್ಮನವಿ ಸಲ್ಲಿಸಲು 27 ವರ್ಷದ ಸ್ಪ್ರಿಂಟರ್ ನಿರ್ಧರಿಸಿದ್ದಾರೆ. ಕಳೆದ ವರ್ಷ ಡಿ. 5 ಮತ್ತು 26 ರಂದು ದ್ಯುತಿ ಅವರಿಂದ ಪರೀಕ್ಷೆಗಾಗಿ ಮಾದರಿ ಸಂಗ್ರಹಿಸಲಾಗಿತ್ತು. ಅವರು ನಿಷೇಧಿತ ಮದ್ದು ಸೇವಿಸಿರುವುದು ಎರಡೂ ಪರೀಕ್ಷೆಗಳಲ್ಲಿ ಸಾಬೀತಾದ ಕಾರಣ ನಾಡಾ, ಗುರುವಾರ ನಾಲ್ಕು ವರ್ಷಗಳ ನಿಷೇಧ ವಿಧಿಸಿದೆ.

ಮಹಿಳೆಯರ 100 ಮೀ. ಓಟದಲ್ಲಿ ರಾಷ್ಟ್ರೀಯ ದಾಖಲೆ (11.17 ಸೆ.) ಹೊಂದಿರುವ ದ್ಯುತಿ ಅವರ ಮೇಲಿನ ನಿಷೇಧ ಶಿಕ್ಷೆ ಈ ವರ್ಷದ ಜ.3 ರಿಂದ ಜಾರಿಯಾಗಿದೆ. ಮೊದಲ ಮಾದರಿ ಸಂಗ್ರಹಿಸಿದ ದಿನದಿಂದ (ಡಿ.5, 2022) ಅವರು ಪಾಲ್ಗೊಂಡಿರುವ ಎಲ್ಲ ಸ್ಪರ್ಧೆಗಳ ಫಲಿತಾಂಶಗಳನ್ನು ರದ್ದುಗೊಳಿಸಲಾಗುತ್ತದೆ.



ದ್ಯುತಿ ಚಾಂದ್

ದ್ಯುತಿ ತಮ್ಮ ವೃತ್ತಿಜೀವನದ ಉದ್ದಕ್ಕೂ 'ಕಳಂಕ ರಹಿತ ಕ್ರೀಡಾಪಟು' ಆಗಿದ್ದು, ನಿಷೇಧ ಶಿಕ್ಷೆಯ ವಿರುದ್ಧ ಮೇಲ್ಮನವಿ ಸಲ್ಲಿಸಲಾಗುವುದು ಎಂದು ಅವರ ವಕೀಲ ಪಾರ್ಥ್ ಗೋಸ್ವಾಮಿ ಹೇಳಿದ್ದಾರೆ.

'ಮೇಲ್ಮನವಿ ಸಲ್ಲಿಸುವ ಪ್ರಕ್ರಿಯೆ ಆರಂಭಿಸಿದ್ದೇವೆ. ಅವರು ಉದ್ದೇಶಪೂರ್ವಕವಾಗಿ ಮದ್ದು ಸೇವಿಸಿಲ್ಲ ಎಂಬುದನ್ನು ಮೇಲ್ಮನವಿ ಸಮಿತಿಗೆ ಮನವರಿಕೆ ಮಾಡಿಕೊಡುವ ವಿಶ್ವಾಸವಿದೆ' ಎಂದಿದ್ದಾರೆ.

ಉದ್ದೇಶಪೂರ್ವಕವಾಗಿ ಮದ್ದು ಸೇವನೆ ಮಾಡಿಲ್ಲ ಎಂದು ದ್ಯುತಿ ಮತ್ತು ಅವರ ವಕೀಲರು ನಾಡಾದ ಶಿಸ್ತು ಸಮಿತಿಯ ಮುಂದೆ ಪ್ರತಿಪಾದಿಸಿದ್ದರು.

ಅವರು 2018ರ ಜಕಾರ್ತ ಏಷ್ಯನ್ ಗೇಮ್ಸ್‌ನಲ್ಲಿ 100 ಮತ್ತು 200 ಮೀ. ಓಟದಲ್ಲಿ ಬೆಳ್ಳಿ ಗೆದ್ದುಕೊಂಡಿದ್ದರು.

# ಈಜು: ಇಶಾನ್ ಮೆಹ್ರಾಗೆ 2 ಚಿನ್ನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕರ್ನಾಟಕದ ಸ್ಪರ್ಧಿಗಳು ಭುವನೇಶ್ವರದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಜೂನಿಯರ್ ಮತ್ತು ಸಬ್ ಜೂನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಪಾರಮ್ಯ ಮುಂದುವರಿಸಿದ್ದಾರೆ.

ಇಶಾನ್ ಮೆಹ್ರಾ ಅವರು ಶುಕ್ರವಾರ ನಡೆದ ಬಾಲಕರ 'ಗುಂಪು–2'ರ 100 ಮೀ. ಫ್ರೀಸ್ಟೈಲ್ (54.85 ಸೆ.) ಮತ್ತು 50 ಮೀ. ಬ್ಯಾಕ್‌ಸ್ಟ್ರೋಕ್ (28.25 ಸೆ.) ಸ್ಪರ್ಧೆಗಳಲ್ಲಿ ಚಿನ್ನ ಗೆದ್ದುಕೊಂಡರು. ಬಾಲಕರ 'ಗುಂಪು–1' ರ 50 ಮೀ. ಬ್ಯಾಕ್‌ಸ್ಟ್ರೋಕ್‌ನಲ್ಲಿ ಆಕಾಶ್ ಮಣಿ (27.10 ಸೆ.) ಮೊದಲಿಗರಾದರು.

ಬಾಲಕಿಯರ ಗುಂಪು–1ರ 400 ಮೀ. ವೈಯಕ್ತಿಕ ಮೆಡ್ಲೆಯಲ್ಲಿ ಹಷಿಕಾ ರಾಮಚಂದ್ರ (5 ನಿ. 8.50 ಸೆ.) ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದರೆ, ಎಸ್. ಲಕ್ಷ್ಯಾ ಬೆಳ್ಳಿ ತಮ್ಮದಾಗಿಸಿಕೊಂಡರು. 50 ಮೀ. ಬ್ಯಾಕ್‌ಸ್ಟ್ರೋಕ್ ಸ್ಪರ್ಧೆಯಲ್ಲಿ ರಿಧಿಮಾ ವೀರೇಂದ್ರ (30.08 ಸೆ.) ಮೊದಲ ಸ್ಥಾನ ಪಡೆದರೆ, ಆರುಷಿ ಅಗರವಾಲ್ ಕಂಚು ಜಯಿಸಿದರು.

'ಗುಂಪು–2' ರ 50 ಮೀ. ಬ್ಯಾಕ್‌ಸ್ಟ್ರೋಕ್‌ನಲ್ಲಿ ನೈಶಾ (32.03 ಸೆ.) ಚಿನ್ನ ಜಯಿಸಿದರು. 400 ಮೀ. ಫ್ರೀಸ್ಟೈಲ್‌ನಲ್ಲಿ ತಾನ್ಯಾ ಷಡಾಕ್ಷರಿ (5 ನಿ. 25.04 ಸೆ.) ಚಿನ್ನ ಹಾಗೂ ಮೀನಾಕ್ಷಿ ಮೆನನ್ ಕಂಚು ಪಡೆದರು. 100 ಮೀ. ಬಟರ್‌ಫ್ಲೈ ಸ್ಪರ್ಧೆಯಲ್ಲಿ ತನಿಷಿ ಗುಪ್ತಾ (1 ನಿ. 2.21 ಸೆ.) ಮತ್ತು ಧೀನಿಧಿ ದೇಸಿಂಗು ಅವರು ಕ್ರಮವಾಗಿ ಮೊದಲ ಎರಡು ಸ್ಥಾನಗಳನ್ನು ತಮ್ಮದಾಗಿಸಿಕೊಂಡರು.



ಹಷಿಕಾ ರಾಮಚಂದ್ರ

ಬಾಲಕರ 'ಗುಂಪು–1' ರಲ್ಲಿ ವಿದಿತ್ ಎಸ್.ಶಂಕರ್ (200 ಮೀ. ಬ್ಯಾಕ್‌ಸ್ಟ್ರೋಕ್; ಬೆಳ್ಳಿ), 'ಗುಂಪು–2' ರಲ್ಲಿ ಆಯುಷ್ ಶಿವರಾಜ್ (200 ಮೀ. ಬ್ರೆಸ್ಟ್‌ಸ್ಟ್ರೋಕ್; ಬೆಳ್ಳಿ), ಪೃಥ್ವಿರಾಜ್ ಮೆನನ್ (800 ಮೀ.ಫ್ರೀಸ್ಟೈಲ್; ಬೆಳ್ಳಿ), ಪಿ.ವಿ.ಮೋನಿಷ್ (800 ಮೀ.ಫ್ರೀಸ್ಟೈಲ್; ಕಂಚು), ಎಸ್.ಸಿ.ಇದಾಂತ್ (50 ಮೀ. ಬ್ಯಾಕ್‌ಸ್ಟ್ರೋಕ್; ಬೆಳ್ಳಿ), 'ಗುಂಪು–3' ರಲ್ಲಿ ಅರ್ಜುನ್ ರಾಘವನ್ (100 ಮೀ. ಬ್ರೆಸ್ಟ್‌ಸ್ಟ್ರೋಕ್; ಬೆಳ್ಳಿ) ಮತ್ತು ಚೇತನ್ ನಾಗರಾಜ (100 ಮೀ. ಬ್ರೆಸ್ಟ್‌ಸ್ಟ್ರೋಕ್; ಕಂಚು) ಅವರು ಪದಕ ಜಯಿಸಿದರು.

ಬಾಲಕಿಯರ 'ಗುಂಪು–1' ರಲ್ಲಿ ಅದಿತಿ ಎನ್.ಎಂ. (800 ಮೀ. ಫ್ರೀಸ್ಟೈಲ್; ಬೆಳ್ಳಿ), ರಿತಿಕಾ ಮಹೇಶ್ (100 ಮೀ. ಬಟರ್‌ಫ್ಲೈ; ಕಂಚು) ಮತ್ತು ಮಾನವಿ ಶರ್ಮಾ (50 ಮೀ. ಫ್ರೀಸ್ಟೈಲ್; ಕಂಚು) ಪದಕ ಗೆದ್ದುಕೊಂಡರು.

ಇನ್ನೂ ಎರಡು ದಿನಗಳ ಸ್ಪರ್ಧೆಗಳು ಬಾಕಿಯಿದ್ದು, ಕರ್ನಾಟಕ 32 ಚಿನ್ನ, 28 ಬೆಳ್ಳಿ ಮತ್ತು 17 ಕಂಚಿನ ಪದಕಗಳೊಂದಿಗೆ ಸಮಗ್ರ ಪ್ರಶಸ್ತಿಯನ್ನು ತನ್ನಲ್ಲೇ ಉಳಿಸಿಕೊಳ್ಳುವತ್ತ ದಾಪುಗಾಲಿಟ್ಟಿದೆ.

## 3ನೇ ಸ್ಥಾನಕ್ಕಾಗಿ ಆಸ್ಟ್ರೇಲಿಯಾ–ಸ್ವೀಡನ್ ಸೆಣಸು

**ಸಿಡ್ನಿ (ಎಪಿ):** ಫಿಫಾ ಮಹಿಳಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಮೂರನೇ ಸ್ಥಾನ ನಿರ್ಣಯಿಸಲು ನಡೆಯುವ ಪಂದ್ಯದಲ್ಲಿ ಆಸ್ಟ್ರೇಲಿಯಾ ಮತ್ತು ಸ್ವೀಡನ್ ತಂಡಗಳು ಶನಿವಾರ ನಡೆಸಲಿವೆ.

ಸೆಮಿಫೈನಲ್‌ನಲ್ಲಿ ನಿರಾಸೆ ಅನುಭವಿಸಿರುವ ಉಭಯ ತಂಡಗಳು ಕಂಚಿನ ಪದಕ ಗೆದ್ದುಕೊಂಡು, ಟೂರ್ನಿಯನ್ನು ಸ್ಮರಣೀಯವನ್ನಾಗಿಸುವ ಗುರಿ ಇಟ್ಟುಕೊಂಡಿವೆ. ತವರು ನೆಲದಲ್ಲಿ ಪ್ರಶಸ್ತಿ ಗೆಲ್ಲಬೇಕೆಂಬ ಆಸ್ಟ್ರೇಲಿಯಾ ತಂಡದ ಕನಸನ್ನು ಇಂಗ್ಲೆಂಡ್ ನುಚ್ಚುನೂರು ಮಾಡಿತ್ತು. ಆತಿಥೇಯ ತಂಡ ಸೆಮಿಫೈನಲ್‌ನಲ್ಲಿ 1–3 ರಿಂದ ಸೋತಿತ್ತು. ಸ್ವೀಡನ್ ತಂಡ ಸ್ಪೇನ್ ಕೈಯಲ್ಲಿ 1–2 ರಿಂದ ಪರಾಭವಗೊಂಡಿತ್ತು.

ವಿಶ್ವ ರ‍್ಯಾಂಕಿಂಗ್‌ನಲ್ಲಿ ಮೂರನೇ ಸ್ಥಾನದಲ್ಲಿರುವ ಸ್ವೀಡನ್, ನಾಲ್ಕು ವರ್ಷಗಳ ಹಿಂದೆ ಫ್ರಾನ್ಸ್‌ನಲ್ಲಿ ನಡೆದಿದ್ದ ಟೂರ್ನಿಯಲ್ಲಿ 3ನೇ ಸ್ಥಾನ ಗಳಿಸಿತ್ತು.

**ಪಂದ್ಯ ಆರಂಭ:** ಮಧ್ಯಾಹ್ನ 1.30

**ನೇರ ಪ್ರಸಾರ:** ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್

## ಹಾಕಿ: ಜೂನಿಯರ್ ತಂಡ ಶುಭಾರಂಭ

**ಡಸೆಲ್‌ಡಾರ್ಫ್ (ಜರ್ಮನಿ), (ಪಿಟಿಐ):** ಭಾರತ ಜೂನಿಯರ್ ಹಾಕಿ ತಂಡ, ಶುಕ್ರವಾರ ಆರಂಭವಾದ 4 ರಾಷ್ಟ್ರಗಳ ಹಾಕಿ ಟೂರ್ನಿಯಲ್ಲಿ ಸ್ಪೇನ್ ತಂಡದ ಮೇಲೆ 6–2 ಗೋಲುಗಳ ಅಮೋಘ ಜಯ ಪಡೆಯಿತು.

ಭಾರತ ಶನಿವಾರ ನಡೆಯುವ ಪಂದ್ಯದಲ್ಲಿ ಜರ್ಮನಿ ತಂಡವನ್ನು ಎದುರಿಸಲಿದೆ. ಇಂಗ್ಲೆಂಡ್ ಈ ಟೂರ್ನಿಯಲ್ಲಿ ಭಾಗವಹಿಸುತ್ತಿರುವ ಇನ್ನೊಂದು ತಂಡವಾಗಿದೆ.

### ಬೆಂಗಳೂರು ರೇಸ್

**ಶ್ಯಾಮ್‌ರಾಕ್ ಗೆಲ್ಲುವ ನಿರೀಕ್ಷೆ**

ಲೀಡಿಂಗ್ ಸ್ಟಡ್ ಟ್ರೋಫಿ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಶ್ಯಾಮ್‌ರಾಕ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಅಲ್ಟಿಮೇಟ್ ಚಾನ್ಸ್ 5, ಏರ್‌ಬ್ಲಾಸ್ಟ್ 2, ಡಾನ್ ರೈಸಿಂಗ್ 3
2ನೇ ರೇಸ್: ಬ್ರೀಝ್ ಬ್ಲಸ್ಟರ್ 4, ಕ್ಯಾಟ್ ವಿಸ್ಕರ್ಸ್ 3, ಸೂಪರ್ ಸಫೈರ್ 2
3ನೇ ರೇಸ್: ಸದರ್ನ್ ಡೈನಾಸ್ಟಿ 2, ದಿ ಸ್ಟ್ರೈಕಿಂಗ್ಲಿ 6, ಮಿಲ್‌ಬ್ರೂಕ್ 1
4ನೇ ರೇಸ್: ನಾರ್ವೇಗಿಯನ್ ವುಡ್ 6, ಇಂಪೀರಿಯಲ್ ಗೆಸ್ಚರ್ 3, ಹೈ ಟ್ರಿಬ್ಯೂಟ್ 2
5ನೇ ರೇಸ್: ಗೋಲ್ಡನ್ ಟೈಮ್ 4, ಮಿಚಿಗನ್ ಮೆಲೋಡಿ 1, ಅಲ್ಟಿಮೇಟ್ ಸ್ಟ್ರೈಕರ್ 6
6ನೇ ರೇಸ್: ನಿಕೊಲಿನ 4, ವೈಲ್ಡ್ ಎಂಪರರ್ 6, ಬ್ಯಾಲೊರ್ 2
7ನೇ ರೇಸ್: ಶ್ಯಾಮ್‌ರಾಕ್ 3, ಯುಕಾನ್ 1, ಸೀ ಲಯನ್ 2
8ನೇ ರೇಸ್: ರೋಮನ್ ಸ್ಪಿರಿಟ್ 1, ಕೇಪ್ರಿಯಾಟಿ 2, ಊ ಲಾ ಲಾ 4


**ಉತ್ತಮ ಬೆಟ್: ಗೋಲ್ಡನ್ ಟೈಮ್**

| ಜಾಕ್‌ಪಾಟ್ | 1ನೇ ಟ್ರಿಬಲ್ | 2ನೇ ಟ್ರಿಬಲ್ |
|---|---|---|
| 4,5,6,7,8 | 3,4,5 | 6,7,8 |

ಮುಂಬೈ ಭಯೋತ್ಪಾದನಾ ದಾಳಿ ಪ್ರಕರಣದ ಆರೋಪಿ ಭಾರತಕ್ಕೆ ಹಸ್ತಾಂತರ

# ಅಮೆರಿಕ ಕೋರ್ಟ್‌ನಲ್ಲಿ ರಾಣಾ ಅರ್ಜಿ ವಜಾ

**ವಾಷಿಂಗ್ಟನ್(ಪಿಟಿಐ):** 2008ರಲ್ಲಿ ಮುಂಬೈ ಮೇಲೆ ನಡೆದಿದ್ದ ಉಗ್ರರ ದಾಳಿಗೆ ಸಂಬಂಧಿಸಿದಂತೆ ತನ್ನನ್ನು ಭಾರತಕ್ಕೆ ಹಸ್ತಾಂತರಿಸುವ ಕುರಿತ ಆದೇಶವನ್ನು ಪ್ರಶ್ನಿಸಿ ಪಾಕಿಸ್ತಾನ ಮೂಲದ ಕೆನಡಾ ಉದ್ಯಮಿ ತನಾವ್ವುರ್ ರಾಣಾ ಸಲ್ಲಿಸಿದ್ದ ಅರ್ಜಿಯನ್ನು ಅಮೆರಿಕದ ನ್ಯಾಯಾಲಯ ವಜಾಗೊಳಿಸಿದೆ.



ರಾಣಾ

ರಾಣಾನನ್ನು ಭಾರತಕ್ಕೆ ಹಸ್ತಾಂತರಿಸುವುದಕ್ಕೆ ಸಂಬಂಧಿಸಿ ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಆಂಟನಿ ಬ್ಲಿಂಕೆನ್ ಅವರು ಒಪ್ಪಿಗೆ ನೀಡಲು ಈಗ ದಾರಿ ಸುಗಮವಾಗಲಿದೆ.

ರಾಣಾನನ್ನು ಭಾರತಕ್ಕೆ ಹಸ್ತಾಂತರಿಸುವುದಕ್ಕೆ ಅಮೆರಿಕದ ಕೋರ್ಟ್ ಕಳೆದ ಮೇನಲ್ಲಿ ಅನುಮೋದನೆ ನೀಡಿ ಆದೇಶಿಸಿತ್ತು. ಮುಂಬೈ ಮೇಲೆ ದಾಳಿ ಪ್ರಕರಣದ ತಪ್ಪಿತಸ್ಥರನ್ನು ಶಿಕ್ಷಿಸುವುದಕ್ಕಾಗಿ ಭಾರತ ನಡೆಸುತ್ತಿರುವ ಹೋರಾಟಕ್ಕೆ ಸಂದ ದೊಡ್ಡ ಗೆಲುವು ಎಂದು ವಿಶ್ಲೇಷಿಸಲಾಗಿತ್ತು.

ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಜೂನ್‌ನಲ್ಲಿ ರಾಣಾ ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿದ್ದ. ವಿಚಾರಣೆ ನಡೆಸಿದ್ದ ಕ್ಯಾಲಿಫೋರ್ನಿಯಾ ಜಿಲ್ಲಾ ನ್ಯಾಯಾಲಯದ ನ್ಯಾಯಾಧೀಶ ಡೇಲ್ ಎಸ್.ಫಿಷರ್ ಅವರು, ರಾಣಾ ಅರ್ಜಿಯನ್ನು ವಜಾಗೊಳಿಸಿ ಆಗಸ್ಟ್ 10ರಂದು ಆದೇಶಿಸಿದ್ದಾರೆ. ರಾಣಾನನ್ನು ಹಸ್ತಾಂತರಿಸುವುದಕ್ಕೆ 2020ರ ಜೂನ್ 10ರಂದು ಭಾರತವು ಮನವಿ ಸಲ್ಲಿಸಿತ್ತು.

## ಚರ್ಚ್ ಮೇಲೆ ದಾಳಿ: ಶಂಕಿತರ ಬಂಧನ

**ಲಾಹೋರ್ (ಪಿಟಿಐ):** ಧರ್ಮನಿಂದನೆ ಆರೋಪದ ಹಿನ್ನೆಲೆಯಲ್ಲಿ ಪಂಜಾಬ್ ಪ್ರಾಂತ್ಯದ ಚರ್ಚ್‌ಗಳ ಮೇಲಿನ ದಾಳಿ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಮತ್ತಿಬ್ಬರು ಶಂಕಿತರನ್ನು ಬಂಧಿಸಿದ್ದಾರೆ. ಇದರೊಂದಿಗೆ ಬಂಧಿತರ ಸಂಖ್ಯೆ 145ಕ್ಕೇರಿದೆ ಎಂದು ಪಂಜಾಬ್ ಉಸ್ತುವಾರಿ ಮುಖ್ಯಮಂತ್ರಿ ಮೋಹ್ಸಿನ್ ನಖ್ವಿ ಹೇಳಿದ್ದಾರೆ.

ಶಂಕಿತರ ಬಂಧನದಲ್ಲಿ ಪ್ರಮುಖ ಪಾತ್ರ ವಹಿಸಿರುವ ಇನ್‌ಸ್ಪೆಕ್ಟರ್ ಜನರಲ್ ಆಫ್ ಪೊಲೀಸ್ ಮತ್ತು ಮುಖ್ಯ ಕಾರ್ಯದರ್ಶಿ ಅವರ ಕಾರ್ಯವನ್ನು ಶ್ಲಾಘಿಸಿರುವ ನಖ್ವಿ, ಘಟನೆಗೆ ಕಾರಣರಾದ ಆರೋಪಿಗಳು ಸದ್ಯ ಪೊಲೀಸ್ ವಶದಲ್ಲಿದ್ದಾರೆ ಎಂದು 'ಎಕ್ಸ್‌'ನಲ್ಲಿ ತಿಳಿಸಿದ್ದಾರೆ.

ಉದ್ರಿಕ್ತ ಗುಂಪು, ಫೈಸಲಾಬಾದ್ ಜಿಲ್ಲೆಯ ಜರನ್ವಾಲಾ ತಹಸಿಲ್‌ನಲ್ಲಿ 20 ಚರ್ಚ್‌ಗಳು ಮತ್ತು ಕ್ರೈಸ್ತ ಸಮುದಾಯದ 86 ಮನೆಗಳಿಗೆ ಬುಧವಾರ ಬೆಂಕಿ ಹಚ್ಚಿತ್ತು.

ಪಂಜಾಬ್ ಪೊಲೀಸರು 145 ಶಂಕಿತರನ್ನು ಬಂಧಿಸಿ, ಐದು ಪ್ರಕರಣಗಳನ್ನು ದಾಖಲಿಸಿದ್ದಾರೆ. ಬಂಧಿತರಲ್ಲಿ ಶಂಕಿತ ಮುಹಮ್ಮದ್ ಯಾಸಿನ್ ಸಹ ಸೇರಿದ್ದಾನೆ. ಆತ ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧ ಮುಸ್ಲಿಮರನ್ನು ಪ್ರಚೋದಿಸಲು ಮಸೀದಿಗಳ ಧ್ವನಿವರ್ಧಕಗಳಲ್ಲಿ ಘೋಷಣೆ ಮಾಡುತ್ತಿರುವುದು ಕಂಡುಬಂದಿದೆ. ದಾಳಿ ನಡೆಸಿದ ಉಗ್ರಗಾಮಿ ಗುಂಪು ತೆಹ್ರೀಕ್-ಎ-ಲಬ್ಬೈಕ್ ಪಾಕಿಸ್ತಾನ್ (ಟಿಎಲ್‌ಪಿ) ಕಾರ್ಯಕರ್ತರನ್ನು ಸಹ ಬಂಧಿಸಲಾಗಿದೆ.

ಅಲ್ಲದೆ ಕುರಾನ್ ಅಪವಿತ್ರಗೊಳಿಸಿದ ಆರೋಪದಲ್ಲಿ ಕ್ರೈಸ್ತ ಸಮುದಾಯದ ಇಬ್ಬರನ್ನು ಬಂಧಿಸಲಾಗಿದೆ.

ಜರನ್ವಾಲಾ ಘಟನೆಯನ್ನು ರಾಷ್ಟ್ರೀಯ ನಾಯಕರು ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳು ಖಂಡಿಸಿವೆ. ಚರ್ಚ್‌ಗಳು ಮತ್ತು ಮನೆಗಳ ಮೇಲೆ ದಾಳಿ ಮಾಡಿರುವುದಕ್ಕೆ ಅಮೆರಿಕ ತೀವ್ರ ಕಳವಳ ವ್ಯಕ್ತಪಡಿಸಿದೆ.

### 'ದುಷ್ಟಶಕ್ತಿ ಬೆಂಬಲಿಸಲ್ಲ'

**ಇಸ್ಲಾಮಾಬಾದ್ (ಪಿಟಿಐ):** ಮುಸ್ಲಿಂ ಬಹುಸಂಖ್ಯಾತ ದೇಶದ ಪಂಜಾಬ್ ಪ್ರಾಂತ್ಯದಲ್ಲಿ ಕ್ರೈಸ್ತರ ಮೇಲಿನ ದಾಳಿಯನ್ನು ಖಂಡಿಸಿದ ಪಾಕಿಸ್ತಾನದ ಹಂಗಾಮಿ ಪ್ರಧಾನಿ ಅನ್ವರುಲ್ ಹಖ್ ಕಾಕರ್, ಮಧ್ಯಂತರ ಸರ್ಕಾರ ಸಮಾಜದಲ್ಲಿನ ದುಷ್ಟ ಶಕ್ತಿ ಬೆಂಬಲಿಸುವುದಿಲ್ಲ ಎಂದು ಶುಕ್ರವಾರ ಹೇಳಿದ್ದಾರೆ.

ದೇಶದಲ್ಲಿ ಅಲ್ಪಸಂಖ್ಯಾತರಿಗೆ ರಕ್ಷಣೆ ನೀಡಲಾಗಿದೆ. ಕೆಲ ಗುಂಪುಗಳು ಅವರಿಗೆ ಹಾನಿ ಮಾಡುವ ಪ್ರಯತ್ನ ಮಾಡಬಹುದು. ಆದರೆ ಅದಕ್ಕೆ ತಕ್ಕ ಉತ್ತರ ನೀಡಲಾಗುವುದು ಎಂದು ಕಾಕರ್ ಅವರು ತಮ್ಮ ಚೊಚ್ಚಲ ಸಂಪುಟ ಸಭೆಯಲ್ಲಿ ಹೇಳಿದ್ದಾರೆ.

## 7 ಶಿಶುಗಳ ಕೊಂದ ನರ್ಸ್ ದೋಷಿ

**ಲಂಡನ್ (ಪಿಟಿಐ):** ಏಳು ನವಜಾತ ಶಿಶುಗಳನ್ನು ಕೊಂದ ಆರೋಪಿ ನರ್ಸ್ ದೋಷಿ ಎಂದು ನ್ಯಾಯಾಲಯ ಘೋಷಿಸಿದೆ. ನರ್ಸ್‌ಗೆ ಶಿಕ್ಷೆ ಕೊಡಿಸಲು ನೆರವಾದವರಲ್ಲಿ ಉತ್ತರ ಇಂಗ್ಲೆಂಡ್ ಆಸ್ಪತ್ರೆಯೊಂದರ ಭಾರತ ಮೂಲದ ಮಕ್ಕಳ ತಜ್ಞರೊಬ್ಬರೂ ಸೇರಿದ್ದಾರೆ.

ಲೂಸಿ ಲೆಟ್ಬಿ (33) ಏಳು ಶಿಶುಗಳ ಕೊಲೆ ಹಾಗೂ ಇತರ ಆರು ಶಿಶುಗಳ ಕೊಲೆ ಯತ್ನ ಪ್ರಕರಣದಲ್ಲಿ ದೋಷಿ ಎಂದು ಮ್ಯಾಂಚೆಸ್ಟರ್ ಕ್ರೌನ್ ಕೋರ್ಟ್ ತೀರ್ಪು ನೀಡಿದೆ. ನ್ಯಾಯಾಲಯ ಸೋಮವಾರ ಶಿಕ್ಷೆ ಪ್ರಕಟಿಸಲಿದೆ.

'ಸಹೋದ್ಯೋಗಿಯಾಗಿದ್ದ ನರ್ಸ್ ಲೂಸಿ ಲೆಟ್ಬಿ ಬಗ್ಗೆ ಪೊಲೀಸರಿಗೆ ಬೇಗ ಮಾಹಿತಿ ನೀಡಿದ್ದರೆ ಇನ್ನೂ ಕೆಲವು ಜೀವ ಉಳಿಸಬಹುದಿತ್ತು' ಎಂದು ಚೆಸ್ಟರ್ನ್ ಕೌಂಟೆಸ್ ಆಫ್ ಚೆಸ್ಟರ್ ಆಸ್ಪತ್ರೆಯ ಡಾ. ರವಿ ಜಯರಾಮ್ ಹೇಳಿದ್ದಾರೆ.

## ಸಿಎಜಿ ವರದಿ: ಹೊಣೆ ನಿಗದಿಗೆ ಗಡ್ಕರಿ ಸೂಚನೆ

**ನವದೆಹಲಿ:** ದ್ವಾರಕಾ ಎಕ್ಸ್‌ಪ್ರೆಸ್‌ವೇ ಅಭಿವೃದ್ಧಿ ವೆಚ್ಚ ಹೆಚ್ಚಳದ ಕುರಿತು ಮಹಾಲೇಖಪಾಲರು (ಸಿಎಜಿ) ಎತ್ತಿರುವ ಪ್ರಶ್ನೆಗಳಿಗೆ ತಮ್ಮ ಸಚಿವಾಲಯದ ಅಧಿಕಾರಿಗಳು ಸಮರ್ಪಕ ಉತ್ತರ ನೀಡದಿರುವ ಬಗ್ಗೆ ಕೇಂದ್ರ ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ.

'ಗುರುವಾರ ನಡೆದ ಉನ್ನತ ಮಟ್ಟದ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಗಡ್ಕರಿ, ಸಿಎಜಿ ವರದಿಯಲ್ಲಿ ಕೇಳಲಾಗಿರುವ ಪ್ರಶ್ನೆಗಳಿಗೆ ಸಂಬಂಧಪಟ್ಟ ಅಧಿಕಾರಿಗಳು ಉತ್ತರ ನೀಡುವಲ್ಲಿ ವಿಫಲರಾಗಿದ್ದಾರೆ ಎಂದು ತಮ್ಮ ಅಸಮಾಧಾನ ಹೊರ ಹಾಕಿದರು. ಕರ್ತವ್ಯಲೋಪ ಎಸಗಿರುವ ಹಿರಿಯ ಅಧಿಕಾರಿಗಳ ಮೇಲೆ ಹೊಣೆಗಾರಿಕೆ ನಿಗದಿಪಡಿಸುವಂತೆಯೂ ಸಚಿವ ಗಡ್ಕರಿ ಸೂಚಿಸಿದರು' ಎಂದು ಮೂಲಗಳು ಹೇಳಿವೆ.

### ಸಂಕ್ಷಿಪ್ತ ಸುದ್ದಿ

## ಪಾಕ್ ಪ್ರಧಾನಿಗೆ ಸಲಹೆಗಾರರಾಗಿ ಯಾಸಿನ್ ಪತ್ನಿ

**ಇಸ್ಲಾಮಾಬಾದ್ (ಪಿಟಿಐ):** ಕಾಶ್ಮೀರದ ಪ್ರತ್ಯೇಕತಾವಾದಿ ಯಾಸಿನ್ ಮಲಿಕ್ ಪತ್ನಿ ಮುಶಾಲ್ ಹುಸೇನ್ ಮಲಿಕ್ ಅವರನ್ನು ಪಾಕಿಸ್ತಾನದ ಹಂಗಾಮಿ ಪ್ರಧಾನಿ ಅನ್ವರುಲ್ ಹಖ್ ಕಾಕರ್ ಅವರ ವಿಶೇಷ ಸಲಹೆಗಾರರಾಗಿ ನೇಮಕ ಮಾಡಲಾಗಿದೆ.

ಅಧ್ಯಕ್ಷ ಆರಿಫ್ ಅಲ್ವಿ ಅವರು ಅಧ್ಯಕ್ಷೀಯ ಭವನವಾದ ಐವಾನ್-ಎ-ಸದರ್‌ನಲ್ಲಿ ಸಂಪುಟದ 19 ಹಂಗಾಮಿ ಸದಸ್ಯರಿಗೆ ಪ್ರಮಾಣ ವಚನ ಬೋಧಿಸಿದ ನಂತರ ಗುರುವಾರ ತಡರಾತ್ರಿ ಪ್ರಕಟವಾದ ಪ್ರಧಾನಿಯ ಐವರು ವಿಶೇಷ ಸಲಹೆಗಾರರ (ಎಸ್‌ಎಪಿಎಂ) ಪಟ್ಟಿಯಲ್ಲಿ ಮುಶಾಲ್ ಅವರ ಹೆಸರನ್ನು ಸೇರಿಸಲಾಗಿತ್ತು.

ಮುಶಾಲ್ ಮೂಲತಃ ಪಾಕಿಸ್ತಾನದ ಪ್ರಜೆಯಾಗಿದ್ದು, ಮಾನವ ಹಕ್ಕು ಮತ್ತು ಮಹಿಳಾ ಸಬಲೀಕರಣದ ವಿಷಯದಲ್ಲಿ ಪ್ರಧಾನಿಗೆ ಸಲಹೆಗಾರರಾಗಿ ಕಾರ್ಯ ನಿರ್ವಹಿಸಲಿದ್ದಾರೆ.

## 'ಇಮ್ರಾನ್ ಮೇಲೆ ಎಫ್‌ಐಆರ್'

**ಇಸ್ಲಾಮಾಬಾದ್ (ಪಿಟಿಐ):** ಭ್ರಷ್ಟಾಚಾರ ಪ್ರಕರಣದಲ್ಲಿ ಜೈಲುಪಾಲಾಗಿರುವ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ (70 )ಅವರಿಗೆ ಮತ್ತೊಂದು ಹಿನ್ನಡೆಯಾಗಿದ್ದು, ಅಮೆರಿಕದ ರಾಯಭಾರ ಕಚೇರಿಯ ಗೋಪ್ಯ ರಾಜತಾಂತ್ರಿಕ ಕೇಬಲ್ ವಿಷಯ ಬಹಿರಂಗಪಡಿಸಿರುವುದಕ್ಕೆ ಖಾನ್ ವಿರುದ್ಧ ಅಧಿಕೃತ ರಹಸ್ಯ ಕಾಯ್ದೆಯಡಿ ಸೈಫರ್ (ವರ್ಗೀಕೃತ ರಾಜತಾಂತ್ರಿಕ ದಾಖಲೆ) ಪ್ರಕರಣ ದಾಖಲಿಸಿರುವ ಸಂಗತಿ ಶುಕ್ರವಾರ ಹೊರಬಿದ್ದಿದೆ.

'ಸೈಫರ್ ಪ್ರಕರಣದಲ್ಲಿ ಅಧಿಕೃತ ರಹಸ್ಯ ಕಾಯ್ದೆ 1923ರ ಸೆಕ್ಷನ್ 5 ರ ಅಡಿಯಲ್ಲಿ ಎಫ್‌ಐಆರ್ ದಾಖಲಾಗಿದೆ' ಎಂದು ಮೂಲಗಳನ್ನು ಉಲ್ಲೇಖಿಸಿ 'ಜಿಯೋ ನ್ಯೂಸ್' ವರದಿ ಮಾಡಿದೆ.

## ಸಿಂಗಪುರ ಅಧ್ಯಕ್ಷ ಚುನಾವಣೆ: ಷಣ್ಮುಗರತ್ನಂ ಸ್ಪರ್ಧೆ

**ಸಿಂಗಪುರ (ಪಿಟಿಐ):** ಭಾರತ ಮೂಲದ, ಸಿಂಗಪುರ ಸಂಜಾತ ಹಾಗೂ ಮಾಜಿ ಸಚಿವ ಥರ್ಮನ್ ಷಣ್ಮುಗರತ್ನಂ ಮತ್ತು ಚೀನಾ ಮೂಲದ ಇಬ್ಬರು ಸರ್ಕಾರಿ ಕಂಪನಿಗಳ ಮಾಜಿ ಅಧಿಕಾರಿಗಳು ಸೆಪ್ಟೆಂಬರ್ 1 ರಂದು ನಡೆಯಲಿರುವ ಸಿಂಗಪುರ ಅಧ್ಯಕ್ಷೀಯ ಚುನಾವಣೆಗೆ ಸ್ಪರ್ಧಿಸಲು ಅರ್ಹತೆ ಪಡೆದಿರುವುದಾಗಿ ಶುಕ್ರವಾರ ಪ್ರಕಟಿಸಲಾಗಿದೆ.



ಇಂದಿನಿಂದ ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್: ಭರವಸೆ ಮೂಡಿಸಿರುವ ಭಾರತದ ಅಥ್ಲೀಟುಗಳು

# ನೀರಜ್ ಚೋಪ್ರಾ ಮೇಲೆ ನಿರೀಕ್ಷೆ

**ಬುಡಾಪೆಸ್ಟ್ (ಪಿಟಿಐ):** ಭಾರತದ ಜಾವೆಲಿನ್ ಥ್ರೋ ಸ್ಪರ್ಧಿ ನೀರಜ್ ಚೋಪ್ರಾ ಅವರು ಶನಿವಾರ ಇಲ್ಲಿ ಆರಂಭವಾಗಲಿರುವ ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕದ ನಿರೀಕ್ಷೆಯಲ್ಲಿದ್ದಾರೆ.

25 ವರ್ಷದ ಚೋಪ್ರಾ ಅವರು ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್ ಹೊರತು ಪಡಿಸಿ ಇತರ ಎಲ್ಲ ಪ್ರಮುಖ ಕೂಟಗಳಲ್ಲಿ ಚಿನ್ನ ಗೆದ್ದಿದ್ದಾರೆ. ಆದ್ದರಿಂದ ಈ ಬಾರಿ ಆ ಕೊರತೆ ನೀಗಿಸುವ ವಿಶ್ವಾಸದಲ್ಲಿ ಕಣಕ್ಕಿಳಿಯಲಿದ್ದಾರೆ. ಪುರುಷರ ಜಾವೆಲಿನ್ ಥ್ರೋ ಸ್ಪರ್ಧೆಯ ಅರ್ಹತಾ ಸುತ್ತು ಆ.25 ರಂದು ನಡೆಯಲಿದ್ದು, ಫೈನಲ್ ಆ.27 ಕ್ಕೆ ನಿಗದಿಯಾಗಿದೆ.

ಚೋಪ್ರಾ ಅವರು ಒಲಿಂಪಿಕ್ಸ್ (2021, ಟೋಕಿಯೊ), ಏಷ್ಯನ್ ಗೇಮ್ಸ್ (2018) ಮತ್ತು ಕಾಮನ್‌ವೆಲ್ತ್ ಕೂಟದಲ್ಲಿ (2018) ಚಿನ್ನ ಜಯಿಸಿದ್ದಾರೆ. ಕಳೆದ ವರ್ಷ ಡೈಮಂಡ್ ಲೀಗ್‌ನಲ್ಲಿ ಚಾಂಪಿಯನ್ ಆಗಿದ್ದರು.

2022 ರಲ್ಲಿ ಅಮೆರಿಕದಲ್ಲಿ ನಡೆದಿದ್ದ ವಿಶ್ವ ಅಥ್ಲೆಟಿಕ್ಸ್‌ನಲ್ಲಿ ಬೆಳ್ಳಿ ಜಯಿಸಿದ್ದ ಅವರು, ಈ ಬಾರಿ ಚಿನ್ನ ಗೆಲ್ಲುವ 'ಫೇವರಿಟ್' ಸ್ಪರ್ಧಿ ಎನಿಸಿಕೊಂಡಿದ್ದಾರೆ.

ಚೋಪ್ರಾ ಅವರು ಚಿನ್ನ ಗೆಲ್ಲುವಲ್ಲಿ ಯಶ ಕಂಡರೆ, ಶೂಟರ್ ಅಭಿನವ್ ಬಿಂದ್ರಾ ಬಳಿಕ ಒಲಿಂಪಿಕ್ಸ್ ಮತ್ತು ವಿಶ್ವ ಚಾಂಪಿಯನ್‌ಷಿಪ್‌ನ



ನೀರಜ್ ಚೋಪ್ರಾ

ವೈಯಕ್ತಿಕ ವಿಭಾಗದಲ್ಲಿ ಚಿನ್ನ ಗೆದ್ದ ಎರಡನೇ ಕ್ರೀಡಾಪಟು ಎನಿಸಲಿದ್ದಾರೆ. ಬಿಂದ್ರಾ ಅವರು 2008ರ ಒಲಿಂಪಿಕ್ಸ್‌ನಲ್ಲಿ ಮತ್ತು 2006ರಲ್ಲಿ ಯಾಗ್ರೆಬ್‌ನಲ್ಲಿ ನಡೆದಿದ್ದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಜಯಿಸಿದ್ದರು.

ಚೋಪ್ರಾ ಅವರು ಈ ವರ್ಷ ಎರಡು ಪ್ರಮುಖ ಕೂಟಗಳಲ್ಲಿ ಮಾತ್ರ ಪಾಲ್ಗೊಂಡಿದ್ದು, ಎರಡರಲ್ಲೂ ಚಿನ್ನ ಗೆದ್ದಿದ್ದಾರೆ. ದೋಹಾ (ಮೇ 5) ಮತ್ತು ಲುಸಾನ್ (ಜೂನ್ 30) ಡೈಮಂಡ್ ಲೀಗ್ ಕೂಟಗಳಲ್ಲಿ ಅವರು ಅಗ್ರಸ್ಥಾನ ಗಳಿಸಿದ್ದರು. ಇದೀಗ ಎರಡು ತಿಂಗಳ ವಿಶ್ರಾಂತಿ ಮತ್ತು ತರಬೇತಿಯ ಬಳಿಕ ಪ್ರಮುಖ ಕೂಟಕ್ಕೆ ಸಜ್ಜಾಗಿದ್ದಾರೆ.

ಗ್ರೆನೇಡಾದ ಆ್ಯಂಡರ್ಸನ್ ಪೀಟರ್ಸ್, ಜೆಕ್ ರಿಪಬ್ಲಿಕ್‌ನ ಯಾಕುಬ್ ವದ್ಲೇಚ್ ಮತ್ತು ಜರ್ಮನಿಯ ಜೂಲಿಯನ್ ವೆಬೆರ್ ಅವರು ಚೋಪ್ರಾಗೆ ಪೈಪೋಟಿ ನೀಡುವ ಸಾಧ್ಯತೆಯಿದೆ. ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಚೋಪ್ರಾ ಅಲ್ಲದೆ ಭಾರತದ ಡಿ.ಪಿ.ಮನು ಮತ್ತು ಕಿಶೋರ್ ಜೇನಾ ಅವರೂ ಸ್ಪರ್ಧಿಸಲಿದ್ದಾರೆ.

ಪುರುಷರ ಲಾಂಗ್‌ಜಂಪ್‌ನಲ್ಲಿ ಜೆಸ್ವಿನ್ ಆಲ್ಡ್ರಿನ್ ಮತ್ತು ಮುರಳಿ ಶ್ರೀಶಂಕರ್ ಅವರು ಪದಕದ ಭರವಸೆ ಮೂಡಿಸಿದ್ದಾರೆ.

ಮೊದಲ ದಿನವಾದ ಶನಿವಾರ 20 ಕಿ.ಮೀ ನಡಿಗೆ ಸ್ಪರ್ಧೆಯಲ್ಲಿ ಆಕಾಶ್‌ದೀಪ್ ಸಿಂಗ್, ವಿಕಾಶ್ ಸಿಂಗ್ ಮತ್ತು ಪರಮ್‌ಜೀತ್ ಸಿಂಗ್ ಅವರು ಸ್ಪರ್ಧಿಸುವರು.

ಮಹಿಳೆಯರ ಲಾಂಗ್‌ಜಂಪ್‌ನಲ್ಲಿ ಶೈಲಿ ಸಿಂಗ್, ಪುರುಷರ 1,500 ಮೀ. ಓಟದ ಹೀಟ್ಸ್‌ನಲ್ಲಿ ಅಜಯ್ ಕುಮಾರ್ ಸರೋಜ್, ಪುರುಷರ 3,000 ಮೀ. ಸ್ಟೀಪಲ್‌ಚೇಸ್‌ನಲ್ಲಿ ಅವಿನಾಶ್ ಸಬ್ಲೆ ಕಣಕ್ಕಿಳಿಯುವರು. ಪ್ರವೀಣ್ ಚಿತ್ರವೇಲ್, ಅಬ್ದುಲ್ಲಾ ಅಬೂಬಕರ್ ಮತ್ತು ಎಲ್ದೋಸ್ ಪಾಲ್ ಅವರು ಟ್ರಿಪಲ್‌ಜಂಪ್ ಅರ್ಹತಾ ಸುತ್ತಿನಲ್ಲಿ ಸ್ಪರ್ಧಿಸುವರು.

### ಜೇನಾಗೆ ಹಂಗೇರಿ ವೀಸಾ

**ನವದೆಹಲಿ (ಪಿಟಿಐ):** ಭಾರತದ ಜಾವೆಲಿನ್ ಥ್ರೊ ಸ್ಪರ್ಧಿ ಕಿಶೋರ್ ಜೇನಾ ಅವರಿಗೆ ಕೊನೆಗೂ ಹಂಗೇರಿಯ ವೀಸಾ ದೊರಕಿದೆ. ಹೀಗಾಗಿ ಅವರು ಆ ದೇಶದ ಬುಡಾಪೆಸ್ಟ್‌ನಲ್ಲಿ ಆಗಸ್ಟ್ 19 ರಿಂದ 27ರವರೆಗೆ ನಡೆಯಲಿರುವ ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸುವ ದಾರಿ ಸುಗಮವಾಗಿದೆ.

ಶುಕ್ರವಾರ ಬೆಳಿಗ್ಗೆ ಹಂಗೇರಿಯ ರಾಯಭಾರ ಕಚೇರಿಯಲ್ಲಿ ವೀಸಾ ಸಂದರ್ಶನ ನಡೆದಿದೆ ಎಂದು ಭಾರತ ಅಥ್ಲೆಟಿಕ್ ಫೆಡರೇಷನ್ ಮೂಲವೊಂದು ತಿಳಿಸಿದೆ. ಕಳೆದ ಬುಧವಾರ ಅವರ ಹಂಗೇರಿ ವೀಸಾವನ್ನು ರದ್ದುಗೊಳಿಸಲಾಗಿತ್ತು. ಕಿಶೋರ್ ಪರವಾಗಿ ಒಲಿಂಪಿಕ್ ಚಾಂಪಿಯನ್ ನೀರಜ್ ಚೋಪ್ರಾ ಅವರು ಈ ಬಗ್ಗೆ ಪರಿಹಾರ ಕಂಡುಹುಡುಕುವಂತೆ ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಅವರಿಗೆ ಮನವಿ ಮಾಡಿದ್ದರು.

## ಪಿಸ್ತೂಲ್ ಶೂಟಿಂಗ್: ಭಾರತ ಮಿಕ್ಸೆಡ್ ತಂಡಕ್ಕೆ ಚಿನ್ನ

**ಬಾಕು (ಪಿಟಿಐ):** ಶೂಟರ್‌ಗಳಾದ ಇಶಾ ಸಿಂಗ್ ಮತ್ತು ಶಿವ ನರ್ವಾಲ್ ಅವರು ಭಾರತದ ಪಾಳೆಯದಲ್ಲಿ ಕೊನೆಗೂ ಸಂಭ್ರಮ ಮೂಡಿಸಿದರು. ವಿಶ್ವ ಶೂಟಿಂಗ್ ಚಾಂಪಿಯನ್‌ಷಿಪ್‌ನ ಎರಡನೇ ದಿನವಾದ ಶುಕ್ರವಾರ ಇವರಿಬ್ಬರು 10 ಮೀ. ಏರ್ ಪಿಸ್ತೂಲ್ ಮಿಕ್ಸೆಡ್ ಟೀಮ್ ವಿಭಾಗದಲ್ಲಿ ಟರ್ಕಿಯ ಎದುರಾಳಿಗಳನ್ನು ಸೋಲಿಸಿ ಚಿನ್ನದ ಪದಕ ಗೆದ್ದುಕೊಂಡರು.

ಇಶಾ- ಶಿವ ಜೋಡಿ ಫೈನಲ್‌ನಲ್ಲಿ 16–10 ರಿಂದ ಟರ್ಕಿಯ ಜೋಡಿ ಇಲ್ಯಾದ ತರ್ಹಾನ್ ಮತ್ತು ಯೂಸುಫ್ ಡಿಕೆಕ್ ಅವರನ್ನು ಸೋಲಿಸಿತು. ಭಾರತ ಇದರೊಂದಿಗೆ ಈ ಕೂಟದಲ್ಲಿ ಎರಡನೇ ಪದಕ ಗಳಿಸಿದಂತಾಯಿತು. ಗುರುವಾರ 10 ಮೀ. ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಪುರುಷರ ತಂಡ ಕಂಚು ಗೆದ್ದಿತ್ತು.

ಚೀನಾ ತಂಡ ಐದು ಚಿನ್ನ ಮತ್ತು ಎರಡು ಕಂಚಿನ ಪದಕಗಳನ್ನು ಗಳಿಸಿ ಎಲ್ಲರಿಗಿಂತ ಮೇಲಿದೆ.

ಕ್ವಾಲಿಫಿಕೇಷನ್ ಸುತ್ತಿನಲ್ಲಿ ಇಶಾ 290 ಮತ್ತು ನರ್ವಾಲ್ 293 ಪಾಯಿಂಟ್ಸ್ ಗಳಿಸಿ ಒಟ್ಟು 538 ಪಾಯಿಂಟ್ಸ್ ಕಲೆಹಾಕಿದ್ದು ಮೊದಲ ಸ್ಥಾನ ಗಳಿಸಿತ್ತು.

ಆದರೆ ರೈಫಲ್ ಶೂಟಿಂಗ್ ವಿಭಾಗದಲ್ಲಿ ಭಾರತದ ಪ್ರದರ್ಶನ ಕಳಪೆಯಾಗಿತ್ತು. ಮಹಿಳೆಯರ ಸ್ಕೀಟ್ ವಿಭಾಗದಲ್ಲಿ ಭಾರತ ತಂಡ ನಾಲ್ಕನೇ ಸ್ಥಾನ ಪಡೆಯಿತು. ಅಮೆರಿಕ ಇಲ್ಲಿ ಚಿನ್ನದ ಪದಕ ಪಡೆದರೆ, ಇಟಲಿ ಬೆಳ್ಳಿಯ ಪದಕ ಕೊರಳಿಗೇರಿಸಿಕೊಂಡಿತು.

ಭಾರತದ ರೈಫಲ್ ಶೂಟರ್‌ಗಳು 10 ಮೀ. ಏರ್ ರೈಫಲ್ ಮಿಕ್ಸೆಡ್ ತಂಡ ವಿಭಾಗದಲ್ಲಿ ಅರ್ಹತಾ ಹಂತವನ್ನು ದಾಟಲು ವಿಫಲರಾದರು.



# ಕ್ರೀಡಾ ಶ್ರೇಷ್ಠತಾ ಕೇಂದ್ರ ಪ್ರವೇಶಕ್ಕೂ ಶಿಫಾರಸು!

• ವಿಶೇಷ ವರದಿ

**ಬೆಂಗಳೂರು:** ವಿದ್ಯಾನಗರದ ಕ್ರೀಡಾಶಾಲೆ ಆವರಣದಲ್ಲಿರುವ ಖೇಲೊ ಇಂಡಿಯಾದ ರಾಜ್ಯ ಸೆಂಟರ್ ಆಫ್ ಎಕ್ಸಲೆನ್ಸ್‌ನ (ಶ್ರೇಷ್ಠತಾ ಕೇಂದ್ರ) ಗುರಿ ಗುಣಮಟ್ಟದ ಅಥ್ಲೀಟುಗಳನ್ನು ರೂಪಿಸುವುದು. ಇಲ್ಲಿ ಪ್ರವೇಶ ಪಡೆಯಲು ಟ್ರಯಲ್ಸ್ ಸೇರಿದಂತೆ ಮಾನದಂಡಗಳಿವೆ. ಆದರೆ ಈಗ ಶಿಫಾರಸಿನ ಮೇಲೆ ಅಥ್ಲೀಟುಗಳಿಗೆ ಪ್ರವೇಶ ನೀಡುವ ಪರಿಪಾಟ ಆರಂಭವಾಗಿದೆ.

2022ರಲ್ಲಿ ಆರಂಭವಾದ ಈ ಕೇಂದ್ರದಲ್ಲಿ ಅಥ್ಲೆಟಿಕ್ಸ್, ಶೂಟಿಂಗ್ ಮತ್ತು ಈಜು ತರಬೇತಿ ನೀಡಲಾಗುತ್ತಿದೆ. 14 ರಿಂದ 23 ವರ್ಷದೊಳಗಿನ ಕ್ರೀಡಾಪಟುಗಳು ಇಲ್ಲಿ ತರಬೇತಿ ಪಡೆಯಲು ಅವಕಾಶವಿದೆ.

ಅಥ್ಲೆಟಿಕ್ಸ್‌ನಲ್ಲಿ ಒಬ್ಬರು ಮತ್ತು ಶೂಟಿಂಗ್‌ನಲ್ಲಿ ಒಬ್ಬರು ಈ ರೀತಿ ಶಿಫಾರಸು ಮೂಲಕ ಈಗಾಗಲೇ 'ನೇರ ಪ್ರವೇಶ' ಪಡೆದಿದ್ದಾರೆ. ಮೈಸೂರು ಸಂಸದ ಪ್ರತಾಪ ಸಿಂಹ ಶಿಫಾರಸಿನ ಈ ಇಬ್ಬರು ಪ್ರವೇಶ ಪಡೆದಿದ್ದಾರೆ ಎಂದು ಮೂಲಗಳು ಖಚಿತಪಡಿಸಿವೆ. ಸಚಿವ ಚಲುವರಾಯ ಸ್ವಾಮಿ ಅವರೂ ಶಿಫಾರಸು ಪತ್ರ ಕಳಿಸಿದ್ದರು. ಆದರೆ ಈಗ ಆ ಅಥ್ಲೀಟ್‌ಗೆ ಟ್ರಯಲ್ಸ್ ನಡೆಸಲು ನಿರ್ಧರಿಸಲಾಗಿದೆ.


ವಿದ್ಯಾನಗರದ ಕ್ರೀಡಾಶಾಲೆ ಆವರಣದಲ್ಲಿರುವ ಖೇಲೊ ಇಂಡಿಯಾ ಕ್ರೀಡಾ ಶ್ರೇಷ್ಠತಾ ಕೇಂದ್ರದಲ್ಲಿ ನಿರ್ಮಾಣ ಹಂತದಲ್ಲಿರುವ ಈಜುಕೊಳ

> **ಸೆಂಟರ್ ಆಫ್ ಎಕ್ಸಲೆನ್ಸ್‌ಗೆ ನಿಯಮಾವಳಿಗಳ ಪ್ರಕಾರವೇ ಪ್ರವೇಶ ನೀಡಬೇಕು. ಶಿಫಾರಸಿನ ಮೇಲೆ ಪ್ರವೇಶ ಪಡೆದ ವಿಷಯ ನನ್ನ ಗಮನಕ್ಕೆ ಬಂದಿಲ್ಲ. ನಾನು ಇದನ್ನು ಪರಿಶೀಲನೆ ಮಾಡುತ್ತೇನೆ.**
> **ಬಿ.ನಾಗೇಂದ್ರ,** ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಚಿವ

> **ಶೂಟಿಂಗ್ ಕೋಚ್ ಪ್ರಕಾಶ್ ನಂಜಪ್ಪ ಅವರು ಭೋಪಾಲ್ ಕೇಂದ್ರಕ್ಕೆ ನಿಯೋಜನೆ ಕೇಳಿದ್ದರು. ಆದರೆ ನಮ್ಮಲ್ಲಿ ಅದಕ್ಕೆ ಅವಕಾಶವಿರಲಿಲ್ಲ.**
> **ಶಶಿಕಲಾ** ಸಹಾಯಕ ನಿರ್ದೇಶಕಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು ನಗರ ಜಿಲ್ಲೆ

ಈ ರೀತಿ ನೇರ ಪ್ರವೇಶ ನೀಡುತ್ತಿದ್ದರೆ ಅರ್ಹ ಕ್ರೀಡಾಪಟುಗಳು ಪ್ರತಿಭೆಯಿದ್ದರೂ ಅವಕಾಶ ವಂಚಿತರಾಗುತ್ತಾರೆ. ಟ್ರಯಲ್ಸ್ ಅರ್ಥ ಕಳೆದುಕೊಳ್ಳುತ್ತದೆ ಎನ್ನುವ ಕಳವಳ ಹಿರಿಯ ಕ್ರೀಡಾಪಟುಗಳದ್ದು.

ಶಿಫಾರಸಿನ ಮೇಲೆ ಪ್ರವೇಶ ನೀಡಿರುವ ಪ್ರಕರಣದ ಬಗ್ಗೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯುಕ್ತ ಎನ್. ಶಶಿಕುಮಾರ್ ಪ್ರತಿಕ್ರಿಯೆ ಪಡೆಯಲು ಯತ್ನಿಸಿದರೂ ಅವರು ಲಭ್ಯರಾಗಲಿಲ್ಲ.

**ಸರಿಯಲ್ಲ:** 'ಕ್ರೀಡೆಯಲ್ಲಿ ಈ ರೀತಿ ಮಾಡಲೇಬಾರದು. ಅರ್ಹತೆ ಇರುವವರಿಗೆ ಅವಕಾಶ ನೀಡಬೇಕು. ಇಂಥದ್ದು ನಡೆದರೆ ಕ್ರೀಡೆಯಲ್ಲಿ ಆಸಕ್ತಿಯಿರುವ ತಮ್ಮ ಮಕ್ಕಳನ್ನು ಇಲ್ಲಿಗೆ ಸೇರಿಸಲು ಪೋಷಕರು ಮುಂದೆ ಬರುವುದಿಲ್ಲ' ಎಂದು ಹಿರಿಯ ಅಥ್ಲೀಟ್ ಅಶ್ವಿನಿ ನಾಚಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.

'ಈ ರೀತಿ ಶಿಫಾರಸಿನ ಮೇಲೆ ಪ್ರವೇಶ ನೀಡಿದರೆ ಅರ್ಹ ಪ್ರತಿಭಾನ್ವಿತ ಮಕ್ಕಳಿಗೆ ಅನ್ಯಾಯವಾಗುತ್ತದೆ. ಇದು ಸರಿಯಾದ ಕ್ರಮವೇ ಅಲ್ಲ' ಎಂದು ದ.ಕ. ಜಿಲ್ಲಾ ಅಥ್ಲೆಟಿಕ್ ಸಂಸ್ಥೆ ಅಧ್ಯಕ್ಷ ಹಾಗೂ ವಿಧಾನಪರಿಷತ್ ಸದಸ್ಯ ಮಂಜುನಾಥ ಭಂಡಾರಿ ಹೇಳಿದರು. ಅವರು ರಾಜ್ಯ ಅಥ್ಲೆಟಿಕ್ ಸಂಸ್ಥೆ ಉಪಾಧ್ಯಕ್ಷರಾಗಿದ್ದಾರೆ.

### ನಿರ್ಮಾಣ ಹಂತದಲ್ಲಿ 50 ಮೀ. ಈಜುಕೊಳ

ವಿದ್ಯಾನಗರದ ಕ್ರೀಡಾಶಾಲೆಯ ಆವರಣದಲ್ಲಿ ಉತ್ತಮವಾಗಿ ನಿರ್ವಹಣೆಯಾಗುತ್ತಿರುವ 25 ಮೀ. ಈಜುಕೊಳ ಇದೆ. ಆದರೆ 50 ಮೀ. ಈಜುಕೊಳದ ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲ. ಇದು ಏಪ್ರಿಲ್‌ನಲ್ಲೇ ಪೂರ್ಣಗೊಳ್ಳಬೇಕಿತ್ತು. ಶೂಟಿಂಗ್ ಅರೇನಾ ಕೆಲಸವೂ ನಡೆಯುತ್ತಿದೆ.

ಇಲ್ಲಿ ಕೆಲಕಾಲ ಕೆಲಸ ಮಾಡಿದ್ದ ಹೆಸರಾಂತ ಶೂಟಿಂಗ್ ಕೋಚ್, ಒಲಿಂಪಿಯನ್ ಪ್ರಕಾಶ್ ನಂಜಪ್ಪ ಎರಡು ತಿಂಗಳ ಹಿಂದೆ ಭೋಪಾಲ್‌ನ ಕೇಂದ್ರಕ್ಕೆ ತೆರಳಿದ್ದಾರೆ. ಪೌಷ್ಟಿಕಾಂಶ ತಜ್ಞರ ಹುದ್ದೆಯೂ ಖಾಲಿಯಿದೆ.

ಶೂಟಿಂಗ್ ತರಬೇತಿಯಲ್ಲಿರುವ 10 ಮಂದಿ ಅಭ್ಯಾಸ ನಡೆಸಲು ಕೆಂಗೇರಿಯ ಭಾರತ ಕ್ರೀಡಾ ಪ್ರಾಧಿಕಾರದ ಕೇಂದ್ರಕ್ಕೆ ತೆರಳಿ ಅಲ್ಲಿನ ಸೌಲಭ್ಯ ಬಳಸಬೇಕಾಗಿದೆ. ಇನ್ನು ಸಿಂಥೆಟಿಕ್ ಟ್ರ್ಯಾಕ್ ಬಳಿಯಿರುವ ಹ್ಯಾಮರ್ ಕೇಜ್ ತಿಂಗಳ ಹಿಂದೆಯೇ ಮುರಿದುಬಿದ್ದಿದೆ.

ಈಜಿನಲ್ಲಿ ನಾಲ್ಕು ಮಂದಿ, ಅಥ್ಲೆಟಿಕ್ಸ್‌ನಲ್ಲಿ 25 ಮಂದಿ ಸದ್ಯ ತರಬೇತಿಯಲ್ಲಿದ್ದಾರೆ. ಉಳಿದಂತೆ ಉಳಿದುಕೊಳ್ಳಲು ಸುಸಜ್ಜಿತ ಹಾಸ್ಟೆಲ್ ವ್ಯವಸ್ಥೆ, ಜಿಮ್, ಸ್ಪಾ, ಯೋಗ ಕೇಂದ್ರ, ಸಿಂಥೆಟಿಕ್ ಟ್ರ್ಯಾಕ್ ಎಲ್ಲವೂ ಇದೆ.

## ಕುಸ್ತಿ: ಪಂಘಲ್ ಐತಿಹಾಸಿಕ ಸಾಧನೆ


ಅಂತಿಮ್ ಪಂಘಲ್

**ಅಮ್ಮಾನ್, ಜೋರ್ಡನ್ (ಪಿಟಿಐ):** ಅಂತಿಮ್ ಪಂಘಲ್ ಅವರು ಜೂನಿಯರ್ (20 ವರ್ಷದೊಳಗಿನವರ) ಕುಸ್ತಿ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಸತತ ಎರಡು ಬಾರಿ ಚಿನ್ನ ಗೆದ್ದ ಭಾರತದ ಮೊದಲ ಕುಸ್ತಿಪಟು ಎಂಬ ಐತಿಹಾಸಿಕ ಸಾಧನೆ ತಮ್ಮದಾಗಿಸಿಕೊಂಡರು.

ಶುಕ್ರವಾರ ಇಲ್ಲಿ ನಡೆದ ಮಹಿಳೆಯರ 53 ಕೆ.ಜಿ. ವಿಭಾಗದ ಫೈನಲ್‌ನಲ್ಲಿ ಉಕ್ರೇನ್‌ನ ಮರಿಯಾ ಯೆಫ್ರೆಮೋವಾ ವಿರುದ್ಧ 4–0 ರಲ್ಲಿ ಗೆದ್ದು ಚಾಂಪಿಯನ್ ಆದರು. ಕಳೆದ ವರ್ಷ ನಡೆದಿದ್ದ ಕೂಟದಲ್ಲೂ ಅವರು ಇದೇ ವಿಭಾಗದಲ್ಲಿ ಚಿನ್ನ ಜಯಿಸಿದ್ದರು. ಪಂಘಲ್ ಅವರು ಈ ಕೂಟದಲ್ಲಿ ಕೇವಲ 2 ಪಾಯಿಂಟ್ಸ್‌ಗಳನ್ನು ಮಾತ್ರ ಎದುರಾಳಿಗೆ ಬಿಟ್ಟುಕೊಟ್ಟಿದ್ದಾರೆ.

**ರೀನಾಗೆ ಕಂಚು:** ರೀನಾ ಅವರು 57 ಕೆ.ಜಿ. ವಿಭಾಗದಲ್ಲಿ 9–4 ರಿಂದ ಕಜಕಸ್ತಾನದ ಶುಗಿಲಾ ಒಮಿರ್‌ಬೆಕ್ ವಿರುದ್ಧ ಗೆದ್ದು ಕಂಚು ತಮ್ಮದಾಗಿಸಿಕೊಂಡರು.

## ಡುರಾಂಡ್: ಮತ್ತೆ ಡ್ರಾ ಸಾಧಿಸಿದ ಬಿಎಫ್‌ಸಿ ತಂಡ

**ಕೋಲ್ಕತ್ತ (ಪಿಟಿಐ):** ಬೆಂಗಳೂರು ಎಫ್.ಸಿ ತಂಡವು ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ 2–2ರಿಂದ ಕೇರಳ ಬ್ಲಾಸ್ಟರ್ಸ್ ಎಫ್.ಸಿ ತಂಡದೊಂದಿಗೆ ಡ್ರಾ ಸಾಧಿಸಿತು.

ಶುಕ್ರವಾರ ನಡೆದ ಪಂದ್ಯದಲ್ಲಿ ಇಮ್ಯಾನುಯೆಲ್ ಜಸ್ಟಿನ್ 14ನೇ ನಿಮಿಷದಲ್ಲಿ ಗೋಲು ದಾಖಲಿಸಿ ಕೇರಳ ತಂಡಕ್ಕೆ ಮುನ್ನಡೆ ಒದಗಿಸಿದರು. ಬೆಂಗಳೂರು ತಂಡದ ಎಡ್ಮಂಡ್ ಲಾಲ್ರಿಂಡಿಕಾ (38ನೇ) ಚೆಂಡನ್ನು ಗುರಿ ಸೇರಿಸಿ ಸಮಬಲ ಸಾಧಿಸಿದರು. ಬಳಿಕ ಆಶಿಶ್ ಝಾ (52ನೇ) ಗೋಲು ತಂದಿತ್ತು, ಬೆಂಗಳೂರು ತಂಡಕ್ಕೆ ಮುನ್ನಡೆ ಕಲ್ಪಿಸಿದರು. ಆದರೆ, ಪಂದ್ಯದ ಕೊನೆಯಲ್ಲಿ ಕೇರಳ ತಂಡ, ಮೊಹಮ್ಮದ್ ಐಮೆನ್ (84ನೇ) ಗಳಿಸಿದ ಗೋಲಿನಿಂದ ಸಮಬಲ ಸಾಧಿಸಿತು.

**ಚೆನ್ನೈಯಿನ್‌ಗೆ ಜಯ:** ಮತ್ತೊಂದು ಪಂದ್ಯದಲ್ಲಿ ಚೆನ್ನೈಯಿನ್ ಎಫ್‌ಸಿ ತಂಡವು 2–1ರಿಂದ ಡೆಲ್ಲಿ ಎಫ್‌ಸಿ ತಂಡವನ್ನು ಮಣಿಸಿತು.

## ಸ್ಪೋರ್ಟಿಂಗ್ ಕ್ಲಬ್ ತಂಡಕ್ಕೆ ಗೆಲುವು

**ಬೆಂಗಳೂರು:** ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 3–0ಯಿಂದ ಎಚ್‌ಎಎಲ್ ಎಫ್.ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಸ್ಪೋರ್ಟಿಂಗ್ ಕ್ಲಬ್ ತಂಡದ ಥೋಮಿಯೋಲ್ ಶಿಮ್ರೆ (53ನೇ), ಓ.ಎಂ. ಆಸೀಫ್ (55ನೇ) ಸೈಯ್ಯದ್ ಉಮೈರ್ (90 + 3ನೇ) ಗೋಲು ದಾಖಲಿಸಿದರು.

ಮತ್ತೊಂದು ಪಂದ್ಯದಲ್ಲಿ ಎಫ್‌ಸಿ ಡೆಕ್ಕನ್ ತಂಡವು 1–1ರಿಂದ ಎಂಇಜಿ ಅಂಡ್ ಸೆಂಟರ್ ಎಫ್.ಸಿ ತಂಡದೊಂದಿಗೆ ಡ್ರಾ ಸಾಧಿಸಿತು. ಡೆಕ್ಕನ್‌ನ ಆಲ್ವಿನ್ ಆಂಟೋನಿ (68ನೇ), ಎಂಇಜಿ ತಂಡದ ಆಯುಷ್ (45 + 2ನೇ) ಗೋಲು ಗಳಿಸಿದರು.

ಶನಿವಾರ, 19 ಆಗಸ್ಟ್ 2023
ಪ್ರಜಾವಾಣಿ
ಪ್ರಜಾ ಪ್ಲಸ್+
ಮನರಂಜನೆ | ಜಾಹೀರಾತು ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ




'ಫ್ರೇಮ್ಸ್ 2023' ಇಂದಿನಿಂದ ಛಾಯಾಚಿತ್ರ ಪ್ರದರ್ಶನ


A BRAND OF SSKL
ಶ್ರಾವಣ ಸಂಭ್ರಮ
ಮದುವೆಯಾಗಲಿ ಹಬ್ಬವಾಗಲಿ
KLM ಖಚಿತವಾಗಿ
ಕೆ.ಎಲ್.ಎಂ ಫ್ಯಾಷನ್ ಮಾಲ್
ರೇಷ್ಮೆ ಸೀರೆಗಳು
FLAT 50% OFF
ಹೆಚ್ಚು ಖರೀದಿಸಿ, ಹೆಚ್ಚು ಪಡೆಯಿರಿ
10% OFF
ರೂ. 10,000/–ವರೆಗಿನ ಖರೀದಿಯ ಮೇಲೆ
15% OFF
ರೂ. 10,001/– ಮತ್ತು ಹೆಚ್ಚಿನ ಖರೀದಿಯ ಮೇಲೆ
ಫ್ಯಾನ್ಸಿ ಸೀರೆಗಳು
4 @ ₹999
ಮಾರ್ಬಲ್ ಷಿಫಾನ್ ಕಸ್ತೂರಿ ಸಿಲ್ಕ್
3 @ ₹999
ಲಿಚಿ ಸಿಲ್ಕ್ ಬ್ರೊಕೇಡ್, ಶೈನಿಂಗ್ ಜಾರ್ಜೆಟ್, ಡಿಸೈನರ್ ಬ್ಲೌಸ್ ಸೀರೆ
ಶ್ರಾವಣ ಸ್ಪೆಷಲ್
30% OFF
ಸೀರೆಗಳು, ಮಹಿಳೆಯರು, ಪುರುಷರು ಮತ್ತು ಮಕ್ಕಳ ಉಡುಪುಗಳು
(ಆಯ್ದ ಶ್ರೇಣಿಯ ಮೇಲೆ)
50% OFF & BUY 1 GET 1
ಆಯ್ದ ಶ್ರೇಣಿಯ ಮೇಲೆ
ಮಹಿಳೆಯರ ಉಡುಪುಗಳು
6 @ ₹999
ಪ್ಲಾಝೋಸ್
3 @ ₹699
ವೆಸ್ಟರ್ನ್ ಟಾಪ್ಸ್ ಕುರ್ತೀಸ್
ಮೆನ್ಸ್‌ವೇರ್
4 @ ₹999
ಟಿ–ಷರ್ಟ್ಸ್
2 @ ₹1299
ಕಾಟನ್ ಟ್ರೌಸರ್ಸ್ (or) ಷರ್ಟ್ಸ್
ಕಿಡ್ಸ್‌ವೇರ್
6 @ ₹999
ಬಾಲಕಿಯರ ಟಾಪ್ಸ್, ಪ್ಲಾಝೋಸ್ ಬಾಲಕರ ಷಾರ್ಟ್ಸ್, ಟಿ–ಷರ್ಟ್ಸ್
2 @ ₹799
ಬಾಲಕರ ಟಿ–ಷರ್ಟ್ಸ್ ಬಾಲಕಿಯರ ಟಾಪ್ಸ್
ಇಂತಹ ಅದ್ಭುತವಾದ ಕೊಡುಗೆಗಳು ಇನ್ನಷ್ಟು... ಮತ್ತಷ್ಟು....!
*ಎಲ್ಲಾ ಕೊಡುಗೆಗಳು ಆಯ್ದ ಉಡುಪುಗಳಿಗೆ ಮಾತ್ರ ಅನ್ವಯ
*T&C APPLY
ಶಾಪಿಂಗ್ ನೊಂದಿಗೆ ರಿವಾರ್ಡ್ಸ್ ಪಡೆಯಿರಿ
ಸ್ಮೈಲ್ ರಿವಾರ್ಡ್ಸ್
ಜಯನಗರ 5ನೇ ಬ್ಲಾಕ್: 080 4374 6551 | ಮಾರತ್‌ಹಳ್ಳಿ: 080 4374 6553 | ಹೆಚ್.ಎಸ್.ಆರ್. ಲೇಔಟ್: 080 4374 6552
SCAN FOR STORE LOCATIONS


A BRAND OF SSKL
SAI SILKS (KALAMANDIR) LIMITED
ಶ್ರಾವಣ ಮಾಸದ ವಿವಾಹ ಮತ್ತು ಹಬ್ಬಗಳ ವಿಶೇಷ ಸಂಗ್ರಹ
UP TO 30% OFF
ರೇಷ್ಮೆ ಸೀರೆಗಳು, ಫ್ಯಾನ್ಸಿ ಸೀರೆಗಳು, ಡ್ರೆಸ್ ಮೆಟೀರಿಯಲ್ಸ್, ಮೆನ್ಸ್‌ವೇರ್ ಮತ್ತು ಕಿಡ್ಸ್‌ವೇರ್‌ಗಳ ಮೇಲೆ
SCAN AND VISIT OUR WEBSITE FOR STORE LOCATIONS.
ಕಮ್ಮನಹಳ್ಳಿ : 091089 36060, ಮಾರತ್‌ಹಳ್ಳಿ : 091489 46060
ಈ ಕೊಡುಗೆಗಳು ಮಾರತ್‌ಹಳ್ಳಿ ಮತ್ತು ಕಮ್ಮನಹಳ್ಳಿ ಸ್ಟೋರ್ಸ್‌ನಲ್ಲಿ ಮಾತ್ರ
kalamandir Kalamandirfashions
ಕಳಾಮಂದಿರ್
Symbol Of South

ಶನಿವಾರ, 19 ಆಗಸ್ಟ್ 2023
ಪ್ರಜಾ ವಾಣಿ
ಮನರಂಜನೆ | ಜಾಹೀರಾತು ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ

# ಪ್ರಜಾ ಪ್ಲಸ್+

ಇಂದು ವಿಶ್ವ ಛಾಯಾಗ್ರಹಣ ದಿನ

## ‘ಫ್ರೇಮ್ಸ್ 2023’

## ಇಂದಿನಿಂದ ಛಾಯಾಚಿತ್ರ ಪ್ರದರ್ಶನ

ಯೂತ್ ಫೋಟೋಗ್ರಾಫಿಕ್ ಸೊಸೈಟಿ (YPS) ವಿಶ್ವ ಛಾಯಾಗ್ರಹಣ ದಿನದ ಪ್ರಯುಕ್ತ ಇಂದು (ಆಗಸ್ಟ್ 19) ಚಿತ್ರಕಲಾ ಪರಿಷತ್ತಿನಲ್ಲಿ ಛಾಯಾಚಿತ್ರ ಪ್ರದರ್ಶನ ಹಾಗೂ ಉಚಿತ ಕಾರ್ಯಾಗಾರವನ್ನು ಆಯೋಜಿಸಿದೆ.

‘ಫ್ರೇಮ್ಸ್ 2023 - ವಿಷುಯಲ್ ವಾಯೇಜಸ್’ ಹೆಸರಿನಲ್ಲಿ ಯೂಥ್ ಫೋಟೊಗ್ರಾಫಿಕ್ ಸೊಸೈಟಿ ಸದಸ್ಯರು ತೆಗೆದ 20 x 30 ಇಂಚುಗಳ ಚೌಕಟ್ಟಿನಲ್ಲಿ ಮುದ್ರಿಸಲಾದ 72 ಕಲಾತ್ಮಕ ಚಿತ್ರಗಳನ್ನು ಛಾಯಾ ಪ್ರದರ್ಶನದಲ್ಲಿ ಇಡಲಾಗುತ್ತಿದೆ.

ಬೆಳಿಗ್ಗೆ 11ರಿಂದ ಸಂಜೆ 6ರವರೆಗೆ ಛಾಯಾ ಚಿತ್ರ ಪ್ರದರ್ಶನದ ಜೊತೆಗೆ, ಕಾರ್ಯಾಗಾರಗಳು ನಡೆಯಲಿವೆ.


19ರ ಮಧ್ಯಾಹ್ನ 2 ಗಂಟೆಯಿಂದ ಎಚ್. ಸತೀಶ್ ನೇತೃತ್ವದಲ್ಲಿ ಭಾವಚಿತ್ರಗಳನ್ನು ಸೆರೆಹಿಡಿಯಲು ಅಗತ್ಯವಿರುವ ಬೆಳಕಿನ ತಂತ್ರಗಳನ್ನು ಪ್ರದರ್ಶಿಸುವ ವಿಶೇಷ ಕಾರ್ಯಾಗಾರ ನಡೆಯಲಿದೆ. 20ರಂದು ಬೆಳಿಗ್ಗೆ ಕುಟುಂಬದ ಭಾವಚಿತ್ರಗಳನ್ನು ಸೆರೆಹಿಡಿಯುವ ತಂತ್ರ ಕಲಿಸುವ ಪ್ರಾಯೋಗಿಕ ಕಮ್ಮಟ ನಡೆಯಲಿದೆ. ಇದಕ್ಕೆ ಸಾರ್ವಜನಿಕರಿಗೆ ಮುಕ್ತ ಪ್ರವೇಶ ಎಂದು ವೈಪಿಎಸ್ ಪ್ರಕಟಣೆ ತಿಳಿಸಿದೆ.

ಈಗಾಗಲೇ (18ರಂದು) ಆರ್. ಅನಂತ ಮೂರ್ತಿಯವರ ಈಕ್ವೆಡಾರ್ ಮತ್ತು ಪೆರುವಿನ ಪಕ್ಷಿಗಳ ಛಾಯಾಚಿತ್ರಗಳ ಪ್ರದರ್ಶನ ಉದ್ಘಾಟನೆಯಾಗಿದೆ. ಈ ಚಿತ್ರಗಳೂ ಪ್ರದರ್ಶನದಲ್ಲಿರಲಿವೆ. ವಿವರಗಳಿಗೆ ಗಿರೀಶ್ ಅನಂತಮೂರ್ತಿ: 9449006221 ಸಂಪರ್ಕಿಸಬಹುದು.



ಚಿತ್ರ: ಶಶಾಂಕ್ ಎಂ.ಆರ್

ಚಿತ್ರ: ಪ್ರೇಮ ಕಾಕಡೆ





ಚಿತ್ರ: ನೀಲಾದ್ರಿ ಶ್ರೀನಿವಾಸ ಎಸ್.ವಿ.

ಚಿತ್ರ: ನಾಗೇಂದ್ರ ಮುತ್ಮುರ್ಡು





## ನೆಹರೂ ತಾರಾಲಯದಲ್ಲಿ ವಿಜ್ಞಾನ ವಸ್ತುಪ್ರದರ್ಶನ

**ಜವಾಹರ್‌ಲಾಲ್** ನೆಹರೂ ತಾರಾಲಯವು ‘ಸೈನ್ಸ್ ಇನ್ ಆ್ಯಕ್ಷನ್’ ವಿಜ್ಞಾನ ವಸ್ತುಪ್ರದರ್ಶನವನ್ನು ಆಗಸ್ಟ್ 20ರವರೆಗೆ ಆಯೋಜಿಸಿದೆ. ಬೆಳಿಗ್ಗೆ 10.30ರಿಂದ 4.30ರವರೆಗೆ ಪ್ರದರ್ಶನ ನಡೆಯಲಿದೆ.

ವಿಜ್ಞಾನವನ್ನು ಹಲವು ಬಗೆಯಲ್ಲಿ ವಿಸ್ತರಿಸಿ ಹೇಳುವ ಮಾದರಿಗಳನ್ನು ಹಾಗೂ ಪ್ರಯೋಗಗಳನ್ನು ಈ ಪ್ರದರ್ಶನದಲ್ಲಿ ಕಾಣಬಹುದು.

ವಿಶೇಷವಾಗಿ ವಿದ್ಯಾರ್ಥಿಗಳಲ್ಲಿ ವಿಜ್ಞಾನ ವಿಷಯದ ಕುರಿತ ಆಸಕ್ತಿಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಈ ಪ್ರದರ್ಶನ ನಡೆಯಲಿದೆ.

18 ರಿಂದ ಪ್ರದರ್ಶನ ಆರಂಭವಾಗಿದೆ. ವಿವಿಧ ಶಾಲೆಗಳ ವಿದ್ಯಾರ್ಥಿಗಳು ತಂಡೋಪ ತಂಡವಾಗಿ ಪ್ರದರ್ಶನಕ್ಕೆ ಭೇಟಿ ನೀಡಿ, ವಿಜ್ಞಾನದ ಮೂಲ ಶಿಸ್ತನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ.

ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಪ್ರದರ್ಶನದ ಲಾಭ ಪಡೆಯಬಹುದು.



## 20ರವರೆಗೆ ‘ಗೋಸ್ವದೇಶಿ ಮೇಳ’



‘ಗೋಕೂಪ್’ -ಸ್ವದೇಶಿ ಮೇಳದಲ್ಲಿ ಕೈ ಮಗ್ಗ ಸೀರೆಯೊಂದಿಗೆ ನಟಿ ರಾಧಿಕಾ ನಾರಾಯಣ್

**ವರಮಹಾಲಕ್ಷ್ಮಿ** ಹಬ್ಬದ ಅಂಗವಾಗಿ ‘ಗೋಕೂಪ್’ವತಿಯಿಂದ ಇದೇ 16ರಿಂದ 20ವರವರೆಗೆ ಬನ್ನೇರುಘಟ್ಟರಸ್ತೆ, ಜೆ.ಪಿ.ನಗರ ಮೂರನೇ ಹಂತದಲ್ಲಿರುವ ಶಿಲ್ಪಕಲಾ ಕಲ್ಯಾಣಮಂಟಪದಲ್ ‘ಗೋ ಸ್ವದೇಶಿ’- ಕೈ ಮಗ್ಗದ ವಸ್ತ್ರಗಳ ಪ್ರದರ್ಶನ ಮತ್ತು ಮಾರಾಟ ಮೇಳ ಆಯೋಜಿಸಲಾಗಿದೆ.

ಆ.16ರಂದು ನಟಿ ರಾಧಿಕಾ ನಾರಾಯಣ್ ಮೇಳ ಉದ್ಘಾಟಿಸಿದ್ದಾರೆ. ಪ್ರತಿ ನಿತ್ಯ ಬೆಳಿಗ್ಗೆ 11 ರಿಂದ ರಾತ್ರಿ 8ರವರೆಗೆ ಮೇಳ ನಡೆಯಲಿದೆ.

ಮೇಳದಲ್ಲಿ ಭಾರತದಾದ್ಯಂತದ ನೇಕಾರರು ಮತ್ತು ಕುಶಲಕರ್ಮಿಗಳ ತಯಾರಿಸಿರುವ ಕೈಮಗ್ಗ ಸೀರೆಗಳು, ಬಟ್ಟೆಗಳು, ಉಡುಗೆ ವಸ್ತುಗಳು, ಸ್ಟೋಲ್‌ಗಳು, ದುಪಟ್ಟಾಗಳು, ಪುರುಷರ ಉಡುಪುಗಳು, ಮನೆ ಅಲಂಕಾರ ಮತ್ತು ಪರಿಕರ ಉತ್ಪನ್ನಗಳಿರುತ್ತವೆ. ಈ ಮೇಳ ಕುಶಲಕರ್ಮಿಗಳನ್ನು ಬೆಂಬಲಿಸುವ ಉದ್ದೇಶ ಹೊಂದಿದೆ.

ಕರ್ನಾಟಕವಲ್ಲದೇ, ಆಂಧ್ರಪ್ರದೇಶ, ಬಿಹಾರ, ಗುಜರಾತ್, ಕರ್ನಾಟಕ, ಮಧ್ಯಪ್ರದೇಶ, ರಾಜಸ್ಥಾನ, ತೆಲಂಗಾಣ, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳದ ನೇಕಾರರು ತಯಾರಿಸಿದ ಉತ್ಪನ್ನಗಳು ಮೇಳದಲ್ಲಿವೆ. ಕರ್ನಾಟಕದ ರೇಷ್ಮೆ ಸೀರೆಗಳು, ಬಂಗಾಳದ ಜಮ್ದಾನಿ ಮತ್ತು ತಂಗೈಲ್ ಸೀರೆ, ಮಹೇಶ್ವರಿ, ಚಂದೇರಿಗಳ ಸೀರೆಗಳಿವೆ.

## ರಾಗಿಕಣ: ರಿವರ್ಸಿಂಗ್ ಡಯಾಬಿಟಿಸ್ ಕಾರ್ಯಾಗಾರ

**ರಾಗಿ ಕಣ** ಸಂತೆಯು ಆಗಸ್ಟ್ 20ರಂದು ‘ರಿವರ್ಸಿಂಗ್ ಡಯಾಬಿಟಿಸ್ ನ್ಯಾಚುರಲಿ’ ಕುರಿತು ಕಾರ್ಯಾಗಾರ ಆಯೋಜಿಸಿದೆ.

11 ಗಂಟೆ ಆರಂಭಗೊಳ್ಳಲಿರುವ ಈ ಕಾರ್ಯಾಗಾರದಲ್ಲಿ ಸಹಜ ಕೃಷಿಕ ಮರ್ವಿನ್ ಫರ್ನಾಂಡಿಸ್ ಮಾಹಿತಿ ನೀಡಲಿದ್ದಾರೆ. ಮಧುಮೇಹ ನಿಯಂತ್ರಣಕ್ಕೆ ತೆಗೆದುಕೊಳ್ಳುವ ರಾಸಾಯನಿಕಯುಕ್ತ ಔಷಧಗಳಿಂದ ಉಂಟಾಗುವ ಅಡ್ಡಪರಿಣಾಮ, ಆರೋಗ್ಯಯುತ ಜೀವನಶೈಲಿ ಹಾಗೂ ನೈಸರ್ಗಿಕವಾಗಿ ಮಧುಮೇಹ ನಿಯಂತ್ರಿಸುವ ಕುರಿತು ಮಾಹಿತಿ ನೀಡಲಿದ್ದಾರೆ. ಭಾಗವಹಿಸಲು ಇಚ್ಛಿಸುವವರು ಹೆಸರು ನೋಂದಾಯಿಸಲು http://surl.li/kcbni ಭೇಟಿ ನೀಡಬಹುದು.

ಇದರ ಜತೆ ಸಾಂಪ್ರದಾಯಿಕ ಆಟಗಳ ಕಾರ್ಯಾಗಾರವೂ ನಡೆಯಲಿದೆ. ಜತೆಗೆ ರಾಗಿ ಕಣದ ಊಟದ ಮೆನುವಿನಲ್ಲಿ ಒತ್ತುಶ್ಯಾವಿಗೆ, ಕಾಯಿ ಹಾಲು, ಮುದ್ದೆ, ಅನ್ನ, ಸಾರು, ಮಸಾಲ ವಡೆ, ಮಜ್ಜಿಗೆಯನ್ನು ಸವಿಯಬಹುದು.

**ಕಾರ್ಯಕ್ರಮ ನಡೆಯುವ ಸ್ಥಳ** : ಶ್ರೀರಾಮಕೃಷ್ಣ ಸಮಗ್ರ ಶಿಕ್ಷಣ ಕೇಂದ್ರ ಶಾಲಾ ಆವರಣ, ಬನ್ನೇರುಘಟ್ಟ ರಸ್ತೆ.

**ಹೆಚ್ಚಿನಮಾಹಿತಿಗೆ** 9972676426 ಸಂಪರ್ಕಿಸಬಹುದು.

# 50 ದಿನಗಳನ್ನು ಪೂರೈಸಿದ ಅಗ್ರಸೇನಾ


ರಚನಾ ದಶರಥ್

ಅಗ್ರಸೇನಾ ಚಲನಚಿತ್ರವು ಐವತ್ತು ದಿನಗಳನ್ನು ಪೂರೈಸಿ ಮುನ್ನಡೆದಿದೆ. ವೈಷ್ಣವಿ ಮೂವೀಸ್ ಲಾಂಛನದಲ್ಲಿ ಶ್ರೀಮತಿ ಮಮತಾ ಜಯರಾಮರೆಡ್ಡಿ ಅವರು ನಿರ್ಮಿಸಿರುವ ಈ ಚಿತ್ರ 17 ಚಿತ್ರಮಂದಿರಗಳಲ್ಲಿ ಯಶಸ್ವಿ ಪ್ರದರ್ಶನ ಕಾಣುತ್ತಿದೆ.

ನಿರ್ಮಾಪಕ ಜಯರಾಮರೆಡ್ಡಿ ಮಾತನಾಡಿ, ಈ ಸಂತಸಕ್ಕೆ ಕಾರಣರಾದ ಕನ್ನಡ ಪ್ರೇಕ್ಷಕರಿಗೆ ನನ್ನ ಧನ್ಯವಾದಗಳು. ಪರದೆಯ ಹಿಂದೆ, ಮುಂದೆ ದುಡಿದ ಎಲ್ಲರಿಗೂ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಚಿತ್ರದ ಖಳನಾಯಕ ಮನಮೋಹನ್ ರೈ ಅವರ ಅಭಿನಯ ನಿಜಕ್ಕೂ ಅದ್ಭುತ.ಲವರ್ ಬಾಯ್ ಆಗಿ ಅಮರ್, ದಸರಾಬೊಂಬೆ ರಚನಾ ದಶರಥ್ ಅವರ ಅದ್ಭುತ ಅಭಿನಯದ ಜೊತೆಗೆ ನಮ್ಮ ಸಿನಿಮಾದ ಜೀವಾಳ ಎನಿಸಿಕೊಂಡಿರುವ ಸಂಗೀತ ನಿರ್ದೇಶಕ ತ್ಯಾಗರಾಜ್ ಅವರ ಕೆಲಸ ಚಿತ್ರದ ಗೆಲುವಿಗೆ ಕಾರಣವಾಗಿದೆ. ಚಿತ್ರದ ಮತ್ತೊಂದು ಹೈಲೈಟ್ ಕೃಷ್ಣಮೂರ್ತಿ ಬೆಳಗೆರೆ ಅವರ ಅದ್ಭುತ ಅಭಿನಯ ಎಂದರು.

ನಟ ಅಗಸ್ತ್ಯ ಬೆಳಗೆರೆ ಮಾತನಾಡಿ, ನಮ್ಮ ಚಿತ್ರ ಜೂನ್ 23ಕ್ಕೆ ಬಿಡುಗಡೆಯಾಗಿತ್ತು. ಚಿತ್ರದ ಯಶಸ್ಸಿಗೆ ಪ್ರತಿಯೊಬ್ಬರೂ ನೀಡಿದ ಸಹಕಾರವೇ ಕಾರಣ, ನಾಲ್ಕು ವರ್ಷ ತಪಸ್ಸು ಮಾಡಿ ಈ ಸಿನಿಮಾ ಮಾಡಿದ್ದೇನೆ ಎಂದರು.

ಸಂಗೀತ ನಿರ್ದೇಶಕ, ಛಾಯಾಗ್ರಾಹಕ ಸೇರಿದಂತೆ ಪ್ರತಿಯೊಬ್ಬರ ಶ್ರಮ ಚಿತ್ರದ ಗೆಲುವಿಗೆ ಕಾರಣವಾಗಿದೆ. ನಿರ್ಮಾಪಕರು ಹೊಸ ಪ್ರತಿಭೆಗಳಿಗೆ ಅವಕಾಶ ಕೊಟ್ಟಿದ್ದಾರೆ. ನಮ್ಮನ್ನೆಲ್ಲ ಇಲ್ಲಿವರೆಗೆ ಕರೆದುಕೊಂಡು ಬಂದಿದ್ದಾರೆ ಎಂದು ಅವರು ತಿಳಿಸಿದರು.

# ರಮ್ಯಾ ಔಟ್ ರಶ್ಮಿ ಇನ್!


ರಶ್ಮಿ ಗೌತಮ್

**ನಿತಿನ್ ಕೃಷ್ಣಮೂರ್ತಿ** ನಿರ್ದೇಶನದ 'ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ' ಸಿನಿಮಾ 25 ದಿನ ಪೂರೈಸಿ ಹೊರ ರಾಜ್ಯಕ್ಕೆ ಕಾಲಿಡಲು ಸಜ್ಜಾಗುತ್ತಿದೆ. ಸಿನಿಮಾ ತೆಲುಗಿಗೆ 'ಬಾಯ್ಸ್ ಹಾಸ್ಟೆಲ್' ಎಂಬ ಹೆಸರಿನಲ್ಲಿ ಡಬ್ ಆಗುತ್ತಿದ್ದು, ಸಿನಿಮಾ ಇದೇ 26ಕ್ಕೆ ಆಂಧ್ರಪ್ರದೇಶ ಮತ್ತು ತೆಲಂಗಾಣದಲ್ಲಿ ರಿಲೀಸ್ ಆಗಲಿದೆ.

ಈಗಾಗಲೇ 'ಪ್ರೊಟೆಸ್ಟ್ ಸಾಂಗ್' ಡಬ್ ಆಗಿ ರಿಲೀಸ್ ಆಗಿದ್ದು, ಚಿತ್ರತಂಡ ಇದೇ ಸಂದರ್ಭದಲ್ಲಿ ಹೊಸ ಅಪ್‌ಡೇಟ್ ನೀಡಿದೆ. ಸಿನಿಮಾದಲ್ಲಿ ನಟಿ ರಮ್ಯಾ ಮಾಡಿದ್ದ ಲೆಕ್ಚರರ್ ಪಾತ್ರವನ್ನು ತೆಲುಗಿನಲ್ಲಿ ನಟಿ, ನಿರೂಪಕಿ ರಶ್ಮಿ ಗೌತಮ್ ಮಾಡಲಿದ್ದಾರೆ.

ಚಾಯ್ ಬಿಸ್ಕೆಟ್ ಫಿಲ್ಮ್ಸ್ ಮತ್ತು ಅನ್ನಪೂರ್ಣ ಸ್ಟುಡಿಯೋಸ್ ಜಂಟಿಯಾಗಿ ತೆಲುಗಿನಲ್ಲಿ 'ಬಾಯ್ಸ್ ಹಾಸ್ಟೆಲ್' ಶೀರ್ಷಿಕೆಯಡಿ ಈ ಚಿತ್ರವನ್ನು ಬಿಡುಗಡೆ ಮಾಡುತ್ತಿವೆ. ಕನ್ನಡದಲ್ಲಿ ಈ ಚಿತ್ರವನ್ನು ಸಿಂಪಲ್ ಸ್ಟಾರ್ ರಕ್ಷಿತ್ ಶೆಟ್ಟಿ ತಮ್ಮ ಪರಂವಃ ಪಿಕ್ಚರ್ಸ್ ಬ್ಯಾನರ್ ಅಡಿ ಪ್ರೆಸೆಂಟ್ ಮಾಡಿದ್ದಾರೆ. ರಿಷಬ್ ಶೆಟ್ಟಿ, ಪವನ್ ಕುಮಾರ್, ಶೈನ್ ಶೆಟ್ಟಿ, ದಿಗಂತ್ ಈ ಸಿನಿಮಾದಲ್ಲಿ ಅತಿಥಿ ಪಾತ್ರದಲ್ಲಿ ನಟಿಸಿದ್ದರು. ಗುಲ್ಮೋಹರ್ ಫಿಲ್ಮ್ಸ್ ಮತ್ತು ವರುಣ್ ಸ್ಟುಡಿಯೋಸ್ ಜಂಟಿಯಾಗಿ ಈ ಚಿತ್ರವನ್ನು ನಿರ್ಮಿಸಿದೆ.

## ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್‌ನಲ್ಲಿ

# ವರಮಹಾಲಕ್ಷ್ಮೀ ಹಬ್ಬದ ಭರ್ಜರಿ ರಿಯಾಯಿತಿ ಉತ್ಸವ



**ಬೆಂಗಳೂರು:** ಹಲವಾರು ವರ್ಷಗಳಿಂದ ಗ್ರಾಹಕರನ್ನು ತನ್ನತ್ತ ಸೆಳೆಯುತ್ತ ಬಂದಿರುವ ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್ ವರಮಹಾಲಕ್ಷ್ಮೀ ಹಬ್ಬದ ಪ್ರಯುಕ್ತ 'ರಿಯಾಯಿತಿ ಉತ್ಸವ' ಹಾಗೂ ಆ್ಯಂಟಿಕ್ ಮತ್ತು ಟೆಂಪಲ್ ಜ್ಯುವೆಲರಿ ಮೇಳವನ್ನು ಹಮ್ಮಿಕೊಂಡಿದೆ.

ಈ ಸಂದರ್ಭದಲ್ಲಿ ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್‌ನ ಪ್ರತಿ ಶಾಖೆಯಲ್ಲೂ ಮನಮೋಹಕ ಆಭರಣಗಳ ಪ್ರದರ್ಶನ, ಮಾರಾಟ ಕಾಣಬಹುದಾಗಿದೆ. ನುರಿತ ಆಭರಣ ತಯಾರಕರು ಸಿದ್ಧಪಡಿಸಿದ ಭಾರತೀಯ ಸಂಸ್ಕೃತಿ ಬಿಂಬಿಸುವ ದೈವಿಕ ಆಭರಣಗಳು, ಜೈಪುರ್ ರಾಜಮನೆತನದ ಪಾರಂಪರಿಕ ಒಡವೆಗಳು, ಅನ್‌ಕಟ್ ರೂಬಿ ಆಭರಣಗಳು, ಅನ್‌ಕಟ್ ಎಮರಾಲ್ಡ್ ಆಭರಣಗಳು ಕುಶಲಕರ್ಮಿಗಳ ಕೌಶಲ್ಯವನ್ನು ಎತ್ತಿಹಿಡಿಯುತ್ತವೆ. ಚಿನ್ನದ ಆ್ಯಂಟಿಕ್ ಆಭರಣಗಳ ಅಮೋಘ ಸಂಗ್ರಹದ ಮೂಲಕ ಜನರನ್ನು ಆಕರ್ಷಿಸಲು ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್ ಸಿದ್ಧವಾಗಿದೆ.

**ಆ್ಯಂಟಿಕ್ ಹಾಗೂ ಟೆಂಪಲ್ ಜ್ಯುವೆಲರಿ ಮೇಳ –2023**

**ವಿಶೇಷ ಕೊಡುಗೆ:** ವರಮಹಾಲಕ್ಷ್ಮೀ ಹಬ್ಬದ ವಿಶೇಷವಾಗಿ ಗ್ರಾಹಕರು ಖರೀದಿಸುವ ಒಡವೆಗಳ ಮೇಕಿಂಗ್ ಚಾರ್ಜಸ್ ಮೇಲೆ ಶೇ.15 ರಷ್ಟು ರಿಯಾಯಿತಿ ಹಾಗೂ ವೇಸ್ಟೇಜ್ ಚಾರ್ಜಸ್ ಇರುವುದಿಲ್ಲ. ಪ್ರಪ್ರಥಮ ಬಾರಿಗೆ ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್‌ನಲ್ಲಿ ಕಡಿಮೆ ಬೆಲೆಗೆ ಆ್ಯಂಟಿಕ್ ಮತ್ತು ಟೆಂಪಲ್ ಜ್ಯುವೆಲರಿ ಮಾರಾಟ ನಡೆಯುತ್ತಿದೆ. ಸಂಸ್ಥೆ ಎರಡು ಚಿನ್ನದ ಉಳಿತಾಯ ಯೋಜನೆಗಳನ್ನು ಸಹ ಪ್ರಾರಂಭಿಸಿದೆ. ಶ್ರೀ ಸಾಯಿ ಸಮೃದ್ಧಿ ಉಳಿತಾಯ ಯೋಜನೆ ಹಾಗೂ ಶ್ರೀ ಸಾಯಿ ನಿತ್ಯ ನಿಧಿ ಉಳಿತಾಯ ಯೋಜನೆ.

ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್‌ನ ಮಾಲೀಕರಾದ ರಾಜ್ಯದಲ್ಲಿ ಮನೆಮಾತಾಗಿರುವ ಡಾ. ಟಿ.ಎ. ಶರವಣ ಅವರು, ಗ್ರಾಹಕರು ಇಂದೇ ನಮ್ಮ ಮಳಿಗೆಗಳಿಗೆ ಭೇಟಿ ಕೊಟ್ಟು, ತಮ್ಮ ನೆಚ್ಚಿನ ಆಭರಣಗಳನ್ನು ಮುಂಗಡವಾಗಿ ಕಾಯ್ದಿರಿಸಿ ಹಬ್ಬದ ದಿನದಂದು ಲಕ್ಷ್ಮೀಯನ್ನು ನಿಮ್ಮ ಮನೆಗೆ ಬರಮಾಡಿಕೊಳ್ಳಿ ಎಂದು ಕರೆ ನೀಡಿದರು.

ಈ ಎಲ್ಲ ಕೊಡುಗೆಗಳನ್ನು ನಮ್ಮ ಬಸವನಗುಡಿ, ಎಚ್‌ಎಸ್‌ಆರ್ ಲೇಔಟ್, ಯಲಹಂಕ, ಕೆಆರ್ ಪುರಂ ಹಾಗೂ ನಾಗರಬಾವಿ ಶಾಖೆಗಳಲ್ಲಿ ಗ್ರಾಹಕರು ಪಡೆದುಕೊಳ್ಳಬೇಕೆಂದರು.

# 'ಬ್ರಹ್ಮಯುಗಂ' ಪೌರಾಣಿಕ ಚಿತ್ರದಲ್ಲಿ ಮಮ್ಮುಟಿ


ಮಮ್ಮುಟ್ಟಿಯೊಂದಿಗೆ ಚಿತ್ರತಂಡ

**ಮಲಯಾಳಂ** ಜನಪ್ರಿಯ ನಟ ಮಮ್ಮುಟಿ ಅಭಿನಯದ 'ಬ್ರಹ್ಮಯುಗಂ' ಪೌರಾಣಿಕ ಚಿತ್ರದ ಶೀರ್ಷಿಕೆ ಇತ್ತೀಚೆಗಷ್ಟೇ ಅನಾವರಣಗೊಂಡಿತು. ಮಲಯಾಳಂ ಸೇರಿದಂತೆ ಕನ್ನಡ, ತೆಲುಗು, ಹಿಂದಿ ಹಾಗೂ ತಮಿಳು ಭಾಷೆಗಳಲ್ಲಿ ಈ ಚಿತ್ರ ತೆರೆ ಕಾಣಲಿದೆ.

ಎಸ್.ಶಶಿಕಾಂತ್ ಮತ್ತು ಚಕ್ರವರ್ತಿ ರಾಮಚಂದ್ರ ಅವರು 'ನೈಟ್ ಶಿಫ್ಟ್ ಸ್ಟುಡಿಯೊ' ಮೂಲಕ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ರಾಹುಲ್ ಸದಾಶಿವನ್ ರಚನೆ ಹಾಗೂ ನಿರ್ದೇಶನವಿದೆ.

'ಮಮ್ಮುಟಿಯಂತಹ ಶ್ರೇಷ್ಠ ನಾಯಕನ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುವ ಕನಸು ನನಸಾಗಿದೆ. ಕೇರಳದ ಕರಾಳ ಯುಗದಲ್ಲಿ ಬೇರೂರಿರುವ ಕಥೆಯಾಗಿರುವುದು ವಿಶೇಷ. ಕೊಚ್ಚಿ, ಒಟ್ಟಪಲಂ ಸುಂದರ ತಾಣಗಳಲ್ಲಿ ದೊಡ್ಡ ಮಟ್ಟದಲ್ಲಿ ಚಿತ್ರಿಸಲಾಗುವುದು' ಎಂದು ನಿರ್ದೇಶಕರು ತಿಳಿಸಿದರು.

ಮಮ್ಮುಟಿ ಅವರೊಂದಿಗೆ ಅರ್ಜುನ್ ಅಶೋಕನ್, ಸಿದ್ಧಾರ್ಥ್ ಭರತನ್, ಅಮಲದ್ ಲಿಜ್ ಮುಂತಾದವರು ಅಭಿನಯಿಸುತ್ತಿದ್ದಾರೆ. ಸಂಗೀತ ಕ್ರಿಸ್ಟೋ ಕ್ಸೇವಿಯರ್, ಛಾಯಾಗ್ರಹಣ ಶೆಹನಾದ್ ಜಲಾಲ್, ಸಂಕಲನ ಶಫಿಕ್ಯೂ ಮೊಹಮ್ಮದ್ ಅಲಿ ಅವರದ್ದಾಗಿದೆ.

ಸಿನಿ ಹನಿ


ಥ್ರಿಲ್ಲರ್ ಮಂಜು

# ಥ್ರಿಲ್ಲರ್ ಮಂಜು ಹೊಸ ಅಧ್ಯಾಯ 'ಡೆಡ್ಲಿ ಕಿಲ್ಲರ್'

**ಸಾಹಸ ನಿರ್ದೇಶಕ** ಥ್ರಿಲ್ಲರ್ ಮಂಜು ಆ್ಯಕ್ಷನ್ ಕಟ್ ಹೇಳಿ, ನಟಿಸಿರುವ 'ಡೆಡ್ಲಿ ಕಿಲ್ಲರ್' ಚಿತ್ರ ಬಿಡುಗಡೆಗೆ ಸಿದ್ಧವಾಗಿದೆ. 'ಚಿತ್ರವನ್ನು ವೀಕ್ಷಿಸಿದ ಪ್ರಾದೇಶಿಕ ಸೆನ್ಸಾರ್ ಮಂಡಳಿ ಯಾವುದೇ ಕಟ್ಸ್ ಹೇಳದೆ ಚಿತ್ರಕ್ಕೆ ಯು/ಎ ಪ್ರಮಾಣಪತ್ರ ನೀಡಿದೆ' ಎಂದು ಚಿತ್ರತಂಡ ಹೇಳಿದೆ.

ಪ್ರಶಾಂತ್ ಟಿ.ತಂಬ್ರಳ್ಳಿಮಠ ಅವರು ಈ ಚಿತ್ರವನ್ನು ನಿರ್ಮಿಸಿದ್ದಾರೆ. ಆ್ಯಕ್ಷನ್, ಥ್ರಿಲ್ಲರ್, ಹಾರರ್ ಕಥಾಹಂದರ ಹೊಂದಿರುವ ಚಿತ್ರದಲ್ಲಿ ಹೊಸಬರಾದ ಅಭಯ್‌ವೀರ್ ಹಾಗೂ ನಿವೀಕ್ಷಾ ಜೋಡಿಯಾಗಿದ್ದಾರೆ.

ಈ ಚಿತ್ರದಲ್ಲಿ ಮೂರು ಹಾಡುಗಳಿದ್ದು, ವಿನು ಮನಸು ಅವರು ಸಂಗೀತ ಸಂಯೋಜನೆ ಮಾಡಿದ್ದಾರೆ. ಅಲ್ಲದೆ ಮಲ್ಲಿಕಾರ್ಜುನ್ ಅವರ ಛಾಯಾಗ್ರಹಣ, ದೀಪು ಅವರ ಸಂಕಲನ ಈ ಚಿತ್ರಕ್ಕಿದೆ. ಆರು ಸಾಹಸ ದೃಶ್ಯಗಳಿವೆ.

ಲೋಕೇಂದ್ರ ಸೂರ್ಯ, ಥ್ರಿಲ್ಲರ್ ಮಂಜು, ಸುನಿಲ್ ಬಾಲ್ದರ್ ಮುಂತಾದವರು ತಾರಾಗಣದಲ್ಲಿದ್ದಾರೆ.

# ಪುರಂದರ ನಾದೋಪಾಸನ ನಾಳೆ

ಪುರಂದರದಾಸ ಮೆಮೋರಿಯಲ್ ಟ್ರಸ್ಟ್ ಆಗಸ್ಟ್ 20ರಂದು ಭಾನುವಾರ ಸಂಜೆ 6ಗಂಟೆಗೆ ಪುರಂದರ ನಾದೋಪಾಸನ ದಾಸರ ವಿಶೇಷ ಕೃತಿಗಳ ವಿಶೇಷ ಸಂಗೀತ ಕಾರ್ಯಕ್ರಮ ಆಯೋಜಿಸಿದೆ.

ವಿದ್ವಾನ್ ಯಶಸ್ವಿ ಸುಬ್ಬರಾವ್ ಮತ್ತು ವಿದ್ವಾನ್ ಅಭಿಜಿತ್ ಅವರ ಯುಗಳ ಗಾಯನ ಕಾರ್ಯಕ್ರಮ ನಡೆಯಲಿದೆ. ಪಿಟೀಲು: ಎಸ್.ಮೋಕ್ಷಿತ್, ಮೃದಂಗ: ನಾಗೇಂದ್ರ ಪ್ರಸಾದ್, ಘಟ: ಸೋಮಶೇಖರ ನಿರ್ವಹಿಸಲಿದ್ದಾರೆ.

ಕಾರ್ಯಕ್ರಮ ನಡೆಯುವ ಸ್ಥಳ: ಪುರಂದರ ಮಂಟಪ, ಇಸ್ರೊ ಬಡಾವಣೆ ಸಮೀಪ, ದೇವರಕೆರೆ.


ಸಮೀಕ್ಷ, ಕಿರಣ್‌ರಾಜ್

# ಟಿ–ಸೀರಿಸ್‌ಗೆ 'ರಾನಿ' ಆಡಿಯೊ ಹಕ್ಕು

**ಕಿರುತೆರೆ ಹಾಗೂ** ಹಿರಿತೆರೆಯ ಖ್ಯಾತ ನಟ ಕಿರಣ್ ರಾಜ್ ನಾಯಕನಾಗಿ ನಟಿಸಿರುವ 'ರಾನಿ' ಚಿತ್ರದ ಆಡಿಯೋ ಹಕ್ಕನ್ನು ಟಿ-ಸೀರಿಸ್ ಸಂಸ್ಥೆ ಖರೀದಿಸಿದೆ. ಗುರುತೇಜ್ ಶೆಟ್ಟಿ ನಿರ್ದೇಶನದ ರಾನಿ ಚಿತ್ರ, ಸ್ಟಾರ್ ಕ್ರಿಯೇಷನ್ಸ್ ಬ್ಯಾನರ್‌ನಲ್ಲಿ ನಿರ್ಮಾಣವಾಗುತ್ತಿದ್ದು, ಚಂದ್ರಕಾಂತ್ ಮತ್ತು ಉಮೇಶ್ ಹೆಗ್ಡೆ ನಿರ್ಮಾಣ ಮಾಡುತ್ತಿದ್ದಾರೆ. ಮಣಿಕಾಂತ್ ಕದ್ರಿ ಚಿತ್ರಕ್ಕೆ 5 ಹಾಡುಗಳನ್ನು ಸಂಯೋಜಿಸಿದ್ದು, 'ಕಾಂತಾರ' ಖ್ಯಾತಿಯ ಪ್ರಮೋದ್ ಮರವಂತೆ 5 ಹಾಡುಗಳನ್ನು ಬರೆದಿದ್ದಾರೆ, ಕುನಾಲ್ ಗಾಂಜಾವಾಲ, ಹಂಸಿಕ ಐಯ್ಯರ್, ಶ್ವೇತಾ ಮೋಹನ್ ಅವರಂತಹ ಹೆಸರಾಂತ ಗಾಯಕರು ರಾನಿ ಚಿತ್ರದ ಹಾಡುಗಳನ್ನು ಹಾಡಿದ್ದಾರೆ.

'ಸುಮಾರು 85 ದಿನಗಳ ಚಿತ್ರೀಕರಣ ಮುಗಿದಿದ್ದು ಒಂದು ಹಾಡಿನ ಚಿತ್ರಿಕರಣ ಬಾಕಿ ಇದೆ. ಗ್ಯಾಂಗಸ್ಟರ್ ಕಥೆಯಾದರೂ ಕಿರಣ್ ರಾಜ್ ಫ್ಯಾಮಿಲಿ ಅಭಿಮಾನಿಗಳನ್ನು ಗಮನದಲ್ಲಿ ಇಟ್ಟುಕೊಂಡು ಕಥೆ ಬರೆದಿದ್ದೇನೆ. ಇದು ಫ್ಯಾಮಿಲಿ, ಆ್ಯಕ್ಷನ್ ಸಿನಿಮಾ' ಎನ್ನುತಾರೆ ನಿರ್ದೇಶಕ ಗುರುತೇಜ್ ಶೆಟ್ಟಿ.

ಚಿತ್ರದಲ್ಲಿ ಸಮೀಕ್ಷ, ಅಪೂರ್ವ ಹಾಗೂ ರಾಧ್ಯಾ ಮೂವರು ನಾಯಕಿಯರಿದ್ದು, ಪೋಷಕ ಪಾತ್ರದಲ್ಲಿ ರವಿಶಂಕರ್, ಮಂಜು, ಉಗ್ರಂ ರವಿ, ಗಿರೀಶ್ ಹೆಗಡೆ, ಮಂಡ್ಯ ರಮೇಶ್ ಮೊದಲಾದವರಿದ್ದಾರೆ. ರಾಘವೇಂದ್ರ ಬೇಡ ಕೋಲಾರ ಛಾಯಾಗ್ರಾಹಣ, ಉಮೇಶ್ ಸಂಕಲನ ಚಿತ್ರಕ್ಕಿದೆ.

# ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

---

ಶರಣ್ಯ ಫಾರ್ಮ್ಸ್ Sharanya Farms Create your own Sunshine

www.sharanyafarms.com

AGRICULTURAL

## FARM LAND

ಫಾರಂ ಲ್ಯಾಂಡ್ ಖರೀದಿಸಿ, ನಿರ್ವಹಣೆ ನಮ್ಮದು, ಲಾಭ ನಿಮ್ಮದು

ಸರ್ವರಿಗೂ ವರಮಹಾಲಕ್ಷ್ಮೀ ಹಬ್ಬದ ಶುಭಾಶಯಗಳು

10% Discount on Spot Booking

0% EMI AVAILABLE

ಶರಣ್ಯ ವೀಕೆಂಡ್ ವಿಲೇಜ್

ಶ್ರವಣಬೆಳಗೊಳ-ಕೆ.ಆರ್. ಪೇಟೆ ರಸ್ತೆ

ಫಾರ್ಮ್‌ಹೌಸ್ ಕಾಟೇಜ್‌ಗಳನ್ನು ನಿರ್ಮಿಸಲು ಉತ್ತಮ ಸ್ಥಳ

ಸೌಲಭ್ಯಗಳು: ಕ್ರೀಡಾ ಮತ್ತು ಫಿಟ್ನೆಸ್, ಹೊರಾಂಗಣ ಜಿಮ್, ಕ್ಲಬ್ ಹೌಸ್, ಸ್ವಿಮಿಂಗ್ ಪುಲ್, ಕಾಟೇಜ್‌ಗಳು, ಮಕ್ಕಳ ಆಟದ ಮೈದಾನ, ಧ್ಯಾನ ಕೇಂದ್ರ, ದೇವಾಲಯ, ವಿದ್ಯುತ್, ಪ್ರವೇಶ ದ್ವಾರ, 24/7 ಸೆಕ್ಯೂರಿಟಿ, ಇನ್ನೂ ಮುಂತಾದವು

ಗಿಡ ನೆಡುವುದು, ಬೆಳೆಸುವುದು, ಗೊಬ್ಬರ, ನೀರು ಹಾಕುವುದು ಹಾಗೂ ಭದ್ರತೆ ನಮ್ಮ ಕೆಲಸ. ಆದಾಯವೂ ನಿಮ್ಮದೇ, ಭೂಮಿಯೂ ನಿಮ್ಮದೇ ಮತ್ತೇನು ಬೇಕು ಹೇಳಿ? ನಿವೃತ್ತಿಯ ಸಮಯದಲ್ಲಿ ಇದಕ್ಕಿಂತ ಒಳ್ಳೆಯ ಸುವರ್ಣಾವಕಾಶವಿಲ್ಲ. ಲಾಭದೊಂದಿಗೆ ನಿಸರ್ಗದಲ್ಲಿ ಹಲವು ಸೌಲಭ್ಯಗಳನ್ನು ಪಡೆದುಕೊಂಡು ನೆಮ್ಮದಿಯ ಜೀವನ ನಿಮ್ಮದಾಗಿಸಿಕೊಳ್ಳಿ. ನೀವು ಈ ಫಾರಂಲ್ಯಾಂಡಿನಲ್ಲಿ ಬಂಡವಾಳ ಹೂಡಿಕೆ ಮಾಡಿದರೆ ಸಾಕು. ಭೂಮಿ ಮತ್ತು ಆದಾಯ ಎರಡು ನಿಮ್ಮದಾಗುತ್ತದೆ.

ಶರಣ್ಯ ಹಿಲ್‌ವ್ಯೂ ಫಾರ್ಮ್ಸ್

WEEKEND HOLIDAY IT PROFESSIONALS RETIREMENT HOME

ಮೈಸೂರು-ಮಳವಳ್ಳಿ ರಸ್ತೆ

ಪ್ಲಾಟ್‌ಗಳ ಅಳತೆ 5.5 ರಿಂದ 10 ಗುಂಟೆಗಳು ಲಭ್ಯವಿದೆ

www.sharanyafarms.com


ಹೆಚ್ಚಿನ ವಿವರಗಳಿಗೆ ಕರೆ ಮಾಡಿ:

**70 2626 2233**

---

## Skanda Architecture & Interior Studio

Skanda



- Termite Proof
- 100 % Water Proof (BWP)
- Hassle Free Execution
- Hafele Accessories
- Free 3D designing

### Varamahalakshmi Offer

**Interiors Starts from**

2 BHK @ Rs. 2.65 Lacs

3 BHK @ Rs. 3.8 Lacs

3D Designing at Rs.14999/-

Get a Chimney Free for 2 BHK & 3 BHK Interiors

* T&C apply

Visit our Studio for the Live Demo

No 940, Outer Ring Road, Opp. BBMP Ground, Near Royal Enfield Showroom, Papareddy Palya, Bengaluru, Karnataka 560072

skandainteriorstudio | skanda architecture & interior studio

For More Details Call

8147115323

9916120774

scribtoskanda@gmail.com

---

## PRE LAUNCHING RESIDENTIAL LAYOUT

### ಎಸ್ ಜಿ ಸ್ಫೂರ್ತಿ

ಮಾಗಡಿ ರೋಡ್

- ★ Very close to Tavarekere Magadi Main Road
- ★ 9 min Drive to Nice Road
- ★ Very close to Magadi Road

### ಎಸ್ ಜಿ ಪ್ರಕೃತಿ ಆರ್ಚಿಡ್ಸ್

ಅಜ್ಜನಹಳ್ಳಿ, ಮೈಸೂರು ರೋಡ್

Rs.10,80,000/- Lakhs 20x30 Plot

Approved BMRDA A - Katha

- ★ 4 km from Kengeri Metro Station
- ★ 1 km Ruppis Resort
- ★ 1.5 km from Big Banyan Tree

ವರಮಹಾಲಕ್ಷ್ಮೀ ಹಬ್ಬದ ಕೊಡುಗೆ

200 ಗ್ರಾಂ ಬೆಳ್ಳಿ ಉಚಿತ

ಸ್ಪಾಟ್ ಬುಕ್ಕಿಂಗ್ ಮಾಡಿದವರಿಗೆ

### ಎಸ್ ಜಿ ರಿಧಿ ಎನ್‌ಕ್ಲೇವ್

ಗಂದರಗೊಳ್ಳಿಪುರ ನೆಲಮಂಗಲ

Rs.11,00,000/- Lakhs Onwards - 20x30 Plot

DC Conversion

- ★ Hullahalli Main Road
- ★ 1 km from D Mart
- ★ 3 km from Nelmangala Bus Stop
- ★ 2 km from Kunigal Bypass

ನಿವೇಶನ ನೋಡಲು ಕರೆಮಾಡಿ

Free Family Site Visit

**98 88 66 33 22**

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

# PROPERTY CORNER

ಕ್ಲಾಸಿಫೈಡ್ಸ್



## REAL ESTATE SELLING

**SALE BSK** 6th stage 10 Block 30x40 North Facing 80Lakh also 40x60 East Facing 4th Block 2Cr and 20x30 48 lakh Nego. 9945373839, 9620041313

## Sites

### Banashankari

**BANASHANKARI 6TH** Stage- WANTED/ AVAILABLE BDA Sites All Measurements Residential/ Commercial Sites Contact- 8050908920/ 9986866661

**BANASHANKARI 6TH** Stage, 10th Block, 60x40 West Facing site for sale Rs. 7500/- Sqft. Contact: Pradeep:- 9845365079.

**'AVAILABLE 'AND** Wanted Banashankari 6th Stage, Anjanapura, BDA And BBMP Sites,20X30,30X40,40X60, 50X80,Contact:9900097239

**'BANASHANKARI' 6TH** Stage, 3rd Block, 30x40, West Facing Prime Location Ready to Construction. Contact :9900097239

**SITE FOR** sale 30X40 East facing at Banashankari 5th Stage And Banashankari 6th Stage 20X30 Good Location 9448050035

**BSK 6TH** Stage Near Metro Station and NPS School BDA Site For Sale 20X30 1st Allotte 9845389955

### Bangalore North

**SALE 50X50** W/F Gated Community Vacant Site in Byappanahalli, Bangalore North 3800 Per Sft Call:8050492849

### Jakkur

**JUDICIAL LAYOUT** 50'x80' PRIME SITE FOR SALE @ Rs. 14,500/- PSFT Negotiable. BUYERS/ NRIs Contact: 9880377799/ 9845054356.

### J P Nagar

**JPNAGAR 8TH** Phase, Royal County BDA Site Sale, 30x50, S/F, 9000/- Negotioble: 9538680364 / 9513004587

**JPNAGAR 8TH** Phase Royal Lake Frent 40x60,11000/- BDA Approved Site BCMC Layout,30x40,12000/- 9845704509

### Magadi Road

**1080SQFT- SITE** Sale Corner Triangle Shape, DC Conversion, E-Katha Kadabagere Cross, Shivani Greens Call: 9845044335

### Mysore Road

**NORTH FACING** 20x60ft site at Azadnagar, Bangalore-18, off Mysore Road for immediate sale. Contact: 9480683010. Brokers Excuse.

### Rajarajeshwari Nagar

**SITE FOR** Sale Gattigere (Sudarshan Layout), RR Nagar 30x40 Site W/F @ 8500/- Nego: 9900036544

**'A' KHATA** Property for Sale in Rajarajeshwari Nagar 400 mtrs from Sub Registrar office, 40x60, East facing Sites. Call: 9448288522

### Vishweshwariah Layout

**BDA 30X40** South Facing 1st Block Rate 9500 Srike 100Ft Road Parllel 40Ft Road 1st Block Rate 10500 2nd Block Rate 8000 3ft Margin Land West Facing SMV Layout 6th Block Rate 8500 Contact: Shivu 9844603127

**AVAILABLE VISHWESHWARAIAH** Layout 4th Block, 30X40 East Facing, Near 80ft Road Good Location. Contact: 8553908699

**VISHWESHWARAIAH LAYOUT** BDA 6th Block EF 30x40 40ft Road Near Oxford College Good Location: 9980860138

**SALE 30X40** VISHVESWARAIAH LAYOUT 4th Block south facing 78lakh Negotiable 9945373839, 9620041313

***30X40 N/F** Site for sale* VISHVESHWARAIAH LAYOUT 8th Block Rs.10500/Sqt Negotiable, Direct Owner meeting. Call.9591013777

**RESIDENTIAL PLOT** Sale 40x60 SF 40ft Road Rs. 9300/- Negotiable Full White Vishweshwaraiah Layout: 9916826976

### BTM Layout

30x40 BDA SITE



**COMMERCIAL SITE**
BTM 6th Stage 1st Block 30x40 East BDA Site 80 feet Road Near Dental College Rs. 13500 Negotiable.
**Call : 9845286583**

### Nelamangala

**50X45 NORTH EAST** CORNER SITE SALE, Nelamangala New Town, Adjacent to Ratan School Main Road. Contact: 9448064395.

### Multiple Locations

**BASVESHAWARNAGAR 40×60,** Mahalakshmi layout 40×60, Rajajinagar 45×90, Sadashivanagar 200×120, 80×120, Commercial, Site- For Sale- 8660075308.

### Vijayanagar

**VIJAYANAGAR RPC** LAYOUT Near Gayatri Temple 40X60 WF. Also 30X65 Old House Sale: 9448045601/ 9535811626

### Kempegowda Layout

60x40 BDA SITE



**COMMERCIAL SITE** FOR SALE @ Nadaprabhu Kempegowda Layout Adjacent to 300 ft. Pheripheral Ring Road, Rs 7800 per sqft. Fixed.
**Call: 9900040216**

### Ramamurthy Nagar

**RESIDENTIAL 30X40** W/F Sites for Sale Vigneshwara Layout, Hoysalanagar Horamavu Near Narayana School: 9448050938/ 9035304455

## House

### Basavanagudi

**SALE: EF** 33x40.5 Ground+ 2 Floors 36Sq Building 85,000/- Rental Income, Behind Federal Bank, Kanakapura Road, Basavanagudi, No Brokers. Call: 94482-12081

### Electronic City

**1350 SQFT** NF Site at Begur. Fully Compounded with Security Gate. A' Khatha. 1.5KM from Hosur Road Metro. Rs. 5400/- Psft:- 9008930130

### Jayanagar

**SALE 40X60** old House 40feet Road 2nd Block Jayanagar Near Bangalore cafe hotel Call:9611844667 8123515830

### Sadashiva Nagar

**SADASHIVANAGAR ARCHITECT** BUNGALOW 60X90 NE and 80x120 RMV 1st Block Dollars Colony, Jayanagar 9845057822 9980830798

### Sanjaynagar

**SALE STILT-FLOOR** Parking-Plus 3-floors Each Consisting of a 3 BHK House With Lift and`Solar Vinayaka Layout Bhoopsandra Call:6361859856

### Vijayanagar

**VIJAYANAGAR, HOSAHALLI** Extension, BDA 35x20 two floor House (Rental income: 24,000). Sale: 15,000/- sft. 92434-19641.

### Vishweshwariah Layout

**20X30 B-KHATA** Triplex House, West Facing, North door, Near Amma Ashrama, 1.3Cr (Negotiable)- 8710013684, 9972099398

### Rajarajeshwari Nagar

**RAJARAJESHWARINAGAR BHEL** Layout 40x60 2 Bedroom 8 Houses, Car-parking for sale. Contact: 9945079777

## Flat

### Basaveshwaranagar

**"MAGADI MAIN** Road ready to occupy 3BHK 1315.Sfqt 8600000/-, 2BHK 1050.Sqft 6800000/- with occupancy certificate. 9845286505"

### J P Nagar

**J.P.NAGAR 9TH** Phase`2 BHK`& 3 BHK Flats for Sale, 20%`Special Discount for Police and Defence personal`-Contact -9036706304.

### Kumaraswamy Layout

**3-BHK E/F** A-Khata Flat 2250Sqft Fully Teak Wood Italian Marbles 2-Carparking 1.6Cr Kumaraswamy Layout 15F Bustand- 9611144096

### Malleshwaram

**FLATS FOR** Sale 2BED ROOM @ Malleshwaram 4th Cross Only 4 Units Left Near TVS Showroom Quoted 1.40Cr all Inclusive Contact/Wts App: 9901556699

## Commerical

### Banashankari

**SALE BDA** OLD HOUSE, SEMI COMMERCIAL, 40x60 KATRAGUPPE 60ft ROAD, SF BSK 2ND STAGE: 9845969165





## Agricultural Land

### Mysore Road

**12000 SQFT** Farm Land From Bangalore Mysore Highway 6kms Near Channapatana Total 22L and 1Acres 10Guntas/ Acre 68L Fencing: 9845169300

## Commercial Land

### Mysore Road

**SALE BY** Owner DC converted for petrol bunk 13,000 sqft vacant commercial land on Bidadi Muthawadi 80 Feet Road, East Facing, Vaastu, E-Khatha clear title. Ready Registration. Ph: 9900170818.

## Villas/Bunglows

### Rajarajeshwari Nagar

**RR.NAGAR ARCHITECT** BUNGALOW 50x80 Beautiful Location Near (Actor) Ganesh House. Also Duplex House 40x60 with Swimming Pool. Residential Sites 13000, 7000, 5400Sft: 9845057822 9980830798

PROPERTY
To Place your Classified Ads Contact
9845114560

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ
# ಕ್ಲಾಸಿಫೈಡ್ಸ್


## WEEKEND CORNER




## REAL ESTATE SELLING

### Commercial Building

### Whitefield



**SALE TENANTED SHOWROOM**
HOODI WHITEFIELD
(with Two Side Road), Area: 3735 sft,
RENTAL INCOME : Rs. 3,24,000/-
Owner: IBRAHIM SAIT - 9845014561

### Jayanagar

***JAYANAGAR 9TH** Block* Commercial PG Building 40x70 Corner5floors,Rental income 7.20 lakhs, Price:10.50cr. Contact.9945079777

### Malleshwaram

**FULLY FURNISHED** 16,000Sft. A/C Showroom For Rent/Sale On Prime Busy Commercial Area,8th Cross, Malleshwaram. Call:9663001940.

## RENTAL PROPERTIES

### Accommodation Available

### Commercial

***AVAILABLE FOR** RENT* RPC Layout near Swimming pool 2600 sqft Commercial 4 floor Building. 8867569333

**5500 SQFT.** 1st floor for RENT Thavarekere near (Bangalore Dairy) Chocolate Factory Road, Above Federal Bank. 9342597945

**3 BHK** 2000 sqft Grd Floor Office Space with servant qtr on Race Course Rd Contact: 7698381599

### Industrial And Factory

**INDUSTRIAL BUILDING** FOR RENT AT PAPAMPATTI PRIVU,COIMBATORE.250Mtrs from coimbatore- trichy NH ABOUT 35000 sq.ft INDUSTRIAL BUILDING IN 3 ACRES LAND,FULLY COMPUND,POWER 300KVA HT- UPGRADABLE UPTO 500KVA.SUITABLE FOR MNC,ENGINEERING INDUSTRIES,WAREHOUSES,IT COMPANY'S,AUTOMOBILE YARD & SERVICE STATION ETC.CALL : 98421 26269

**INDUSTRIAL SHED** For RENT 8,000 Sqft. Kanakapura- Ramanagar Main`Road 65 HP Power, with DG Back-up, Borewell. Suvarna: 9880065824, 9110652645.

### Farm House/Land/ Resorts

**VACANT LAND (KIADB) available for Short Term LEASE only Area 44, 600 SFT, Behind Peenya Metro Station, Bengaluru - Contact: 99803 42747, 9740929436.**

## REAL ESTATE BUYING

### General

### General

**WE_DO KIADB,** KSSIDC,BDA, BBMP, BMICAPA,BMRDA, BIAPPA,Conversion, Change_of_Land Use, Podi Durasti,NOC, Khata, Documentation Services. Verna Developers, MG_Road. 9916310226/ 9620253180

**1.C TYPE** shed peenya
2.Rental
income property bengaluru
contact 9845203777

### Sites

### Devanahalli

**REQUIRED 10** -100 ACRES CONVERTED/ FREE/ GREEN ZONE IVC ROAD/ NEAR NH DEVANAHALLI OUTRATE/ JD/ VILLA/ LAYOUT MAHESH 9743865623

### Anjanapura

**WANTED BDA** Site Anjanapura, Banashankari 6th Stage, Vishweshwaraiah layout & any BDA Katha, JP.Nagar 8 & 9 phase immediate settlement. genuine Sellers Contact: 9902038118, 9449060605

### Banashankari

**WANTED BDA** Banashankari 6th Stage Anjanapura J.P.Nagar Kanakapura Road Surrounding. Immediate Settlement. Phone- 9964627255/ 9845511170

### Multiple Locations

**ANJANAPURA- ARKAVATHI,** Banashankari 6th Stage, Vishweshwaraiah Layout, Kempegowda Layout. Any BDA Sites Wanted. Contact: SAPTHAGIRI. 9900268073, 9448068073.

### Vishweshwariah Layout

**"REQUIRED NAGARABHAVI,** Vishveshwaraiah, Kempegowda Layout 20x30, 30x40, 40x60, 50x80 Sites, Contact Genuine sellers only. 9845268611'

**WANTED SITES** Vishweshwaraiah Layout Any Block 30x40, 30x50, 50x80 Immediate Registration Brokers Excuse, Genuine Buyers: 6360050356

***BUYING/ SELLING*** 20x30,30x40,40x60 50x80 BDA sites at Vishweshwaraiah Layout, BSK 6th-stage. Contact:9844533371/ 9341733480

## BUILDERS ESSENTIAL

### Building Contractors

**WE BUILD** Your Dream Projects Residential, Commercial and Warehouse @ Affordable Rates. Good Quality. 9481183707

### Water Proofing

***WE FIX*** LEAKING ROOF,TANK, SUMP,BATHROOM, SKYLIGHT,HOUSE PAINTING, TILING,CARPENTRY, EPOXY,CIVIL WORKS. Call: 9448572697

**LEAKAGE... LEAKAGE...** Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

## BUSINESS

### Business Offers

### Finance

**NRI'S INVESTMENT** And Finance Available On Low Interest Against Properties,Land& Building,Sites,Flats,Converted&,Agriculture Lands Call:7204995189

## PERSONAL

### Lost

### Lost & Found

I V . Nagamangalaiah, S/o Veerabhadregowda, have lost my BDA Allotment letter of site no. 1218, Ist Block, Vishweshwaraiah Layout, Doc no: BDA/DS-3/1218/ BLK-I/SMVL/2003-2004, Dated : 16/04/2003, If found please return to V. Nagamangalaiah, No.37, Venkateshwaraiah Nilaya, B.C.C Block, Attiguppe, Vijayanagara, Bengaluru- 560040 or to nearest Police Station or Call: 9844039482

### Change of Name

**I, MEGHNA** MARKOSE, W/o.Jason John, Resident of #460,8th Cross, Bhuvaneshwari Nagar, Hebbal, Kempapura, Bengaluru-560024, have changed my name to MEGHNA JOHN vide Affidavit dated: 17/08/2023 before Notary GANGARAJU.B.N, Bengaluru.

**I, NANDEESH** VIVEKANAND MUDAGAL resident of F1, Deccan Shelters, 14th Main, 27th Cross, Bengaluru-560065 have changed my name to NANDEESH MUDAGAL vide affidavit dated 17/08/2023 sworn before notary S.R.Ravikumar, Bengaluru


**I MAHIMA** SHETTY, R/a, #37, 5th B cross, Banashankari 1st Stage, Girinagar, Bengaluru- 560085 Have Changed my Name to MAHIMA. S. SHETTY Vide Affidavit Dated 16/08/2023 before Notary S.R. Thulasikrishna Bangalore.

**I, KRISHNAVENI.** S. Residing at #209 7th 'A' main Hampinagar, Bangalore-560104 have changed my name as AASTHA A CHILAKWAD, vide affidavit dated 17/08/2023 before Notary H.S.Sakalesh Aradhya Bangalore

**I, BRINDA** GEORGE, residing at No.2 5th Main 3rd Block, CPV Block, Ganganagar R.T.Nagar Post, Bengalore- 560032 have changed my name to BRINDA BENNY, vide affidavit dated: 18-08-2023 before Notary Sivakumara.M.N, Bengaluru.









email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331




**BMRDA APPROVED 'A' KHATA Sites**

# Magadi Road, Tavarekere

ತಾವರೆಕೆರೆಯಿಂದ ಚಂದ್ರಪ್ಪ ಸರ್ಕಲ್ ಮೇನ್ ರೋಡಿಗೆ ಹೊಂದಿಕೊಂಡಿದೆ




**ನೆಲಮಂಗಲ ನಗರ ಸಭೆ ವ್ಯಾಪ್ತಿಯಲ್ಲಿ BMRDA 'A' ಖಾತಾ ನಿವೇಶನಗಳು**

# Magadi Road, Tavarekere

ನೆಲಮಂಗಲದಿಂದ ಕೇವಲ ಒಂದು ಕಿಮೀ ಅಂತರದಲ್ಲಿ ನಿವೇಶನಗಳು

- Ready for Registration & Consturction
- All Legal Documents
- Bank Loan Available
- Fully Developed Layout

**ಸೌಲಭ್ಯಗಳು** : ಮನೆ ಕಟ್ಟಲು ಪ್ರಶಸ್ತ ಸ್ಥಳ, ಟಾಂಬರ್ ರಸ್ತೆ, ಬೀದಿ ದೀಪಗಳು, ರಸ್ತೆ ಬದಿ ಮರಗಳು, ಪ್ರತಿ ಸೈಟಿಗೂ ನೀರಿನ ಸಂಪರ್ಕ, ಸುಸಜ್ಜಿತ ಬಾಕ್ಸ್‌ಟೈಪ್ ಒಳಚರಂಡಿ ವ್ಯವಸ್ಥೆ, ಮಕ್ಕಳ ಆಟದ ಮೈದಾನ, ಎಲೆಕ್ಟ್ರಿಕ್ ಲೈನು ಮುಂತಾದ ಮೂಲಭೂತ ಸೌಲಭ್ಯಗಳನ್ನು ಒಳಗೊಂಡಿರುತ್ತದೆ

**Site Size**
30x40
30x50

ಸೈಟು ಭೇಟಿಗಾಗಿ ಸಂಪರ್ಕಿಸಿ : **9606442852**

RERA APPROVED NO.PRM/KA/RERA/1254/464/PR/191107/002991




# RERA & DTCP APPROVED Sites

ನಿವೇಶನಗಳ ಮೇಲೆ ಹೂಡಿಕೆ ಮಾಡಿ

Invest Monthly
EMI Just
Rs. 4999*

**Layout Highlights :**

- Upcoming Satellite Town Ring Road (STRR) Tumkur Road to Devanahalli Airport Road
- Upcoming B'lore Metro Rail Phase 2B (KR Puram to Kempegowda Intl. Airport)
- Close to Bangalore to Hyderabad Nh7
- Satya Sai Education & Hospital
- Software Park
- AEROSEZ & Financial City
- Nagarjuna College of Engg
- Prestige Group resort ISJC Institute of technology
- Geetham University
- Vishveshwaraiah University
- Akash International School
- Akash Hospital
- Hardware Park

₹ 699 Sq.ft

ನೋಂದಣಿಗೆ
ಮತ್ತು
ನಿರ್ಮಾಣಕ್ಕೆ ಸಿದ್ಧವಾಗಿದೆ

- 100% Legal Documents
- World Class Amenities

# ದೇವನಹಳ್ಳಿ

**ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಕೇವಲ 30 ನಿಮಿಷಗಳ ಪ್ರಯಾಣ**

Call for Site Visit:
**93411 18999**

Available Dimensions
30x40 & ODD Sites




**PREMIUM VILLA PLOTS OFF MYSORE ROAD** ₹75 LACS* ONWARDS

'The Akshara Valley Address' is designed for those longing to experience the true essence of nature. A premium plotted development housed amidst surreal green cover. Located near Kengeri Metro Station with close connectivity to NICE road, this project is artfully balanced by the blend of convenience and exclusiveness. This is your opportunity to go beyond crowds and congestion to build your dream home and experience nature friendly lifespaces.

**STAGE 1 SOLD. BOOKINGS NOW OPEN FOR STAGE 2**

THE AKSHARA VALLEY ADDRESS
www.addressmaker.in

Disclaimer : The images and impressions contained herein are artist's impression indicative of the actual design for information purpose only. This information and the contents herein mentioned are subject to change and is being updated by us in the light of enactment and commencement of the Real Estate (Regulation and Development) Act, 2016. The Company reserves the right to change by adding, deleting or altering the information/material including designs, plans, specifications, facilities, images, features, amenities such as clubhouse, parks etc without any prior notice. Any interested party should verify all the information including designs, plans, specifications, facilities, features etc. independently with the Company prior to concluding any decision for buying in the project. For RERA registration information, visit www.rera.karnataka.gov.in

**88847 44244**
*T& C Apply | Add-on services offered at additional charges.